TIGHT BINDING BOOK

UNIVERSAL
LIBRARY
OU_198051
UNIVERSAL
LIBRARY

ವಾಗ್ಭೂಷಣಗ್ರಂಥಮಾಲೆ—ನಂ. ೬೬.

ಸಿರಿಗನ್ನಡಂಗೆಲ್ಗೆ.

ಕರ್ನಾಟಕ ವಿದ್ಯಾವರ್ಧಕ ಸಂಘಕ್ಕಾಗಿ ಬರೆದದ್ದು

# ಪಂಡಿತ ಈಶ್ವರಚಂದ್ರ ವಿದ್ಯಾಸಾಗರ

ಇವರ

# ಚರಿತ್ರವು.

ಕೆ ರಾಮಸ್ವಾಮ್ಯಯ್ಯಂಗಾರ,

ಮಾಗಡಿ.

ಸನ್ನ ೧೯೧೭.

ಕ್ರಯ ೧ ರೂಪಾಯಿ.

ಬೆಳಗಾವಿಯೊಳಗೆ ದೇವೇಂದ್ರ ಘಡೆಪ್ಪಾ ಚೌಗುಲೆಯವರು
ತಮ್ಮ "ಶ್ರೀಮಹಾವೀರ" ಮುದ್ರಣಾಲಯದಲ್ಲಿ
ಮುದ್ರಿಸಿದರು.

ಮತ್ತು

ಧಾರವಾಡದೊಳಗೆ ಶ್ರೀ ನಾರಾಯಣರಾವ ದೇಶಪಾಂಡೆ ಬಿ. ಎ. ಎಲ್.
ಎಲ್. ಬಿ ಮತ್ತು ಶ್ರೀ ವೆಂಕಟರಾವ ಆಲೂರ ಬಿ. ಎ. ಎಲ್. ಎಲ್.
ಬಿ. ಇವರು ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ
ಪ್ರಕಟಿಸಿದರು.

# ಸೂಚನೆ.

ಕನ್ನಡಭಾಷೆಯಲ್ಲಿ ಮಹನೀಯರ ಜೀವಿತಚರಿತ್ರೆಗಳು ಬಹಳವಾಗಿಲ್ಲ. ಇಂಡಿಯದ ಬೇರೆ ಬೇರೆ ಭಾಷೆಗಳಲ್ಲಿ ಇಂತಹ ಗ್ರಂಥಗಳು ಹೆಚ್ಚಾಗಿ ಬರಿಯಲ್ಪಡುತ್ತಿರುವುವು. ಕನ್ನಡಿಗರಿಗೆ ಉಪಯೋಗವಾಗುವಂತೆ ಅಂತವುಗಳಲ್ಲಿ ಕೆಲವನ್ನು ಭಾಷಾಂತರಿಸಿ, ಭಾಷಾಸೇವೆ ಮಾಡಲೆಳಿಸಿದ ನನ್ನ ಪ್ರಾರ್ಥನೆಯನ್ನು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದವರು ದಯವಿಟ್ಟು ಅನುಮೋದಿಸಿದುದರಿಂದ ಅವರ ಪ್ರೇರಣೆಯಿಂದ "ರಾಜಾ ರಾಮಮೋಹನರಾಯ" ರವರ ಜೀವಿತಚರಿತ್ರೆಯನ್ನು ಆಂಧ್ರ ಭಾಷಾಭಿವರ್ಧಿನೀ ಸಂಘದ ಗ್ರಂಥಮಾಲೆಯಿಂದ ಭಾಷಾಂತರಿಸಿ ಕೊಟ್ಟೆನು. ದಯಾನಾಗರನೆನಿಸಿದ ಈಶ್ವರಚಂದ್ರ ವಿದ್ಯಾನಾಗರನ ಜೀವಿತಚರಿತ್ರೆಯನ್ನು ಈಗ ಭಾಷಾಂತರಿಸಿದ್ದೇನೆ. ಇಂತಹ ಇನ್ನೂ ಹಲವು ಗ್ರಂಥಗಳನ್ನು ಕನ್ನಡಿಸಿ ಭಾಷಾಸೇವೆ ಮಾಡಬೇಕೆಂಬುದೇ ನನ್ನ ಮುಖ್ಯೋದ್ದೇಶ್ಯವಾಗಿದೆ.

ಆಂಧ್ರಭಾಷಾಭಿವರ್ಧಿನೀ ಸಂಘದವರು ಈ ಗ್ರಂಥಗಳನ್ನು ಪರಿವರ್ತಿಸಲು ಅನುಮತಿ ಕೊಟ್ಟದಕ್ಕಾಗಿ ಅವರಿಗೂ, ಭಾಷಾಂತರಿಸಿದ ನನ್ನ ಗ್ರಂಥವನ್ನು ಅಂಗೀಕರಿಸಿ ಬಹುಮತಿಸಿದುದಕ್ಕಾಗಿ ಕರ್ನಾಟಕ ವಿದ್ಯಾವರ್ಧಕ ಸಂಘದವರಿಗೂ ನನ್ನ ಮನಃಪೂರ್ವಕವಾದ ವಂದನೆಗಳನ್ನರ್ಪಿಸುವೆನು.

**ಮಾಗಡಿ,**
ತಾ. ೭-೧೦-೧೯೧೪.

ಭಾಷಾಃಸೇವಕ,
**ಕೆ. ರಾಮಸ್ವಾಮ್ಯೈಯ್ಯಂಗಾರ.**

# ಗ್ರಂಥಕರ್ತೃವಿನ ವಿಜ್ಞಾಪನೆ.

ಗ್ರಂಥರಚನೆಯಲ್ಲಿ ನನ್ನ ಪ್ರಥಮಪ್ರಯತ್ನವು ಇದೇ. ಆದುದರಿಂದ ಸಂಸ್ಕೃತ ಭಾಷಾಜ್ಞಾನಲೋಪದಿಂದಲಾಗಲಿ, ಇತರ ಪ್ರಮಾದಗಳಿಂದಲಾಗಲಿ ಇದರಲ್ಲಿ ಕಾಣ ಬರುವ ದೋಷಗಳನ್ನು ರಸಜ್ಞರಾದ ವಾಚಕರು ಮನ್ನಿಸಬೇಕೆಂದು ಬೇಡುವೆನು.

ಈ ಗ್ರಂಥವನ್ನು ಆಂಧ್ರಕ್ಕೆ ಭಾಷಾಂತರ ಮಾಡಲಿಕ್ಕೆ ನನಗೆ ಮುಖ್ಯವಾಗಿ ಸಹಾಯಮಾಡಿದ ಇಂಗ್ಲಿಷ ಗ್ರಂಥಗಳು ಎರಡು. ಈ ಗ್ರಂಥಕರ್ತರಾದ ಮ. ರಾ. ಸುಬಾಲಚಂದ್ರಮಿತ್ರರಿಗೂ, ಶ್ರೀಶಚಂದ್ರಚಕ್ರವರ್ತಿಯವರಿಗೂ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳನ್ನರ್ಪಿಸುವೆನು.

ಜೀವಿತವೆಂಬ ಹಡಗನ್ನೇರಿ ಪ್ರಪಂಚಸಮುದ್ರವನ್ನು ದಾಟಿ, ಗಮ್ಯಸ್ಥಾನವನ್ನು ಸೇರುವುದಕ್ಕೆ ತಾರಣ್ಯವೇ ಪ್ರಧಾನೋಪಕರಣವಾಗಿ ಪಡೆದಿದ್ದ ಮಹಾನುಭಾವರಲ್ಲಿ ಅಗ್ರಗಣ್ಯನು ಮೂರ್ತೀಭವಿಸಿದ ದಯಾಸ್ವರೂಪನೆನಿಸಿದ ಬೌದ್ಧ ಮೂರ್ತಿಯೇ ಸರಿ. ಆ ಮಾರ್ಗವನ್ನೇ ಅವಲಂಬಿಸಿದ ಈಚಿನ ಮಹನೀಯನು ಶ್ರೀರಾಮಾನುಜಾಚಾರ್ಯನು. ಇಂತಹ ಉತ್ತಮ ಪುರುಷರಲ್ಲಿ ಗಣಿಸಲ್ಪಡತಕ್ಕ ತೃತೀಯಪುರುಷನು ನಮ್ಮ ಕಥಾನಾಯಕನು. ( ಈಶ್ವರಚಂದ್ರನು. ) ಈತನ ಚರಿತ್ರೆಯನ್ನು ಸಮಗ್ರವಾಗಿ ಓದಿದ ವಾಚಕರಿಗೆ ವಿದ್ಯಾಸಾಗರನೆನಿಸಿಕೊಂಡ ದಯಾಸಾಗರನು ಈತನೇ ಎಂದು ಪ್ರತ್ಯೇಕವಾಗಿ ಹೇಳಬೇಕಾದ ಅಗತ್ಯವಿಲ್ಲ.

| | |
|---|---|
| ಮಚಲೀಬಂದರ, | **ಚೆರುಕುಪಂತ ವೇಂಕಟ ನರಸಿಂಹಂ,** |
| ತಾ. ೧೫–೩–೧೯೦೪. | ಗ್ರಂಥಕರ್ತ. |

( ಈ ವಿದ್ಯಾಸಾಗರನ ಗುಣಗಳನ್ನು ವರ್ಣಿಸಿ, ಆಂಧ್ರಭಾಷಾಭಿವರ್ಧಿನೀ ಸಂಘದವರು ಸಣ್ಣದಾಗಿ ಒಂದು ಉಪೋದ್ಘಾತವನ್ನು ಬರೆದಿರುವರು. ಅದನ್ನು ಹಿಂದಿನಿಂದ ಬರೆದು ಕಳುಹುವೆನು. )

# ಪಂಡಿತ ಈಶ್ವರಚಂದ್ರಸಾಗರರು.

## ಮೊದಲನೆಯ ಅಧ್ಯಾಯ.

### ವಂಶ-ಜನ್ಮವೃತ್ತಾಂತಗಳು.

ಶ್ರೀಮದಸೀಮಮಹೀಮಂಡಲಮಂಡನಾಯಮಾನವಾದ ಈ ಭರತಖಂಡಕ್ಕೆ ಚೂಡಾಮಣಿಯೆಂದು ಹೆಸರುಗೊಂಡ ಬಂಗಾಳದೇಶದಲ್ಲಿ ಕ್ರಿ.ಶ. ಹತ್ತೊಂಭತ್ತನೆಯ ಶತಮಾನದಲ್ಲಿ ಜನಿಸಿ, ನಯವಿನಯಶೀಲಸೌಜನ್ಯಾದಿಯಾಗಿ ಸಾಮಾನ್ಯಸದ್ಗುಣಗಳಲ್ಲಿ ಅದ್ವಿತೀಯನೆನಿಸಿಕೊಂಡು, ಅಗಣಿತಗಳಾದ ದೇಶಜನೋಪಯೋಗಕೃತ್ಯಗಳನ್ನು ಮಾಡಿ, ಪ್ರಕೃತದ ಸಾಂಘಿಕ ಜಾತೀಯ ಜೀವನಾಲಯಕ್ಕೆ ಅಸ್ತಿವಾರವನ್ನು ಹಾಕಿ, ಸಂಸ್ಕೃತಭಾಷೆಯಲ್ಲಿ ಅಪಾರವಾದ ಪಾಂಡಿತ್ಯವನ್ನು ಸಂಪಾದಿಸಿ, ಅಶೇಷ ಶೇಮುಷೀಸಂಪದದಿಂದ ಅನ್ವರ್ಥನಾಮಕನೆಂಬ ಬಿರುದನ್ನು ಪಡೆದ ಶ್ರೀಪಂಡಿತೇಶ್ವರಚಂದ್ರವಿದ್ಯಾಸಾಗರನ ಜೀವಿತಚರಿತ್ರೆಯನ್ನು ಬರೆಯತೊಡಗುವೆವು.

ಈ ಮಹನೀಯನು ಬಂಗಾಳ ರಾಷ್ಟ್ರದ ಮಿಥುನಪುರ (Midnapore) ಜಿಲ್ಲೆಯಲ್ಲಿ ವೀರಸಿಂಹ ( Bhirsingh ) ಗ್ರಾಮದಲ್ಲಿ ವಾಸಮಾಡುತ್ತಿದ್ದ ಪೂಜನೀಯವಾದ ಒಂದು ಉತ್ತಮ ಬ್ರಾಹ್ಮಣ ಕುಟುಂಬದಲ್ಲಿ * ೧೮೨೦ನೇ ಸಂವತ್ಸರದ ಸೆಪ್ಟಂಬರ್ ೨೬ನೆಯ ದಿನ ಜನ್ಮಿಸಿದನು. ಈ ವೀರಸಿಂಹಗ್ರಾಮವು ಹಿಂದುಸ್ತಾನದ ಈಗಿನ ರಾಜಧಾನಿಯಾದ ಕಲ್ಕತ್ತಾನಗರಕ್ಕೆ ಪಶ್ಚಿಮದಲ್ಲಿ ಸುಮಾರು ೫೨ ಮೈಲುಗಳ ದೂರದಲ್ಲಿದೆ. ಈತನ ಪೂರ್ವಿಕರು † ತಾರಕೇಶ್ವರಕ್ಕೆ ಪಶ್ಚಿಮದಲ್ಲಿರುವ ಹುಗ್ಲಿ

---

* ಕುಲೀನರು ಉತ್ತರಹಿಂದುಸ್ತಾನದ ಬ್ರಾಹ್ಮಣರಲ್ಲಿ ಶ್ರೇಷ್ಠರೆನಿಸಲ್ಪಡುವರು. ಇವರು ಮೀನುಗಳನ್ನು ಭುಂಜಿಸುವದರಿಂದ ಇವರಿಗೆ ಮತ್ಸ್ಯಭುಂಜರೆಂಬ ಹೆಸರು ಉಂಟು.

† ಇದು ಹುಗ್ಲಿ ಜಿಲ್ಲೆಯಲ್ಲಿ ಒಂದು ಪುಣ್ಯಸ್ಥಾನ, ಇಲ್ಲಿ ತಾರಕೇಶ್ವರನೆಂಬ ಶಿವಾಲಯವಿರುವುದರಿಂದ ಯಾತ್ರಾಸ್ಥಾನವೆನಿಸಿಕೊಂಡಿದೆ.

(Hugli) ಜಿಲ್ಹೆಯಲ್ಲಿನ ವನಮಾಲಿಪುರದಲ್ಲಿ (Banamalpore) ಅನೇಕ ತಲೆಮರೆಗಳಿಂದಲೂ ವಾಸಿಸುತ್ತಿದ್ದರು. ಆದರೆ ಈತನ ಪಿತಾಮಹನಾದ ರಾಮಜಯತರ್ಕಭೂಷಣನು ಆ ಊರನ್ನು ಬಿಟ್ಟುಬಿಟ್ಟು ವೀರಸಿಂಹಗ್ರಾಮಕ್ಕೆ ಬಂದು ಸೇರಿದನು. ಈಶ್ವರಚಂದ್ರನ ಮುತ್ತಜ್ಜನಾದ ಭುವನೇಶ್ವರವಿದ್ಯಾಲಂಕಾರನಿಗೆ ನೃಸಿಂಹರಾಮನು, ಗಂಗಾಧರನು, ರಾಮಜಯನು, ಪಂಚಾನನು, ರಾಮಚರಣನು ಎಂಬ ಐವರು ಮಕ್ಕಳಿದ್ದರು. ಅವರಲ್ಲಿ ಮೂರನೆಯವನಾದ ರಾಮಜಯತರ್ಕಭೂಷಣನೇ ನಮ್ಮ ಕಥಾನಾಯಕನ ಅಜ್ಜನು. ಈತನು ವೀರಸಿಂಹಗ್ರಾಮದಲ್ಲಿ ಪ್ರಸಿದ್ಧ ಪಂಡಿತನೆನಿಸಿದ ಉಮಾಪತಿತರ್ಕಸಿದ್ಧಾನ್ತನೆಂಬುವನ ಸುಕುಮಾರಿಯಾದ ದುರ್ಗಾದೇವಿಯನ್ನು ಮದುವೆಯಾದನು. ಈ ದಂಪತಿಗಳಿಗೆ ಠಾಕೂರದಾಸ (ವಿದ್ಯಾಸಾಗರನ ತಂದೆ) ಕಾಳಿದಾಸ ಎಂಬ ಇಬ್ಬರು ಕುಮಾರರೂ, ಮಂಗಳೆ, ಕಮಲೆ, ಗೋವಿಂದಮಣಿ, ಅನ್ನಪೂರ್ಣೆ ಎಂಬ ನಾಲ್ವರು ಕುಮಾರಿತಿಯರೂ ಜನಿಸಿದರು. ತರ್ಕಭೂಷಣನು ಗೃಹಕೃತ್ಯದ ಕೆಲವು ತೊಂದರೆಗಳಿಂದ ತನ್ನ ಸಹೋದರನೊಂದಿಗೆ ಕಲಹಿಸಿಕೊಂಡು, ಆ ಗ್ರಾಮವನ್ನೇ ಬಿಟ್ಟು ಹೊರಟುಹೋದನು. ಅಂದಿನಿಂದಲೂ ದುರ್ಗಾದೇವಿಯು ತನ್ನ ಮಕ್ಕಳೊಂದಿಗೆ ವನಮಾಲಿಪುರದಲ್ಲಿಯೇ ವಾಸಮಾಡಿಕೊಂಡಿದ್ದಳು. ಆದರೂ ಕೆಲವು ದಿನಗಳ ತರುವಾಯ ಭಾವಮೈದಿಂದಿರು ಆಕೆಯನ್ನು ತುಂಬ ಹೀನವಾಗಿ ನೋಡುತ್ತಾ ಬಂದುದರಿಂದ ವೀರಸಿಂಹಗ್ರಾಮದಲ್ಲಿಯ ತನ್ನ ತೌರುಮನೆಗೆ ಬಂದಳು. ಇಲ್ಲಿ ಕೆಲವು ದಿನಗಳತನಕ ಸೌಖ್ಯದಿಂದಿದ್ದಮೇಲೆ ಆಕೆಯ ಸಹೋದರನಾದ ರಾಮಸುಂದರವಿದ್ಯಾಭೂಷಣನೂ, ಅವನ ಹೆಂಡತಿಯೂ, ಈ ದುರ್ಗಾದೇವಿಯನ್ನೂ, ಆಕೆಯ ಮಕ್ಕಳನ್ನೂ, ತುಂಬ ನಿರ್ದಯೆಯಿಂದಲೂ ಅಗೌರವದಿಂದಲೂ ನೋಡುತ್ತಾ ಬಂದುದರಿಂದ (ಆಕೆಗೆ ಸಹಿಸದೆ) ವೃದ್ಧನಾದ ತನ್ನ ತಂದೆಯ ಮನೆಯ ನೆರೆಯಲ್ಲಿಯೇ ಒಂದು ಸಣ್ಣ ಗುಡಿಸಲು ಹಾಕಿಕೊಂಡು ಅಲ್ಲಿ ವಾಸಮಾಡುತ್ತಾ, ಅರಳೆಯನ್ನು ನೂತು ಬಹು ಕಷ್ಟದಿಂದ ಜೀವನಮಾಡಿಕೊಂಡಿದ್ದಳು. ಈ ಸಮಯದಲ್ಲಿ ಈಶ್ವರಚಂದ್ರನ ತಂದೆಯಾದ ಠಾಕೂರದಾಸನು ೧೪-೧೫ ವಯಸ್ಸಿನವನಾಗಿದ್ದನು. ಆತನು ತನ್ನ ತಾಯಿಯು ಪಡುವ ಕಷ್ಟಗಳನ್ನು ನೋಡಿ

ತಡೆಯಲಾರದೆ ಯಾವುದಾದರೂ ಒಂದು ಜೀವನೋಪಾಯವನ್ನು ಹುಡುಕಿಕೊಳ್ಳುವುದಕ್ಕಾಗಿ ಆಕೆಯ ಅಪ್ಪಣೆ ಪಡೆದು ಕಲ್ಕತ್ತೆಗೆ ಹೊರಟನು.

ಆ ಕಾಲದಲ್ಲಿ ಕಲ್ಕತ್ತೆಯಲ್ಲಿ ಆತನ ಹತ್ತಿರಬಂಧುವಾದ ಜಗನ್ಮೋಹನನ್ಯಾಯಾಲಂಕಾರನೆಂಬಾತನು ದೊಡ್ಡ ಅಧಿಕಾರದಲ್ಲಿದ್ದನು. ಆತನು ಅಸಹಾಯಕರಿಗೂ, ದಿಕ್ಕಿಲ್ಲದವರಿಗೂ, ಹಲವು ಬಗೆಗಳಿಂದ ಸಹಾಯಮಾಡುತ್ತಿದ್ದನು. ಆಗ ಈ ಠಾಕೂರದಾಸನು ಪರಮ ದಯಾಳುವಾದ ತನ್ನ ಬಂಧುವಿನ ಬಳಿಗೆ ಹೋದನು. ಈತನು "ಸಂಕ್ಷಿಪ್ತಸಾರ"ವೆಂಬ ವ್ಯಾಕರಣ ಗ್ರಂಥವನ್ನು ಅದುವರೆಗೇನೆ ಸ್ವಲ್ಪಮಟ್ಟಿಗೆ ಓದಿದ್ದುದರಿಂದ ಸಂಸ್ಕೃತಭಾಷೆಯಲ್ಲಿ ಘನವಿದ್ವಾಂಸನಾದ ತನ್ನ ಯಜಮಾನನ ಬಳಿಯಲ್ಲಿಯೇ ಈ ವಿದ್ಯೆಯನ್ನು ಅಭ್ಯಾಸಮಾಡಬೇಕೆಂದು ಯೋಚಿಸಿದನು. ಆದರೆ ಆ ಕಾಲದಲ್ಲಿ ಸಂಸ್ಕೃತವಿದ್ಯೆಯಿಂದ ಜೀವನೋಪಾಯಕ್ಕೆ ತಕ್ಕ ಉದ್ಯೋಗವನ್ನು ಪಡೆಯಲು ಅವಕಾಶವಿಲ್ಲದೆ ನಮ್ಮ ದೇಶದಲ್ಲೆಲ್ಲಕಡೆಗಳಲ್ಲಿಯೂ ಹಬ್ಬುತ್ತಲಿದ್ದ ಪಶ್ಚಿಮದೇಶದ ವಾಣಿಜ್ಯಕಲಾನಿಲಯ ( European Mercuntile Firms ) ಗಳಲ್ಲಿ ಯಾವುದಾದರೂ ಒಂದು ಉದ್ಯೋಗವನ್ನು ಸಂಪಾದಿಸಿಕೊಳ್ಳುವುದಕ್ಕೆ ಸಾಕಾದಮಟ್ಟಿಗೆ ಸ್ವಲ್ಪ ಇಂಗ್ಲೀಷಭಾಷಾಜ್ಞಾನವನ್ನು ಪಡೆಯಬೇಕಾಗಿ ಬಂದಿತು. ಆ ಕಾಲದಲ್ಲಿ ಇಂಗ್ಲೀಷಭಾಷೆಯನ್ನು ಕಲಿಯಲಿಕ್ಕೆ ಭಾಗ್ಯವಂತರಾದವರಿಗೆ ಮಾತ್ರ ಅನುಕೂಲವಿದ್ದಿತೇ ಹೊರತು ಬಡವರಿಗೆ ಸ್ವಲ್ಪವೂ ಅನುಕೂಲವಿರಲಿಲ್ಲ. ಆದುದರಿಂದ ಠಾಕೂರದಾಸನು ತನ್ನ ಯಜಮಾನನ ಶಿಫಾರಸಿನಿಂದ ಇಂಗ್ಲಿಷಭಾಷೆಯಲ್ಲಿ ಪ್ರವೀಣನಾದ ಆತನ ಸ್ನೇಹಿತನ ಮನೆಗೆ ಪ್ರತಿದಿನವೂ ರಾತ್ರಿಯಲ್ಲಿ ಇಂಗ್ಲಿಷ ವಿದ್ಯಾಭ್ಯಾಸಕ್ಕಾಗಿ ಹೋಗುತ್ತಿದ್ದನು. ವಿದ್ಯಾಸಕ್ತಿಯುಳ್ಳ ಈ ಬಾಲನು ಸೂರ್ಯಾಸ್ತಮಯವಾದ ಕೂಡಲೆ ತನ್ನ ಉಪಾಧ್ಯಾಯನ ಬಳಿಗೆ ಹೋಗಿ ಓದಿಕೊಂಡು, ಬಹಳ ಹೊತ್ತಾದ ಮೇಲೆ ಮನೆಗೆ ಮರಳಿ ಬರುವಾಗ್ಗೆ ತನ್ನ ಯಜಮಾನನ ಮನೆಯಲ್ಲಿ ಭೋಜನಕಾಲವು ಮೀರಿಹೋಗುತ್ತಲಿದ್ದುದರಿಂದ ರಾತ್ರಿಯ ಊಟವಿಲ್ಲದೆ, ರಾತ್ರಿಯೆಲ್ಲವೂ ಹಸಿವಿನಿಂದ ಪೀಡಿಸಲ್ಪಡುತ್ತಿದ್ದನು.

ಪ್ರತಿದಿನವೂ ಹೀಗೆಯೇ ಆಗುತಲಿದ್ದುದರಿಂದ ಈ ಬಾಲಕನು ದಿನದಿನಕ್ಕೂ ಬಡವಾಗಿ ಶಲ್ಯಮಾತ್ರಾವಶಿಷ್ಟನಾಗುತ್ತ ಬಂದುದನ್ನು ಇವನ ಉಪಾಧ್ಯಾಯನು ನೋಡಿ ಒಂದು ದಿನ ಇದರ ಕಾರಣವೇನೆಂದು ಕೇಳಲು,

ಈತನು ತನ್ನ ವೃತ್ತಾಂತವನ್ನೆಲ್ಲಾ ಸವಿಸ್ತಾರವಾಗಿ ಅವನೊಂದಿಗೆ ಹೇಳಿದನು. ಆಗ ಹತ್ತಿರವಿದ್ದು ಕೇಳಿಕೊಂಡಿದ್ದ ಒಬ್ಬ *ಕಾಯಸ್ಥನು ಈತನವಸ್ಥೆಗಾಗಿ ತುಂಬಾ ಚಿಂತೆಗೊಂಡು ಅಡಿಗೆ ಮಾಡಿಕೊಳ್ಳುವುದಾದರೆ ತಾನು ಬೇಕಾದ ಸಾಮಗ್ರಿಗಳನ್ನು ಕೊಡುವೆನೆಂದು ಹೇಳಿದನು. ಈ ಬಾಲಕನು ಅದನ್ನು ಒಪ್ಪಿಕೊಂಡು ತನ್ನ ಪೂರ್ವದ ಯಜಮಾನನ ಆಶ್ರಯವನ್ನು ಬಿಟ್ಟು ದಯಾರ್ದ್ರಹೃದಯನಾದ ಆ ಕಾಯಸ್ಥನ ಆಶ್ರಯವನ್ನು ಹೊಂದಿ ಹಗಲುರಾತ್ರಿಗಳಲ್ಲಿ ಹೊಟ್ಟೆಯ ತುಂಬಾ ಊಟಮಾಡುತ್ತಾ ಸಂತೋಷದಿಂದ ಕೆಲವು ದಿನಗಳನ್ನು ಕಳೆದನು.

ದಯಾಳುವಾದ ಆ ರೈತನು ದಿನವೆಲ್ಲವೂ ಕಷ್ಟಪಟ್ಟು ಸಂಪಾದಿಸಿದರೂ ಇವರಿಬ್ಬರ ಜೀವನಕ್ಕೆ ಸಾಕಾದಷ್ಟು ಕೂಲಿಯು ಸಹ ಸಿಕ್ಕದೆ ಇದ್ದಿತು. ಈ ಠಾಕುರದಾಸನಿಗೆ ಊಟಮಾಡಲಿಕ್ಕೆ ಒಂದು ತಳಿಗೆಯೂ, ನೀರು ಕುಡಿಯುವುದಕ್ಕೆ ಒಂದು ಲೋಟಿಯೂ ಮಾತ್ರ ಇದ್ದುವು. ಈತನು ಕ್ಷುದ್ಬಾಧೆಯನ್ನು ತಡೆಯಲಾರದೆ ಒಂದುದಿನ ತನ್ನಲ್ಲಿ ಹೀಗೆ ಆಲೋಚಿಸಿದನು. "ತಳಿಗೆ ಇಲ್ಲದಿದ್ದರೂ ನಾನು ಎಲೆಯಲ್ಲಿ ಊಟಮಾಡಬಹುದು. ಆದುದರಿಂದ ಅದನ್ನು ಮಾರಿ, ಬಂದ ಹಣವನ್ನು ಜೋಪಾನವಾಗಿಟ್ಟುಕೊಂಡಿದ್ದು, ತುಂಬ ಅವಸರದವೇಳೆ ಬಂದಾಗ ಅದನ್ನು ಉಪಯೋಗಿಸಿಕೊಳ್ಳುವೆನು. ಲೋಟಿಯು ಅಗತ್ಯವಾದುದರಿಂದ ಇದನ್ನು ಮಾರಬಾರದು." ಎಂದು ನಿಶ್ಚಯಿಸಿಕೊಂಡು, ಅಂಗಡಿಗೆ ಹೋಗಿ ಅದನ್ನು ಮಾರಬೇಕೆಂದು ಯತ್ನಿಸಲು, ಲೋಹದ ವ್ಯಾಪಾರಿಗಳು ಇದು ಕಳುವಿನ ಒಡವೆಯಾಗಿರಬಹುದು ಎಂದು ತಿಳಿದು, ಕೊಂಡುಕೊಳ್ಳದೆ ಹೋದರು. ಈತನು ಹಲವು ಬಗೆಗಳಿಂದ ನಂಬಿಗೆಯನ್ನು ಹುಟ್ಟಿಸಿದರೂ ಅವರು ಒಡಂಬಡದೆ ಹೋದುದರಿಂದ ವಿಫಲಮನೋರಥನಾಗಿ ಬೇಸತ್ತು ತನ್ನ ಮನೆಗೆ ಹೋದನು. ಕೆಲವು ದಿನಗಳ ತರುವಾಯ ಒಂದುದಿನ ಆತನು ಹಸಿವುಬಾಯಾರಿಕೆಗಳಿಂದ ಬಳಲಿ ಬಿದ್ದಿರಲು, ಕಡುಬುಗಳನ್ನು ಮಾರುವ ಒಬ್ಬ ಹೆಂಗಸು ಇವನ ಹಸಿವುಬಾಯಾರಿಕೆಗಳನ್ನು ತೀರಿಸಿ ಪ್ರಾಣವನ್ನು ಕಾಪಾಡಿದಳು. ಈ ಮೇರೆಗೆ ಕೆಲವುಕಾಲ ಕಳೆದ ಮೇಲೆ ಈ ಠಾಕುರದಾಸನಿಗೆ ತಿಂಗಳಿಗೆ ಎರಡು ರೂಪಾಯಿಗಳ ವೇತನದ ಒಂದು ಉದ್ಯೋಗವು ಸಿಕ್ಕಿದುದರಿಂದ

* ಕಾಯಸ್ಥರೆಂದರೆ ಸಾಮಾನ್ಯವಾಗಿ ನಮ್ಮ ದೇಶದ ಒಕ್ಕಲಿಗರಿಗೆ ಸಮಾನರು.

ಬಹು ಸಂತೋಷದಿಂದ ಅದನ್ನು ಒಪ್ಪಿಕೊಂಡು ತನ್ನ ಯಜಮಾನನ ಬಳಿಯಲ್ಲಿ ವಿನಯವಿಶ್ವಾಸಗಳನ್ನು ಪಡೆದು ಅಲ್ಲಿಯೇ ಇದ್ದುಕೊಂಡು ಈ ಎರಡು ರೂಪಾಯಿಗಳನ್ನು ಮನೆಯಲ್ಲಿದ್ದ ತನ್ನ ತಾಯಿಗೆ ಕಳುಹುತ್ತಲಿದ್ದನು. ಈತನು ವಿವೇಕಿಯಾಗಿಯೂ, ಶ್ರದ್ಧೆಯಿಂದ ಗೊತ್ತಾದ ಕೆಲಸಗಳನ್ನು ನೆರವೇರಿಸುವನಾಗಿಯೂ ಇದ್ದುದರಿಂದ ಇವನ ಯಜಮಾನರೆಲ್ಲರೂ ಇವನಲ್ಲಿ ದಯೆಯುಳ್ಳವರಾಗಿಯೇ ಇದ್ದರು. ಎರಡು ವರುಷಗಳು ಕಳೆದ ಮೇಲೆ ಇವನಿಗೆ ತಿಂಗಳಿಗೆ ಐದು ರೂಪಾಯಿಗಳ ವೇತನವೇರ್ಪಟ್ಟಿತು. ೭-೮ ವರುಷಗಳ ಹಿಂದೆ ಸ್ಥಳಾಂತರಕ್ಕೆ ಹೊರಟುಹೋಗಿದ್ದ ಇವನ ತಂದೆಯು ಈ ವೇಳೆಗೆ ಮರಳಿ ಮನೆಗೆ ಬಂದು, ಕುಟುಂಬದೊಡನೆ ಸೇರಿ, ವೀರಸಿಂಹ ಗ್ರಾಮದಲ್ಲಿಯೇ ಸೌಖ್ಯವಾಗಿ ಸಂಸಾರಮಾಡಿಕೊಂಡಿದ್ದನು. ಕೆಲವು ದಿನಗಳಲ್ಲಿಯೇ ಈ ಠಾಕೂರದಾಸನಿಗೆ ತಿಂಗಳಿಗೆ ಎಂಟು ರೂಪಾಯಿಗಳ ಸಂಬಳವು ದೊರೆದುದರಿಂದ ಇವನ ತಾಯಿತಂದೆಗಳಿಗೆ ತುಂಬ ಸಂತೋಷವಾಯಿತು. ಆ ವೇಳೆಗೆ ಈತನಿಗೆ ೨೪ ವರುಷಗಳ ವಯಸ್ಸಾಗಿದ್ದುದರಿಂದ ರಮಾಕಾಂತತರ್ಕವಾಗೀಶನೆಂಬ ಸಂಸ್ಕೃತ ವಿದ್ವಾಂಸನೊಬ್ಬನ ಮಗಳಾದ ಭಗವತೀದೇವಿಯೆಂಬ ಕನ್ಯೆಯನ್ನು ಕೊಟ್ಟು ಮದುವೆ ಮಾಡಿದರು. ಈಕೆಯೇ ನಮ್ಮ ಕಥಾನಾಯಕನ ಪ್ರಿಯಮಾತೆಯು.

ಲೋಕದಲ್ಲಿ ಮನುಷ್ಯರ ವರ್ತನಜೀವಿತಾದಿಗಳಿಗೆ ಅವರು ಜನ್ಮಿಸಿದ ವಂಶವು ಸ್ವಲ್ಪಮಟ್ಟಿಗೆ ಆಧಾರವಾಗಿರುವುದಲ್ಲವೆ? ಇದಕ್ಕೆ ದೃಷ್ಟಾಂತವಾಗಿ ವಿದ್ಯಾಸಾಗರನು ತನ್ನ ಪೌರುಷ, ನ್ಯಾಯದೃಷ್ಟಿ, ನಿಷ್ಕಾಪಟ್ಯ, ಸ್ವತಂತ್ರಾಭಿಲಾಷೆ, ದೇಹದಾರ್ಢ್ಯ ಮುಂತಾದ ಪ್ರಸಿದ್ಧ ಗುಣಗಳನ್ನೆಲ್ಲ ತನ್ನ ಪಿತಾಮಹನಾದ ರಾಮಜಯತರ್ಕಭೂಷಣನ ಬಳಿಯಿಂದಲೇ ಪರಂಪರೆಯಾಗಿ ಹೊಂದಿದ್ದನು. ನಿರ್ಮಲಶೀಲನಾದ ಆ ತರ್ಕಭೂಷಣನು ಎಂದಿಗೂ ಇತರರನ್ನು ಮುಖಸ್ತುತಿ ಮಾಡಿದವನಲ್ಲ. "ಆತ್ಮವಶಂ ಸುಖಂ ಪರವಶಂ ದುಃಖಂ" ಎಂಬ ಧರ್ಮವನ್ನು ತಿಳಿದವನಾಗಿದ್ದುದರಿಂದಲೇ ಪರಾಧೀನನಾಗಿ ಬಾಳುವುದಕ್ಕಿಂತ ಸಾಯುವುದೇ ಲೇಸೆಂದು ಆತನು ದೃಢವಾಗಿ ನಂಬಿದ್ದನು. ಮಾನವಸ್ವತ್ವಗಳಲ್ಲೆಲ್ಲ ಸ್ವಾತಂತ್ರ್ಯವೇ ಅಗ್ರಗಣ್ಯವಾದುದು. ನಿಜವಾಗಿ ಸೌಖ್ಯವನ್ನು ಬಯಸುವ ಯಾವ ದೇಶವಾಗಲಿ, ಯಾವ ಜಾತಿಯಾಗಲಿ, ಯಾವ ಸಂಘವಾಗಲಿ ಅಭಿವೃದ್ಧಿಯನ್ನು ಹೊಂದುವುದಕ್ಕೆ ಸ್ವಾತಂತ್ರ್ಯವೇ

ಮುಖ್ಯ ಮಾರ್ಗವು. ಸ್ವಾತಂತ್ರ್ಯವೇ ಸಕಲ ಮನೋರಥಸಿದ್ಧಿಗಳಿಗೂ ಸಾಧನವು. ಪರಾಧೀನಕ್ಕಿಂತಲೂ ಪಾಪವಿಲ್ಲವು. ಯಾವನೇ ಆಗಲಿ ಪರದಾಸ್ಯವಿಮುಕ್ತನಾದ ಹೊರತು ಪಾಪರಹಿತನಾಗಲಾರನು. ಏತಕ್ಕೆಂದರೆ, ಆತ್ಮವಶವು ಕೈಕೂಡುವತನಕ ವಿಜ್ಞಾನಸ್ವಾತಂತ್ರ್ಯವುಂಟಾಗಲಾರನು. ವಿಜ್ಞಾನಸ್ವಾತಂತ್ರ್ಯವುಂಟಾದ ಹೊರತು ಮುಮುಕ್ಷುತ್ವವನ್ನು ಹೊಂದಲಾರನು." ಎಂದು ಆತನು ಇತರರಿಗೆ ಬಹಳವಾಗಿ ಬೋಧಿಸುತ್ತಿದ್ದನಂತೆ. ಮತ್ತು ಆತನು ಮದ್ಯಮಾಂಸಾದಿತಾಮಸಾಹಾರವರ್ಜಿತನಾಗಿ ಸಸ್ಯಪದಾರ್ಥಗಳನ್ನೇ ಭುಜಿಸುತ್ತಾ ಯಾವಾಗಲೂ ಭಗವದರ್ಚನೆಗಳಲ್ಲಿ ಕಾಲವನ್ನು ಕಳೆಯುತ್ತಿದ್ದನು. ಒಂದುದಿನ ಆತನು ವೀರಸಿಂಹಗ್ರಾಮದಿಂದ ಮಿಥುನಪುರಕ್ಕೆ ಒಂಟಿಯಾಗಿ ನಿರ್ಭಯದಿಂದ ಪ್ರಯಾಣಮಾಡುತ್ತಿದ್ದನು. ಆಗ ಒಂದು ಕರಡಿಯು ಆತನ ಮೇಲೆ ಕುಪ್ಪಳಿಸಿ, ತನ್ನ ಹರಿತವಾದ ಉಗುರುಗಳಿಂದ ಅವನನ್ನು ಸೀಳಲಿಕ್ಕೆ ಯತ್ನಿಸಲು, ಆ ಧೀರನು ಅದರ ಪಾದಗಳನ್ನು ಕೂಡಿಸಿ ಹಿಡಿದು, ಹತ್ತಿರವಿದ್ದ ಒಂದು ಮರಕ್ಕೆ ಹಾಕಿ ಬಡಿದು, ನಿಶ್ಚೇಷ್ಟಿತವಾಗುವಂತೆ ಮಾಡಿ ಒಗೆದು, ಹೋಗುತ್ತಿರಲು, ಅದು ಬಾಧೆಯಿಂದ ಮತ್ತಷ್ಟು ಕೋಪಗೊಂಡು, ಮರಳಿ ಎದ್ದು ಬಂದು, ಆತನ ಬೆನ್ನನ್ನು ಸೀಳಲು, ಅವನು ತನ್ನ ಕೈಯ್ಯಲ್ಲಿದ್ದ ಲೋಹದ ಬೆತ್ತದಿಂದ ಅದರ ತಲೆಯ ಮೇಲೆ ಹೊಡೆದು ಅದನ್ನು ಕೊನೆಗಾಣಿಸಿದನು. ಇಂತಹ ಸಾಹಸವೂ, ಬಾಹುಬಲವೂ ಉಳ್ಳವನ ಪುತ್ರನಾದ ಈಶ್ವರಚಂದ್ರನು ಬಲಾಢ್ಯನಾಗಿರುವುದು ಆಶ್ಚರ್ಯವೇ? ಅಜ್ಜ ಮತ್ತು ತಂದೆತಾಯಿಗಳ ದಾರ್ಢ್ಯದೌರ್ಬಲ್ಯಗಳನ್ನು ಹಿಡಿದು, ಅವರ ಸಂತತಿಯವರ ಬಲಾಬಲಗಳು ಸಹಜವಾಗಿ ಹೊರಪಡುತ್ತಿರುವವು. ಅತಿಬಾಲ್ಯಗರ್ಭಾಧಾನಾದಿ ದುರಾಚಾರಗಳಿಂದ ಬಲಶಾಲಿಗಳಾದವರ ಮಕ್ಕಳು ಸಹ ದುರ್ಬಲರಾಗುತ್ತಿರುವರು. ಇದಕ್ಕೆ ಪ್ರಮಾಣ:—

"ಊನಷೋಡಶವರ್ಷಾಯಾಮಪ್ರಾಪ್ತ: ಪಂಚವಿಂಶತಿಮ್ ।
ಯದ್ಯಾಧತ್ತೇಪುಮಾನ್‌ಗರ್ಭಂ ಕುಕ್ಷಿಸ್ಥಸ್ಸವಿಪದ್ಯತೇ ।
ಜಾತೋವಾನ ಚಿರಂಜೀವೇತ್ ಜೀವೇದ್ವಾದುರ್ಬಲೇಂದ್ರಿಯ: ।
ತಸ್ಮಾದತ್ಯಂತ ಬಾಲಾಯಾಂ ಗರ್ಭಾಧಾನಂ ನಕಾರಯೇತ್ ॥"

(ಚರಕ.)

ಹೆಂಗಸಿಗೆ ಹದಿನಾರು ವರ್ಷಗಳು, ಗಂಡಸಿಗೆ ಇಪ್ಪತ್ತೈದು ವರ್ಷಗಳು ತುಂಬಲಿಕ್ಕೆ ಮುಂಚಿತವಾಗಿ ಅವರಿಬ್ಬರಿಗೂ ಸಂಯೋಗವುಂಟಾದರೆ ಅವರಿಗೆ ಗರ್ಭೋತ್ಪತ್ತಿಯಾಗಲಾರದು. ಒಂದು ವೇಳೆ ಹಾಗೆ ಆದರೆ ಅದು ನಿಲ್ಲುವುದು ದುರ್ಲಭ. ಆದು ನಿಂತು ಪ್ರಸವಿಸಿದರೂ ಆ ಶಿಶುವು ಅತ್ಯಲ್ಪವಾದ ಆಯುಷ್ಯವುಳ್ಳದ್ದಾಗಿ ಬಹುಕಾಲ ಜೀವಿಸದೆ ಸಾಯುವುದು. ಜೀವಿಸಿದರೂ ತುಂಬಾ ದುರ್ಬಲವಾಗುವುದು. ಆದುದರಿಂದ ಸ್ತ್ರೀಪುರುಷರಿಗೆ ಆಯಾ ಪರಿಮಿತಕಾಲಕ್ಕೆ ಮುಂಚೆ ಗರ್ಭಾಧಾನವನ್ನು ಮಾಡಕೂಡದು. ಎಂದು ಎಷ್ಟು ಬಗೆಗಳಲ್ಲಿ ಶಾಸ್ತ್ರಗಳು ಉದ್ಘೋಷಿಸುತ್ತಿದ್ದರೂ ವಿಧ್ಯುಕ್ತಮಾರ್ಗವರ್ತನರೆನಿಸಿಕೊಳ್ಳತಕ್ಕವರೇ ಆಕಟ್ಟುಗಳನ್ನೆಲ್ಲಾ ಮುರಿದುಬಿಟ್ಟು, ದುರಾಚಾರಿಶಾಚಗ್ರಸ್ತರಾಗಿ ದೇಶದ ಪ್ರಸ್ತುತ ದುರ್ಬಲತ್ವಕ್ಕೆ ಮೂಲಕಾರಣರಾಗಿಹರು. ಆದುದರಿಂದ ದೇಶದಲ್ಲಿ ಮರಳಿ ಅರ್ಜುನಬಲರಾಮಾದಿಗಳಂತಹ ಬಾಹುಬಲಪರಾಕ್ರಮಶಾಲಿಗಳನ್ನು ಉದಯಗೊಳಿಸಿ, ದೇಶದ ಮುಕ್ತಿಯನ್ನು ಪಡೆಯಲೆಣಿಸುವವರು ಮೊತ್ತಮೊದಲು ಇಂತಹ ದುರಾಚಾರಗಳ ಮೂಲೋತ್ಪಾಟನೆ ಮಾಡತಕ್ಕುದ್ದು.

ತರ್ಕಭೂಷಣನು ತನ್ನ ಕುಮಾರನಾದ ಠಾಕುರದಾಸನು ಕುಟುಂಬಭಾರನಿರ್ವಹಣ ಸಮರ್ಥನಾಗಿದ್ದಾಗ ತಾನು ಮನೆಯನ್ನು ಬಿಟ್ಟು ವೈರಾಗ್ಯದಿಂದ ಹೊರಟುಹೋಗಿ ಒಂದುದಿನ ಕೇದಾರಪರ್ವತಶಿಖರದ ಮೊದರಲ್ಲಿ ನಿದ್ರಿಸುತ್ತಾ “ ತನ್ನ ವಂಶದಲ್ಲಿ ವಂಶಪಾವನನಾದ ಪುರುಷಶ್ರೇಷ್ಠನೊಬ್ಬನು ಅವತರಿಸಿ ಜಗದ್ವಿಖ್ಯಾತ ಕೀರ್ತಿಯುಳ್ಳವನಾಗಿ ಮಾತೃದೇಶಕ್ಕೆ ನಿಜವಾದ ಮಹೋಪಕಾರವನ್ನು ಮಾಡುವನು ” ಎಂಬ ಕನಸನ್ನು ಕಂಡು, ವೈರಾಗ್ಯವನ್ನಳಿದು, ಮರಳಿ ತನ್ನ ಮನೆಗೆ ಬಂದು ಸೇರುವಾಗ್ಗೆ ಆತನ ಸೊಸೆಯಾದ ಭಗವತೀದೇವಿಯು ಗರ್ಭವತಿಯಾಗಿದ್ದಳು. ಗರ್ಭದಲ್ಲಿನ ಮಹಾನುಭಾವನೇ ನಮ್ಮ ಕಥಾನಾಯಕನು. ಭಗವತೀದೇವಿಯು ಬಸುರಿಯಾದಂದಿನಿಂದಲೂ, ಆಕೆಗೆ ಚಿತ್ತಭ್ರಮವುಂಟಾಗಿ, ಎಷ್ಟೆಷ್ಟು ಔಷಧಪ್ರಯೋಗಗಳನ್ನು ಮಾಡಿಸಿದರೂ, ಅವುಗಳೆಲ್ಲವೂ ನಿಷ್ಪ್ರಯೋಜಕಗಳಾಗಿ, ಪ್ರಸವಕಾಲವು ಸಮೀಪಿಸಿದ ಹಾಗೆಲ್ಲ ಆ ಹುಚ್ಚು ದಿನದಿನಕ್ಕೂ ಬೆಳೆಯುತ್ತ ಬಂದಿತು. ಆದರೂ ವಾಚಕರಿಗೆ ಆಶ್ಚರ್ಯವುಂಟಾಗುವಂತೆ ಆಕೆಯು ಗರ್ಭದಲ್ಲಿ ವಂಶವರ್ಧನನಾದ ಪುತ್ರನೊಬ್ಬನುದಿಸಿದನು. ಆ ಪರಮಸಾಧ್ವೀಮಣಿಯು ಅಮಿತ

ಸತ್ಯದಯಾಶೌರ್ಯಾದಿ ಸದ್ಗುಣಗಳೇ ಆಕೆಯ ಮಗನಲ್ಲಿ ನೆಲೆಗೊಂಡವು. ಆಕೆಯು ಗರ್ಭಿಣಿಯಾಗಿದ್ದಾಗ ಭವಾನಂದಭಟ್ಟಾಚಾರ್ಯನೆಂಬ ಜ್ಯೋತಿಷಶಾಸ್ತ್ರಜ್ಞನೊಬ್ಬನು ಆಕೆಯ ಗರ್ಭದಲ್ಲಿ ಮಾನವಶರೀರಧಾರಿಯಾದ ಭಗವಂತನು ಅವತರಿಸುವನೆಂತಲೂ, ತರುವಾಯ ಆಕೆಗೆ ದೇಹಸ್ವಾಸ್ಥ್ಯವುಂಟಾಗುವುದೆಂತಲೂ ಹೇಳಿದ ವಾಕ್ಯವು ನಿಜವಾಗಿ ನೆರವೇರಿತು.

ಕ್ರಿಸ್ತಶಕೆ ೧೮೨೦ನೇ ಸಪ್ಟಂಬರ ೨೧ನೆಯ ದಿನ ಯಥಾಪ್ರಕಾರವಾಗಿ ಪ್ರಾತಃಕಾಲವಾಗುತ್ತಿರಲು, ಕತ್ತಲೆಯ ಮೊತ್ತವು ರಹಸ್ಯಸ್ಥಾನಗಳಲ್ಲಿ ಅಡಗಲಿಕ್ಕೆ ಓಡಿಹೋಯಿತು. ಬೆಳಿಗ್ಗೆ ತೇಜೋಭಾನುವು ಉದಯಗಿರಿಯ ಶಿಖರವನಡರುವ ವೇಳೆಗೆ ವಿಪ್ರಶ್ರೇಷ್ಠರೆಲ್ಲರೂ ಅರ್ಘ್ಯಪ್ರದಾನವನ್ನು ಮಾಡಿದರು; ಕಮಲಗಳು ಅರಳುತ್ತಿದ್ದವು. ಸಮಸ್ತ ಜೀವರಾಶಿಗಳೂ ತಮ್ಮ ತಮ್ಮ ವಿಧಾಯುಕ ಕೃತ್ಯಗಳನ್ನು ಮಾಡತೊಡಗಿದುವು. ಆಸೇತುಶೀತಾಚಲಪರ್ಯಂತವೂ ಇರುವ ಸಮಸ್ತ ಜನರೂ ಆನಂದಸಾಗರದಲ್ಲಿ ಓಲಾಡುತ್ತಿದ್ದರು. ಆದರೂ ಅವರ ಅಸಾಮಾನ್ಯ ಸಂತೋಷಕ್ಕೆ ಕಾರಣವು ಇಂತದೆಂದು ಅವರಲ್ಲಿ ಒಬ್ಬನಿಗಾದರೂ ತಿಳಿಯದೆ ಇತ್ತು. ಆದರೆ ಭರತಖಂಡದ ಉತ್ಕೃಷ್ಟ ದಿನಗಳಲ್ಲಿ ಅದೊಂದು ಸುದಿನವೆಂದು ಕಾಲಕ್ರಮದಿಂದ ಅವರಿಗೇ ಗೊತ್ತಾಯಿತು. ತರುವಾಯ ಆಕಾಶದಲ್ಲಿ ಮಾರುಮಾರಿಗೂ ಏರುತ್ತಿರುವ ಸೂರ್ಯನ ಕಿರಣಗಳು ಅಸ್ಪಷ್ಟಕ್ಕೆ ಹೆಚ್ಚುತಲಿದ್ದವು. ಒಕ್ಕಲಿಗರು ದನಗಳ ಮಂದೆಯನ್ನು ಮೇಯಿಸುವುದಕ್ಕಾಗಿ, ಪುರದ ಬಾಹ್ಯಪ್ರದೇಶಗಳಿಗೆ ಒಯ್ಯುತ್ತಿದ್ದರು. ಭರತಖಂಡದಲ್ಲಿ ಜ್ಞಾನಭಾನುವಿನ ಉದಯಚಿಹ್ನಗಳು ಕಾಣಬಂದುದರಿಂದ ಅಜ್ಞಾನಾಂಧಕಾರವು ಹೋಗಿ ಸೇರಲಿಕ್ಕೆ ಸ್ಥಳಸಿಕ್ಕದೆ, ದೇಶಾಂತರವಾಸಕ್ಕೆ ಸಿದ್ಧವಾಗುತ್ತಿದ್ದಿತು. ದ್ವಾದಶಾತ್ಮನಾದ ಸೂರ್ಯನು ಅಪರಾಹ್ಣಕಾಲದಲ್ಲಿ ನಡುನೆತ್ತಿಯ ಮೇಲೆ ಪ್ರಕಾಶಿಸುತ್ತಿದ್ದನು. ಆಗ ವೃಷಭಲಗ್ನದಲ್ಲಿ ಆ ಗರ್ಭವತಿಗೆ ಪರಿಶುದ್ಧಾಂತರಂಗನೂ, ನಿತ್ಯಾನಂದಭರಿತನೂ, ಸಚ್ಚಾರಿತ್ರನೂ, ಯಥಾರ್ಥವಾದಿಯೂ, ಲೋಕವಿಖ್ಯಾತಯಶಸ್ಕನೂ, ದೃಢಕಾಯನೂ, ಸಾಧುಸ್ವರೂಪನೂ ಆದ ಸುಕುಮಾರನೊಬ್ಬನು ಜನಿಸಿದನು. ಕೂಡಲೇ ಕೇನರಾಮಾಚಾರ್ಯನೆಂಬ ಜ್ಯೋತಿಷಶಾಸ್ತ್ರಜ್ಞನು ಆ ಉತ್ಕೃಷ್ಟಪುರುಷನ ಅದೃಷ್ಟಸೂಚಕನೆಗಳನ್ನು ಕಂಡು, ಆಶ್ಚರ್ಯಗೊಂಡು ಆತನ ಜಾತಕವನ್ನು ಸಮಗ್ರವಾಗಿ ಬರೆದನು. ಅದರಲ್ಲಿ

ಉದಾಹರಿಸಲ್ಪಟ್ಟ ಭವಿಷ್ಯದ್ವಿಷಯಗಳೆಲ್ಲವೂ ಪರಿಪೂರ್ಣವಾಗಿ ನೆರವೇರಿ ದುದರಿಂದ ಹಿಂದುಜ್ಯೋತಿಷಶಾಸ್ತ್ರವು ಸುಳ್ಳಲ್ಲವೆಂದು ವಿದ್ಯಾಸಾಗರನ ಜಾತಕದಿಂದಲೇ ಗ್ರಹಿಸಲಾಗುವುದೆಂದು ಈ ಮಹನೀಯನ ಇತಿಹಾಸಲೇ ಖಕರಲ್ಲಿ ಒಬ್ಬರಾದ ಸುಬಾಲಚಂದ್ರಮಿತ್ರರು ಅಭಿಪ್ರಾಯಪಟ್ಟಿರುವರು.

ಅದೃಷ್ಟವಂತನಾದ ಆ ಬಾಲಕನು ಹುಟ್ಟಿದ ಮೊದಲುಗೊಂಡು, ಆತನ ತಂದೆಯಾದ ಠಾಕೂರದಾಸವಂದ್ಯೋಪಾಧ್ಯಾಯನಿಗೆ ದಿನದಿನಕ್ಕೆ ಪೂರ್ವದ ಕಷ್ಟಗಳೆಲ್ಲವೂ ತೊಲಗಿ, ಆದಾಯವು ಅನೇಕ ವಿಧಗಳಲ್ಲಿ ಅತಿ ಶಯಿಸುತ್ತಾ ಧನಧಾನ್ಯ ಸಮೃದ್ಧಿಯುಂಟಾದುದರಿಂದ ಆತನು ಸೌಖ್ಯವಾಗಿ ಜೀವನಮಾಡಿಕೊಂಡಿದ್ದನು. ಆ ಮಗುವಿನ ಅಜ್ಜನಾದ ರಾಮಜಯತರ್ಕಸಿ ದ್ಧಾಂತನು ಸದಾಕಾಲದಲ್ಲಿಯೂ ಈಶ್ವರಧ್ಯಾನಾಯತ್ತಚಿತ್ತನಾಗಿಯೇ ಇದ್ದು ದರಿಂದ ತನ್ನ ಮುದ್ದಿನ ಮೊಮ್ಮಗನಿಗೆ “ ಈಶ್ವರಚಂದ್ರ ” ನೆಂದು ನಾಮಕ ರಣ ಮಾಡಿಸಿದನು.

---

## ಎರಡನೆಯ ಅಧ್ಯಾಯ.

### ಬಾಲ್ಯ, ವಿವಾಹ, ವಿದ್ಯಾಭ್ಯಾಸ.

ಆ ಬಾಲಕನು ದಿನದಿನ ಪ್ರವರ್ಧಮಾನನಾಗುತ್ತಾ, ಐದುವರ್ಷಗಳ ವಯಸ್ಸಿನವನಾಗಿ ವಿದ್ಯಾಭ್ಯಾಸಾರಂಭಕ್ಕೆ ಸುಸಿದ್ಧನಾದುದರಿಂದ ವಿಧ್ಯುಕ್ತರೀತಿ ಯಿಂದ ಅಕ್ಷರಾಭ್ಯಾಸಮಹೋತ್ಸವವನ್ನು ನಡಿಸಿದರು. ಆ ಕಾಲದಲ್ಲಿ ವೀರ ಸಿಂಹಗ್ರಾಮದಲ್ಲಿ ಒಂದು ಪ್ರೈಮರಿಸ್ಕೂಲು ಮಾತ್ರವಿದ್ದಿತು. ಆದರೂ ನಿರ್ದ ಯನಾದ ಅಲ್ಲಿಯ ಉಪಾಧ್ಯಾಯನು ವಿದ್ಯಾರ್ಥಿಗಳನ್ನು ಬಹು ಕ್ರೂರವಾಗಿ ಶಿಕ್ಷಿಸುತಲಿದ್ದುದರಿಂದ ಈಶ್ವರಚಂದ್ರನನ್ನು ಆ ಪಾಠಶಾಲೆಗೆ ಕಳುಹಲಿಕ್ಕೆ ಅವನ ಪ್ರಿಯಜನಕನಿಗೆ ಇಷ್ಟವಿಲ್ಲದೆ ತನ್ನ ಪ್ರೇಮಪುತ್ರನಿಗೋಸ್ಕರ ಪ್ರತ್ಯೇ ಕವಾಗಿ ಒಬ್ಬ ಉಪಾಧ್ಯಾಯನನ್ನು ಕರೆಯಿಸಬೇಕೆಂದು ಯೋಚಿಸಿ, ಬಹಳ ವಾಗಿ ಹುಡುಕಿ, ಕೊನೆಗೆ ಕಲಿಕಾಂತನೆಂಬ ಕುಲೀನಬ್ರಾಹ್ಮಣನೊಬ್ಬನಿಂದ ಪ್ರತ್ಯೇಕವಾಗಿ ಒಂದು ಪಾಠಶಾಲೆಯನ್ನಿಡಿಸಿ, ತನ್ನ ಮಗನಿಗೆ ಅಲ್ಲಿ ವಿದ್ಯಾ ಭ್ಯಾಸಮಾಡಿಸುತ್ತಿದ್ದನು. ಆ ಚಿಕ್ಕಹುಡುಗನ ಅನುಪಮಾನ ಬುದಿ ಕೌಶ

ಲ್ಯಾದಿಗಳು ಆಗಿನಿಂದಲೇ ಪ್ರಕಾಶಿಸತೊಡಗಿದುವು. ಆತನು ಈ ಪಾಠಶಾಲೆಯಲ್ಲಿ ಮೂರುವರುಷಗಳೊಳಗಾಗಿಯೇ ಬಾಲವಿದ್ಯಾಭ್ಯಾಸವನ್ನೆಲ್ಲ ಕಲ್ತುಕೊಂಡು, ಅದ್ಭುತವಾದ ಲೇಖನಾಪ್ರಾವೀಣ್ಯವನ್ನು ಪಡೆದನು. ಆ ಕಾಲದಲ್ಲಿ ಮುದವಣಿಗನಿಗೆ ಲೇಖನಾಪ್ರಾವೀಣ್ಯವೇ ಮುಖ್ಯ ಲಕ್ಷಣವೆಂದು ಭಾವಿಸಲ್ಪಡುತ್ತಿದ್ದಿತು. ಈಶ್ವರಚಂದ್ರನ ಚಟುವಟಿಕೆಗೂ, ಜ್ಞಾಪಕಶಕ್ತಿಗೂ, ಕಲಿಕಾಂತನು ಆಶ್ಚರ್ಯಪಟ್ಟು, ಅವನಲ್ಲಿ ಪ್ರತ್ಯೇಕ ಪ್ರೇಮಾಭಿಮಾನವುಳ್ಳವನಾಗಿ ಬಹು ಜಾಗ್ರತೆಯಿಂದ ವಿದ್ಯೆಯನ್ನು ಕಲಿಸುತ್ತಿದ್ದನು. ಆ ಬಾಲಕನು ತನ್ನ ಗುರುಭಕ್ತಿಯನ್ನು ತಾನು ದೊಡ್ಡವನಾದ ಮೇಲೆ ಸಹ ತೋರುತಲಿದ್ದನು.

ಈಶ್ವರಚಂದ್ರನು ಬಾಲ್ಯದಲ್ಲಿ ತುಂಬ ತುಂಟತನ ಮಾಡುವವರಲ್ಲಿ ಒಬ್ಬನು. ಅವನು ಆಟಪಾಟಗಳಲ್ಲಿಯೇ ಅತ್ಯಾಸಕ್ತಿಯುಳ್ಳವನಾಗಿದ್ದನು. ಪ್ರಸಿದ್ಧಿಗೊಂಡ ವೈಷ್ಣವಮತದ ಸಂಸ್ಕರ್ತನಾದ ಚೈತನ್ಯನೂ, ಆಂಗ್ಲೇಯ ಕವಿಶ್ರೇಷ್ಠನಾದ ಷೇಕ್ಸ್ಪಿಯರನೂ ಮೊದಲಾದ ಮಹನೀಯರೆಲ್ಲರೂ ತಮ್ಮ ಬಾಲ್ಯದಲ್ಲಿ ಇವನಂತೆಯೇ ಬಲು ತುಂಟರಾಗಿದ್ದರೆಂದು ಅವರ ಚರಿತ್ರೆಗಳಿಂದ ತಿಳಿಯುಬರುವುದು. ಮಹಾಪುರುಷರಿಗೆಲ್ಲ ಇದು ಬಾಲ್ಯದಲ್ಲಿ ಸಹಜಗುಣವೆಂದು ಕೆಲವರು ಭಾವಿಸುವರು. ಒಂದು ದಿನ ಆತನು ಸಾಲೆಗೆ ಹೋಗುವಾಗ ದಾರಿಯಲ್ಲಿ ಒಂದು ಗದ್ದೆಯಲ್ಲಿ ಬೆಳೆದಿದ್ದ ತೆನೆಯನ್ನು ಕಿತ್ತು, ನಾಲ್ಕು ದಿಕ್ಕಿಗೂ ಚೆಲ್ಲುತ್ತಾ, ಮೆಲ್ಲುತ್ತಾ ಆಟವಾಡುತ್ತಿರಲು, ಬತ್ತದ ಮುಳ್ಳೊಂದು ಆತನ ಕಂಠದಲ್ಲಿ ಸಿಕ್ಕಿಕೊಂಡು, ಪ್ರಾಣಾಪಾಯವಾಗುವ ಹಾಗೆ ಆಯಿತು. ಆತನ ಅನುಬಂಧಿಯೊಬ್ಬನು ಅದನ್ನು ನೋಡಿ, ಉಪಾಯದಿಂದ ಆ ಮುಳ್ಳನ್ನು ತೆಗೆದು, ಅವನ ಗಂಡವನ್ನು ತಪ್ಪಿಸಿದನು. ಮತ್ತು ಆತನ ಚಿಕ್ಕಂದಿನಲ್ಲಿ ವಿಚಿತ್ರವಾದ ಅಭ್ಯಾಸವೊಂದಿತ್ತು. ಪ್ರತಿವಿಷಯದಲ್ಲಿಯೂ ಒರಟುತನದಿಂದ ಕೂಡಿದ ವಿರುದ್ಧಾಭಿಪ್ರಾಯವುಳ್ಳವನಾಗಿ, ತಂದೆ ಮೊದಲಾದವರ ಉದ್ದೇಶಗಳಿಗೆ ಬುದ್ಧಿಪೂರ್ವಕವಾಗಿ ಭಿನ್ನವರ್ತನವುಳ್ಳವನಾಗಿದ್ದನು. ಆದುದರಿಂದ ಆತನಿಗೆ ಆಗಾಗ್ಗೆ ಲತ್ತೆಗಳು ಸಹ ಬೀಳುತಿದ್ದುವು. ಚಿಕ್ಕಂದಿನಲ್ಲಿ ಅಭ್ಯಾಸಗೊಂಡ ಈ ಹಟಮಾರಿತನವು ಇವನು ದೊಡ್ಡವನಾದ ಮೇಲೆ ತಾನು ಕೈಕೊಂಡ ಸದುದ್ಯಮಗಳಲ್ಲಿ ನಿಶ್ಚಲ ಧೀರಹೃದಯನಾಗಿ, ಕಷ್ಟನಷ್ಟಗಳನ್ನು ಸಹಿಸಿ, ನೆರವೇರಿಸತಕ್ಕ ದೃಢನಿಶ್ಚಯ

ವಾಗಿ ಮಾರ್ಪಟ್ಟಿತು. ಒಳ್ಳೆಯ ಪ್ರಯತ್ನಗಳಿಗೆ ಸಹಜವಾಗಿ ಆರಂಭದಲ್ಲಿ ಅನೇಕ ವಿಘ್ನಗಳು ಸಂಭವಿಸುವುವು. ಈಶ್ವರಚಂದ್ರನಿಗೆ ವಿಘ್ನಗಳು ಉಂಟಾದ ಹಾಗೆಲ್ಲ ದೃಢನಿಶ್ಚಯ, ಪ್ರೋತ್ಸಾಹ, ಕಾರ್ಯಾಸಕ್ತಿ ಮೊದಲಾದ ಗುಣಗಳು ಅತಿಶಯವಾದುವು. ದೃಢನಿಶ್ಚಯವುಳ್ಳವನಾದರೆ ಎಂತಹ ಮನೋರಥಸಿದ್ಧಿಗಾದರೂ ಬಡತನವು ಆತಂಕಹೇತುವಾಗಲಾರದೆಂದು ಆತನು ಪ್ರಪಂಚಕ್ಕೆಲ್ಲ ತೋರಿಸಿಕೊಟ್ಟನು.

ಆತನು ಗ್ರಾಮಪಾಠಶಾಲೆಯಲ್ಲಿ ಓದಿದುದು ಸಂಪೂರ್ಣವಾದುದರಿಂದ ಆತನಿಗೆ ಇಂಗ್ಲಿಷವಿದ್ಯೆಯನ್ನು ಕಲಿಸಬೇಕೆಂದು ಅವನ ತಂದೆಯು ಅವನನ್ನು ಕಲಕತ್ತೆಗೆ ಕರೆದುಕೊಂಡು ಹೋಗಲಿಕ್ಕೆ ಯತ್ನಿಸಿದನು. ೧೮೨೮ನೆಯ ವರುಷದ ನವಂಬರು ತಿಂಗಳಲ್ಲಿ ವೀರಸಿಂಹಗ್ರಾಮದಿಂದ ಕಲಕತ್ತೆಗೆ ಹೊರಟರು. ಆಗಲಾ ಬಾಲನಿಗೆ ಎಂಟು ವರುಷಗಳ ವಯಸ್ಸು. ಲೋಹಮಾರ್ಗಗಳು ಮೊದಲಾದ ಸದುಪಾಯಗಳು ಯಾವುವೂ ಆ ಕಾಲದಲ್ಲಿರಲಿಲ್ಲ; ಆದುದರಿಂದ ಇಂತಹ ಹಳ್ಳಿಗಳಿಂದ ಕಲಕತ್ತೆಗೆ ಪ್ರಯಾಣಮಾಡುವುದು ತುಂಬ ಕಷ್ಟವಾಗಿದ್ದಿತು. ಮಾರ್ಗಮಧ್ಯದಲ್ಲಿ ಕಳ್ಳರ ಕಾಟವೂ, ಕಾಡುಮೃಗಗಳ ಹಾವಳಿಯೂ ಹೆಚ್ಚಾಗಿದ್ದುವು. ಠಾಕುರದಾಸನು ತನ್ನ ಕುಮಾರನನ್ನೂ, ಅವನ ಶಿಕ್ಷಕನಾದ ಕಲಿಕಾಂತನನ್ನೂ ಸಂಗಡ ಕರೆದುಕೊಂಡು, ಮಾರ್ಗದಲ್ಲಿ ತುಂಬ ಕಷ್ಟಗಳನನುಭವಿಸಿ, ಮೂರು ದಿನಗಳು ಬಹು ದೀರ್ಘಪ್ರಯಾಣಮಾಡಿ, ಕಲಕತ್ತೆಯನ್ನು ಸೇರಿದನು. ದಾರಿಯಲ್ಲಿ ಈಶ್ವರಚಂದ್ರನ ಸೂಕ್ಷ್ಮಬುದ್ಧಿಯನ್ನು ತಿಳಿಯಲಿಕ್ಕೆ ಒಂದು ವಿಚಿತ್ರವು ಜರುಗಿತು.

ಕಲಕತ್ತಾ ನಗರದ ಬಾಹ್ಯಪ್ರದೇಶದಲ್ಲಿ ಎರಡು ಕಡೆಗಳಲ್ಲಿಯೂ ಪುಷ್ಪಫಲಭರಿತಗಳಾದ ವೃಕ್ಷಪಂಕ್ತಿಗಳು ಬೆಳೆದಿರುವ ರಾಜಮಾರ್ಗದಲ್ಲಿ ಆ ಮೂವರೂ ಹೋಗುತ್ತಿರುವಾಗ ಹಾದಿಯ ಪಕ್ಕದಲ್ಲಿ ದೂರವನ್ನು ತಿಳಿಸಲಿಕ್ಕೆ ಇಂಗ್ಲಿಷ್ ಅಂಕೆಗಳನ್ನು ಹಾಕಿರುವ ಮೈಲುಕಲ್ಲನ್ನು ಈ ಬಾಲಕನು ನೋಡಿ ಇದು ಏತಕ್ಕೆ? ಎಂದು ತನ್ನ ತಂದೆಯನ್ನು ಕೇಳಿ, ಅದರ ಸಂಗತಿಯನ್ನು ತಿಳಿದುಕೊಂಡು, ಅದೇಮೇರೆಗೆ ದಾರಿಯಲ್ಲಿ ಸಿಕ್ಕಿದ ಅಂತಹ ಮೈಲುಕಲ್ಲುಗಳ ಮೇಲೆ ಹಾಕಲ್ಪಟ್ಟಿರುವ ಕ್ರಮಸಂಖ್ಯೆಗಳನ್ನೆಲ್ಲ ಎಚ್ಚರದಿಂದ ಗುರುತಿಸಿ, ನೆನಪಿನಲ್ಲಿಟ್ಟುಕೊಂಡು ಮನೆಗೆ ಹೋಗಿ ಸೇರುವಾಗ್ಗೆ, ತನಗೆ ಅದುವರೆಗೂ ಇಲ್ಲದ ಇಂಗ್ಲಿಷ ಸಂಖ್ಯಾಜ್ಞಾನವನ್ನು ಪಡೆದುಕೊಂಡನು.

ಆಹಾ! ಈ ಬಾಲಕನ ಬುದ್ಧಿಕೌಶಲ್ಯವು ಎಂತದು? "ಹೂವು ಹುಟ್ಟುವಾಗಲೇ ಪರಿಮಳಿಸುವುದು." ಎಂಬ ಲೋಕೋಕ್ತಿಯು ಈತನಲ್ಲಿ ಸಾರ್ಥಕವಾಯಿತಲ್ಲವೇ!

ತರುವಾಯ ಅವರು ಠಾಕೂರದಾಸನ ಪೂರ್ವದ ಯಜಮಾನನಾದ ಬಾಬೂಜಗದ್ದುರ್ಲಭಸಿಂಹನ ಮನೆಗೆ ಹೋಗಿ, ಅಲ್ಲಿಳಿದುಕೊಂಡರು. ಅಲ್ಲಿ ಠಾಕೂರದಾಸನು ಆ ಯಜಮಾನನ ಜಮಾಖರ್ಚು ಪಟ್ಟಿಗಳನ್ನು ತೇರೀಜು ಮಾಡುತ್ತಿರಲು, ಆತನ ಕುಮಾರನು ತನಗೆ ಆ ಇಂಗ್ಲಿಷ ಅಂಕೆಗಳು ತಿಳಿಯುವುವೆಂತಲೂ, ತಾನು ಕೂಡ ಹಾಗೆಯೇ ತೇರೀಜು ಮಾಡಬಲ್ಲೆನೆಂತಲೂ, ತಂದೆಯ ಕಿವಿಯಲ್ಲಿ ರಹಸ್ಯವಾಗಿ ಹೇಳಿದನು. ಆಗ ಆತನ ಚಾತುರ್ಯವನ್ನು ನೋಡುವುದಕ್ಕಾಗಿ, ಆತನ ಕೈಗೆ ಒಂದು ಪಟ್ಟಿಯನ್ನು ಕೊಡಲು, ನೋಡುವವರಿಗೆಲ್ಲ ಆಶ್ಚರ್ಯವುಂಟಾಗುವಹಾಗೆ ಆತನು ಒಂದು ತಪ್ಪೂ ಇಲ್ಲದ ಹಾಗೆ ಅದನ್ನು ಕೂಡಿಸಿಟ್ಟನು. ಆಗ ಅಲ್ಲಿದ್ದವರೆಲ್ಲರೂ ಆ ಹುಡುಗನಿಗೆ ಇಂಗ್ಲಿಷ್ ಅಂಕಿಗಳು ಬಂದ ರೀತಿಯನ್ನು ಅವನಿಂದಲೇ ತಿಳಿದುಕೊಂಡು, ಆಶ್ಚರ್ಯಮಗ್ನಮಾನಸರಾಗಿ ತುಂಬ ಮೆಚ್ಚಿದರು.

ವಾಚಕರಿರ! ಇಂತಹ ಅದ್ಭುತಗುಣಗಳು ಶ್ರೇಷ್ಠರಾದ ಮನುಷ್ಯರಲ್ಲೆಲ್ಲ ಸಾಮಾನ್ಯವಾಗಿ ಕಾಣಬರುತ್ತಿರುವುವು. ವಿಖ್ಯಾತಯಶಸ್ಕರಾದ ಜಾನ್ಸನ್, ಪೋಪ್ ಮೊದಲಾದ ವಿದೇಶೀಯರೂ, ಈಶ್ವರಚಂದ್ರಗುಪ್ತ, ಬಂಕಿಂಚಂದ್ರ ಚಟ್ಟೋಪಾಧ್ಯಾಯಸ್ವಾಮಿ, ವಿವೇಕಾನಂದಸ್ವಾಮಿ, ಶ್ರೀರಾಮಕೃಷ್ಣಪರಮಹಂಸ, ಮೊದಲಾದ ಸ್ವದೇಶೀಯರೂ ತಮ್ಮ ಚಿಕ್ಕಂದಿನಲ್ಲಿ ಇಂತಹ ಅದ್ಭುತಕಾರ್ಯಗಳನ್ನು ಮಾಡಿದವರೇ ಎಂದು ತಿಳಿಯಿರಿ!

ಆಮೇಲೆ ಠಾಕೂರದಾಸನು ತನ್ನ ಮಗನಿಗೆ ವಿದ್ಯಾಭ್ಯಾಸ ಮಾಡಿಸಲಿಕ್ಕೆ ಕಲ್ಕತ್ತೆಯಲ್ಲಿನ ಪಾಠಶಾಲೆಗಳಲ್ಲಿ ಯಾವದು ಶ್ರೇಷ್ಠಕರವಾದುದೆಂದು ವಿಚಾರಿಸಿ, ಮೊತ್ತಮೊದಲು ಹಿಂದೂಕಾಲೇಜಿನಲ್ಲಿ ಸೇರಿಸಿದನು. ಆದರೂ ಕೆಲವು ಕಾರಣಗಳಿಂದ ಸಂಸ್ಕೃತಕಲಾಶಾಲೆಯಲ್ಲಿ ಅಭ್ಯಾಸ ಮಾಡಿಸಿದರೆ ತುಂಬ ಪ್ರಯೋಜನಕರವಾಗಿರುವುದೆಂದು ತಿಳಿದು, ಕೂಡಲೇ ಹಾಗೆ ಮಾಡಬೇಕೆಂದು ನಿಶ್ಚಯಿಸಿಕೊಂಡನು. ತರುವಾಯ ೧೮೨೯ನೇ ಸಂವತ್ಸರದ ಜೂನ ೧ನೇ ತಾರೀಖಿನಲ್ಲಿ ಅವನನ್ನು ಕನಿಷ್ಠವ್ಯಾಕರಣವರ್ಗದಲ್ಲಿ ದಾಖಲು

ಮಾಡಿಸಿದನು. ಅಲ್ಲಿ ಆರುತಿಂಗಳು ಓದಿದಮೇಲೆ ವರ್ಷಾರ್ಧಪರೀಕ್ಷೆಯಲ್ಲಿ ಪೂರ್ಣವಾಗಿ ಜಯಹೊಂದಿದುದರಿಂದ ಪಾಠಶಾಲಾಧಿಕಾರಿಗಳು ಆತನಿಗೆ ತಿಂಗಳೊಂದಕ್ಕೆ ಐದುರೂಪಾಯಿಗಳ ವಿದ್ಯಾರ್ಥಿವೇತನವನ್ನು ಕೊಟ್ಟರು. ಸಾಂವತ್ಸರಿಕಪರೀಕ್ಷೆಯಲ್ಲಿ ಉತ್ತೀರ್ಣರಾದವರಲ್ಲೆಲ್ಲ ಈತನೇ ಮೊದಲನೆ ಯವನಾದುದರಿಂದ ವಿದ್ಯಾಭ್ಯಾಸದಲ್ಲಿ ಮತ್ತಷ್ಟು ಪ್ರೋತ್ಸಾಹಪಡೆದನು. ಆತನು ಬುದ್ಧಿವಂತನಾಗಿದ್ದರೂ ತನ್ನ ತಂದೆಯಿಂದ ಆಗಾಗ್ಗೆ ಕಠಿಣಶಿಕ್ಷೆ ಯನ್ನು ಹೊಂದುತ್ತಿದ್ದನು. ಏಕಂದರೆ, ಆತನು ತನ್ನ ಮಗನಲ್ಲಿ ತುಂಬ ಪ್ರೇಮವುಳ್ಳವನಾಗಿದ್ದರೂ ಕ್ರಮವಾದ ವಿದ್ಯಾಬೋಧನೆಯ ಮಾರ್ಗವನ್ನು ಅರಿತವನಲ್ಲವಾದುದರಿಂದ ಅಂತಹ ಅನಾಲೋಚಿತ ವರ್ತನನಾಗುತಿದ್ದನು. ಆ ಕುಮಾರನ ವಿದ್ಯಾಭ್ಯಾಸಕ್ಕಾಗಿ ತಾನು ತನ್ನ ಗ್ರಾಮವನ್ನೂ, ಕುಟುಂಬ ವನ್ನೂ ಬಿಟ್ಟು, ಒಂದು ಸಣ್ಣ ಉದ್ಯೋಗವನ್ನು ಸಂಪಾದಿಸಿಕೊಂಡು, ಕಲ್ಕ ತ್ತೆಯಲ್ಲಿ ಪ್ರತ್ಯೇಕವಾಗಿ ಸಂಸಾರಮಾಡುತ್ತಿದ್ದನು. ಆಗ ಕುಮಾರನ ಸಹಾ ಯದಿಂದ ತಾನೇ ಅಡಿಗೆ ಮುಂತಾದ ಗೃಹಕೃತ್ಯಗಳನ್ನೆಲ್ಲ ನೆರವೇರಿಸಿ ಕೊಂಡು, ಹಗಲೆಲ್ಲ ಉದ್ಯೋಗ ಮಾಡಿ, ರಾತ್ರಿವೇಳೆಯಲ್ಲಿ ಮನೆಗೆ ಬಂದು ಆತನ ವಿದ್ಯೆಯನ್ನು ಕುರಿತು ತಕ್ಕ ಶ್ರದ್ಧೆಯನ್ನು ತೆಗೆದುಕೊಳ್ಳುತ್ತಿದ್ದನು. ಆ ಬಾಲಕನು ರಾತ್ರಿ ಹತ್ತುಗಂಟೆಗಳವರೆಗೂ, ಓದಿಕೊಳ್ಳುವ ಸಮಯದಲ್ಲಿ ಯಾವಾಗಲಾದರೂ ನಿದ್ರಿಸಿದರೆ ತುಂಬ ಕಠಿಣವಾಗಿ ಶಿಕ್ಷಿಸಲ್ಪಡುವುದು ಸಿಕ್ಷ ಯವಾಗಿದ್ದಿತು. ಕೆಲವು ಕಾಲದಲ್ಲಿ ಅವನ ಗೋಳನ್ನು ಕೇಳಿ, ಆ ಮನೆಯ ಯಜಮಾನನಾದ ಜಗದ್ದುರ್ಲಭನ ಪತ್ನಿಯಾದ ರೈಮಣಿದಾಸಿಯೂ, ಅವನ ಸೋದರಿಯೂ ಆ ಬಾಲನನ್ನು ಸಂತೈಸಿ, ಅವನ ತಂದೆಯನ್ನು ಆಕ್ಷೇಪಿಸು ತ್ತಿದ್ದರು. ಆ ಲಲನಾಮಣಿಗಳಿಬ್ಬರೂ ಆ ಬಾಲನಲ್ಲಿ ಅತ್ಯಂತಾನುರಾಗವು ಳ್ಳವರಾಗಿದ್ದರು. ಅವರಲ್ಲಿ ಮುಖ್ಯವಾಗಿ ರೈಮಣಿಯೆಂಬಾಕೆಯು ಸದಾ ಶೀಲದಲ್ಲಿಯೂ, ಕಾರುಣ್ಯಾನುರಾಗಗಳಲ್ಲಿಯೂ, ಪಾಲುಮಾರಿಕೆಯಿಲ್ಲದೆ ಕಷ್ಟಪಟ್ಟು ಕೆಲಸಮಾಡುವುದರಲ್ಲಿಯೂ, ಹೃದಯನೈರ್ಮಲ್ಯದಲ್ಲಿಯೂ, ನಿರುಪಮಾನಳಾಗಿ ನಾರೀಜನರಿಗೆಲ್ಲ ಮಾರ್ಗದರ್ಶಿನಿಯಾಗಿದ್ದಳು. ಕೆಲವು ವೇಳೆಗಳಲ್ಲಿ ಈಶ್ವರಚಂದ್ರನು ನಿದ್ದೆಬಂದರೆ ತನ್ನ ತಂದೆಯು ದಂಡಿಸುವ ನೆಂಬ ಭಯದಿಂದ ಕಣ್ಣುಗಳಿಗೆ ಎಣ್ಣೆ ಹಚ್ಚಿಕೊಳ್ಳುತ್ತಿದ್ದನಂತೆ! ಹೀಗೆ ಆತನು ಮೂರು ವರುಷಗಳಲ್ಲಿ ವ್ಯಾಕರಣ-ಶಾಸ್ತ್ರವನೆಲ್ಲ ಸಾಂತವಾಗಿ ಅಭ್ಯಾ ಸಮಾಡಿ, ಪ್ರತಿ ಸಂವತ್ಸರಾಂತ ಪರೀಕ್ಷೆಯಲ್ಲಿಯೂ ಉತ್ತಮಸ್ಥಾನವನ್ನು

ಆಕ್ರಮಿಸಿಕೊಳ್ಳುತ್ತಿದ್ದನು. ಆಗ್ಗೆ ಸುಮಾರು ಹನ್ನೆರಡು ವರುಷಗಳ ವಯಸ್ಸಿನವನಾದ ಆ ಬಾಲಕನು ಪಾಠಶಾಲಾಧಿಕಾರಿಗಳಿಂದ ನಿರ್ಣಯಿಸಲ್ಪಟ್ಟ ಪಾಠಗಳನ್ನು ಆರಂಭಿಸಿದನು. ಪ್ರಥಮ ವರುಷದಲ್ಲಿ ರಘುವಂಶ, ಕುಮಾರ ಸಂಭವ, ರಾಘವಪಾಂಡವೀಯ, ಅಮರಕೋಶ (ಸ್ವಲ್ಪಭಾಗ) ಭಟ್ಟಿಕಾವ್ಯ (೫೦೦ ಶ್ಲೋಕಗಳು) ಕಂಠಪಾಠವಾಗಿ ಓದಿ, ಅಂತ್ಯಪರೀಕ್ಷೆಯಲ್ಲಿ ಮೊದಲನೆಯ ಬಹುಮಾನವನ್ನು ಪಡೆದನು. ಎರಡನೆಯ ವರುಷದಲ್ಲಿ ಮಾಘ, ಭಾರವಿ, ಮೇಘದೂತ, ಶಾಕುಂತಲ, ವಿಕ್ರಮೋರ್ವಶೀಯ, ಉತ್ತರರಾಮ ಚರಿತ್ರೆ, ದಶಕುಮಾರಚರಿತ್ರೆ, ಕಾದಂಬರಿ, ಮುದ್ರಾರಾಕ್ಷಸ ಮೊದಲಾದ ಇನ್ನೂ ಕೆಲವು ಗ್ರಂಥಗಳನೋದಿ, ಮೊದಲಿನಂತೆಯೇ ಪ್ರಥಮ ಬಹುಮಾನ ವನ್ನು ಹೊಂದಿದನು. ಎರಡನೆಯ ವರುಷ ಸಾಹಿತ್ಯವನ್ನು ಅಭ್ಯಸಿಸುತ್ತಿರುವಲ್ಲಿ ಆತನ ತಮ್ಮನಾದ ದೀನಬಂಧುವು ಸಂಸ್ಕೃತ ಕಲಾಶಾಲೆಯಲ್ಲಿ ಓದಲಿಕ್ಕೆ ಕಲಕತ್ತೆಗೆ ಬಂದನು. ಠಾಕೂರದಾಸನ ಸ್ವಲ್ಪ ಸಂಪಾದನೆಯಿಂದಲೇ ಮನೆಯಲ್ಲಿದ್ದ ಕುಟುಂಬದವರೂ ಕಲಕತ್ತೆಯಲ್ಲಿರುವ ಈ ಮೂವರೂ ಜೀವನ ಮಾಡಬೇಕಾಗಿದ್ದಿತು.

ಪಾಪ! ಈಶ್ವರಚಂದ್ರನು ಅಂಗಡಿಯ ಕೆಲಸಗಳನ್ನೂ ಮನೆಯ ಕೆಲಸಗಳನ್ನೂ ತಾನೇ ಮಾಡಿಕೊಂಡು, ಅಡಿಗೇ ಮಾಡಿ, ತಮ್ಮನಿಗೂ ತಂದೆಗೂ ಬಡಿಸುತ್ತಿದ್ದನು. ಸ್ವಲ್ಪವೂ ಬೇಸರವಿಲ್ಲದೆ ಅಡುಗಬ್ಬನ್ನೂ ಸಹ ತಾನೇ ಸೀಳಿಕೊಂಡು, ಎಲ್ಲ ಕೆಲಸಗಳನ್ನು ಮಾಡುತ್ತಿದ್ದನು. ಸಾಮಾನ್ಯವಾಗಿ ಹಗಲಿನಲ್ಲಿ ಬಹುಕಾಲವೆಲ್ಲ ಹೀಗೆ ಗೃಹಕೃತ್ಯನಿರ್ವಹಣೆಗಾಗಿಯೇ ಕಳೆದುಹೋಗುತಲಿದ್ದರೂ, ನಿಜವಾದ ವಿದ್ಯಾಸಕ್ತಿಯುಳ್ಳವನಾಗಿಯೂ, ಅದ್ಭುತಧಾರಣಾಶಕ್ತಿಯುಳ್ಳವನಾಗಿಯೂ, ದೃಢಚಿತ್ತದಿಂದ ಕಷ್ಟಪಟ್ಟು ಓದುವವನಾಗಿಯೂ ಇದ್ದುದರಿಂದ ಅಡಿಗೆ ಮಾಡುವಾಗಲೂ ಪುಸ್ತಕವನ್ನು ಕೈಯಲ್ಲಿ ಹಿಡಿದು ಓದುತ್ತಲೇ ಇರುವನು. ಮತ್ತು ರಾತ್ರಿವೇಳೆ ಹತ್ತು ಗಂಟೆಗಳೊಳಗೆ ಭೋಜನಾದಿ ಕೃತ್ಯಗಳನ್ನು ತೀರಿಸಿಕೊಂಡು, ಮಲಗಿ, ೧೨ ಘಂಟೆಗೆ ಮರಳಿ ಎಚ್ಚತ್ತು, ಬೆಳಗಿನ ಜಾವದತನಕ ಓದಿ, ತರುವಾಯ ಗೃಹಕೃತ್ಯಗಳಿಗೆ ಹೋಗುತ್ತಿದ್ದನು. ಆತನು ಪಾಠಶಾಲೆಗೆ ಹೋಗುವಾಗಲೂ ಮರಳಿ ಬರುವಾಗಲೂ ದಾರಿಯಲ್ಲಿ ಓದುತ್ತಲಿರುವ ಅಭ್ಯಾಸವುಳ್ಳವನಾಗಿದ್ದನಂತೆ!

ಅವರು ವಾಸಮಾಡುತ್ತಿದ್ದ ಪ್ರದೇಶವು ತುಂಬ ಅನಾರೋಗ್ಯಕರವಾದ ದುರ್ಗಂಧವಾತಾವರಣವುಳ್ಳುದಾಗಿಯೂ, ಕಿವಿ ಕಿವುಡಾಗುವಂತೆ ಮೊರೆಯುವ ಕೀಟಕಗಳಿಂದ ತುಂಬಿದುದಾಗಿಯೂ, ಇದ್ದುದರಿಂದ ವಾಸಕ್ಕೆ ಯೋಗ್ಯವಾಗಿರಲಿಲ್ಲ. ಆದರೂ ಈ ಬಾಧೆಗಳನ್ನೆಲ್ಲ ಸೈರಿಸಿಕೊಂಡು, ಅಲ್ಲಿಯೇ ಇರಬೇಕಾಗಿಬಂದಿತು. ಅವನ ಎರಡನೆಯ ತಮ್ಮನಾದ ಶಂಭುಚಂದ್ರನು ತನ್ನ ತಂದೆಯಲ್ಲಿಯೂ ತಮ್ಮಂದಿರಲ್ಲಿಯೂ ಸಮಾನ ಭಕ್ತಿವಾತ್ಸಲ್ಯಗಳುಳ್ಳವನಾಗಿದ್ದನು.

ಈ ಮೇರೆಗೆ ಹದಿಮೂರು ವರುಷಗಳ ವಯಸ್ಸಿನಲ್ಲಿಯೇ ಆ ಬಾಲಕನು ಎಲ್ಲಾ ಗ್ರಂಥಗಳಲ್ಲಿಯೂ, ಒನಕಿಯ ಹಾಡಿನಂತೆ ಅಲ್ಲದೆ, ಸಂಪೂರ್ಣ ಸಾರವನ್ನು ಗ್ರಹಿಸಿ, ಓದುತ್ತಾ, ಸಂಸ್ಕೃತಭಾಷೆಯನ್ನು ಧಾರಾಳವಾಗಿ ಬರೆಯುವುದಕ್ಕೂ ಮಾತನಾಡುವುದಕ್ಕೂ ಸಮರ್ಥನಾಗಿದ್ದುದು ಸಾಮಾನ್ಯ ವಿಷಯವಲ್ಲ. ಇಷ್ಟುಮಾತ್ರವಲ್ಲದೆ ಇಂತಹ ಬಾಲ್ಯದಲ್ಲಿಯೇ ಅಪಾರವಾದ ಮಾತೃಭಾಷಾಪಾಂಡಿತ್ಯವನ್ನು ಸಂಪಾದಿಸಿದುದು ತುಂಬ ಶ್ಲಾಘ್ಯವಾದುದು. ಅವನು ಹಿಡಿದ ಪ್ರಯತ್ನಗಳನ್ನೆಲ್ಲ ಸಂಪೂರ್ಣವಾಗಿ ನೆರವೇರಿಸಿದನೇ ಹೊರತು ಒಂದನ್ನಾದರೂ ಪರಿತ್ಯಜಿಸಿ ಅರಿಯನು. ಸಮಾನವಾದ ದೇಹಮನೋಬಲಸಂಪನ್ನನಾಗಿದ್ದುದರಿಂದ ಎಂತಹ ಕಾರ್ಯವನ್ನಾಗಲಿ ಹಿಡಿದರೆ ಮಾನವಶಕ್ತಿಯ ವಂಚನೆ ಇಲ್ಲದಂತೆ ನೆರವೇರಿಸಬಲ್ಲವನಾದನು. ಕಲಾಶಾಲಾಧಿಕಾರಿಗಳು ನಿರ್ಣಯಿಸಿದ ವಿದ್ಯೆಯೆಲ್ಲವೂ ಸಂಪೂರ್ಣವಾದುದರಿಂದ ಸ್ವಂತವಾಗಿ ಸಂಸ್ಕೃತಸಾಹಿತ್ಯಗಳನ್ನೆಲ್ಲ ಓದಲಾರಂಭಿಸಿದನು. ಆಗ ಆತನು ಅದುವರೆಗೆ ಮುದ್ರಿಸಿ ಪ್ರಚಾರಿಸಲ್ಪಟ್ಟ ಪುಸ್ತಕಗಳಿಂದ ತೃಪ್ತಿಹೊಂದದೆ, ಕೈಬರವಣಿಗೆಯ ಅನೇಕ ಗ್ರಂಥಗಳನ್ನು ಸಂಪಾದಿಸಿ, ತನ್ನ ಕೈಯಿಂದಲೇ ಪ್ರತಿಗಳನ್ನು ಬರೆದುಕೊಂಡು, ಓದುತ್ತಬಂದನು! ಕಲಕತ್ತೆಯಲ್ಲಿನ ಆತನ ಪುಸ್ತಕ ಭಂಡಾರದಲ್ಲಿ ಈಗಲೂ ಆ ಬರಹದ ಪ್ರತಿಗಳಲ್ಲಿ ಕೆಲವನ್ನು ನೋಡಬಹುದು. ಮಾತೃಕೆಗಳನ್ನು ಮೃದುಮಧುರಶೈಲಿಯಲ್ಲಿ ಬರೆಯುವುದರಲ್ಲಿಯೂ, ಭಾಷಾಂತರಿಸುವುದರಲ್ಲಿಯೂ, ನಿರರ್ಗಳವಾದ ಪಾಂಡಿತ್ಯವನ್ನು ಸಂಪಾದಿಸಿದನು. ಹದಿನೈದನೆಯ ವಯಸ್ಸಿನಲ್ಲಿ ಅಲಂಕಾರಶಾಸ್ತ್ರ, ಸಾಹಿತ್ಯದರ್ಪಣ ಮೊದಲಾದ ಕಠಿಣ ಶಾಸ್ತ್ರಗಳನ್ನೆಲ್ಲ ಓದುತ್ತಾ, ತಾರಾಕಾಂತವಿದ್ಯಾಸಾಗರ, ತಾರಾನಾಥತರ್ಕವಾಚಸ್ಪತಿ ಮೊದಲಾದ ವಿದ್ವ

ನ್ಮಣಿಗಳಲ್ಲಿ ಅವುಗಳ ವಿಷಯಗಳನ್ನು ಕುರಿತು ಚರ್ಚಿಸುತ್ತಾ ಬಂದನು. ಆ ವೇಳೆಗೆ ಈತನಿಗೆ ಎಂಟು ರೂಪಾಯಿಗಳ ಮಾಸಾಶನದ ವಿದ್ಯಾರ್ಥಿ ವೇತನವೊಂದು ಲಭಿಸಿತು. ಆ ಕಾಲದಲ್ಲಿ ನ್ಯಾಯಪಂಡಿತ ಪದವಿಯನ್ನಪೇಕ್ಷಿಸುವವರು ನ್ಯಾಯದರ್ಶನಾದಿ ವೇದಾಂತಗ್ರಂಥಗಳನ್ನೂ, ಸ್ಮೃತಿಗಳನ್ನೂ ಕ್ರಮವಾಗಿ ಓದಿ, ಕಠಿಣವಾದ ಒಂದು ಪರೀಕ್ಷೆಯಲ್ಲಿ ಕೃತಾರ್ಥರಾಗಬೇಕಾಗಿದ್ದಿತು. ಆ ಕಾಲದಲ್ಲಿ ಆ ಪರೀಕ್ಷೆಯೊಳಗೆ ಉತ್ತೀರ್ಣರಾಗುವುದು ತುಂಬ ಕಷ್ಟವೆನಿಸಿದ್ದಿತು. ಈಶ್ವರಚಂದ್ರನು ಸಂಸ್ಕೃತಕಲಾಶಾಲಾಧಿಪತಿಯ ಇಷ್ಟದಂತೆ ಅಂತಹ ಪ್ರಯತ್ನಕ್ಕೆ ಉದ್ದೇಶಿಸಿದನು. ಹೀಗೆ ಸಾಹಿತ್ಯವನ್ನು ಮುಗಿಸಿ, ೧೮೩೭ನೆಯ ವರುಷದಲ್ಲಿ ಸ್ಮೃತಿವೇದಾಂತ ವಿಷಯಗಳನಾರಂಭಿಸಿದನು. ಸಾಮಾನ್ಯ ವಿದ್ಯಾರ್ಥಿಗಳೆಲ್ಲರೂ ಎರಡು ಮೂರು ವರುಷಗಳಲ್ಲಿ ಓದತಕ್ಕ ಮಿತಾಕ್ಷರ, ದಾಯಭಾಗ, ಮನುಸಂಹಿತೆ ಮೊದಲಾದ ಗ್ರಂಥಗಳನ್ನೆಲ್ಲ ಆರು ತಿಂಗಳುಗಳಲ್ಲಿಯೇ ಓದಿ ಮುಗಿಸಿ, ತನ್ನ ಅನನ್ಯ ಸಾಮಾನ್ಯ ಬುದ್ಧಿಪ್ರಾವೀಣ್ಯವನ್ನು ಹೊರಪಡಿಸಿದನು. ಆತನು ಸುಮಾರು ೧೭ ವರುಷಗಳ ವಯಸ್ಸಿನಲ್ಲಿಯೇ ಆ ಉತ್ಕೃಷ್ಟಪರೀಕ್ಷೆಯಲ್ಲಿ ತುಂಬ ಶ್ಲಾಘನೀಯನಾಗಿ ಉತ್ತೀರ್ಣನೆನಿಸಿ, ನ್ಯಾಯಶಾಸ್ತ್ರಸಂಘದವರಿಂದ ಕೃತಾರ್ಥತಾನಿದರ್ಶನ ಪತ್ರಿಕೆ ( Certificate ) ಯನ್ನು ಪಡೆದನು. ಕೂಡಲೇ ಸರಕಾರದವರು ಆತನಿಗೆ ಪೂರ್ವಬಂಗಾಳದ ಕೊಮಿಲ್ಲಾಪಟ್ಟಣದಲ್ಲಿ ಪಂಡಿತಕೋರ್ಟ ಮುನ್‌ಸಫ ಪದವಿಯನ್ನು ಕೊಟ್ಟರು. ಆ ಸ್ಥಳವು ತನ್ನ ಊರಿಗೆ ಬಹು ದೂರದಲ್ಲಿದ್ದು, ತನ್ನ ತಂದೆಗೆ ಸಮ್ಮತವಲ್ಲದೆ ಇದ್ದುದರಿಂದ ಆ ಉದ್ಯೋಗವನ್ನು ನಿರಾಕರಿಸಬೇಕಾಗಿಬಂದಿತು. ೧೮೩೮ನೆಯ ವರುಷದಲ್ಲಿ ಸಂಸ್ಕೃತ ಭಾಷೆಯಲ್ಲಿ ಧಾರಾಳವಾಗಿ ಉತ್ತಮಶೈಲಿಯಿಂದ ಗದ್ಯಪದ್ಯಗಳನ್ನು ಬರೆದವರಲ್ಲಿ ಅಗ್ರಗಣ್ಯರಿಗೆ ನೂರು ಮತ್ತು ಐವತ್ತು ರೂಪಾಯಿಗಳ ಬಹುಮಾನವನ್ನು ಕೊಡುವ ಪರೀಕ್ಷೆಯೊಂದು ನಡೆಯಿತು ಅದರ ಎರಡು ಬಹುಮಾನಗಳು ಈತನಿಗೇ ಸಿಕ್ಕಿದುವು.

ಈ ಬಾಲಕನು ಆ ಕಲಾಶಾಲೆಯಲ್ಲಿ ಪ್ರವೇಶಿಸುವಾಗ ಅಲ್ಲಿ ಗಂಗಾಧರತರ್ಕವಾಗೀಶನೆಂಬುವನು ವ್ಯಾಕರಣಶಾಸ್ತ್ರಪಂಡಿತನಾಗಿದ್ದನು. ಆತನು ನಮ್ಮ ಈಶ್ವರಚಂದ್ರನ ಅದ್ಭುತ ಬುದ್ಧಿಚಾತುರ್ಯವನ್ನು ನೋಡಿ, ಈತನಲ್ಲಿ ತುಂಬ ಪ್ರೇಮವುಳ್ಳವನಾಗಿ, ಪಾಠಶಾಲೆಯಲ್ಲಿ ವಿದ್ಯಾರ್ಥಿಗಳಿಗೆಲ್ಲ

ಹೇಳುವ ವಿದ್ಯೆಯಲ್ಲದೆ ಇತರ ಸಮಯಗಳಲ್ಲಿ ಕೆಲವು ಸಿದ್ಧಾಂತಶ್ಲೋಕಗಳನ್ನು ಕಲಿಸುತ್ತಿದ್ದನು. ಈ ಬಾಲಕನ ಮನೆಗೂ ಪಾಠಶಾಲೆಗೂ ಸುಮಾರು ಎರಡು ಮೈಲುಗಳ ದೂರವಿದ್ದುದರಿಂದ ಆರುತಿಂಗಳತನಕ ಇವರ ತಂದೆಯೇ ಈತನನ್ನು ಸಂಗಡ ಕರೆದೊಯ್ಯುತ್ತಿದ್ದನು. ಹಾಗೆ ಮಾಡುತ್ತಿದ್ದುದರಿಂದ ಇವನಿಗೆ ಬಾಲ್ಯದಿಂದಲೂ ದುಷ್ಟರ ಸಹವಾಸದಲ್ಲಿ ಬೀಳಲಿಕ್ಕೆ ಅವಕಾಶವಿಲ್ಲದೆ ಇದ್ದಿತು. ಬಾಲ್ಯದಲ್ಲಿ ಆತನು ಕುಳ್ಳಾಗಿ ಇದ್ದುದರಿಂದ ಇತರ ಅವಯವಗಳನ್ನು ಹಿಡಿದು ನೋಡಿದರೆ ಅವನ ತಲೆ ಸ್ವಲ್ಪ ದೊಡ್ಡದಾಗಿ ಕಾಣಬರುತ್ತಲಿದ್ದಿತು. ಆದುದರಿಂದ ಇವನ ಜತೆಯ ಹುಡುಗರೆಲ್ಲರೂ ಇವನನ್ನು "ಜೆಸ್ಸೂರುಕೈ" * ಎಂಬ ಬದಲು ಹೆಸರನ್ನಿಟ್ಟು ಕರಿಯುತ್ತಲಿದ್ದರು. ಈಶ್ವರಚಂದ್ರನು ಸ್ವಲ್ಪ ಮುಂಗೋಪಿಯಾದುದರಿಂದ ಅದಕ್ಕೆ ಕೋಪಗೊಂಡು ಅವರೊಂದಿಗೆ ಕಲಹಕ್ಕೆ ಹೋಗುತ್ತಿದ್ದನು.

ಪಾಠಶಾಲೆಯಲ್ಲಿ ಪ್ರವೇಶಿಸಿದ ಒಂದೆರಡು ವರುಷಗಳಲ್ಲಿ ತುಂಬ ಶ್ಲಾಘನೀಯವಾಗಿ ಜಯವನ್ನು ಪಡೆದನು. ಆದರೆ ಮೂರನೆಯ ವರುಷದಲ್ಲಿ ತಪ್ಪಿ ಹೋದನು. ಹೀಗೆ ತಪ್ಪಿ ಹೋದುದಕ್ಕೆ ಕಾರಣವೇನೆಂದರೆ, ಆ ಸಂವತ್ಸರದಲ್ಲಿ ವ್ಯಾಕರಣವರ್ಗದವರನ್ನು ಪರೀಕ್ಷಿಸುವುದಕ್ಕಾಗಿ ನಿಯಮಿಸಲ್ಪಟ್ಟ "ಪ್ರೈಜ್" ಎಂಬ ಪಾಶ್ಚಾತ್ಯ ಅಧಿಕಾರಿಯು ಮಾಡಿದ ಅಕ್ರಮವೇ ಎಂದು ಕೆಲವರು ಊಹಿಸುವರು. ವಿಚಾರಗ್ರಸ್ತನಾದ ಆ ಬಾಲಕನು ಮೂರನೆಯ ವರುಷದಲ್ಲಿ ಮರಳಿ ಓದುವುದಕ್ಕೆ ನಾಚಿಕೊಂಡು, ಬಿಟ್ಟುಬಿಡಬೇಕೆಂದು ಯೋಚಿಸಿದನು. ಆಗಲಾತನ ಬಂಧುಮಿತ್ರಾದಿಗಳು ಅವನನ್ನು ಹುರಿದುಂಬಿಸಿ ಮರಳಿ ಪ್ರವೇಶಗೊಳಿಸಲು, ಆರುತಿಂಗಳುಗಳಲ್ಲಿಯೇ ಅಮರಕೋಶವನ್ನೆಲ್ಲ ಮುಗಿಸಿದನು. ಸಾಹಿತ್ಯವನ್ನು ಆರಂಭಿಸುವ ವೇಳೆಗೆ ಆ ಬಾಲನಿಗೆ

---

* ಬಂಗಾಳದಲ್ಲಿ ಜೆಸ್ಸೂರು ಜಿಲ್ಲೆಯಿಂದ "ಕೈ" ಎಂಬ ಒಂದು ಬಗೆಯ ಮೀನುಗಳನ್ನು ಬದುಕಿರುವಾಗಲೇ ಹಿಡಿದು ಹಡಗುಗಳಲ್ಲಿ ಕಲ್ಕತ್ತೆಗೆ ಕಳಹುವರು. ಮಾರ್ಗಮಧ್ಯದಲ್ಲಿ ಆಹಾರವಿಲ್ಲದುದರಿಂದ ಆ ದೊಡ್ಡಮೀನುಗಳು ಕುಸ್ಕಿ ಹೋಗುವುದರಿಂದ ದೊಡ್ಡದಾಗಿ ಕಾಣಬರುವ ಅವುಗಳ ತಲೆಗಳು ಮತ್ತಷ್ಟು ಹೊರಚಾಚುತ್ತಿರುವವು. ಕಲ್ಕತ್ತೆಯ ಬಜಾರಿನಲ್ಲಿ ಮಾರಲ್ಪಡುವಾಗ ಆ ಮೀನುಗಳು ಅವುಗಳ ದೊಡ್ಡ ತಲೆಗಳಿಗೆ ಪ್ರಸಿದ್ಧಪಡೆದಿರುವದರಿಂದ ಈಶ್ವರಚಂದ್ರನನ್ನು ಜೆಸ್ಸೂರು ಕೈ ಎಂಬ ಹೆಸರಿನಿಂದ ಕರೆಯುತ್ತಿರುವರು.

ಹನ್ನೊಂದು ವರುಷಗಳ ವಯಸ್ಸಾಗಿದ್ದಿತು. ಆಗ ಜಯಗೋಪಾಲತರ್ಕಾಲಂಕಾರನೆಂಬ ಸಾಹಿತ್ಯಬೋಧಕನು ಅಷ್ಟು ಸಣ್ಣ ಬಾಲಕನನ್ನು ಆ ಇಯತ್ತೆಯಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲವೆಂದು ಅಡ್ಡಿಮಾಡಿ, ಕೊನೆಗೆ ಅವನನ್ನು ಪರೀಕ್ಷಿಸಿ, ಸಂತುಷ್ಟಿಕರವಾದ ಯೋಗ್ಯತೆಯನ್ನು ಕಂಡು ಸೇರಿಸಿಕೊಂಡನು. ಹೀಗೆ ಆ ಕಲಾಶಾಲೆಯಲ್ಲಿ ಪ್ರವೇಶಿಸಿದ ಎರಡನೆಯ ವರುಷದಲ್ಲಿ ಮೊದಲನೆಯ ಆರುತಿಂಗಳಲ್ಲಿ ಮಾತ್ರವೇ ಇಂಗ್ಲಿಷ ಕಲಿಯಲಾರಂಭಿಸಿ, ಬಿಟ್ಟುಬಿಟ್ಟನು.

ಈ ಮೇರೆಗೆ ಸ್ಮೃತಿಧರ್ಮಶಾಸ್ತ್ರಗಳನ್ನು ಮುಗಿಸಿದ ತರುವಾಯ ೧೯ನೆಯ ವಯಸ್ಸು ಕಳಿಯುವಾಗ್ಗೆ ಶಾಶ್ವತನಿರಪಾಯಮೋಕ್ಷಪದಪ್ರದವಾದ ಹಿಂದೂವೇದಾಂತಶಾಸ್ತ್ರದ ಆರು ಶಾಖೆಗಳನ್ನು ಸಮಗ್ರವಾಗಿ ಅಭ್ಯಾಸಮಾಡಿ, ಪರಿಪೂರ್ಣಜ್ಞಾನಸಂಪನ್ನನಾದನು. ಅಗ ವೇದಾಂತೋಪಾಧ್ಯಾಯನಾದ ಶಂಭುಚಂದ್ರವಾಚಸ್ಪತಿಯು ಈತನ ಜ್ಞಾನಪ್ರಭಾವಕ್ಕೆ ಆನಂದಗೊಂಡು, ತುಂಬ ಅನುರಾಗವುಳ್ಳವನಾಗಿ, ಈತನ ಇತರ ಉಪಾಧ್ಯಾಯರಂತೆಯೇ ಒಳ್ಳೆಯ ಅಭಿಪ್ರಾಯದಿಂದ ಪ್ರತಿವಿಷಯದಲ್ಲಿಯೂ ಈತನ ಸಂಗಡ ಆಲೋಚಿಸುತ್ತಿದ್ದನು. ಹೀಗಿರುವಾಗ ಒಂದಾನೊಂದು ದಿನ ಆ ಮುದುಕನಾದ ವೇದಾಂತಿಯು ತನ್ನ ಮೊದಲನೆಯ ಹೆಂಡತಿ ಸತ್ತುಹೋದುದರಿಂದ ಎರಡನೆಯ ಮದುವೆಯನ್ನು ಮಾಡಿಕೊಳ್ಳಬೇಕೆಂದೆಣಿಸಿ, ಈ ಸಂಗತಿಯನ್ನಿವನೊಡನೆ ಆಲೋಚಿಸಲು, ಯಥಾರ್ಥವಾದಿಯೂ ಧೀರಮನಸ್ಕನೂ, ದೂರಾಲೋಚನೆಯುಳ್ಳವನೂ ಆದ ಈ ಬಾಲನು ತನ್ನ ಉಪಾಧ್ಯಾಯನು ಯೋಚಿಸಿದ ಅಕ್ರತುಕಾರ್ಯವನ್ನು ಕುರಿತು ಎಷ್ಟೆಷ್ಟೋ ವಿಧವಾಗಿ ಸರಿಯಾದ ಕಾರಣಗಳನ್ನು ತೋರಿಸಿ, ಪ್ರಸಂಗಿಸಿ, ಈ ಯತ್ನವನ್ನು ಯುಕ್ತಿಯುಕ್ತವಾಗಿ ಖಂಡಿಸಿದನು. ಆದರೆ ಭೋಗಾಪೇಕ್ಷೆಯಲ್ಲಿ ಆತುರಗೊಂಡ ಆ ವೃದ್ಧನು ಈತನ ಮಾತುಗಳನ್ನೆಲ್ಲ ಕೇಳಿದರೂ ಲಕ್ಷಿಸದೆ, ವಯೋರೂಪಲಾವಣ್ಯವತಿಯಾದ ಕನ್ಯೆಯೊಬ್ಬಳನ್ನು ಮದುವೆಯಾದನು. ಆಗ ಆ ವಿವಾಹವನ್ನು ನಿಲ್ಲಿಸುವುದಕ್ಕಾಗಿ ಈಶ್ವರಚಂದ್ರನು ಮಾಡಿದ ಪ್ರಯತ್ನಗಳು ಅಷ್ಟಿಷ್ಟೆಂದು ಹೇಳಲಳವಲ್ಲ. ಆ ಕನ್ಯಾಮಣಿಯು ಮುಂದೆ ಹೊಂದಬೇಕಾದ ದುಸ್ಥಿತಿಗೆ ಆ ಬಾಲಕನ ಮನಸ್ಸು ತುಂಬ ಪರಿತಾಪಗೊಂಡಿತು. ಅಯ್ಯೋ ಪಾಪ! ಈಶ್ವರಚಂದ್ರನು ಎಣಿಸಿದಂತೆ ಕೆಲವು ತಿಂಗಳುಗಳಲ್ಲಿಯೇ ಆ ಮುದುಕನು

ತೀರಿಹೋದನು. ಆಹಾ! ಆ ಬಾಲವಿತುಂತುವಿನ ದುರವಸ್ಥೆಯನ್ನು ವರ್ಣಿಸಲು ಯಾರಿಂದಲಾದೀತು? ಆ ಸುದ್ದಿಯನ್ನು ಕೇಳಿದಾಗ ಪರಮದಯಾಳುವಾದ ಈಶ್ವರಚಂದ್ರನ ಮನಸ್ಸು ಎಷ್ಟು ತಲ್ಲಣಗೊಂಡಿತೊ!

ತರುವಾಯ ಇಪ್ಪತ್ತನೆಯ ವಯಸ್ಸಿನಲ್ಲಿ ಅಪಾರಗೀರ್ವಾಣಭಾಷಾಗುರುತ್ವಸಾಮ್ರಾಜ್ಯ ( Mastery of the Sanskrit Language ) ದಿಂದ ವಿದ್ಯಾಸಾಗರನೆಂಬ ಸಾರ್ಥಕವಾದ ಬಿರುದನ್ನು ಪಡೆದನು. ಈತನು ಸಾಮಾನ್ಯವಾಗಿ ಉಡುಪುಗಳಲ್ಲಿಯಾಗಲಿ, ಇತರ ಅಭ್ಯಾಸಗಳಲ್ಲಿಯಾಗಲಿ, ದಂಭವಿಲ್ಲದವನಾಗಿದ್ದನು. ಈತನು ಒಂದು ದೋತ್ರವನ್ನೂ ಒಂದು ಉತ್ತರೀಯವನ್ನೂ ಹೊರತು ಮತ್ತಾವ ವಸ್ತ್ರಗಳನ್ನೂ ಧರಿಸುತ್ತಿರಲಿಲ್ಲ. ದೊಡ್ಡವನಾದ ಮೇಲೆ ಸಹ ಇವೇ ಇವನ ಉಡುಪುಗಳು. ಇವನು ಯಾವಾಗಲೂ ಸ್ವದೇಶದ ವಸ್ತ್ರಗಳನ್ನೇ ಧರಿಸುತ್ತಲಿದ್ದನು. ಸ್ವಲ್ಪಕಾಲದ ಹಿಂದೆ ಇಲ್ಲಿ ತಯಾರಾಗುತ್ತಿದ್ದ ವಸ್ತ್ರಗಳು ಲೋಕಪ್ರಸಿದ್ಧಗಳಾಗಿದ್ದುವು. ಈಗ ಯಂತ್ರಸಹಾಯದಿಂದ ಸಿದ್ಧವಾಗುತ್ತಿರುವ ವಸ್ತ್ರಗಳಿಂದ ನಮ್ಮವರ ಕೈಗಾರಿಕೆಗಳು ಬಹುಶಃ ಕ್ಷೀಣದಶೆಗೆ ಬಂದಿರುವವು.

ಸಂದರ್ಭವಶದಿಂದ ವಿಷಯಾಂತರವನ್ನು ಕುರಿತು ಹೇಳಬೇಕಾಗಿ ಬಂದುದಕ್ಕೆ ವಾಚಕರ ಕ್ಷಮೆಯನ್ನು ಬೇಡಿ, ನಮ್ಮ ಕಥಾನಾಯಕನಾದ ಈಶ್ವರಚಂದ್ರವಿದ್ಯಾಸಾಗರನು ವಿದೇಶವಸ್ತ್ರಗಳನ್ನು ಧರಿಸುವ ಅಭ್ಯಾಸ ವಿಡದೆ ಬರಟಾಗಿದ್ದರೂ ಸ್ವದೇಶವಸ್ತ್ರಗಳನ್ನೇ ಸಂತೋಷದಿಂದ ಉಪಯೋಗಿಸುತ್ತಲಿದ್ದನೆಂದು ಇಲ್ಲಿ ಹೇಳಬಹುದು. ಈತನಿಗೆ ವಿಶೇಷವಾಗಿ ಭೋಗಭಾಗ್ಯಗಳಿಲ್ಲದಿದ್ದರೂ, ಈತನು ವಿದ್ಯಾವಂತನಾಗಿ ದಂಭವನ್ನಳಿದು, ಉದಾರತ್ವಾದಿಸುಗುಣಸಂಪತ್ತಿನಲ್ಲಿ ಮಾತ್ರ ಅಸಮಾನನಾಗಿದ್ದನು. ಸಾಹಿತ್ಯವನ್ನು ಕಲಿಯುತ್ತಿರುವಾಗಲೇ ಕವಿತ್ವವ್ಯಾಕರಣಗಳಲ್ಲಿ ಪ್ರವೀಣನಾಗಿ, ತನ್ನ ಹದಿಮೂರನೆಯ ವಯಸ್ಸಿನಲ್ಲಿಯೇ ಒಳ್ಳೆಯ ಕವಿತ್ವವನ್ನು ಹೇಳಬಲ್ಲವನಾಗಿದ್ದನು. ಆಂಗ್ಲೇಯರಲ್ಲಿ "ಮಿಲ್ಟನ್" ಎಂಬ ಕವಿವರ್ಯನು ಹದಿಮೂರನೆಯ ವಯಸ್ಸಿನಲ್ಲಿಯೇ ವ್ಯಾವಹಾರಿಕವಾಗಿ ಸ್ವಭಾಷೆಯಾದ ಇಂಗ್ಲಿಷಿನಲ್ಲಿ ಕವಿತ್ವ ಹೇಳಲಿಕ್ಕೆ ಪ್ರಯತ್ನಿಸಿದ ಮಾತ್ರದಿಂದಲೇ ಆ ಮಹನೀಯನ ಶಕ್ತಿಯನ್ನು ಆ ದೇಶೀಯರೆಲ್ಲರೂ ಹೊಗಳುತ್ತಿರುವರು. ಅದೇ ಪ್ರಾಯದಲ್ಲಿಯೇ ವ್ಯವ

ಹಾರದಲ್ಲಿ ವಾಡಿಕೆಯಲ್ಲಿಲ್ಲದ ಸಂಸ್ಕೃತಭಾಷೆಯಲ್ಲಿ ಧಾರಾಳವಾಗಿ ಮಧುರ ಕವಿತಾಪ್ರಭಾವವನ್ನು ಪಡೆದಿದ್ದ ಈಶ್ವರಚಂದ್ರನನ್ನು ನೋಡಿ, ಹೊಗಳದಿದ್ದ ನಾವು ಹೇಗಿರಬೇಕೆಂಬುದನ್ನು ವಾಚಕರೇ ಊಹಿಸಬಹುದು.

ಈತನ ಪ್ರಜ್ಞಾವಿಶೇಷಗಳು ದೇಶದ ಎಲ್ಲಾ ಕಡೆಗಳಲ್ಲಿಯೂ ಹಬ್ಬುತ್ತಲಿದ್ದುವು. ವಿವಾಹಕ್ಕಾಗಿ ಅನೇಕ ಸಂಬಂಧಗಳು ಬರುತ್ತಿದ್ದುವು. ಕಡೆಗೆ ಶತ್ರುಘ್ನಭಟ್ಟಾಚಾರ್ಯನೆಂಬ ಬ್ರಾಹ್ಮಣನು ತನ್ನ ಕುಮಾರಿಯಾದ ದೀನಮಯಾದೇವಿ ಎಂಬ ಕನ್ಯಾಮಣಿಯನ್ನು ಕೊಟ್ಟು, ವಿವಾಹಮಾಡಲು ನಿಶ್ಚಯಿಸಿದನು. ಆ ಶತ್ರುಘ್ನಭಟ್ಟಾಚಾರ್ಯನು ಬಾಹುಬಲ, ಪ್ರಜ್ಞಾಬಲ, ಮನೋಬಲ ಇವುಗಳಲ್ಲಿ ತುಂಬ ಹೆಚ್ಚಿದವನೆಂದು ಹೆಸರುಗೊಂಡಿದ್ದನು. ಆತನ ಸಾಹಸವನ್ನು ತಿಳಿಸುವ ಒಂದೆರಡು ನಿದರ್ಶನಗಳನ್ನು ಇಲ್ಲಿ ತಿಳಿಸುವೆವು. ಒಂದು ಸಾರಿ ಶತ್ರುಗಳ ಮೇಲಣ ಹಗೆತನದಿಂದ ಅವರ ದೊಡ್ಡ ಬಂಡಿಯನ್ನು ತಾನೊಬ್ಬನೇ ಉರುಳಿಸಿಬಿಟ್ಟು, ಅದರ ಸುತ್ತಲೂ ಮುತ್ತಿದ ಹಲವು ಶತ್ರುಗಳನ್ನು ಅಲ್ಪ ಸಹಾಯವುಳ್ಳ ತನ್ನ ಬಾಹುಬಲದಿಂದಲೇ ಚೆಂಡಾಡಿ ಓಡಿಸಿದನು. (೨) ಮತ್ತೊಂದುವೇಳೆ ಪ್ರಬಲವಾಗಿ ಬಾಧಿಸುತ್ತಿದ್ದ ಒಬ್ಬ ದೊಡ್ಡ ಕಳ್ಳನನ್ನು ಕೊಂದುಹಾಕಿ, ಜನರಿಗೆ ಸೌಖ್ಯವನ್ನುಂಟುಮಾಡಿದನು. ಆವರೆಗೆ ಆ ಕಳ್ಳನನ್ನು ಹಿಡಿಯಲಿಕ್ಕೆ ಯಾರಿಂದಲೂ ಸಾಧ್ಯವಾಗಿರಲಿಲ್ಲ. ಹೀಗೆ ಅನೇಕ ಕಾರ್ಯಗಳನ್ನು ಮಾಡುತ್ತಿದ್ದುದರಿಂದ ಆತನ ಹೆಸರನ್ನು ಕೇಳಿದರೆ ಭಯದಿಂದ ಎಲ್ಲರೂ ನಡುಗುತ್ತಿದ್ದರು. ಇಂತಹ ಧೀರನ ಮಗಳನ್ನು ಈಶ್ವರಚಂದ್ರನಿಗೆ ಕೊಟ್ಟು, ವಿದ್ಯುಕ್ತರೀತಿಯಿಂದ ಪಾಣಿಗ್ರಹಣ ಮಹೋತ್ಸವವನ್ನು ನಡೆಯಿಸಿದರು. ಆಗ್ಗೆ ಆ ಹುಡುಗಿಗೆ ಎಂಟುವರುಷಗಳ ವಯಸ್ಸು, ಈತನಿಗೆ ಹದಿನಾಲ್ಕುವರುಷಗಳ ವಯಸ್ಸೂ ಆಗಿದ್ದುವು. ಆ ಬಾಲೆಯು ಸದ್ಗುಣಸಂಪತ್ತಿಯನ್ನು ನೋಡಿದರೆ ಆಕೆಯು ಈಶ್ವರಚಂದ್ರನ ಪೂರ್ವಪುಣ್ಯವಶದಿಂದಲೇ ದೊರೆತಳೆಂದು ತೋರದೆ ಇರದು. ಹೀಗೆ ವಿವಾಹವಾದಮೇಲೆ ಒಂದಾನೊಂದುದಿನ ಶತ್ರುಘ್ನಭಟ್ಟಾಚಾರ್ಯನು ಸಂದರ್ಭವಶದಿಂದ ತನ್ನ ಬೀಗನನ್ನು ನೋಡಿ, “ಎಲೈ ಭಾವಾ! ನಿನ್ನ ಭೋಗಭಾಗ್ಯಗಳನ್ನು ನಾನು ಕಾಣದವನಲ್ಲ. ಅವುಗಳನ್ನು ನೋಡಿಯೋ ನನ್ನ ಮುದ್ದುಮಗಳನ್ನು ನಿನ್ನ ಮಗನಿಗೆ ಕೊಟ್ಟೆನೆಂದು ತಿಳಿಯದಿರು. ಆ ಬಾಲಕನ ಜಗತ್ಪ್ರಸಿದ್ಧವಾದ ಬುದ್ಧಿಚಾತುರ್ಯಗಳನ್ನು ನೋಡಿ ಕೊಟ್ಟೆನು” ಎಂದು ಹೇಳಿದನು

ಹೀಗೆ ಹದಿನಾಲ್ಕು ವರುಷಗಳು ಕಳೆದ ತರುವಾಯ ಹದಿನೈದನೆಯ ವಯಸ್ಸಿನಲ್ಲಿ ಅಲಂಕಾರಶಾಸ್ತ್ರವನ್ನು ಕಲಿಯತೊಡಗಿದನು. ಈತನ ಉಪಾಧ್ಯಾಯನಾದ ಪ್ರೇಮಚಂದ್ರತರ್ಕವಾಗೀಶನು ಈತನಲ್ಲಿ ತುಂಬ ದಯೆಯುಳ್ಳವನಾಗಿದ್ದನು. ಮೊದಲನೆಯ ವರುಷದಲ್ಲಿ ಸಾಹಿತ್ಯದರ್ಪಣ, ರಸಗಂಗಾಧರ, ಕಾವ್ಯಪ್ರಕಾಶ, ಮೊದಲಾದ ಗ್ರಂಥಗಳನ್ನೆಲ್ಲ ಓದಿ ಮುಗಿಸಿ, ಸಾಂವತ್ಸರಿಕಪರೀಕ್ಷೆಯಲ್ಲಿ ಪ್ರಥಮ ಬಹುಮಾನವನ್ನು ಪಡೆದನು. ಅದರಲ್ಲಿ ರಘುವಂಶ, ಸಾಹಿತ್ಯದರ್ಪಣ, ರತ್ನಾವಳಿ, ಮಾಲತೀಮಾಧವೀಯ, ಮುದ್ರಾರಾಕ್ಷಸ, ವಿಕ್ರಮೋರ್ವಶೀಯ, ಎಂಬ ಪುಸ್ತಕಗಳನ್ನೂ, ಕೆಲವು ನಗದುಹಣವನ್ನೂ ಬಹುಮಾನವಾಗಿ ಪಡೆದನು. ಈ ಪರೀಕ್ಷೆಗಾಗಿ ಬಹುದಿನಗಳು ರಾತ್ರಿಯೆಲ್ಲಾ ಕಷ್ಟಪಟ್ಟು ಓದಿದುದರಿಂದ ಈತನಿಗೆ ಆರೋಗ್ಯ ತಪ್ಪಿ ಕಾಹಿಲೆ ಸಂಭವಿಸಿತು. ಅದರಿಂದ ತನ್ನ ಊರಿಗೆ ಹೋದಕೂಡಲೇ ರೋಗನಿವಾರಣೆಯಾದುದರಿಂದ ಮರಳಿ ಓದಲಿಕ್ಕೆ ಪ್ರಾರಂಭಿಸಿದನು. ಆ ಕಾಲದಲ್ಲಿ ಈತನಿಗೆ ತಿಂಗಳಿಗೆ ಎಂಟು ರೂಪಾಯಿಗಳಂತೆ ವಿದ್ಯಾರ್ಥಿವೇತನವು ಸಿಕ್ಕುತಿದ್ದಿತು. ಕೆಲವು ದಿನಗಳತನಕ ಆ ಹಣವನ್ನು ತನ್ನ ತಂದೆಗೆ ಕೊಟ್ಟುಬಿಡುತ್ತಾ ಬಂದನು. ತರುವಾಯ ಆ ಹಣವನ್ನು ಪುಸ್ತಕಗಳನ್ನು ಕೊಳ್ಳಲಿಕ್ಕೂ, ಬಹು ಬಡವರಾದ ತನ್ನ ಜತೆಯ ಬಾಲಕರಿಗೆ ಸಹಾಯ ಮಾಡಲಿಕ್ಕೂ, ದಾನಧರ್ಮಗಳಿಗೂ ಉಪಯೋಗಿಸುತ್ತಾ ಬಂದನು. ತನ್ನ ಸ್ನೇಹಿತರಿಗಾಗಲಿ ನೆರೆಹೊರೆಯವರಿಗಾಗಲಿ ಆಗಾಗ್ಗೆ ಕೈಲಾದಮಟ್ಟಿಗೆ ಸಹಾಯ ಮಾಡುತ್ತಿದ್ದನು. ವೇದಾಂತವನ್ನು ಓದಿದಮೇಲೆ ನ್ಯಾಯತತ್ವಶಾಸ್ತ್ರಗಳನ್ನು ಕಲಿತನು. ತನ್ನ ಪಾಠಶಾಲೆಯ ವಿರಾಮ ದಿನಗಳಲ್ಲಿ ತನ್ನ ಗ್ರಾಮಕ್ಕೆ ಹೋದಾಗ ನೆರೆಹೊರೆಯವರ ಯೋಗಕ್ಷೇಮಗಳನ್ನು ವಿಚಾರಿಸುತ್ತಾ, ತನ್ನ ಶಕ್ತ್ಯಾನುಸಾರವಾಗಿ ಗ್ರಾಮಸ್ಥರ ಕೋರಿಕೆಗಳನ್ನು ನೆರವೇರಿಸುತ್ತಾ ಇದ್ದನು. ಆ ಕಾಲದಲ್ಲಿ ತತ್ವಸಂಬಂಧವಾದ ಗೂಢಾಂಶಗಳನ್ನು ಕುರಿತು ರಾಮಮೋಹನತರ್ಕಸಿದ್ಧಾಂತನೇ ಮೊದಲಾದ ತತ್ವಜ್ಞಾನವಿದರೊಂದಿಗೆ ವಿವಾದ ಮಾಡುತ್ತ ಬಂದನು. ನ್ಯಾಯತರಗತಿಯಲ್ಲಿ ಓದುತ್ತಲಿದ್ದಾಗಲೇ ಆ ಪಾಠಶಾಲೆಯಲ್ಲಿನ ವ್ಯಾಕರಣೋಪಾಧ್ಯಾಯನು ಎರಡುತಿಂಗಳ ರಜಾ ತೆಗೆದುಕೊಂಡುದರಿಂದ ತಿಂಗಳಿಗೆ ನಾಲ್ವತ್ತುರೂಪಾಯಿಗಳಂತೆ ವೇತನವುಳ್ಳ ಆ ಉದ್ಯೋಗಕ್ಕೆ ವಿದ್ಯಾರ್ಥಿಯಾದರೂ ಈತನೇ ತಕ್ಕವನೆಂದು ಆ ಕಲಾಶಾಲಾ

ಧ್ಯಕ್ಷನು ಇವನನ್ನೇ ನಿಯಮಿಸಿದನು. ಅದರಿಂದ ಸಂಪಾದಿಸಿದ ಎಂಭತ್ತು
ರೂಪಾಯಿಗಳನ್ನು ತನ್ನ ತಂದೆಯ ಕೈಗೆ ಕೊಟ್ಟು ನಮಸ್ಕರಿಸಿ, ಈ ದ್ರವ್ಯ
ದಿಂದ ನೀವು ತೀರ್ಥಯಾತ್ರೆಯನ್ನು ಮಾಡಿಕೊಂಡು ಬರಬೇಕೆಂದು ಬೇಡಿ
ಕೊಂಡನು. ಹಾಗೆ ಆತನು ಯಾತ್ರೆಯನ್ನು ಪೂರಯಿಸಿಕೊಂಡು ಬರುವ
ವೇಳೆಗೆ ಈಶ್ವರಚಂದ್ರನು ನ್ಯಾಯಶಾಸ್ತ್ರಪರೀಕ್ಷೆಯಲ್ಲಿ ಮೊದಲನೆಯ ಬಹು
ಮಾನಕ್ಕಾಗಿ ನೂರುರೂಪಾಯಿಗಳನ್ನೂ, ಕವಿತ್ವನೈಪುಣ್ಯಕ್ಕಾಗಿ ನೂರು ರೂ
ಪಾಯಿಗಳನ್ನೂ, ಧರ್ಮಶಾಸ್ತ್ರಪಾಂಡಿತ್ಯಕ್ಕಾಗಿ ಇಪ್ಪತ್ತೈದುರೂಪಾಯಿಗಳ
ನ್ನೂ, ಉತ್ತಮವಾದ ಕೈಬರವಣಿಗೆಗಾಗಿ ಎಂಟುರೂಪಾಯಿಗಳನ್ನೂ ಅಂದರೆ
ಒಟ್ಟಾಗಿ ೨೩೩ ರೂಪಾಯಿಗಳ ಬಹುಮಾನವನ್ನು ಹೊಂದಿ, ಅದನ್ನು ಮೊದ
ಲಿನಂತೆಯೇ ತಂದೆಯ ವಶಕ್ಕೆ ಕೊಡಲು, ಆತನು ಅದನ್ನು ಕುಟುಂಬದ
ಋಣವಿಮೋಚನೆಗಾಗಿ ವಿನಿಯೋಗಿಸಿದನು.

ದಯಾರ್ದ್ರಹೃದಯನಾದ ಈ ಬಾಲಕನು ನಾಯಿ ಮೊದಲಾದ
ಯಾವ ಜೀವಜಂತುಗಳಾದರೂ ಬಾಧೆಪಡುತ್ತಲಿದ್ದರೆ ನೋಡಿ ಸಹಿಸಲಾರದೆ
ಇದ್ದನು. ಯಾವ ಜಂತುವೇ ಆಗಲಿ ಹುಣ್ಣು ಮೊದಲಾದುವುಗಳಿಂದ ಬಾಧೆ
ಪಡುತ್ತಲಿದ್ದರೆ ನೋಡಿ, ಅದನ್ನು ತೆಗೆದುಕೊಂಡು ಬಂದು, ತುಂಬ ಶ್ರದ್ಧೆ
ಯಿಂದ ಉಪಚಾರ ಮಾಡುತ್ತಿದ್ದನು. ಹಿರಿಯರಲ್ಲಿ ತನಗೆ ಇರುವ ಭಕ್ತಿ
ಗೌರವಗಳನ್ನೂ, ಚಿಕ್ಕವರಲ್ಲಿ ಇರುವ ವಾತ್ಸಲ್ಯಾದರಗಳನ್ನೂ ಸಮಾನವಾಗಿ
ತೋರಿಸುತ್ತಲಿದ್ದನು. ಈ ಮಹಾತ್ಮನ ವಿದ್ಯಾಭ್ಯಾಸವಿಷಯವನ್ನು ಇಷ್ಟಕ್ಕೆ
ಮುಗಿಸಿ, ಈತನು ಲೋಕವ್ಯವಹಾರದಲ್ಲಿ ಹೇಗೆ ಪ್ರವರ್ತಿಸಿದನೋ ಅದನ್ನು
ಸ್ವಲ್ಪಮಟ್ಟಿಗೆ ವಿಮರ್ಶಿಸೋಣ.

# ನಾಲ್ಕನೆಯ ಅಧ್ಯಾಯ.

## ಸಂಘಸಂಸ್ಕಾರ.

( ಸ್ತ್ರೀಪುನರ್ವಿವಾಹವೂ, ಕುಲೀನಪದ್ಧತಿಯೂ. )

ಈಶ್ವರಚಂದ್ರವಿದ್ಯಾಸಾಗರನಿಗೆ ಈಗ ಸುಮಾರು ಮೂವತ್ತುನಾಲ್ಕು ವರುಷಗಳ ವಯಸ್ಸು. ಆತನ ಶಕ್ತಿ, ಧೈರ್ಯ, ಸ್ಥೈರ್ಯ, ಜ್ಞಾನ, ದಯೆ, ಜಾಣತನ, ಕ್ಷಮೆ, ಮುಂತಾದ ಗುಣಗಳೆಲ್ಲವೂ ಪ್ರಪಂಚಕ್ಕೆ ಸ್ಪಷ್ಟವಾಗಿ ತಿಳಿಯಬರಲಿಕ್ಕೆ ಅವಕಾಶ ದೊರೆದಿತು. ಆತನು ಮಾಡಿದ ಸಂಸ್ಕರಣ ದಿಂದಆಸೇತುಶೀತಾಚಲ ಮಧ್ಯವಿರುವ ಹಿಂದೂದೇಶವೆಲ್ಲವೂ ಗಲಿಬಿಲಿ ಹೊಂದಿ ಇತಿಹಾಸಜ್ಞನಾದ ಪ್ರತಿದೇಶೀಯನ ಹೃದಯದಲ್ಲಿಯೂ ಈತನ ಪವಿತ್ರನಾಮವು ನಾಟ್ಯವಾಡುತ್ತಿದ್ದಿತು. ಈಗಿನ ಹಿಂದೂ ಸಂಘಾಚಾರದ ಪ್ರಕಾರ ಸ್ತ್ರೀಪುನರ್ವಿವಾಹವು ಆಚರಣೀಯವಾಗಿರಲಿಲ್ಲ. ಪೂರ್ವಾಚಾರ ಪರಾಯಣರಾದವರು ತಮ್ಮ ಶಾಸ್ತ್ರಗಳನ್ನೂ ದೇಶಾಚಾರಗಳನ್ನೂ ತುಂಬ ವಿಶ್ವಾಸದಿಂದ ಅನುಸರಿಸತಕ್ಕವರು. ಪೂರ್ವಕಾಲದಲ್ಲಿ ಹಿಂದೂವಿಧವೆಯರು ಮೃತರಾದ ತಮ್ಮ ಪತಿಗಳೊಂದಿಗೆ ಸಹಗಮನ ಮಾಡುವ ವಾಡಿಕೆಯಿದ್ದಿತು. ಆದರೆ ಈ ಘೋರದುರಾಚಾರವು ೧೮೩೯ನೇ ಇಸವಿಯಲ್ಲಿ ವಿಲ್ಲಿಯಂ ಬೆಂಟಿಂಕ ಪ್ರಭುಗಳ ಕಾಲದಲ್ಲಿ ಶ್ರೀರಾಜಾರಾಮುಮೋಹನರಾಯರವರು ತುಂಬ ಪ್ರಯಾಸದಿಂದ ನಿಲ್ಲಿಸಿ ಬಿಟ್ಟು ಪುಣ್ಯವನ್ನು ಸಂಪಾದಿಸಿಕೊಂಡರು. ಅಂದಿನಿಂದ ಹಿಂದೂ ವಿಧವೆಯರ ಬಾಳು ತುಂಬ ದುರ್ಭರವಾಗಿಯೂ, ಅತಿ ಘೋರವಾಗಿಯೂ, ವರ್ಣಿಸಕೂಡದ್ದಾಗಿಯೂ ಇದ್ದಿತು. ಇಂತಹ ಅಬಲೆಯರ ಕಷ್ಟಗಳನ್ನು ತೊಲಗಿಸುವದಕ್ಕಾಗಿ ನಮ್ಮ ವಿದ್ಯಾಸಾಗರನು ತೆಗೆದುಕೊಂಡ ತೊಂದರೆಯು ನಮ್ಮ ವಾಚಕರಿಗೆ ಮುಂದೆ ಗೋಚರವಾಗಬಲ್ಲದು. ಈ ಕಾರ್ಯವನ್ನು ಮಾಡಬೇಕೆಂದು ಆತನು ಬಾಲ್ಯದಿಂದಲೇ ಯೋಚಿಸಿದ್ದನು. ಆತನು ತನ್ನ ಬಾಲ್ಯದಲ್ಲಿ ವೀರಸಿಂಹಗ್ರಾಮದಲ್ಲಿ ಒಬ್ಬ ಹುಡುಗಿಯ ಸಂಗಡ ಬಹು ಸಲಿಗೆಯಿಂದ ಆಡಿಕೊಳ್ಳುತ್ತಿದ್ದನು. ತರುವಾಯ ಆತನು ವಿದ್ಯಾಭ್ಯಾಸಕ್ಕಾಗಿ ಕಲ್ಕತ್ತೆಗೆ ಹೋದಮೇಲೆ ಆ ಬಾಲೆಗೆ ಮದುವೆಯಾಯಿತು. ಆದರೆ ಕೆಲವು ದಿನಗಳಲ್ಲಿಯೇ ಆಕೆಗೆ ವೈಧವ್ಯಪ್ರಾಪ್ತವಾಯಿತು.

ವಿದ್ಯಾಸಾಗರನು ಕಲಾಶಾಲೆಯ ವಿಶ್ರಾಂತಿದಿನಗಳಲ್ಲಿ ತನ್ನ ಮನೆಗೆ ಬಂದಾಗ ಈ ಸಂಗತಿಯನ್ನು ತಿಳಿದುಕೊಂಡು, ತುಂಬ ವಿಚಾರಪಟ್ಟು, ಬಾಲವಿತಂತುಗಳ ದುರವಸ್ಥೆಯನ್ನು ತಪ್ಪಿಸಬೇಕೆಂದು ಅಗಲೇ ನಿಶ್ಚಯಿಸಿಕೊಂಡನು. ಅಗಲೀತನಿಗೆ ೧೩ ಅಥವಾ ೧೪ ವರುಷಗಳ ವಯಸ್ಸು.

ಈತನು ವಿದ್ಯಾಭ್ಯಾಸಮಾಡುತ್ತಿದ್ದ ಕಾಲದಲ್ಲಿಯೇ ಮತ್ತೊಂದುವೇಳೆ ಇಂತಹ ವಿಷಯವೊಂದು ಜರಿಗಿತು. ದೊಡ್ಡ ಕುಟುಂಬದಲ್ಲಿನ ಒಬ್ಬ ಬಾಲವಿತಂತುವು ಒಬ್ಬ ಪುರುಷನೊಂದಿಗೆ ರಹಸ್ಯವಾಗಿ ಸಂಬಂಧವನ್ನು ಬೆಳೆಸಿದ್ದರಿಂದ ಗ್ರಹಚಾರವಶಾತ್ ಆಕೆಗೆ ಗರ್ಭನಿಂತಿತು. ಅಗಲಾ ಗರ್ಭಸ್ರಾವಕ್ಕಾಗಿ ಆಕೆ ಎಷ್ಟೆಷ್ಟು ಪ್ರಯತ್ನಗಳನ್ನು ಮಾಡಿದರೂ ನೆರವೇರದೆ, ಕೊನೆಗೆ ಅಂದವಾದ ಒಂದು ಮುದ್ದು ಮಗುವನ್ನು ಹಡೆದು ಅದಕ್ಕಾಗಿ ಸಂಘದವರಿಂದ ತನಗೆ ಸಂಭವಿಸಬಹುದಾದ ಲಜ್ಜಾವಮಾನಾದಿ ಕಠಿನ ಕೃತ್ಯಗಳಿಗೆ ಹೆದರಿ, ಆ ಮೂಢಸ್ತ್ರೀಯು ನಿರ್ದಾಕ್ಷಿಣ್ಯದಿಂದ ತಾನು ಹೆತ್ತಮಗುವನ್ನು ಹೊಲೆಮನೆಯಲ್ಲಿಯೇ ತನ್ನ ಕೈಯಾರೆ ಕೊಂದುಹಾಕಿದಳು. ಈ ಸಂಗತಿಯು ದಯಾಳುವಾದ ವಿದ್ಯಾಸಾಗರನ ಹೃದಯವನ್ನು ಭೇದಿಸಿತು. ಇವುಗಳಲ್ಲದೆ ವಿದ್ಯಾಸಾಗರನು ಈ ಪ್ರಯತ್ನವನ್ನು ಕೈಕೊಳ್ಳುವುದಕ್ಕೆ ಕೆಲವರು ಮತ್ತೊಂದು ಕಥೆಯನ್ನು ಹೇಳುವರು. ಒಂದಾನೊಂದು ಕಾಲದಲ್ಲಿ ವೀರಸಿಂಹಗ್ರಾಮದಲ್ಲಿ ವಿದ್ಯಾಸಾಗರನ ಮನೆಗೆ ಒಬ್ಬ ಬಾಲವಿತಂತುವು ಬಂದಳು. ಆಕೆಯು ಇವನ ಮನೆಯವರ ಬಂಧುವಾಗಿದ್ದಳು. ಆಕೆಯು ಸಹಜವಾಗಿ ಲಜ್ಜಾದೈನ್ಯಾವೃತವದನಳಾಗಿ ಪರರ ಮುಖವನ್ನು ನೋಡಲೊಲ್ಲದೆ ಒಳಮನೆಯಲ್ಲಿ ವಿದ್ಯಾಸಾಗರನ ತಾಯಿಯೊಡನೆ ಮಾತನಾಡುತ್ತಿದ್ದಳು. ಆಕೆಯು ಆ ನಿರ್ಭಾಗ್ಯಬಾಲೆಯ ಸಂಗಡ ಸ್ವಲ್ಪ ಹೊತ್ತು ಮಾತನಾಡಿ ಅವಳ ದುಸ್ಥಿತಿಯನ್ನು ಕುರಿತು ಬಹಳವಾಗಿ ದುಃಖಿಸಿ ಹಜಾರದಲ್ಲಿ ಹಲವರು ದೊಡ್ಡ ಮನುಷ್ಯರ ಸಂಗಡ ಮಾತನಾಡುತ್ತಿದ್ದ ತನ್ನ ಕುಮಾರನ ಬಳಿಗೆ ಹಠಾತ್ತಾಗಿ ಓಡಿಬಂದು ಕಪೋಲಗಳಿಂದ ಜಾರಿಬಂದು ಸುರಿಯುತ್ತಿರುವ ಕಣ್ಣೀರುಗಳನ್ನು ಒರಸಿಕೊಳ್ಳುತ್ತಾ, ಆತನಿಗೆ ಹೀಗೆ ಹೇಳಿದಳು.

"ಅಣ್ಣಯ್ಯಾ! ನೀನು ಎಷ್ಟೋ ಶಾಸ್ತ್ರಗಳನ್ನು ಓದಿರುವೆಯಲ್ಲವೇ? ಅವುಗಳಲ್ಲಿ ಎಲ್ಲಿಯಾದರೂ ಹಿಂದೂ ಬಾಲವಿತಂತುಗಳಿಗೆ ಅವರ ದುಸ್ಥಿತಿ

ಯಿಂದ ಉತ್ತೀರ್ಣಗೊಳಿಸುವ ಮಾರ್ಗವು ಕಾಣಬಂದಿಲ್ಲವೆ? ಅಯ್ಯೋ! ರಾಮರಾಮ! ಅವರ ಸ್ಥಿತಿಯನ್ನು ನಾನು ಎಷ್ಟೆಂದು ವಿವರಿಸಲಿ?"

ಈತನು ವಿದ್ಯಾರ್ಥಿಯಾಗಿದ್ದ ಕಾಲದಲ್ಲಿ ವೃದ್ಧನಾದ ಈತನ ಉಪಾಧ್ಯಾಯನೊಬ್ಬನು ಇವನು ಎಷ್ಟು ಹೇಳಿದರೂ ಕೇಳದೆ ದ್ವಿತೀಯ ವಿವಾಹ ಮಾಡಿಕೊಂಡು ಒಡನೆಯೇ ತನ್ನ ಹೆಂಡತಿಯನ್ನು ಒಂದು ಘೋರಸಮುದ್ರದಲ್ಲಿ ಮುಳುಗಿಸಿ ಬಾಲವಿಧವೆಯನ್ನಾಗಿಸಿದ ಅಂಶವನ್ನು ವಾಚಕರಿಗೆ ಮೊದಲೇ ತಿಳಿಸಿರುವೆವು. ಇದು ಕೂಡ ಈತನ ಮನಸ್ಸಿಗೆ ಕಳವಳವನ್ನು ಹುಟ್ಟಿಸಿತು. ತನ್ನ ಪ್ರಯತ್ನಕ್ಕೆ ಶಾಸ್ತ್ರಾಧಾರಗಳಿಲ್ಲದಿದ್ದರೆ ಪ್ರಜೆಗಳು ಉತ್ಸಾಹಗೊಳಲಾರರೆಂದು ಆತನು ತಿಳಿದಿದ್ದನು. ಆದುದರಿಂದ ಆ ವಿಷಯವಾದ ಶಾಸ್ತ್ರಾಧಾರಗಳನ್ನು ಶೋಧಿಸಲಿಕ್ಕಾಗಿ ಅನೇಕ ತಿಂಗಳುಗಳ ತನಕ ರಾತ್ರಿಯೂ ಹಗಲೂ, ಗ್ರಂಥಗಳನ್ನು ಹುಡುಕತೊಡಗಿದನು. ಹೀಗಿರುವಲ್ಲಿ ಒಂದು ರಾತ್ರಿ ಪರಾಶರಸ್ಮೃತಿಯಲ್ಲಿನ ಒಂದು ಶ್ಲೋಕವನ್ನು ಕಂಡು ಪರಮಾನಂದದಿಂದ "ಕಂಡುಹಿಡಿದೆನು! ಕಂಡುಹಿಡಿದೆನು!" ಎಂದು ಕೇಕೆ ಹಾಕಿದನು. ಆ ಶ್ಲೋಕವು ಇಲ್ಲಿ ವಿವರಿಸಲ್ಪಟ್ಟಿದೆ.

ಶ್ಲೋ॥ ನಷ್ಟೇಮೃತೇ ಪ್ರವ್ರಜಿತೇ ಕ್ಲೀಬೇಚಪತಿತೇ ಪತೌ ।
ಪಂಚಸ್ವಾಪತ್ಸುನಾರೀಣಾಂ ಪತಿರನ್ಯೋವಿಧೀಯತೇ ॥

ಎಂದರೆ ಗಂಡನು ದೇಶಾಂತರಕ್ಕೆ ಹೋಗಿ ಸಮಾಚಾರ ತಿಳಿಯದವನಾಗಿ ಹೋದರೂ, ಮೃತನಾದರೂ, ಸನ್ಯಾಸಿಯಾದರೂ, ನಪುಂಸಕನಾದರೂ, ಪತಿತನಾದರೂ ಇವೈದಾಪತ್ತುಗಳಲ್ಲಿಯೂ ಸ್ತ್ರೀಯರಿಗೆ ಮತ್ತೊಬ್ಬ ಪತಿಯು ವಿಧಿಸಲ್ಪಟ್ಟಿರುತ್ತಾನೆ. ಎಂದರೆ ಸ್ತ್ರೀಪುನರ್ವಿವಾಹವು ಆಗಬಹುದೆಂದು ವಿಧಿಯಿದೆ ಎಂದು ಅರ್ಥ. ಮತ್ತು ಅದರಲ್ಲಿಯೇ

ಶ್ಲೋ ॥ ಮೃತೇ ಭರ್ತರಿ ಯಾ ನಾರೀ ಬ್ರಹ್ಮಚರ್ಯೇ ವ್ಯವಸ್ಥಿತಾ ।
ಸಾ ಮೃತಾಲಭತೇ ಸ್ವರ್ಗಂ ಯಥಾ ತೇ ಬ್ರಹ್ಮಚಾರಿಣೀ ॥

ಎಂದರೆ ಒಬ್ಬ ಸ್ತ್ರೀಯು ತನ್ನ ಪತಿ ಮೃತನಾದಮೇಲೆ ಬ್ರಹ್ಮಚಾರಾಶ್ರಮವನ್ನು ಅವಲಂಬಿಸಿ ನಡೆದರೆ ಆಕೆಯು ಮರಣಾನಂತರ ಇತರ ಬ್ರಹ್ಮಚಾರಿಗಳಂತೆಯೇ ಸ್ವರ್ಗವನ್ನು ಹೊಂದಬಲ್ಲಳು.

ವಿದ್ಯಾಸಾಗರನು ಇದರಮೇಲೆ ಹೀಗೆ ವ್ಯಾಖ್ಯಾನವನ್ನು ಬರೆದನು. ಪರಾಶರನು ವಿಧವೆಯರಿಗೆ ಪುನರ್ವಿವಾಹ, ಬ್ರಹ್ಮಚರ್ಯಾವಲಂಬನ, ಸಹಗಮನ ಹೀಗೆ ಮೂರು ಮಾರ್ಗಗಳನ್ನು ವಿಧಿಸಿರುವನು. ಇವುಗಳಲ್ಲಿ ಸಹಗಮನ ಭಾಗವು ಸರಕಾರದವರಿಂದ ನಿಷೇಧಿಸಲ್ಪಟ್ಟು ನಿಂತುಹೋಗಿದೆ. ಆದುದರಿಂದ ವಿವಾಹ ಮಾಡಿಕೊಳ್ಳುವುದಾಗಲಿ ಬ್ರಹ್ಮಚರ್ಯವಾಗಲಿ ಉಳಿದಿವೆ. ಈ ಕಲಿಯುಗದಲ್ಲಿ ಯಥಾವಿಧಿಯಾಗಿ ಬ್ರಹ್ಮಚರ್ಯವನ್ನು ಜರಿಗಿಸುವುದು ದುರ್ಲಭವು. ಹಾಗಿದ್ದುದರಿಂದ ಲೋಕೋಪಕಾರಧುರೀಣನಾದ ಪರಾಶರನು ವಿತಂತುಗಳಿಗೆ ವಿವಾಹವನ್ನು ನಿಯಮಿಸಿದನು. ಪರಾಶರನು ಕಲಿಯುಗದಲ್ಲಿ ಮೇಲೆ ಹೇಳಲ್ಪಟ್ಟ ಐದವಸ್ಥೆಗಳಲ್ಲಿಯೂ, ವಿವಾಹವನ್ನು ಮಾಡಿಕೊಳ್ಳಬಹುದೆಂದು ಹೇಳಿರುವುದರಿಂದ, ಸ್ತ್ರೀಪುನರ್ವಿವಾಹವು ಶಾಸ್ತ್ರಸಮ್ಮತವಾದುದೆಂಬುದು ಸ್ಪಷ್ಟವು. ನಮಗೆ ಶಾಸ್ತ್ರಪರಿಚಯವು ಹೆಚ್ಚಾಗಿ ಇಲ್ಲದ್ದರಿಂದ ಶಾಸ್ತ್ರಾಧಾರಗಳನ್ನು ಕುರಿತು ಚರ್ಚಿಸದೆ ಆ ಆಧಾರಗಳ ಗುಣದೋಷಗಳನ್ನೂ ಅವುಗಳ ಸ್ಥಿತಿಗತಿಗಳನ್ನೂ ತೋರಿಸಿ, ಅವುಗಳ ವಿಮರ್ಶನಾಭಾರವನ್ನು ವಾಚಕರ ನ್ಯಾಯದೃಷ್ಟಿಗೇನೇ ಬಿಟ್ಟಿರುವೆವು.

ಆತನು ಆ ಶ್ಲೋಕಕ್ಕೆ ಈ ರೀತಿಯಾಗಿ ವ್ಯಾಖ್ಯಾನವನ್ನು ಬಂದು ಹಸ್ತಪುಸ್ತಕರೂಪದಲ್ಲಿ ಪ್ರಚುರಿಸುವುದಕ್ಕೆ ಮುಂಚಿತವಾಗಿಯೇ ತನ್ನ ತಾಯಿತಂದೆಗಳ ಅಪ್ಪಣೆ ಪಡೆದನು. ಆತನು ಬಂದಾನೊಂದುದಿನ ಆ ಕೈಬರಹದ ಪುಸ್ತಕಗಳನ್ನು ತೆಗೆದುಕೊಂಡು ತನ್ನ ತಂದೆಯ ಬಳಿಗೆ ಹೋಗಿ ಇಂತೆಂದನು.

“ ಅಯ್ಯಾ! ನಾನು ಈ ಪುಸ್ತಕವನ್ನು ಹಿಂದೂ ಸ್ತ್ರೀಪುನರ್ವಿವಾಹಕ್ಕೆ ಅನುಕೂಲವಾಗಿ ಬರೆದೆನು. ಅದಕ್ಕೆ ತಕ್ಕ ಶಾಸ್ತ್ರದೃಷ್ಟಾಂತಗಳನ್ನೂ, ಆಧಾರಗಳನ್ನೂ, ಇದರಲ್ಲಿ ತೋರಿಸಿರುವೆನು. ತಾವು ಇದನ್ನು ಪರಾಮರ್ಶಿಸಿ ಅನುಜ್ಞೆ ಕೊಡದೆ ಹೋದರೆ ನಾನು ಇದನ್ನು ಪ್ರಕಟಿಸಲಾರೆನು. ” ಅದಕ್ಕೆ ತಂದೆಯು “ ಮಗುವೇ! ನಾನು ಇದಕ್ಕೆ ಸಮ್ಮತಿಸದೆ ಹೋದರೆ ನೀನೇನು ಮಾಡುವೆ? ” ಎಂದು ಕೇಳಿದನು. ಮಗನು “ ಹಾಗಾದರೆ ತಾವು ಈ ಪ್ರಪಂಚದಲ್ಲಿರುವವರೆಗೆ ನಾನು ಇದನ್ನು ಪ್ರಚುರಪಡಿಸೆನು. ತದನಂತರ ಹಾಗೆ ಮಾಡುವುದೇ ಉತ್ತಮವೆಂದು ತೋರುತ್ತದೆ ” ಎಂದನು. ಅದಕ್ಕೆ ತಂದೆಯು

“ ಒಳ್ಳೆಯದು ನಾನು ಇದನ್ನು ನಾಳೆಯದಿನ ಓದಿಸಿ ಕೇಳಿ ನನ್ನ ಅಭಿಪ್ರಾಯವನ್ನು ತಿಳಿಸುವೆನು ಎಂದು ಹೇಳಿ, ಮರುದಿನ ಆ ಪ್ರಕಾರ ಅದನ್ನೆಲ್ಲಾ ಕೇಳಿ ” ನೀನು ಬರೆದುವುಗಳೆಲ್ಲವೂ ಶಾಸ್ತ್ರಪ್ರಕಾರವಾಗಿಯೇ ಇರುವುದೆಂಬುದು ನಿನಗೆ ನಂಬುಗೆಯೆ? ” ಎಂದು ಕೇಳಿದನು. ಅದಕ್ಕೆ ವಿದ್ಯಾಸಾಗರನು ಆ ವಿಷಯದಲ್ಲಿ ತಮಗೆ ಸಂದೇಹಬೇಡವೆಂದು ಹೇಳಲು ಠಾಕೂರದಾಸನು “ ಹಾಗಾದರೆ ನಿನ್ನಿಂದ ಸಾಧ್ಯವಾದಮಟ್ಟಿಗೆ ನಿನ್ನ ಉದ್ಯಮವನ್ನು ನೆರವೇರಿಸುವುದಕ್ಕಾಗಿ ನೀನು ಪ್ರಯತ್ನಿಸಬಹುದು. ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ” ಎಂದು ಹೇಳಿದನು. ತರುವಾಯ ವಿದ್ಯಾಸಾಗರನು ತನ್ನ ತಾಯಿಯಬಳಿಗೆ ಹೋಗಿ, “ ಅಮ್ಮಾ! ನಿಮಗೆ ಶಾಸ್ತ್ರಜ್ಞಾನವು ಅಷ್ಟಾಗಿಲ್ಲವಷ್ಟೆ? ನಾನು ವಿತಂತುವಿವಾಹವನ್ನು ಕುರಿತು ಈ ಪುಸ್ತಕವನ್ನು ಬರೆದಿರುವೆನು. ಆದರೆ ನಿನ್ನನುಜ್ಞೆ ಇಲ್ಲದೆ ನಾನಿದನ್ನು ಪ್ರಕಟಸಲಾರೆನು. ಸ್ತ್ರೀಪುನರ್ವಿವಾಹವು ಶಾಸ್ತ್ರಸಮ್ಮತವಾಗಿದೆಯಮ್ಮಾ! ” ಎಂದು ಹೇಳಿದನು. ಅದಕ್ಕಾ ಪ್ರಿಯ ಮಾತೆಯು ಹೀಗೆ ಪ್ರತ್ಯುತ್ತರವಿತ್ತಳು. “ ಮಗುವೆ! ನನಗೆ ಈ ವಿಷಯದಲ್ಲಿ ಯಾವ ಅಭ್ಯಂತರವೂ ಇಲ್ಲ. ಈಗಿನ ಸ್ಥಿತಿಯಲ್ಲಿ ವಿತಂತುಗಳು ತಮ್ಮ ದುಃಖಸಮುದ್ರದಲ್ಲಿ ಈಸುತ್ತಾ ದೇಶಕಂಟಕರಾಗಿದ್ದಾರೆ. ನೀನು ಅವರ ದುರವಸ್ಥೆಗಳನ್ನು ತಪ್ಪಿಸಿ, ಅವರಿಗೆ ಸೌಖ್ಯವನ್ನುಂಟುಮಾಡಲು ಯೋಚಿಸಿದ ಈ ಪ್ರಯತ್ನವನ್ನು ನನ್ನ ಮನಃಪೂರ್ವಕವಾಗಿ ಆದರಿಸುವೆನು ಆದರೆ ನಿಮ್ಮ ತಂದೆಯವರಿಗೆ ಮಾತ್ರ ಈ ಪ್ರಯತ್ನವನ್ನು ತಿಳಿಸಬೇಡ. ಏತಕ್ಕಂದರೆ ಅವರಿಗೆ ಕೆಲವು ಆತಂಕಗಳಿರಬಹುದು. ” ಅದಕ್ಕೆ ಆತನಿಂತೆಂದನು. “ ಓಹೋ? ನೀನು ಅದಕ್ಕೆ ಹೆದರಬೇಡ. ತೀರ್ಥರೂಪರ ಅಪ್ಪಣೆಯನ್ನು ಈ ಮೊದಲೇ ಪಡೆದಿರುವೆನು. ಅದಕ್ಕೆ ತಾಯಿ— ಹಾಗಾದರೆ ಮತ್ತೂ ಒಳ್ಳೆಯದು ನನಗೆ ಸಮ್ಮತವೇ, ನಿನ್ನ ಮನಸು ಬಂದಂತೆ ಮಾಡು ” ಎಂದು ಪ್ರೋತ್ಸಾಹಿಸಿದಳು.

ಈ ಮೇರೆಗೆ ವಿದ್ಯಾಸಾಗರನು ತಂದೆತಾಯಿಗಳ ಅನುಜ್ಞೆ ಪಡೆದು ತನ್ನ ಉದ್ಯಮವೆಂಬ ನಾಟಕರಂಗದಲ್ಲಿ ಪ್ರವೇಶಿಸಿ ಪ್ರಥಮಾಂಕವನ್ನಾರಂಭಿಸಿದನು. ಮೊಟ್ಟಮೊದಲು “ ಸ್ತ್ರೀಪುನರ್ವಿವಾಹವು ಧರ್ಮಸಮ್ಮತವಾದುದು. ” ಎಂಬ ಸಣ್ಣ ಪುಸ್ತಕರೂಪದಿಂದ ಸೂತ್ರಧಾರನು ಹೊರಬಿದ್ದನು. ಆತನು ಪ್ರಜೆಗಳಲ್ಲಿ ಹೆಚ್ಚಾದ ಕಳವಳವನ್ನು ಹುಟ್ಟಿಸಿದನು.

ಪೂರ್ವಾಚಾರಪರಾಯಣರಾಗಿದ್ದವರೆಲ್ಲರೂ ತಮ್ಮ ದೀರ್ಘನಿದ್ರೆಯಿಂದ ಎಚ್ಚತ್ತರು. ಆತನು ಮಾಡಲಿಕ್ಕಿರುವ ಸಂಸ್ಕರಣಕ್ಕೆ ವ್ಯತಿರೇಕವಾಗಿ ಆತಂಕ ಗಳು ಹೊರಪಟ್ಟವು. ತನ್ನ ಪ್ರಯತ್ನವು ನೆರವೇರುವುದಕ್ಕೋಸ್ಕರ ವಿದ್ಯಾಸಾ ಗರನು ತುಂಬ ಕಷ್ಟಪಟ್ಟನು. ತಾನು ಕಂಡುಹಿಡಿದ ಶ್ಲೋಕಗಳಲ್ಲಿ ಪ್ರತಿಯೊಂದನ್ನೂ ರಾತ್ರಿಯೂ, ಹಗಲೂ, ಗಾಢವಾಗಿ ವಿಮರ್ಶಿಸುತ್ತಾ ಬಂದನು. ತರುವಾಯ "ವಿತಂತುವಿವಾಹವನ್ನು ಮಾಡಬೇಕೆ?" ಎಂಬ ದೊಂದು ಪಾತ್ರವು ಬಂಗಾಲೀ ಭಾಷೆಯಲ್ಲಿ ಮತ್ತೊಂದು ಸಣ್ಣ ಪುಸ್ತಕರೂ ಪದಿಂದ ರಂಗದಲ್ಲಿ ಪ್ರವೇಶಿಸಿತು. ಅದರಲ್ಲಿನ ಯುಕ್ತಿಯುಕ್ತಗಳಾದ ಸಮಾಧಾನಗಳೂ, ಭಾಷಾಚಮತ್ಕಾರಗಳೂ, ಪ್ರಜೆಗಳ ಹೃದಯವನ್ನು ತಿರುವಿಹಾಕುತ್ತಲಿದ್ದವು. ತರುವಾಯ ವಿದ್ಯಾಸಾಗರನು ಕಲ್ಕತ್ತೆಯಲ್ಲಿ ತುಂಬ ಗೌರವನೀಯನಾಗಿಯೂ, ಹೆಸರುಪಡೆದವನಾಗಿಯೂ, ಇದ್ದ ರಾಜಾ ರಾಧಾಕಾಂತದೇವನ ಬಳಿಗೆ ಹೋಗಿ, ತನ್ನ ಪ್ರಯತ್ನಗಳನ್ನೆಲ್ಲಾ ಸಾವಧಾ ನವಾಗಿ ವಿವರಿಸಿ ಹೇಳಿ, ಆ ವಿಷಯವನ್ನು ಕುರಿತು ಚರ್ಚಿಸುವುದಕ್ಕೆ ಬಹಿ ರಂಗವಾದ ಸಭೆಯೊಂದನ್ನು ಕೂಡಿಸಬೇಕೆಂದು ನಿರ್ಣಯಿಸಿದನು. ಆ ಪ್ರಕಾರವಾಗಿ ನಿರ್ಣೀತವಾದಕಾಲಕ್ಕೆ ದಿಗ್ಗಜಗಳಂತಹ ಅನೇಕ ಪಂಡಿತರು ಬಂದು, ಬಹುದೊಡ್ಡ ವಿವಾದಗಳನ್ನು ನಡಿಸಿದರೂ, ಪರ್ಯವಸಾನವು ತೇಲ ಲಿಲ್ಲ. ವಿದ್ಯಾಸಾಗರನ ವಾದವು ಮಾತ್ರ ತುಂಬ ಹೇತುಭೂತವಾಗಿದ್ದುದ ರಿಂದ ಸಭಾಧ್ಯಕ್ಷರಾಗಿದ್ದ ಆ ರಾಜರವರು ಒಂದು ಶಾಲುವನ್ನು ಈತನಿಗೆ ಬಹುಮಾನವಾಗಿ ಕೊಟ್ಟು ಅಂದಿನ ಸಭೆಯನ್ನು ಮುಗಿಸಿದರು. ಪ್ರಜೆಗಳೆ ಲ್ಲರೂ ವಿದ್ಯಾಸಾಗರನಿಗೆ ರಾಜಾರಾಧಾಕಾಂತನು ಬಹುಮಾನವನ್ನು ಕೊಟ್ಟುದರಿಂದ ಸ್ತ್ರೀಪುನರ್ವಿವಾಹಕ್ಕೆ ಅನುಕೂಲವಾಯಿತೆಂದೆಣಿಸಿ, ಗುಂಪು ಕಟ್ಟಿಕೊಂಡು ಆತನ ಮನೆಗೆ ಹೋಗಿ, "ಆ ಸಂಸ್ಕರಣವನ್ನು ಸಂಘದೊ ಳಗೆ ಆಚರಣೆಗೆ ತರುವಿರಾ?" ಎಂದು ಕೇಳಿದರು. ಅದಕ್ಕೆ ಆತನು ತನಗೆ ವಿತಂತುವಿವಾಹವು ಸಮ್ಮತವಲ್ಲವೆಂತಲೂ, ತಾನು ಪ್ರಪಂಚಾನುವರ್ತಿ ಯೆಂತಲೂ, ವಿದ್ಯಾಸಾಗರನ ಅನುಪಮಾನ ವಿದ್ಯಾಪಾಂಡಿತ್ಯಕ್ಕೆ ಮಾತ್ರವೇ ಮೆಚ್ಚಿ ಬಹುಮಾನಕೊಟ್ಟೆನೆಂತಲೂ ಹೇಳಿ, ಪುನರ್ವಿವಾದಕ್ಕೆ ಮತ್ತೊಂದು ದಿನವನ್ನೇರ್ಪಡಿಸಿದನು. ಮೊದಲಿನಂತೆಯೇ ನಿಯಮಿತಕಾಲದಲ್ಲಿ ಅನೇಕ ಮಂದಿ ಪ್ರಸಿದ್ಧರಾದ ವಿದ್ವಾಂಸರೆಲ್ಲರೂ ದಯಮಾಡಿಸಿ, ಘೋರ ವಾದಮಾಡಿ

ದರು. ಆದರೂ ಕೊನೆಗಾಣದೆ ಮೊದಲಿನಂತೆಯೇ ಆಯಿತು. ಆಗ ವಾದ ಮಾಡಿದವರಲ್ಲಿ ನವದ್ವೀಪನಿವಾಸಿಯಾದ ಪಂಡಿತ ವ್ರಜನಾಥ ವಿದ್ಯಾರತ್ನನೆಂಬಾತನು ಆಗಿನಕಾಲದಲ್ಲಿ ಘನತೆಹೊಂದಿದ ಧರ್ಮಶಾಸ್ತ್ರಪಾರಂಗತನು. ಆತನ ಬುದ್ಧಿಚಾತುರ್ಯಗಳನ್ನು ನೋಡಿ ಮೆಚ್ಚಿಕೊಂಡು ರಾಜಾ ರಾಧಾಕಾಂತದೇವನು ಆತನಿಗೆ ಒಂದು ಶಾಲುವನ್ನು ಬಹುಮಾನವಾಗಿ ಕೊಟ್ಟನು. ವಿದ್ಯಾಸಾಗರನು ಇವುಗಳನ್ನೆಲ್ಲಾ ಚೆನ್ನಾಗಿ ಆಲೋಚಿಸಿ, ಅಂತಹ ಪ್ರಯತ್ನಗಳಿಂದ ತನಗೆ ಪ್ರಯೋಜನವಿಲ್ಲವೆಂದು ತಿಳಿದುಕೊಂಡು, ಅಧೈರ್ಯಪಡದೆ, ಮನೋದಾರ್ಢ್ಯದಿಂದ ಕಾರ್ಯನಿರ್ವಾಹಾಭಿಮುಖನಾದನು. ಸ್ತ್ರೀಪುನರ್ವಿವಾಹವಿಧಾಯಕವನ್ನು ಕುರಿತು ವಿದ್ಯಾಸಾಗರನು ಪ್ರಕಟಿಸಿದ ಪತ್ರಿಕೆಗಳು ಹೊರಬಿದ್ದ ಕೂಡಲೇ ಅವುಗಳನ್ನು ಖಂಡಿಸುತ್ತಾ, ಪೂರ್ವಾಚಾರಪರಾಯಣರಾದ ಅನೇಕರು ಅನೇಕವಿಧವಾಗಿ ಹಲವು ನಿಬಂಧಗಳನ್ನು ಪ್ರಚುರಿಸಿದರು. ಕೆಲವು ಸಂಘಗಳವರು ಸಹ ಅನೇಕ ಪೂರ್ವಪಕ್ಷಗಳನ್ನು ಬರೆದರು. ಈ ಮಧ್ಯಕಾಲದಲ್ಲಿ "ವ್ರಜವಿಲಾಸ, ರತ್ನಪರೀಕ್ಷೆ" ಎಂಬ ಎರಡು ಸಣ್ಣ ಪುಸ್ತಕಗಳು ವಿದ್ಯಾಸಾಗರನ ಪಕ್ಷವನ್ನೇ ದೃಢಪಡಿಸುತ್ತಾ ಹೊರಪಟ್ಟವು. ಅವುಗಳ ಮೇಲೆ ಬರೆದವರ ಹೆಸರು ಇರಲಿಲ್ಲ. ಇವುಗಳನ್ನು ವಿದ್ಯಾಸಾಗರನೇ ಬರೆದನೆಂದು ಕೆಲವು ಕಾಲದ ತನಕ ಜನರು ತಿಳಿದಿದ್ದರು. ಆದರೂ ಅವುಗಳ ಭಾಷಾದೋಷಾದಿ ಲೋಪಗಳನ್ನು ನೋಡಿದರೆ ವಿದ್ಯಾಸಾಗರನಂತಹ ಪಂಡಿತನು ಇಂತಹ ಪುಸ್ತಕವನ್ನು ಬರೆದನೆಂಬುದು ತುಂಬ ಹಾಸ್ಯಾಸ್ಪದವಾಗಿ ಕಂಡುಬಂದಿತು. ಇದರಂತೆಯೇ "ವಿನಯಪತ್ರಿಕೆ" ಎಂಬ ಹೆಸರಿನಿಂದ ಮತ್ತೊಂದು ಹೊತ್ತಿಗೆ ಪ್ರಕಟವಾಯಿತು. ಇವುಗಳೆಲ್ಲವೂ ಪೂರ್ವಾಚಾರಪರಾಯಣರನ್ನು ನಿರಸನೆಮಾಡುತ್ತಿದ್ದವು.

ಈಗಿನಂತೆಯೇ ಆ ಕಾಲದಲ್ಲಿಯೂ ಹಿಂದೂಸಂಘಗಳು ಮೂರು ಭಾಗಗಳಾಗಿ ವಿಭಜಿಸಲ್ಪಟ್ಟಿದ್ದುವು. ಅದರಲ್ಲಿ ಮೊದಲನೇತರದವರು ಕೇವಲ ಶಾಸ್ತ್ರಾಧಾರಗಳನ್ನೇ ನಂಬತಕ್ಕ ವೃದ್ಧಪೂರ್ವಾಚಾರಪರಾಯಣರು. ಇವರು ಸ್ತ್ರೀಪುನರ್ವಿವಾಹಕ್ಕೆ ಎಷ್ಟುಮಾತ್ರವೂ ಸಮ್ಮತಿಪತಕ್ಕವರಲ್ಲ. ಎರಡನೆಯ ತರದವರು ಇಂಗ್ಲಿಷ್ ಓದಿದ ಪೂರ್ವಾಚಾರಪರಾಯಣರಲ್ಲಿ ವೃದ್ಧರು. ಇವರ ಮನಸ್ಸು ಸ್ತ್ರೀಪುನರ್ವಿವಾಹಕ್ಕೆ ಒಡಂಬಟ್ಟರೂ ಧೈರ್ಯಲೋಪದಿಂದ

ಕಾರ್ಯಾಚರಣಕ್ಕೆ ಹಿಂದೆಗೆಯುವರು. ಮೂರನೆಯ ತರದವರು ಪಾಶ್ಚಾತ್ಯ ವಿದ್ಯೆಯನ್ನು ಅಭ್ಯಸಿಸಿದ ನವನಾಗರಿಕರು. ಇವರು ಆ ವಿಷಯವಾಗಿ ನಿಜವಾದ ಅಭಿಮಾನ ಉಳ್ಳವರಾಗಿ ಅದರ ಅಭಿವೃದ್ಧಿಗಾಗಿ ಕಷ್ಟಪಡುವರು. ಆದರೆ ಇವರ ಮಾತುಗಳನ್ನು ಉಳಿದ ತರಗಳವರು ಲಕ್ಷ್ಯಮಾಡರು. ಇವೆಲ್ಲವೂ ಸರ್ವಸಾಮಾನ್ಯ ವಿಷಯಗಳು. ಆದುದರಿಂದ ವಿದ್ಯಾಸಾಗರನು ಪ್ರಯತ್ನಿಸಿದ ಕೆಲಸವು ವಿಶೇಷ ಜನರಿಂದ ಆದರಿಸಲ್ಪಡತಕ್ಕುದಾಗಿರಲಿಲ್ಲ. ಆದರೂ ಆತನು ಈ ವಿಷಯದಲ್ಲಿ ಪ್ರಯತ್ನಿಸಿ, ಸರ್ಕಾರದವರಿಂದ ಒಂದು ಕಾನೂನನ್ನು ಸಹ ಮಾಡಿಸಿದನು. ವಿತಂತುವಿಹಗಳನ್ನು ಕುರಿತು ಮಾಡಿದ ಪ್ರಯತ್ನಗಳಲ್ಲಿ ಇದೇ ಮೊದಲನೆಯದೆಂದು ಭಾವಿಸಬೇಡಿರಿ! ಆಗ್ಗ ನೂರು ಸಂವತ್ಸರಗಳ ಮುಂಚೆಯೇ ದಕ್ಷಿಣದೇಶದಲ್ಲಿ ವಿಕ್ರಮಪುರಾಧಿಪತಿಯಾದ ರಾಜವಲ್ಲಭನು ಬಾಲವಿತಂತುವಾದ ತನ್ನ ಕುವರಿಗೆ ಪುನರ್ವಿವಾಹ ಮಾಡಲೆಣಿಸಿ, ದೇಶದಲ್ಲಿನ ಪಂಡಿತರ ಅಭಿಪ್ರಾಯಗಳನ್ನು ವಿಚಾರಿಸಲಾಗಿ ಅವರೆಲ್ಲರೂ ಅನುಕೂಲವಾಗಿಯೇ ಹೇಳಿದರಂತೆ. ಆದರೆ ನದ್ಯಾರಾಷ್ಟ್ರದಲ್ಲಿ ಪಂಡಿತರು ಮಾತ್ರ ಪ್ರತಿಕೂಲವಾಗಿ ಹೇಳಿದ್ದರಿಂದ ಆ ಪ್ರಯತ್ನವನ್ನು ಬಿಟ್ಟುಬಿಡಬೇಕಾಗಿ ಬಂದಿತು. ವಿದ್ಯಾಸಾಗರನಿಗೆ ಪೂರ್ವ ಇಪ್ಪತ್ತು ವರ್ಷಗಳ ಮುಂಚೆ ಒಬ್ಬ ಮಹಾರಾಷ್ಟ್ರ ಬ್ರಾಹ್ಮಣನು ಮಧ್ಯರಾಷ್ಟ್ರಗಳಲ್ಲಿ ಈ ವಿಷಯವಾಗಿ ಪ್ರಯತ್ನಪಟ್ಟನು. ಆದರೂ ನಿಷ್ಪ್ರಯೋಜನವಾಯಿತು. ಆ ಕಾಲದಲ್ಲಿಯೇ ಮದ್ರಾಸಿನವನೊಬ್ಬನು ಇದನ್ನು ಕುರಿತು ಒಂದು ರಾಜಶಾಸನವನ್ನು ಏರ್ಪಡಿಸಲಿಕ್ಕೆ ಪ್ರಯತ್ನಿಸಿದನು. ಅದೂ ವಿಫಲವಾಯಿತು. ಕೆಲವುಕಾಲದ ತರುವಾಯ ಕಲ್ಕತ್ತೆಯ "ಬಾಬೂ ಮತಿಲಾಲ" ಎಂಬ ಕೋಟೀಶ್ವರನೊಬ್ಬನು. "ಮೊಟ್ಟಮೊದಲು ವಿತಂತುವಿವಾಹವನ್ನು ಮಾಡಿಕೊಂಡ ಪುರುಷನಿಗೆ ಹತ್ತುಸಾವಿರ ರೂಪಾಯಿಗಳನ್ನು ಬಹುಮಾನವಾಗಿ ಕೊಡುವೆನು" ಎಂದು ವಾಗ್ದಾನಮಾಡಿದನು; ಆದರೆ ಈ ಕಾರ್ಯಕ್ಕೆ ಯಾರೂ ಸಾಹಸಪಡಲಿಲ್ಲ.

ವಿದ್ಯಾಸಾಗರನ ಪ್ರಯತ್ನಕ್ಕೆ ಎರಡು ವರುಷಗಳ ಮುಂಚೆ ಶ್ಯಾಮಾಚರಣದಾಸನೆಂಬೊಬ್ಬ ಶ್ರೀಮಂತನು ಬಾಲವಿತಂತುವಾದ ತನ್ನ ಕುಮಾರಿಗೆ ಪುನರ್ವಿವಾಹ ಮಾಡಬೇಕೆಂದು ಪ್ರಯತ್ನಿಸಲು ಕೆಲವರು ಪಂಡಿತರು ಮೊದಲು ಅನುಕೂಲವಾಗಿ ಮಾತನಾಡಿ ಕೊನೆಗೆ ಎಲ್ಲರೂ ಪ್ರತಿಕೂಲರಾಗಿ

ತಿರುಗಿ ಬಿಟ್ಟರು, ಈ ಪ್ರಕಾರವಾಗಿ ಅನೇಕ ವೇಳೆ ಪ್ರಯತ್ನಗಳು ನಡೆದು ಬಂದಾದರೂ ಕೊನೆಮುಟ್ಟದೆ ಹೋಯಿತು. ಹೀಗೆ ವಿದ್ಯಾಸಾಗರನೂ ಪೂರ್ವಾ ಚಾರಪರಾಯಣರಾದವರೂ ಈ ವಿಷಯದಲ್ಲಿ ಅನೇಕ ಪೂರ್ವಪಕ್ಷಸಿದ್ಧಾಂತಗಳನ್ನು ಮಾಡಿಕೊಳ್ಳುತ್ತಾ, ಒಬ್ಬರು ತೋರಿಸುವ ಶಾಸ್ತ್ರಾರ್ಥಕ್ಕೆ ಮತ್ತೊಬ್ಬರು ಬೇರೆ ಅರ್ಥವನ್ನು ತೆಗೆಯುತ್ತಾ ಬಂದರು. ವಿದ್ಯಾಸಾಗರನು ಹೇಳಿದ ಪರಾಶರಸಂಹಿತೆಯಲ್ಲಿನ ಶ್ಲೋಕಕ್ಕೆ ಪ್ರತಿಪಕ್ಷಗಳಾದವರು ಒಬ್ಬ ಕನ್ಯೆಗೆ ಪ್ರಧಾನವು ( ವಿವಾಹವಾಗ್ದಾನವು ) ಆದಬಳಿಕ ವರನಿಗೆ ಸಂಭವಿಸಿದ ಐದು ಅವಸ್ಥೆಗಳಲ್ಲಿಯೂ ಪುನರ್ವಿವಾಹವು ಶಾಸ್ತ್ರೀಯವೆಂದು ಅರ್ಥ ಮಾಡಿದರು ಮತ್ತು ಆದಿತ್ಯಪುರಾಣಾದಿ ಕೆಲವು ಧರ್ಮಶಾಸ್ತ್ರಗಳಲ್ಲಿ ಕಲಿಯುಗವರ್ಜಿತಗಳಾದ ವಿಷಯಗಳಲ್ಲಿ ಇದೂ ಒಂದೆಂದು ಕೆಲವು ದೃಷ್ಟಾಂತಗಳನ್ನು ತೋರಿಸಿದರು. ಹೀಗೆ ಎರಡು ಪಕ್ಷಗಳವರೂ ಹೋರಾಡುತ್ತಿರುವಲ್ಲಿ ಶಾಸ್ತ್ರಜ್ಞಾನವಿಲ್ಲದ ಪ್ರಜೆಗಳಲ್ಲಿ ಕೆಲವರು ಒಂದು ಪಕ್ಷವನ್ನು ಮತ್ತೆ ಕೆಲವರು ಇನ್ನೊಂದು ಪಕ್ಷವನ್ನು ಅವಲಂಬಿಸಿದರು. ವಿಶೇಷಭಾಗದ ಜನರಿಗೆ ಈ ಸಂಸ್ಕರಣವು ಇಷ್ಟವಾದುದಾಗಿರಲಿಲ್ಲ. ಆ ಕಾಲದಲ್ಲಿ ಧನಿಕರೂ, ದರಿದ್ರರೂ, ವೃದ್ಧರೂ, ಬಾಲರೂ, ಸ್ತ್ರೀಯರೂ, ಪುರುಷರೂ, ಎಲ್ಲರೂ ಪ್ರಚುರಿಸಲ್ಪಟ್ಟಿರುವ ವೃತ್ತಾಂತಪತ್ರಿಕೆಗಳಲ್ಲಿ ಈ ವಿಷಯವೇ ತುಂಬಿ ಹೋಗುತ್ತಿದ್ದಿತು. ಕವಿತ್ವವನ್ನು ಹೇಳತಕ್ಕವರೆಲ್ಲರೂ ಈ ವಿಷಯವಾಗಿಯೇ ಪದ್ಯಗಳನ್ನೂ, ಹಾಡುಗಳನ್ನೂ, ರಚಿಸುತ್ತಿದ್ದುದರಿಂದ ಜನರೆಲ್ಲರೂ ಅವುಗಳನ್ನೇ ಯಾವಾಗಲೂ ಓದುತ್ತಲಿದ್ದರು. ವ್ಯವಸಾಯಗಾರರೂ, ಕೂಲಿಯವರೂ, ಭಿಕ್ಷುಕರೂ, ಅವುಗಳನ್ನೇ ಹಾಡುತ್ತಲಿದ್ದರು. ವಿದ್ಯಾಸಾಗರನಿಗೆ ಆ ಕಾಲದಲ್ಲಿ ಕೆಲವು ಸ್ನೇಹಿತರ ಸಹಾಯ ಮಾತ್ರವಿದ್ದಿತು. ಅದುವರೆಗೆ ತನಗೆ ಅನುಕೂಲರಾಗಿರುವೆವೆಂದು ಹೇಳಿದ್ದ ಸ್ನೇಹಿತರಲ್ಲಿ ಸಹ ಕೆಲವರು ಪ್ರತಿಪಕ್ಷಿಗಳಾಗಿ ತಿರುಗಿ ಬಿಟ್ಟರು. ಎಷ್ಟು ವಿಘ್ನಗಳು ಬಂದರೂ, ಎಷ್ಟು ನಿರುತ್ಸಾಹಗಳುಂಟಾದರೂ, ಎಂತಹ ವಿಪತ್ತುಗಳು ಒದಗಿದರೂ, ಎಷ್ಟು ಪ್ರತಿಕೂಲಗಳು ಸಂಭವಿಸಿದರೂ, ವಿದ್ಯಾಸಾಗರನು ಮಾತ್ರ ಧೈರ್ಯಸಾಗರನಾಗಿದ್ದನು.

ಆಗ ಆತನು ಈ ವಿಷಯವಾಗಿ ಸರಕಾರದವರಿಂದ ಒಂದು ಶಾಸನವನ್ನು ಏರ್ಪಾಡು ಮಾಡಿಸಿದರೆ ಅದನ್ನು ಕುರಿತು ಪ್ರಯತ್ನಿಸುವವರಿಗೆ ಕೆಲವು ಸಂಕಟಗಳು ತೊಲಗುವುವೆಂದು ಯೋಚಿಸಿ ೧೮೫೫ನೇ ವರುಷದ

ಅಕ್ಟೋಬರು ೪ನೆಯ ತಾರೀಖಿನಲ್ಲಿ ಇಂಡಿಯಾ ಸರಕಾರದವರಿಗೆ ಒಂದು ಬರಹಮೂಲಕವಾದ ಮನವೆಯನ್ನು ಕಳುಹಿಸಿದನು. ಅದರಲ್ಲಿ ಸುಮಾರು ಸಾವಿರಮಂದಿ ಸಹಿಮಾಡಿದ್ದರು. ಹಿಂದೂ ಸ್ತ್ರೀಪುನರ್ವಿವಾಹಗಳು ನ್ಯಾಯವಾದವುಗಳೆಂತಲೂ, ಅಂತಹ ದಂಪತಿಗಳಿಗೆ ಹುಟ್ಟುವ ಮಕ್ಕಳು ಉಳಿದ ಔರಸ ಸಂತತಿಯವರಂತೆಯೇ ಕ್ರಮವಾದ ಹಕ್ಕುಬಾಧ್ಯತೆಗಳನ್ನು ಪಡೆಯುತಕ್ಕವರೆಂತಲೂ, ಆಜ್ಞಾಪಿಸಿದರೆ ಪ್ರಭುತ್ವದವರು ಹಿಂದೂಸಂಘಕ್ಕೆ ಮಹೋಪಕಾರ ಮಾಡಿದಂತೆ ಆಗುತ್ತದೆಯೆಂತ ಅದರಲ್ಲಿ ಬೇಡಿಕೊಂಡಿದ್ದರು. ಆ ವಿಜ್ಞಾಪನೆಯು ನವಂಬರ ೧೭ರಲ್ಲಿ ಗ್ರಾಂಟದೊರೆಯವರಿಂದ ನ್ಯಾಯನಿರ್ಮಾಣ ಸಭೆಗೆ ತರಲ್ಪಟ್ಟಿತು. ಆಗ ಆತನು ಆ ಸಭೆಯವರಿಗೆ ಹಿಂದೂ ವಿಧವೆಯರ ಜೀವಿತವನ್ನೂ, ಅವರ ದುರವಸ್ಥೆಗಳನ್ನೂ, ಲೋಕವ್ಯವಹಾರಧರ್ಮಗಳನ್ನೂ, ಸಂಘನಿರ್ಬಂಧಗಳನ್ನೂ, ಅತಿಬಾಲ್ಯವಿವಾಹಗಳ ರೀತಿಯನ್ನೂ, ಅವುಗಳ ಪರಿಣಾಮವನ್ನೂ, ಕುರಿತು ಬಹು ಸ್ಪಷ್ಟವಾಗಿ ಮಾತನಾಡಿದನು. ಅಂದಿನಿಂದಲೂ ಆ ಶಾಸನಕ್ಕೆ ಅನುಕೂಲವಾಗಿ ಕೆಲವು ಪ್ರಾರ್ಥನ ಪತ್ರಗಳೂ, ಪ್ರತಿಕೂಲವಾಗಿ ಕೆಲವು ಪತ್ರಗಳೂ, ಬರುತ್ತಿದ್ದವು. ಆ ಶಾಸನಕ್ಕೆ ಪ್ರತಿಕೂಲವಾಗಿ ಸುಮಾರು ೬೦ ಸಾವಿರ ಸಹಿಗಳುಳ್ಳ ಅರ್ಜಿಗಳೂ, ಅನುಕೂಲವಾಗಿ ೩೭ ಸಾವಿರ ಸಹಿಗಳುಳ್ಳ ವಿಜ್ಞಾಪನ ಪತ್ರಗಳೂ ಬಂದು ಸೇರಿದುವು. ಪ್ರತಿಪಕ್ಷದವರು ಅಂತಹ ವಿವಾಹಗಳು ಜರುಗಿದರೆ ಪ್ರಜೆಗಳಿಗೆ ಅದುವರೆಗೆ ಇರುವ ಕೆಲವು ಹಕ್ಕುಬಾಧ್ಯತೆಗಳು ತೊಲಗಿ ಹೋಗುವುವೆಂತಲೂ, ಇನ್ನೂ ಹಲವು ತರದ ನಷ್ಟಗಳುಂಟಾಗುವುವೆಂತಲೂ, ಅವು ಶಾಸ್ತ್ರಸಮ್ಮತವಾದವುಗಳಲ್ಲವೆಂತಲೂ ಮೊರೆಯಿಟ್ಟುಕೊಂಡರು. ಸಮ್ಮತವಿಲ್ಲದವರ ಸಂಖ್ಯೆಯೇ ಹೆಚ್ಚಾಗಿದ್ದರೂ, ನೋಡಲಿಕ್ಕೆ ಶಕ್ಯವಲ್ಲದ ಸಣ್ಣ ಬಾಲೆಯರ ದುಸ್ಥಿತಿಯನ್ನು ಕಂಡು ಗ್ರಾಂಟಧೊರೆಯವರು ಆ ಶಾಸನವನ್ನು ಕಾನೂನಾಗಿ ಏರ್ಪಾಡು ಮಾಡಿಸಿದರು. ವಾಚಕರಿಗೆ ತಿಳಿಯಲಿಕ್ಕಾಗಿ ಸದರಿ ಕಾನೂನು ಇದರ ಕೆಳಗೆ ಭಾಷಾಂತರಿಸಲ್ಪಟ್ಟಿದೆ.

---

೧೮೫೬ನೇ ವರುಷದ ೧೫ನೇ ನಂಬರು ಆಕ್ಟು.

( ೧೮೫೬ನೇ ವರುಷದ ಜುಲೈ ೨೬ನೇ ತಾರೀಖಿನಲ್ಲಿ ಗವರ್ನರ್ ಜನರಲ್‌ರವರ ಅಂಗೀಕಾರವನ್ನು ಹೊಂದಿದೆ. )

ಹಿಂದೂ ವಿತಂತುಗಳ ವಿವಾಹಕ್ಕೆ ಶಾಸ್ತ್ರಸಂಬಂಧವಾದ ಪ್ರತಿಬಂಧಕಗಳನ್ನು ತೊಲಗಿಸುವ ಕಾನೂನು.

# ಉಪೋದ್ಘಾತ.

ಪೂರ್ವಹಿಂದೂಸಂಘದ ಅಧೀನದಲ್ಲಿಯೂ ಪರಿಪಾಲನೆಯಲ್ಲಿಯೂ ಇರುವ ಸಂಸ್ಥಾನಗಳಲ್ಲಿ ಪ್ರತಿಷ್ಠಿಸಲ್ಪಟ್ಟಿರುವ ಸಿವಿಲ್‌ಕೋರ್ಟುಗಳಲ್ಲಿ ಅನುಷ್ಠಿಸಲ್ಪಡುವ ಧರ್ಮಶಾಸ್ತ್ರಗಳಿಂದ ಸಾಮಾನ್ಯವಾಗಿ ಎಲ್ಲಾ ಹಿಂದೂ ವಿಧವೆಯರೂ ಮೊದಲಲ್ಲಿ ಒಂದು ಮದುವೆ ಮಾಡಿಕೊಂಡ ಕಾರಣದಿಂದ ಶಾಸ್ತ್ರೀಯವಾದ ದ್ವಿತೀಯ ವಿವಾಹಕ್ಕೆ ಅನರ್ಹರೆಂದು ಎಣಿಸಲ್ಪಟ್ಟು ಅಂತಹ ದ್ವಿತೀಯ ವಿವಾಹದವರಿಂದ ಹುಟ್ಟಿದ ಮಕ್ಕಳು ಅಕ್ರಮರಾದವರೆಂತಲೂ, ವಾರಸುದಾರರಲ್ಲವೆಂತಲೂ ಪರಿಗಣಿಸಲ್ಪಡುವುದರಿಂದಲೂ, ಮತ್ತು ಆರೋಪಿಸಲ್ಪಟ್ಟ ಶಾಸ್ತ್ರೀಯವಾದ ಅನರ್ಹತೆಯು ದೇಶದಲ್ಲಿ ನೆಲೆಗೊಂಡ ಆಚಾರಕ್ಕೆ ಅನುಸಾರವಾಗಿದ್ದರೂ ಅವರ ಮತದ ಧರ್ಮಸೂತ್ರಗಳ ನಿಜಾಭಿಪ್ರಾಯಕ್ಕೆ ವ್ಯತಿರಿಕ್ತವಾಗಿರುವುದೆಂದು ಬಹುಜನ ಹಿಂದೂಗಳು ನಂಬಿ, ನ್ಯಾಯಸ್ಥಾನಗಳಲ್ಲಿ ಅನುಷ್ಠಿಸಲ್ಪಡುವ ವ್ಯಾವಹಾರಿಕ ಧರ್ಮಶಾಸ್ತ್ರವು (Ceivil law) ತಮ್ಮ ಮನಸ್ಸಾಕ್ಷಿಬೋಧನೆಗಳ ಪ್ರಕಾರ ಮತ್ತೊಂದು ಆಚಾರವನ್ನು ಅವಲಂಬಿಸುವುದರಿಂದ ಹಾಗೆ ಉದ್ದೇಶಿಸಿದ ಹಿಂದೂಜನಗಳನ್ನು ಆತಂಕಪಡಿಸದಂತೆ ತೋರುತ್ತಿರುವುದರಿಂದಲೂ, ಮತ್ತು ಅವರು ಮೊರೆ ಇಡುವ ಈ ಶಾಸನಾನರ್ಹತೆಯಿಂದ ಅಂತಹ ಹಿಂದೂಜನರನ್ನು ಕಾಪಾಡುವುದು ನ್ಯಾಯವಾಗಿರುವುದರಿಂದಲೂ, ಮತ್ತು ಹಿಂದೂ ವಿತಂತುವಿವಾಹಗಳಿಗೆ ಇರುವ ಎಲ್ಲಾ ಕಾನೂನುಗಳ ಪ್ರತಿಬಂಧಕಗಳನ್ನು ತೊಲಗಿಸುವುದು ಪ್ರಜೆಗಳ ನೀತಿಪ್ರವರ್ತನೆಗಳಿಗೂ ಸೌಖ್ಯಕ್ಕೂ ಅಭಿವೃದ್ಧಿಕರವಾಗಿರುವುದರಿಂದಲೂ, ಇದರಡಿ ವಿವರಿಸಿದಂತೆ ಕಾನೂನು ಮಾಡಲ್ಪಟ್ಟಿದೆ.

## ಕಾನೂನು.

೧. ಒಬ್ಬ ಸ್ತ್ರೀಯು ತನ್ನ ದ್ವಿತೀಯ ವಿವಾಹಕ್ಕೆ ಮೃತಪಟ್ಟ ಮತ್ತೊಬ್ಬನಿಗೆ ಪೂರ್ವದಲ್ಲಿ ವಿವಾಹವಾಗಲಿ, ಪ್ರದಾನವಾಗಲಿ, ಮಾಡಲ್ಪಟ್ಟಿಳೆಂತಲಾಗಲಿ, ಯಾವ ಆಚಾರಕ್ಕಾದರೂ ಯಾವ ಶಾಸ್ತ್ರಾರ್ಥಕ್ಕಾದರೂ ವಿರೋಧವಾಗಿರುವುದೆಂತಲಾಗಲಿ ಕಾರಣವನ್ನು ಹೇಳುತ್ತಾ ಯಾವ ಹಿಂದೂವಿವಾಹ

ವ್ರೂ ಸಲ್ಲಕೂಡದೆಂದು ಎಣಿಸಲ್ಪಡಲಾಗದು. ಅಂತವರ ಸಂತತಿಯನ್ನು ವಾರಸುದಾರರಲ್ಲವೆಂದು ಹೇಳಕೂಡದು.

೨. ಯಾವ ವಿತಂತುವೇ ಆಗಲಿ ಮೃತನಾದ ತನ್ನ ಗಂಡನ ಆಸ್ತಿಯಲ್ಲಿ ತನಗೆ ಇರುವ ಸಮಸ್ತವಾದ ಹಕ್ಕುಬಾಧ್ಯತೆಗಳನ್ನು ಮನೋವೃತ್ತಿಯಿಂದಲಾಗಲಿ ಅಥವಾ ತನ್ನ ಪತಿಗೆ ವಾರಸುದಾರಿಯಿಂದಲಾಗಲಿ ಅಥವಾ ಅವನ ವಂಶಪರಂಪರೆಯಿಂದಲಾಗಲಿ ಅಥವಾ ಯಾವ ಮರಣಶಾಸನದಿಂದಲಾಗಲಿ ಅಥವಾ ಸ್ಪಷ್ಟವಾಗಿ ಪುನರ್ವಿವಾಹ ಮಾಡಿಕೊಳ್ಳುವುದೆಂದು ಅನುಜ್ಞೆಯಿಲ್ಲದ ಯಾವ ದೃಷ್ಟಾಂತದಿಂದಲೇ ಆಗಲಿ ಹೊಂದಿದ್ದಪಕ್ಷದಲ್ಲಿ ಸದರಿ ಶಾಶ್ವತವಾದ ಹಕ್ಕುಬಾಧ್ಯತೆಗಳು ಆಕೆಯ ಪುನರ್ವಿವಾಹಾನಂತರ ನಶಿಸಿ, ಆಕೆಯು ಆಗಲೇ ಮೃತಳಾದಂತೆ ಭಾವಿಸಲ್ಪಡುತಕ್ಕದು. ಆಕೆಯ ಗಂಡನ ವಾರಸುದಾರರೇ ಆಗಲಿ, ಆಕೆಯ ಮರಣಾನಂತರ ಸದರಿ ಆಸ್ತಿಗೆ ಹಕ್ಕುದಾರರಾಗಲುಳ್ಳ ಇತರ ಜನರಾಗಲಿ ಆ ಪ್ರಕಾರವಾಗಿಯೇ ಭಾವಿಸಿ, ತಮ್ಮ ಹಕ್ಕುಬಾಧ್ಯತೆಗಳನ್ನು ಪಡೆಯುತಕ್ಕದು.

೩. ಒಬ್ಬ ಹಿಂದೂವಿಧವೆಯು ಪುನರ್ವಿವಾಹ ಮಾಡಿಕೊಂಡ ತರುವಾಯ ಆಕೆಯ ಮೃತನಾದ ಪತಿಯು ತನ್ನ ಮಕ್ಕಳ ಪೋಷಕತ್ವವನ್ನು ಕುರಿತು ಸದರಿ ವಿತಂತುವಿಗೆ ಆಗಲಿ, ಅಥವಾ ಇತರರು ಯಾರಿಗೆ ಆಗಲಿ ಮರಣಶಾಸನ ಪ್ರಕಾರವಾದರೂ ಅಥವಾ ಮತ್ತೆ ಯಾವ ಇತರ ಋಜು ಮಾಡಲ್ಪಡತಕ್ಕ ದೃಷ್ಟಾಂತಗಳಿಂದಲಾದರೂ, ಹಕ್ಕನ್ನು ಕೊಡದೆ ಇದ್ದಲ್ಲಿ ಸದರಿ ಮಕ್ಕಳ ಪೋಷಕರು ಅಥವಾ ಅವರ ತಾತ ಮುತ್ತಾತಂದಿರು (ತಂದೆಯ ಸಂಬಂಧದಲ್ಲಿ ) ಅಥವಾ ಮೃತನಾದವನ ಪುರುಷಬಂಧುಗಳು ಯಾರಾದರೂ ಸದರಿ ಮಕ್ಕಳಿಗೆ ಸರಿಯಾದ ಪೋಷಕರೆಂದು ಏರ್ಪಾಡು ಮಾಡುವುದಕ್ಕೆ ನ್ಯಾಯಸಭೆಯಲ್ಲಿ ಅರ್ಜಿ ಕೊಡತಕ್ಕದ್ದು. ಆ ನ್ಯಾಯಸಭೆಗಳು ಸದರಿ ಮೃತನಾದವನ ಮರಣಕಾಲಕ್ಕೆ ಸದರಿ ನಿವಾಸಸ್ಥಳವು ಎಲ್ಲಿರುವುದೋ ಆ ಪ್ರದೇಶಕ್ಕೆ ನ್ಯಾಯಪರಿಪಾಲನಾಧಿಕಾರ ಉಳ್ಳವುಗಳಾಗಿರತಕ್ಕದ್ದು. ಅಗಲಾ ನ್ಯಾಯಸಭೆಯವರಿಗೆ ಧರ್ಮವೆಂದು ತೋರಿದ ಪ್ರಕಾರ ಸದರಿ ಮಕ್ಕಳಿಗೆ ಮೈನಾರಿಟಿ ತೀರುವತನಕ ಅವರ ತಾಯಿಗೆ ಬದಲಾಗಿ ಅವರನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡು ಸರಿಯಾದ ಎಚ್ಚರಿಕೆಯಿಂದ ಪಾಲಿಸತಕ್ಕ ಪೋಷ

ಕರನ್ನು ಏರ್ಪಡಿಸತಕ್ಕದ್ದು. ಹಾಗೆ ಮಾಡುವುದರಲ್ಲಿ ಸದರಿ ಸಭೆಯವರು ತಾಯಿತಂದೆಗಳಿಲ್ಲದ ಮಕ್ಕಳ ಪೋಷಕತ್ವವನ್ನು ಕುರಿತು ವಾಡಿಕೆಯಲ್ಲಿರುವ ಧರ್ಮಶಾಸ್ತ್ರಗಳ ಪ್ರಕಾರ ಅನುಷ್ಠಿಸತಕ್ಕದ್ದು. ಸದರಿ ಮಕ್ಕಳನ್ನು ಮೈನರುಗಳಾಗಿರುವಾಗ ಪೋಷಿಸಲಿಕ್ಕೂ, ವಿದ್ಯೆಕಲಿಸುವುದಕ್ಕೂ, ಸಾಕಾದಷ್ಟು ಆಸ್ತಿಯು ಅವರಿಗೆ ಇಲ್ಲದೆ ಹೋದರೆ ಅವರ ತಾಯಿಯು ಅಪ್ಪಣೆಯಿಲ್ಲದೆ ಮೇಲೆ ಹೇಳಿದ ಏರ್ಪಾಡುಗಳು ಯಾವವೂ ಮಾಡಲ್ಪಡವು. ಆ ಮಕ್ಕಳು ಮೈನರುಗಳಾಗಿದ್ದ ಕಾಲದಲ್ಲಿ ಮಾಡಲ್ಪಡುವ ಸದರಿ ಖರ್ಚುಗಳಿಗೆ ತಕ್ಕ ಜಾಮೀನ್ ( Security ) ಕೊಟ್ಟಪಕ್ಷದಲ್ಲಿ ಹಾಗೆ ಏರ್ಪಡಿಸಬಹುದು.

೪. ಈ ಕಾನೂನನ್ನು ಏರ್ಪಡಿಸುವುದಕ್ಕೆ ಮುಂಚೆ ಪುನರ್ವಿವಾಹ ಮಾಡಿಕೊಂಡ ಒಬ್ಬ ವಿತಂತುವು ಮಕ್ಕಳಿಲ್ಲದ ಕಾರಣದಿಂದ ಇತರರು ಯಾರಾದರೂ ಮೃತರಾದ ತರುವಾಯ ಅವರ ಆಸ್ತಿಯಲ್ಲಿ ಈಕೆಗೆ ಇಲ್ಲದ ಹಕ್ಕುಗಳು ಯಾವವೂ ಈ ಕಾನೂನಿಂದ ಬರಲಾರವು.

೫. ಮೇಲೆ ಹೇಳಲ್ಪಟ್ಟ ಸಂದರ್ಭಗಳಲ್ಲಿ ಹೊರತು ಒಬ್ಬ ವಿತಂತುವು ಪುನರ್ವಿವಾಹ ಮಾಡಿಕೊಂಡ ಮಾತ್ರದಿಂದಲೇ ಸದರಿ ವಿವಾಹವಿಲ್ಲದಿದ್ದರೆ ಆಕೆ ಹೊಂದತಕ್ಕ ಅಸ್ತಿಯನ್ನಾಗಲಿ, ಹಕ್ಕುಗಳನ್ನಾಗಲಿ ಹೊಂದುವುದಕ್ಕೆ ಯಾವ ವಿಧದಿಂದಲೂ ಅನರ್ಹಳಾಗಲಾರಳು. ಪುನರ್ವಿವಾಹ ಮಾಡಿಕೊಂಡ ಪ್ರತಿ ವಿತಂತುವೂ ಸದರಿ ವಿವಾಹವೇ ಪ್ರಥಮ ವಿವಾಹವಾಗಿದ್ದಲ್ಲಿ ಆಕೆಯು ಹೊಂದತಕ್ಕ ವಾರಸಿನ ಎಲ್ಲಾ ಹಕ್ಕುಗಳನ್ನೂ ಪಡೆಯತಕ್ಕದ್ದು.

೬. ಒಬ್ಬ ಹಿಂದೂ ಸ್ತ್ರೀಯು ಪ್ರಥಮ ವಿವಾಹಕಾಲದಲ್ಲಿ ಮಾಡಿದ ವಾಗ್ದಾನಗಳೂ, ಕರ್ಮಗಳೂ, ಮಹೋತ್ಸವಗಳೂ ಮೊದಲಾದವುಗಳೆಲ್ಲವೂ ಆ ವಿವಾಹವು ಧರ್ಮವಿಧಿಯೆಂದು ತಿಳಿಯಲ್ಪಡುವಂತೆಯೇ ಸದರೀ ಕರ್ಮಕಾಂಡಗಳು ವಿತಂತುವಿವಾಹಸಮಯದಲ್ಲಿ ಮಾಡಲ್ಪಟ್ಟರೂ, ಪರಿಗ್ರಾಹ್ಯವಾಗಿರತಕ್ಕದ್ದು.

೭. ಪುನರ್ವಿವಾಹಮಾಡಿಕೊಳ್ಳಲಿಕ್ಕೆ ಅಪೇಕ್ಷಿಸುವ ವಿತಂತುವು ಮೈನರಾಗಿದ್ದಾಗ, ಆಕೆಯು, ತನ್ನ ತಂದೆಯು, ತಂದೆ ಇಲ್ಲದಿದ್ದರೆ ತಂದೆಯ ತಂದೆಯು, ಆತನೂ ಇಲ್ಲದಿದ್ದರೆ ತಾಯಿಯು, ಆಕೆಯೂ ಇಲ್ಲದಿದರೆ ಅಣ್ಣನ,

ಇವರಾರೂ ಇಲ್ಲದಿದ್ದರೆ ಸಮೀಪನಾದ ಪುರುರುಷ ಬಂಧುವಿನ ಅನುಮತಿಯಿಲ್ಲದೆ ಸದರಿ ವಿವಾಹ ಮಾಡಿಕೊಳ್ಳಕೂಡದು.

ಈ ಶಾಸನಭಾಗಕ್ಕೆ ವಿರೋಧವಾಗಿ ವಿವಾಹ ಮಾಡಿದ ಪ್ರತಿ ಒಬ್ಬರೂ, ಒಂದು ಸಂವತ್ಸರಕ್ಕೆ ಮೀರಿದ ಖೈದಿಗಾಗಲಿ, ಇಲ್ಲವೇ ಜುರ್ಮಾನೆಗಾಗಲಿ, ಅಥವಾ ಇವೆರಡಕ್ಕೂ ಆಗಲಿ ಪಾತ್ರರಾಗುವರು. ಹಾಗೆ ಮಾಡಿದ ವಿವಾಹಗಳೆಲ್ಲವೂ, ನ್ಯಾಯಸಭೆಯವರಿಂದ ಅಶಾಸ್ತ್ರೀಯಗಳೆಂದ ತಿಳಿಸಲ್ಪಡಬಹುದು.

ಸಂಪೂರ್ಣವಯಸ್ಕಳಾದ ಒಬ್ಬ ವಿತಂತುವು ಪುನರ್ವಿವಾಹ ಮಾಡಿಕೊಳ್ಳಲಿಕ್ಕೆ ಅಪೇಕ್ಷಿಸಿದಾಗ ಆಕೆಯ ಅನುಮತಿಯೊಂದೇ ಸಾಕಾಗಿರುವುದು. ಅಂತಹ ಪುನರ್ವಿವಾಹವು ಧರ್ಮವಾದುದೆಂತಲೂ, ಲೋಪವಲ್ಲದುದೆಂತಲೂ ಹೇಳಬಹುದು.

---

ಈ ವಿಧವಾಗಿ ಆ ಕಾನೂನು ನಿರ್ಮಿಸಲ್ಪಟ್ಟಿತು. ಆದರೆ ಪ್ರಜೆಗಳು ತಮ್ಮ ವಿತಂತುಗಳಾದ ಪುತ್ರಿಯರಿಗಾಗಲಿ ವಿತಂತು ಸೋದರಿಯರಿಗಾಗಲಿ ಪುನರ್ವಿವಾಹ ಮಾಡಲು ಸಾಹಸಗೊಳ್ಳದೆ ಹೋದರು. ಈ ಪ್ರಯತ್ನವನ್ನು ಮಾಡಿದವರು ಈ ಕಾನೂನಿಗೋಸ್ಕರ ನಿರೀಕ್ಷಿಸಿಕೊಂಡಿದ್ದುದರಿಂದ ಅವರ ಕೋರಿಕೆ ನೆರವೇರಿ, ಕೂಡಲೇ ಅವರು ತಮ್ಮ ಸ್ವಾಧೀನದಲ್ಲಿರುವ ಬಾಲವಿತಂತುಗಳಿಗೆ ವಿವಾಹ ಮಾಡುವರೆಂದು ಪ್ರಜೆಗಳು ನಿರೀಕ್ಷಿಸುತ್ತಲಿದ್ದರು. ಶಾಸನವು ಅಗತ್ಯವೆಂದು ಅರ್ಜಿ ಬರೆದು ಸಹಿ ಮಾಡಿದವರಲ್ಲಿ ಬಹುಭಾಗದವರು ವಿನೋದಕ್ಕೂ, ವಿಚಿತ್ರವನ್ನು ನೋಡುವುದಕ್ಕೂ, ಮುಖದಾಕ್ಷಿಣ್ಯಕ್ಕೂ ಮಾಡಿದವರು. ಆದರೆ ಮನಃಪೂರ್ವಕವಾಗಿ ರುಜುಮಾಡಿದ್ದವರು ಬಹು ವಿರಳರಾಗಿದ್ದರು. ಪರ್ಯವಸಾನವು ಪ್ರಕಟವಾದ ಕೂಡಲೇ ಅವರು ಒಬ್ಬರ ಹಿಂದೆ ಒಬ್ಬರು ಜಾರಿಹೋದರು. ಕಾನೂನು ಏರ್ಪಟ್ಟ ನಾಲ್ಕು ತಿಂಗಳು ತನಕ ಯಾರೂ ಹೆಜ್ಜೆಯನ್ನು ಮುಂದಕ್ಕಿಟ್ಟು ಕೆಲಸಮಾಡಲು ಪ್ರಾರಂಭಿಸದೆ ಹೋದರು. ಈ ಕಾನೂನು ಏರ್ಪಟ್ಟ ತರುವಾಯ ಸುಮಾರು ಎಪ್ಪತ್ತು ಸ್ತ್ರೀಪುನರ್ವಿವಾಹಗಳು ಜರುಗಿದವು. ಈ ಕಾನೂನಿಗೆ ಅನುಸಾರವಾಗಿ ಮೊಟ್ಟಮೊದಲು ನಡೆದ ವಿವಾಹವು ೧೮೫೬ನೇ ಡಿಸೆಂಬರ ೩ನೆಯ

ತಾರೀಖಿನಲ್ಲಿ ನಡೆಯಿತು. ಹಿಂದೂ ಸಂಘಚರಿತ್ರೆಯಲ್ಲಿನ ಪ್ರಾಮುಖ್ಯ ದಿನಗಳಲ್ಲಿ ಇದೂ ಒಂದು. ಸುಪ್ರಸಿದ್ಧನಾದ ಪಂಡಿತ ರಾಮನಾಥತರ್ಕವಾಗೀಶನ ಪುತ್ರನಾದ ಶ್ರೀಶಚಂದ್ರವಿದ್ಯಾರತ್ನನೆಂಬಾತನು ಮದುಮಗನು. ಲಕ್ಷ್ಮೀಮಣೀದೇವಿಯ ಮಗಳಾದ ಕಾಳೀಮತೀದೇವಿಯೆಂಬುವಳು ಮದುವಣಿಗಿತಿ. ವಿದ್ಯಾಸಾಗರನ ಅಮಿತವಾದ ದೇಹಮನೋಧನ ಪ್ರಯಾಸಗಳಿಂದಲೇ ಈ ವಿವಾಹ ನಡೆಯಿತೆಂದು ವಾಚಕರು ಊಹಿಸಬಹುದು. ಕಲಕತ್ತೆಯಲ್ಲಿನ ರಾಜಾ ಕೃಷ್ಣಬೆನರ್ಜಿಯವರ ಗೃಹದಲ್ಲಿ ಈ ವಿವಾಹ ಜರಿಗಿತು. ಆ ವಿವಾಹದ ದಿನ ರಾತ್ರಿ ಲಗ್ನವಾದ್ದರಿಂದ ಸಾವಿರಾರುಜನ ಪ್ರಜೆಗಳು ಗುಂಪುಗೂಡಿ ಈ ವಿನೋದವನ್ನು ನೋಡುವುದಕ್ಕಾಗಿ ಆ ಮದುವೆಯ ಮನೆಯಲ್ಲಿ ಕಿಕ್ಕಿರಿದು ಇದ್ದರು. ಮೆರವಣಿಗೆ ಹೊರಡುವ ಸಮಯದಲ್ಲಿ ಪ್ರತಿಕಕ್ಷಿಯವರು ಗಲಾಟೆ ಮಾಡುವರೇನೋ ಎಂಬ ಭಯದಿಂದ ವಿದ್ಯಾಸಾಗರನೂ ಅವನ ಸ್ನೇಹಿತರೂ ತಕ್ಕ ಸನ್ನಾಹದಿಂದ ಆ ಪಾಲಕಿಯ ಹಿಂದೆಯೇ ಕಾದಿದ್ದರು. ಆತನು ಮುಂಚಿತವಾಗಿಯೇ ಪೋಲೀಸಿನವರಿಗೆ ತಿಳಿಸಿದ್ದು ಗಲಾಟೆಯಾಗದಂತೆ ಸಹಾಯವನ್ನಪೇಕ್ಷಿಸಿದ್ದರಿಂದ ಅದರಂತೆ ಅವರು ಬಂದು ಸಹಾಯಕರಾಗಿದ್ದರು. ಈ ವಧೂವರರ ಸಂಯೋಗಕ್ಕೆ ವಿದ್ಯಾಸಾಗರನ ಸ್ನೇಹಿತನಾದ ಮದನಮೋಹನತರ್ಕಾಲಂಕಾರನೇ ಕಾರಕನೆಂದು ಕೆಲವರು ಹೇಳುವರು. ಆತನು ಅವರಿಬ್ಬರನ್ನು ಬಲ್ಲವನಾಗಿದ್ದುದರಿಂದ ಪ್ರೋತ್ಸಾಹಪಡಿಸಿದನು. ಆ ಶ್ರೀಶಚಂದ್ರನು ಮುರಷಡಾಬಾದಿನಲ್ಲಿ ನ್ಯಾಯಪಂಡಿತನಾಗಿದ್ದನು. ಈ ವಿವಾಹಮಹೋತ್ಸವವು ಆಗಿನ ದೇಶಭಾಷೆಯಲ್ಲಿನ ವೃತ್ತಾಂತಪತ್ರಿಕೆಗಳೆಲ್ಲೆಲ್ಲ ಅನೇಕ ವಿಧವಾಗಿ ಬಣ್ಣಿಸಲ್ಪಟ್ಟದೆ. ಆ ವಧೂವರರ ವಸ್ತ್ರಾಲಂಕಾರಗಳು ಮೊದಲಾದವುಗಳಿಗೆ ಹಿಡಿಯುವ ವೆಚ್ಚವನ್ನೆಲ್ಲ ವಿದ್ಯಾಸಾಗರನೇ ಸ್ವಂತವಾಗಿ ಭರಿಸಿದನು. ಆತನ ಜೀವಿತಕಾಲದಲ್ಲಿ ಈ ವಿಧವಾಗಿಯೇ ಕ್ರಮಕ್ರಮವಾಗಿ ಅಂತಹ ಮದುವೆಗಳು ಅನೇಕವಾಗಿ ಜರುಗಿದವು. ಇವುಗಳಿಂದ ವಿದ್ಯಾಸಾಗರನಿಗೆ ವಿಶೇಷವಾದ ಹಣ ವೆಚ್ಚವಾಯಿತು. ಈ ಪುನರ್ವಿವಾಹಗಳನ್ನು ಮಾಡಿಕೊಂಡವರನ್ನೂ, ಅವರ ಸ್ನೇಹವುಳ್ಳವರನ್ನೂ, ಅವರೊಂದಿಗೆ ಇತರ ಸಂಬಂಧವುಳ್ಳವರನ್ನೂ, ಸಹ ಸಂಘದವರು ಬಹಿಷ್ಕರಿಸಿದರು. ಆಗ ಇಂತವರನ್ನೆಲ್ಲಾ ವಿದ್ಯಾಸಾಗರನೇ ಭರಿಸಬೇಕಾಗಿ ಬಂದಿತು. ಗ್ರಂಥವಿಕ್ರಯದಿಂದ ಅವನಿಗೆ ಸಿಕ್ಕುತ್ತಿದ್ದ ಅಲ್ಪಾದಾಯವು ಈ

ಹೆಚ್ಚು ವೆಚ್ಚಗಳಿಗೆ ಸಾಲದೆ ಬಂದುದರಿಂದ ಆತನು ಸ್ವಲ್ಪ ಹೆಚ್ಚುಕಡಿಮೆ ೫೦ ಸಾವಿರ ರೂಪಾಯಿಗಳ ಸಾಲತೆಗೆಯಬೇಕಾಗಿ ಬಂದಿತು. ಆತನ ಸ್ನೇಹಿತರು ಅವನಿಗೆ ಮಾಡುವ ಸಹಾಯವು ಬಹು ಸ್ವಲ್ಪವಾಗಿದ್ದಿತು. ಸಹಾಯಕರಾಗಿರುವೆವೆಂದು ವಾಗ್ದಾನಮಾಡಿದವರಲ್ಲಿಯೂ ಕೆಲವರು ಮೋಸಮಾಡಿದರು. ಕೆಲವು ವರ್ಷಗಳಲ್ಲಿಯೇ ಈತನ ಕಷ್ಟಗಳು ಹೆಚ್ಚಾಗಿ, ಮರಳಿ ಸರ್ಕಾರದ ಉದ್ಯೋಗದಲ್ಲಿ ಸೇರಬೇಕೆಂದು ಪ್ರಯತ್ನ ಮಾತ್ರ ಮಾಡಿದನು. ಇಂತಹ ಸ್ಥಿತಿಯಲ್ಲಿ ಕೂಡ ತನ್ನ ಪ್ರಯತ್ನದಲ್ಲಿ ನಿರುತ್ಸಾಹನಾಗಲಿಲ್ಲ. ಸ್ತ್ರೀಪುನರ್ವಿವಾಹವೇ ತನ್ನ ಜೀವಿತದ ಮುಖ್ಯೋದ್ದೇಶಗಳಲ್ಲಿ ಅಗ್ರಗಣ್ಯವೆಂದು ಭಾವಿಸಿದ್ದನು. ಆ ಉದ್ದೇಶ್ಯಕ್ಕಾಗಿ ಪ್ರಯತ್ನಿಸಲು ಅವನ ಪ್ರತಿಕಕ್ಷಿಗಳು ಬಹಳವಾಗಿ ಬಾಧಿಸಿದರು. ಒಂದಾನೊಂದು ವೇಳೆ ಕೆಲವರು ಸೇರಿ ಇವನನ್ನು ಕೊಲ್ಲುವುದಕ್ಕೆ ಸುದಾ ಪ್ರಯತ್ನಿಸಿದರೆಂದು ತಿಳಿಯಬಂದಿದೆ. ಆದರೂ ಆತನು ಸ್ವಲ್ಪವೂ ಹೆದರದೆ ಅಚಲಧೀರನಾಗಿದ್ದನು. ಈತನ ತಂದೆಯಾದ ಠಾಕೂರದಾಸನು ತನ್ನ ಮಗನನ್ನು ಕೆಲವರು ಕೊಲ್ಲಲೆಳಸಿರುವರೆಂದು ತಿಳಿದು ಶ್ರೀಮಂತನೆಂಬ ಹೆಸರುಳ್ಳ ದೃಢಕಾಯನೊಬ್ಬನನ್ನು ಈತನ ಸಹಾಯ ರಕ್ಷಣಾರ್ಥವಾಗಿ ಕಳುಹಿದನು.

ಒಂದುದಿನ ಅರ್ಧರಾತ್ರಿಯಲ್ಲಿ ಕೆಲವರು ಶತ್ರುಗಳು ವಿದ್ಯಾಸಾಗರನನ್ನು ಕೊಲ್ಲಲಿಕ್ಕೆ ಪ್ರಯತ್ನಿಸಿದಾಗ ಆ ಭೃತ್ಯನ ಸಹಾಯದಿಂದಲೇ ಈ ಮಹಾನುಭಾವನು ತಪ್ಪಿಸಿಕೊಂಡನು. ಈತನು ಹೊಸ್ತಿಲನ್ನು ದಾಟಿ ಹೊರಕ್ಕೆ ಬಂದಾಗಲೆಲ್ಲ ಬೈಯ್ಯುವವರು ಕೆಲವರೂ, ಹೊಡೆಯುವೆವೆಂದು ಕೆಲವರೂ, ಕೊಲ್ಲುವೆವೆಂದು ಕೆಲವರೂ, ಛೀ ಹಾಕುವವರು ಕೆಲವರೂ, ಹೆದರಿಸುವವರು ಕೆಲವರೂ, ಸಿದ್ಧರಾಗಿರುತ್ತಿದ್ದರು. ಆದರೂ ಆತನು ಈ ಬೆದರಿಕೆಗಳನ್ನೆಲ್ಲಾ ಲಕ್ಷ್ಯಮಾಡದೆ ಇದ್ದನು. ಒಂದುದಿನ ಒಬ್ಬ ಧನಿಕನು ಕೆಲವರು ಭಟರನ್ನು ಕರೆಯಿಸಿ, "ವಿದ್ಯಾಸಾಗರನು ಹೋಗುವ ದಾರಿಯಲ್ಲಿ ಕಾದಿದ್ದು, ಅವನನ್ನು ಹಿಡಿದುಕೊಂಡು ಹೊಡೆದುಹಾಕಿರಿ" ಎಂದು ಅಪ್ಪಣೆಮಾಡಿದನು. ಅವರು ಆ ಪ್ರಕಾರವಾಗಿ ಕಾದುಕೊಂಡು ಸಿದ್ಧರಾಗಿದ್ದರು. ವಿದ್ಯಾಸಾಗರನಿಗೆ ಈ ಸುದ್ದಿಯು ಹೇಗೋ ತಿಳಿದು, ಕೂಡಲೇ ಆತನು ಮುಖಸ್ತುತಿಪಾಠಕರಿಂದ ಸುತ್ತಲ್ಪಟ್ಟು, ತಾನು ಯೋಚಿಸಿದ ಕೆಲಸಕ್ಕಾಗಿ ಸಂತೋಷಪಡುತ್ತಿರುವ ಆ ಧನಿಕನ ಬಳಿಗೆ ಹೋಗಿ ಸ್ಥೈರ್ಯದಿಂದ ನಿಂತನು. ಆಗ ಅಲ್ಲಿದ್ದವರೆಲ್ಲರೂ,

ಲಜ್ಜಾಕ್ರಾಂತವಿವರ್ಣವದರಾಗಿ, ತಲೇ ತಗ್ಗಿಸಿಕೊಂಡು ತಮ್ಮ ಅನಾಲೋಚಿತ ಕೃತ್ಯಗಳಿಗೆ ಮನಸ್ಸಿನಲ್ಲಿ ವ್ಯಥೆಪಟ್ಟರು. ಆಗ ಅವರಲ್ಲೊಬ್ಬನು ಆತನು ಹಠಾತ್ತಾಗಿ ಅಲ್ಲಿಗೆ ಬಂದುದಕ್ಕೆ ಕಾರಣವೇನೆಂದು ಕೇಳಿದ್ದಕ್ಕೆ "ನನ್ನನ್ನು ಹೊಡೆಯುವುದಕ್ಕೆ ನೀವು ಕೆಲವು ಜನರನ್ನು ನಿಯಮಿಸಿದಿರೆಂತಲೂ, ಅವರು ಅದಕ್ಕಾಗಿ ಕಾದುಕೊಂಡಿದ್ದರೆಂತಲೂ, ಕೇಳಿದೆನು. ಅವರಿಗೆ ಬರಲಿಕ್ಕಿರುವ ಆ ವಿಪತ್ತಿನಿಂದ ಅವರನ್ನು ರಕ್ಷಿಸುವುದಕ್ಕಾಗಿಯೇ ನಾನು ನಿಮ್ಮ ಎದುರಿಗೆ ಬಂದೆನು. ಈಗ ನಿಮ್ಮ ಕೋರಿಕೆಯನ್ನು ನೆರವೇರಿಸಿಕೊಳ್ಳಬಹುದು." ಎಂದು ಉತ್ತರವಿತ್ತನು. ಅದಕ್ಕೆ ಅವರೆಲ್ಲರೂ ನಾಚಿಕೊಂಡು ತಮ್ಮ ದುರ್ನಡತೆಗಾಗಿ ತುಂಬ ಪಶ್ಚಾತ್ತಾಪಹೊಂದಿ ಈತನ ಕ್ಷಮಾಪಣೆಯನ್ನು ಬೇಡಿದರು.

ಮತ್ತೊಂದು ಕಾಲದಲ್ಲಿ ವಿದ್ಯಾಸಾಗರನು ಒಬ್ಬ ಪಂಡಿತನ ಸಂಗಡ ಹೊಗೆಬಂಡಿಯಲ್ಲಿ ಕುಳಿತು ಪ್ರಯಾಣಮಾಡುತ್ತಿದ್ದನು. ಆ ಪಂಡಿತನು ವಿದ್ಯಾಸಾಗರನ ಹೆಸರು ಮಾತ್ರ ಕೇಳಿದ್ದನೇ ಹೊರತು ಈತನನ್ನು ಸಾಕ್ಷಾತ್ತಾಗಿ ಕಂಡಿರಲಿಲ್ಲ. ಪ್ರಸಂಗವಶದಿಂದ ವಿಧವಾವಿವಾಹವನ್ನು ಕುರಿತು, ಮಾತನಾಡುತ್ತಾ, ವಿದ್ಯಾಸಾಗರನನ್ನು ಬಹಳವಾಗಿ ನಿಂದಿಸುತ್ತಾ, ಅವಾಚ್ಯವಾದ ಶಬ್ದಗಳಿಂದ ಬೈಯುತ್ತಾ ಬಂದನು. ಆದರೆ ಕಡೆಗೆ ಸ್ಟೇಷನ್‌ನಲ್ಲಿಳಿದಾಗ ತನ್ನೊಡನೆ ಪ್ರಸಂಗಿಸಿದವನು ವಿದ್ಯಾಸಾಗರನೇ ಎಂಬುದು ಹೇಗೋ ತಿಳಿದುಕೊಂಡು ಆ ಪಂಡಿತನು ಆಶ್ಚರ್ಯಮೂರ್ಛೆಗಳನ್ನು ಹೊಂದಿದನು. ವಿದ್ಯಾಸಾಗರನು ಅದನ್ನು ಕಂಡು ಅವನಿಗೆ ತಾನೇ ಸ್ವಲ್ಪ ಉಪಚಾರಮಾಡಿ, ಚೇತನಗೊಳಿಸಿದನು. ಒಂದುಕಾಲದಲ್ಲಿ ಪಾಠಶಾಲೆಗಳ ಪರೀಕ್ಷಾಧಿಕಾರಿಯಾದ ಪ್ರಾಟ್‌ಧೊರೆಯವರು ವಿದ್ಯಾಸಾಗರನನ್ನು ಕರೆದು ನಿನ್ನೊಂದಿಗೆ ಹೋರಾಡಿದವರಲ್ಲಿ ಯಾವನು ದೊಡ್ಡವನೆಂದು ಕೇಳಲು, ಆತನು ಪರಿಹಾಸ್ಯಕ್ಕಾಗಿ ತನ್ನನ್ನು ಚನ್ನಾಗಿ ದೂಷಿಸಿದವನ ಹೆಸರನ್ನು ಹೇಳಿದನು. ಆ ಧೊರೆಯವರು ಆತನ ಹಾಸ್ಯದ ಅಭಿಪ್ರಾಯವನ್ನು ಗ್ರಹಿಸಲಾರದೆ, ಆ ಮನುಷ್ಯನು ಗಟ್ಟಿಗನೆಂದು ತಿಳಿದು, ತನ್ನ ಕೈಕೆಳಗೆ ಒಂದು ದೊಡ್ಡ ಉದ್ಯೋಗವನ್ನವನಿಗೆ ಕೊಟ್ಟನು. ತರುವಾಯ ಆ ಮನುಷ್ಯನು ತಾನು ಯೋಚಿಸದೆ ಇದ್ದರೂ ತನಗೆ ಪ್ರಾಪ್ತವಾದ ಅಧಿಕಾರಕ್ಕೆ ಕಾರಣವಿಂತದೆಂಬುದನ್ನು ತಿಳಿದುಕೊಂಡು, ಒಂದುದಿನ ವಿದ್ಯಾಸಾಗರನ ಬಳಿಗೆ ಬಂದು, "ನಿಮ್ಮ ಚನ್ನ

ತ್ಕಾರವೇ ತನಗೆ ಆ ಉದ್ಯೋಗವನ್ನು ಕೊಡಿಸಿತೆಂತಲೂ, ತಮ್ಮ ನಿಜಾಭಿ ಪ್ರಾಯವು ದೊರೆಗೆ ತಿಳಿದರೆ ತನ್ನ ಜೀವನಕ್ಕೆ ಹಾನಿ ಬರುವುದೆಂತಲೂ," ಬಹಳವಾಗಿ ಬೇಡಿಕೊಂಡನು. ಆಗ ವಿದ್ಯಾಸಾಗರನು ಕಿರುನಗೆ ನಗುತ್ತಾ ಭಯವಿಲ್ಲವೆಂದು ಹೇಳಿ ಅವನನ್ನು ಕಳುಹಿಬಿಟ್ಟನು. ಮತ್ತೊಂದು ವೇಳೆ ವಿದ್ಯಾಸಾಗರನಿಗೆ ಸಂಸ್ಕೃತ ಕಳಾಶಾಲೆಯಲ್ಲಿ ವಿದ್ಯೆಯನ್ನು ಕಲಿಸಿದ ಪ್ರೇಮ ಚಂದ್ರತರ್ಕವಾಗೀಶನೆಂಬ ಉಪಾಧ್ಯಾಯನು ಈತನ ಸಂಸ್ಕರಣಕಾರ್ಯಗಳನ್ನು ಅಡ್ಡಿಮಾಡಬೇಕೆಂದು ಯೋಚಿಸಿದನು. ಆದರೆ ಈ ವಿದ್ಯಾಸಾಗರನು ತನ್ನ ಸ್ಥೈರ್ಯವನ್ನು ಬಿಡಲಿಲ್ಲ. ಈ ಕಾರ್ಯಕ್ಕಾಗಿಯೇ ತನ್ನ ಯಾವಜ್ಜೀವವು ಪ್ರಯತ್ನಪಟ್ಟು, ಆವಶ್ಯಕವಿದ್ದರೆ ತನ್ನ ಪ್ರಾಣವನ್ನಾದರೂ ಒಪ್ಪಿಸುವೆನೆಂದು, ಹೇಳಿ ಆಪ್ರಕಾರವೇ ನಡಿಸಿದನು.

ಈ ಮೇರೆಗೆ ಕೆಲವುಕಾಲ ಕಳೆಯಿತು. ಆಗ ಪ್ರಜೆಗಳೆಲ್ಲರೂ ವಿದ್ಯಾಸಾಗರನು ಸ್ತ್ರೀಪುನರ್ವಿವಾಹವನ್ನು ಕುರಿತು ಇತರರಿಗೆ ಬೋಧಿಸುತ್ತಾ ಅವರನ್ನು ಪ್ರೋತ್ಸಾಹಪಡಿಸುತ್ತಿರುವನೇ ಹೊರ್ತು ತಾನು ಆಚರಣೆಗೆ ತರಲಿಲ್ಲವೆಂತಲೂ ಈತನು ಇತರರಿಗೆ ಹೇಳುವನೇ ಹೊರ್ತು ತಾನು ಮಾಡತಕ್ಕವನಲ್ಲವೆಂತಲೂ, ಹಲವರು ಹಲವು ಬಗೆಯಾಗಿ ಅಂದುಕೊಳ್ಳತೊಡಗಿದರು. ಆದರೂ ವಿದ್ಯಾಸಾಗರನು ಮಾತ್ರ ಅಂಧತ್ರಿಕರಣಶುದ್ಧಿಯಿಲ್ಲದ ಸಾಮಾನ್ಯ ಮನುಷ್ಯನಲ್ಲ. ಆತನು ಯಾವಾಗಲೂ ಮನೋವಾಕ್ಕಾಯ ಕರ್ಮಗಳಲ್ಲಿ ಸ್ವಲ್ಪವಾದರೂ ಭಿನ್ನವಿಲ್ಲದೆ ವರ್ತಿಸುತ್ತಿದ್ದನು. ಈ ಸ್ತ್ರೀಪುನರ್ವಿವಾಹವನ್ನು ಆತನು ಇದುವರೆಗೂ ಆಚರಣೆಯಲ್ಲಿ ತಾರದೆ ಇದ್ದುದಕ್ಕೆ ಕಾರಣವು ತಕ್ಕ ಅವಕಾಶ ಉಂಟಾಗದೆ ಇದ್ದುದೇ ಹೊರತು ಬೇರೆ ಇಲ್ಲ. ಈತನ ಸಹೋದರರು, ಕುಮಾರಕಿಯರು ಮೊದಲಾದವರಿಗೆಲ್ಲ ಅದುವರಗೇ ಮದುವೆಗಳಾಗಿದ್ದುವು. ಆದುದರಿಂದ ಈತನು ಮಾಡಬೇಕಾದುದು ಯಾವುದೂ ಇರಲಿಲ್ಲ. ಹೀಗಿರುವಲ್ಲಿ ಈತನ ಮಗನು ವಿತಂತುವಿವಾಹವನ್ನು ಮಾಡಿಕೊಳ್ಳಲಪೇಕ್ಷಿಸಿದಾಗ ಈತನು ತುಂಬ ಸಂತೋಷದಿಂದ ಪ್ರೋತ್ಸಾಹಗೊಳಿಸಿದನು.

ಈತನ ಮಗನಾದ ನಾರಾಯಣಚಂದ್ರನು ಶಂಭುಚಂದ್ರ ಮುಗ್ಧೋಪಾಧ್ಯಾಯನ ವಿತಂತುಪುತ್ರಿಯಾದ ಭಾವಸುಂದರೀದೇವಿಯನ್ನು ೧೮೭೦ನೇ

ವರುಷದ ಅಗಷ್ಟ ೧೧ನೇ ತಾರೀಖಿನಲ್ಲಿ ಮದುವೇ ಮಾಡಿಕೊಂಡನು. ವಿವಾಹಕಾಲದಲ್ಲಿ ವರನ ವಯಸ್ಸು ೨೧, ಮದುವೆಯ ಹುಡುಗಿಯ ವಯಸ್ಸು ೧೬ ವರುಷಗಳು. ಆಕೆಯ ಮೊದಲನೆಯ ಗಂಡನು ಮೃತನಾದ ಕೆಲದಿನಗಳಿಗೆ ಆಕೆಯ ತಾಯಿ ಆ ಹುಡುಗಿಯನ್ನು ವೀರಸಿಂಹಗ್ರಾಮಕ್ಕೆ ಕರೆದುಕೊಂಡು ಬಂದು ಈಕೆಗೆ ತಕ್ಕ ವರನನ್ನು ಆಲೋಚಿಸಿರೆಂದು ವಿದ್ಯಾಸಾಗರನ ತಮ್ಮನಾದ ಶಂಭುಚಂದ್ರನೊಂದಿಗೆ ಹೇಳಿದಳು. ಆತನು ತನ್ನ ಅಣ್ಣನವರಿಗೆ ಈ ಸುದ್ದಿಯನ್ನು ಬರೆದನು. ಇಷ್ಟರಲ್ಲಿ ನಾರಾಯಣಚಂದ್ರನು ಆ ಬಾಲೆಯನ್ನು ನೋಡಿ, ನಾನು ಮದುವೆಮಾಡಿಕೊಳ್ಳುವೆನೆಂದು ಹೇಳಿದನು. ಈ ಸಂಗತಿ ವಿದ್ಯಾಸಾಗರನಿಗೆ ತಿಳಿದು ಆತನು ಅಪರಿಮಿತಾನಂದಭರಿತನಾದನು. ಆದರೆ ತನ್ನ ಭಾರ್ಯೆಗೆ ತಿಳಿಯಪಡಿಸಿದರೆ ಆತಂಕಪಡಿಸುವಳೇನೋ ಎಂಬ ಭಯದಿಂದ ಆಕೆಗೆ ತಿಳಿಸಲಿಲ್ಲ. ಈತನ ಕುಟುಂಬದವರಲ್ಲಿ ಒಬ್ಬರಿಗೂ ಈ ವಿವಾಹವು ಸಮ್ಮತವಾಗಿರಲ್ಲ. ಅದರಲ್ಲಿಯೂ ಮುಖ್ಯವಾಗಿ ಈತನ ಸಹೋದರನಾದ ಶಂಭುಚಂದ್ರನಿಗೆ ಸ್ವಲ್ಪವೂ ಸಮ್ಮತವಿಲ್ಲ. ನಾರಾಯಣಚಂದ್ರನು ತನ್ನ ತಂದೆಗೆ ಇಂತೆಂದನು. " ಅಪ್ಪಾಜಿ! ನಿಮ್ಮ ಹೆಸರುವಾಸಿಯನ್ನು ಅಭಿವೃದ್ಧಿ ಪಡಿಸಲಿಕ್ಕೆ ತಕ್ಕ ಬುದ್ಧಿ ಜಾಣತನಗಳು ನನ್ನಲ್ಲಿಲ್ಲ. ಅಕ್ಷತಯೋನಿಗಳಾದ ಬಾಲವಿತಂತುಗಳಿಗೆ ಪುನರ್ವಿವಾಹ ಮಾಡಿಸಿ, ಅವರ ದುಃಖಗಳನ್ನು ತಪ್ಪಿಸುವುದೇ ನಿಮ್ಮ ಜೀವಿತದ ಮುಖ್ಯೋದ್ದೇಶವೆಂದು ನನಗೆ ತಿಳಿಯುವುದು. ಅದನ್ನು ನೆರವೇರಿಸಿಕೊಳ್ಳುವುದೇ ನಿಮಗೆ ಪರಮಸಂತೋಷವು. ಅಸಮರ್ಥನಾದ ಈ ನಿಮ್ಮ ಕುಮಾರನು ನಿಮಗೆ ಅಂತಹ ಸಂತೋಷವನ್ನು ಸ್ವಲ್ಪ ಮಟ್ಟಿಗೆ ಉಂಟು ಮಾಡಬೇಕೆಂದೆಣಿಸಿದನು. ಹಾಗೆ ಮಾಡಲು ಶಕ್ತನಾದರೆ ನಾನು ತುಂಬ ಅದೃಷ್ಟವಂತನೇ. ನ್ಯಾಯವಾದ ನಿಮ್ಮ ನಿಷ್ಪಾಪಟ್ಯಬೋಧನೆಗಳನ್ನು ಅನಾಲೋಚಿತರಾದ ನಿಮ್ಮ ಶತ್ರುಗಳು ಆಕ್ಷೇಪಿಸರೆ ? ಈ ಮಾತುಗಳನ್ನು ಕೇಳಿದಾಗ ವಿದ್ಯಾಸಾಗರನ ಸಂತೋಷವು ಅವರ್ಣನೀಯವಾಗಿದ್ದಿತು. ಆದರೂ ಈತನು ತನ್ನ ಹೆಂಡತಿಗೆ ಈ ಮಾತು ತಿಳಿದರೆ ಆತಂಕ ಉಂಟಾಗುವುದೆಂದು ವಿವಾಹವಾದ ದಂಪತಿಗಳಿಗೆ ಪ್ರತ್ಯೇಕವಾಗಿ ಒಂದು ಬಾಡಿಗೆ ಮನೆಯನ್ನು ಗೊತ್ತುಮಾಡಿದನು. ಆದರೆ ಆಕೆಯು ವಿದ್ಯಾವತಿಯಲ್ಲದೆ ಪೂರ್ವಾಚಾರ ಪರಾಯಣೆಯಾಗಿದ್ದರೂ, ತನ್ನ ಗಂಡನ ಮತ್ತು ಮಗನ ಇಷ್ಟದಂತೆ ಅವರನ್ನು ಸಂತೋಷಪಡಿಸಲಿಕ್ಕಾಗಿ ಸ್ವಲ್ಪವೂ ಅಡ್ಡಿ

ಮಾಡಿಯೇ ಅವರೊಂದಿಗೆ ಕಲೆತಿದ್ದಳು. ವಿದ್ಯಾಸಾಗರನ ಸಹೋದರ ನಾದ ಶಂಭುಚಂದ್ರನಿಗೆ ಈ ವಿವಾಹವು ಸಮ್ಮತವಾಗಿರಲಿಲ್ಲವೆಂದು, ಈ ಮೊದಲೇ ಬರೆದಿರುವೆವು ಆತನಿಗೆ ವಿದ್ಯಾಸಾಗರನು ಬಂಗಾಲೀ ಭಾಷೆಯಲ್ಲಿ ಬರೆದ ಪತ್ರದ ಭಾಷಾಂತರವನ್ನು ಇದರಡಿ ಕೊಟ್ಟಿರುವೆವು.

" ಪ್ರಿಯ ಸಹೋದರನೇ! ಶ್ರಾವಣ ಬಹುಳ ೧೨ ಗುರುವಾರದ ದಿನ ನಾರಾಯಣಚಂದ್ರನು ಭುವನಸುಂದರಿಯನ್ನು ವಿವಾಹ ಮಾಡಿಕೊಂಡನು. ಈ ಸಂಗತಿಯನ್ನು ನಮ್ಮ ತಾಯಿ ಮೊದಲಾದವರಿಗೆ ತಿಳಿಸು. ನಮ್ಮ ನಾರಾಯಣಚಂದ್ರನು ವಿತಂತುವಿವಾಹವನ್ನು ಮಾಡಿಕೊಂಡಲ್ಲಿ ನಮ್ಮ ಬಂಧುಗಳು ಯಾರೂ ನಮ್ಮಲ್ಲಿ ಪಙ್ತಿಭೋಜನವನ್ನೂ, ಸಂಬಂಧಬಾಂಧವ್ಯಗಳನ್ನೂ ಮಾಡರೆಂದು ನೀನು ಬರೆದಿದ್ದೀ. ಈ ವಿಷಯವಾಗಿ ನಾರಾಯಣಚಂದ್ರನು ನಿಜಮನೋಭೀಷ್ಟ ಪ್ರಕಾರ ಮಾಡಿಕೊಂಡನೇ ಹೊರತು, ಇದರಲ್ಲಿ ನನ್ನ ಬಲವಂತವು ಸ್ವಲ್ಪವೂ ಇಲ್ಲವು. ಆತನು ಪುನರ್ವಿವಾಹ ಮಾಡಿಕೊಳ್ಳುವನೆಂತಲೂ, ಮದುಮಗಳು ಸಿದ್ಧಳಾಗಿರುವಳೆಂತಲೂ, ನಾನು ಕೇಳಿದಾಗ ಸಂತೋಷದಿಂದ ಒಡಂಬಡದೆ ಏನು ಮಾಡಲಿ? ನಾನು ಆ ವೇಳೆಯಲ್ಲಿ ಅಭ್ಯಂತರ ಮಾಡಬಾರದು. ಸ್ತ್ರೀ ಪುನರ್ವಿವಾಹ ಪ್ರಯತ್ನವನ್ನು ನಾನೇ ಆರಂಭಿಸಿದೆನು. ನಾವು ಇದುವರೆಗೆ ಅಂತಹ ವಿವಾಹಗಳನ್ನು ಅನೇಕವಾಗಿ ಮಾಡಿಸಿದೆವು. ಅಂತಹ ಸ್ಥಿತಿಯಲ್ಲಿ ನನ್ನ ಕುಮಾರನು ವಿತಂತುವಿವಾಹವನ್ನು ಮಾಡಿಕೊಳ್ಳದೆ ಹೋದರೆ ನಾನು ನಾಲ್ವರಲ್ಲಿ ತಲೆಎತ್ತಿಕೊಂಡು ತಿರುಗಲಿಕ್ಕೆ ಅವಕಾಶವೆತ್ತಣದು? ನಾನು ಸಂಘಗಳಿಗೆಲ್ಲ ಶತ್ರುವು. ದ್ವೇಷಿಯಾಗಿರತಕ್ಕವನು. ಆತನು ಈಗ ನನ್ನನ್ನು ಅಪ್ಪಾ! ಎಂದು ಕರೆಯಲಿಕ್ಕೆ ಅರ್ಹನಾದನು. ಹಿಂದೂ ಸಂಘದಲ್ಲಿ ಈ ಸಂಸ್ಕರಣವನ್ನು ಏರ್ಪಡಿಸುವುದೇ ನನ್ನ ಜೀವಿತಕಾಲದಲ್ಲೆಲ್ಲಾ ಮುಖ್ಯ ಸತ್ಕೃತ್ಯವಾಗಿ ಭಾವಿಸಿರುವೆನು. ಇದಕ್ಕಿಂತ ನಾನು ಮಾಡಬೇಕಾದ ಘನಕಾರ್ಯವು ಯಾವುದೂ ಇಲ್ಲ. ಈ ಪ್ರಯತ್ನಕ್ಕಾಗಿಯೇ ನನ್ನ ದ್ರವ್ಯವನ್ನೆಲ್ಲ ವೆಚ್ಚಿಸಿದೆನು. ಅವಶ್ಯಕ ಬಿದ್ದರೆ ನನ್ನ ಪ್ರಾಣಗಳನ್ನು ಕೂಡ ಒಪ್ಪಿಸಲಿಕ್ಕೆ ಸಿದ್ಧನಾಗಿರುವೆನು. ಇದನ್ನೆಲ್ಲಾ ಯೋಚಿಸಿ ನೋಡಿದರೆ ನಮ್ಮ ಬಂಧುಗಳ ಸಂಬಂಧ ತಪ್ಪುವುದು ಅಷ್ಟು ದೊಡ್ಡದಲ್ಲ. ಈ ಕಾರಣದಿಂದಲೇ ನಾನು ನನ್ನ ಕುಮಾರನ ಮನಃಪೂರ್ವಕವಾದ ಉದ್ದೇಶ್ಯಕ್ಕೆ ಆತಂಕಪಡಿಸಿದರೆ ನನ್ನಂತಹ ನೀಚನು ಮಾನವಕೋಟಿಯಲ್ಲಿ

ಒಬ್ಬನಾದರೂ ಇರಲಾರನು. ನಾರಾಯಣಚಂದ್ರನು ತನ್ನಷ್ಟಕ್ಕೆ ತಾನೇ ಈ ಕೆಲಸ ಮಾಡಿದ್ದು ನನ್ನ ಅದೃಷ್ಟವೇ ಅಲ್ಲವೆ? ನನ್ನ ದೇಶದ ದುರಾಚಾರಗಳಿಗೆ ನಾನು ದಾಸನಾಗತಕ್ಕವನಲ್ಲ. ನನ್ನ ದೇಶಕ್ಕೂ ನನಗೂ ಕ್ಷೇಮಕರವೆಂದು ತೋರಿದ ಕೆಲಸಗಳನ್ನೆಲ್ಲಾ ಎಷ್ಟು ಇಕ್ಕಟ್ಟುಗಳೊದಗಿದರೂ, ನನ್ನ ಶಕ್ತಿ ವಂಚನೆ ಇಲ್ಲದೆ ನೆರವೇರಿಸಲೆಳಸಿರುವೆನು. ಸಂಘಕ್ಕಾಗಲಿ, ಬಂಧುಗಳಿಗಾಗಲಿ, ಹೆದರಿ ನನ್ನ ಪ್ರಯತ್ನಗಳನ್ನು ಬಿಟ್ಟುಬಿಡತಕ್ಕವನಲ್ಲ. ಕೊಟ್ಟ ಕೊನೆಯಲ್ಲಿ ನಾನು ಹೇಳಲಪೇಕ್ಷಿಸಿರುವುದೇನಂದರೆ, ನಾರಾಯಣಚಂದ್ರನೊಂದಿಗೆ ಭೋಜನಬಾಂಧವ್ಯಾದಿಗಳನ್ನು ಮಾಡಲಿಕ್ಕೆ ಸಾಹಸವಿಲ್ಲದವರಾಗಲಿ, ಇಷ್ಟವಿಲ್ಲದವರಾಗಲಿ ಇನ್ನು ಮೇಲೆ ಸುಲಭವಾಗಿ ತಮ್ಮ ಮನಸ್ಸು ಬಂದಂತೆ ಮಾಡಿಕೊಳ್ಳಬಹುದು. ಅದಕ್ಕಾತನು ವ್ಯಥೆಪಡುವನೆಂದು ನಾನು ತಿಳಿಯಲಾರೆನು. ನನಗೆ ಯಾವವಿಧವಾದ ಕೋಪವಾಗಲಿ ಅಸೂಯೆಯಾಗಲಿ ಇಲ್ಲ. ಇಂತಹ ವಿಷಯಗಳಲ್ಲಿ ಪ್ರತಿ ಒಬ್ಬರೂ ಸ್ವೇಚ್ಛಾಭೀಷ್ಟದಂತೆ ( Free will ) ವರ್ತಿಸಬೇಕೆಂಬುದೇ ನನ್ನ ಅಭಿಪ್ರಾಯವು. ಯಾರೇ ಆಗಲಿ, ಇತರರು ಹೇಳಿದಂತೆ ನಡೆದುಕೊಳ್ಳಬಾರದು ಇಷ್ಟೇ ವಿಷಯಗಳು. ಇದನ್ನು ಗ್ರಹಿಸುವುದು. "

ಹೀಗೆ ನಿನ್ನ ಶ್ರೇಯೋಭಿಲಾಷಿ,

ಈಶ್ವರಚಂದ್ರಶರ್ಮಾ.

ಈ ಪತ್ರವನ್ನೋದಿ ನೋಡಿದರೆ ವಿದ್ಯಾಸಾಗರನು ತ್ರಿಕರಣಶುದಿಯುಳ್ಳವನೆಂದು ಸ್ಪಷ್ಟವಾಗುವುದು. ಶ್ರೀ ರಾಜಾ ರಾಮಮೋಹನರಾಯರು, ವಿದ್ಯಾಸಾಗರನು ಮೊದಲಾದವರು ತಮ್ಮ ನಿಜೋದ್ದೇಶ್ಯಗಳನ್ನು ನಿಷ್ಕಪಟವಾಗಿ ಹೊರಪಡಿಸಿದ್ದಕ್ಕೆ ಹಿಂದೂ ಸಂಘದವರು ಭಯಪಡಬೇಕಾದ ಅಗತ್ಯವಿಲ್ಲವು. ಸಂಸ್ಕರ್ತರು ಹುಟ್ಟುತ್ತಲೂ, ಸಾಯುತ್ತಲೂ, ಇರುವರೇ ಹೊರ್ತು ಅವರವರ ಮಹತ್ಕಾರ್ಯಗಳು ಎಂದಿಗೂ ನಶಿಸಲಾರವು. ಕಾಲಕ್ರಮದಲ್ಲಿ ಅವರ ಉದ್ಯಮಗಳಿಗೂ, ಅಭಿಪ್ರಾಯಗಳಿಗೂ, ಗೌರವಾಭಿವೃದ್ಧಿಗಳು ಹೆಚ್ಚುತ್ತಲಿರುವುವು. ಆರ್ಯ ಸಂತತಿಯವರೆಂದು ಹೇಳಿಕೊಂಡು ಅನಾರ್ಯರಂತೆ ಯಾರು ವರ್ತಿಸುವರೋ, ಅವರೇ ಘಾತುಕರು. ಇಂತಹ ದೇಶದ್ರೋಹಿಗಳು ಅಂತರಿಸಿದ ಹೊರತು ದೇಶಮಾತೃವಿಗೆ ದಾಸ್ಯವಿಮುಕ್ತಿಯಾಗಿ ದೇಶಭಕ್ತರು ತಮ್ಮ ಆದರ್ಶವನ್ನು ತೋರಲಾರರು.

---

## ಕುಲೀನಪದ್ಧತಿ.

ಬಂಗಾಳಾ ರಾಷ್ಟ್ರದಲ್ಲಿನ ವಿಧವಾವಿವಾಹಪ್ರಯತ್ನದ ವೃತ್ತಾಂತವು ಸಮಗ್ರವಾಗಿ ಹೇಳಲ್ಪಟ್ಟಿತು. ಇನ್ನು ಅಲ್ಲಿ ಬೇರುಬಿಟ್ಟುಕೊಂಡಿರುವ ಮುಖ್ಯವಾದ ಸಂಘದುರಾಚಾರಗಳಲ್ಲಿ ಒಂದಾದ ಕುಲೀನಪದ್ಧತಿಯನ್ನು ಕುರಿತು, ಮತ್ತು ಅದರ ನಿವಾರಣಕ್ಕಾಗಿ ವಿದ್ಯಾಸಾಗರನು ಮಾಡಿದ ಪರಿಶ್ರಮವನ್ನು ಕುರಿತು ವಿಚಾರ ಮಾಡೋಣ. ಆತನು ಸ್ತ್ರೀಪುನರ್ವಿವಾಹಕ್ಕಾಗಿ ಹೋರಾಡಿದ ಕೆಲವು ಕಾಲದಮೇಲೆ ಈ ಕುಲೀನಪದ್ಧತಿಯೆಂಬ ಎರಡನೆಯ ದುರಾಚಾರದ ಮೇಲೆ ದಂಡೆತ್ತಿ ಅದನ್ನು ನಿರ್ಮೂಲಗೊಳಿಸುವುದಕ್ಕೆ ಪ್ರಯತ್ನಿಸಿದನು. ಕುಲೀನಪದ್ಧತಿಯೆಂದರೆ ಆ ದೇಶದಲ್ಲಿ ಅಗ್ರಗಣ್ಯರಾದ ಕುಲೀನ ಬ್ರಾಹ್ಮಣರಲ್ಲಿ ಒಬ್ಬೊಬ್ಬನು ೫೦-೬೦ ಮಂದಿ ಹೆಂಗಸರನ್ನು ಮದುವೆಯಾಗಿ, ಯಾವ ಹೆಂಡತಿಯ ತಂದೆಯು ಹೆಚ್ಚಾಗಿ ವರದಕ್ಷಿಣೆಯನ್ನೂ, ಕಾಣಿಕೆಗಳನ್ನೂ, ಕೊಡುವನೋ ಆ ಹೆಂಡತಿಯನ್ನು ಹೆಚ್ಚಾಗಿ ಆದರಿಸುತ್ತಾ, ಮಿಕ್ಕವರನ್ನು ಅಲಕ್ಷ್ಯದಿಂದ ತಿರಸ್ಕರಿಸುತ್ತಾ, ಆ ಬಾಲೆಯರನ್ನು ಹಲವು ಇಕ್ಕಟ್ಟುಗಳಿಗೆ ಸಿಕ್ಕಿಸುತ್ತಿರುವ ದುರಾಚಾರವು. ಈ ವಿಚಾರವು ಮುಖ್ಯವಾಗಿ ಕುಲೀನಬ್ರಾಹ್ಮಣರಲ್ಲಿಯೇ ಪ್ರಬಲಿಸಿದ್ದಿತು. ಈ ವಿದ್ಯಾಸಾಗರನ ಬಂಧುಗಳಲ್ಲಿ ಕೆಲವರು ಹೀಗೆಯೇ ಹಲವು ಯುವತಿಯರನ್ನು ಮದುವೆ ಮಾಡಿಕೊಂಡು, ಅವರಲ್ಲಿ ಅನೇಕರನ್ನು ಕಷ್ಟಪಡಿಸುತ್ತಾ, ಅವರ ಮುಖವನ್ನಾದರೂ ನೋಡದೆ, ನಿರಸಿಸುತ್ತಿದ್ದುದರಿಂದ ಅವರ ಸ್ಥಿತಿಯು ನೋಡಲಿಕ್ಕೆ ಶಕ್ಯವಿಲ್ಲದೆ ಇರುತ್ತಿತ್ತು. ಅವರ ಬಾಳಿಕೆಯೇ ಅವರಿಗೆ ದುರ್ಭರವಾಗಿ ತೋರುತ್ತಿದ್ದಿತು. ಇಂತಹ ದುರವಸ್ಥೆಯೆಂಬ ಸಮುದ್ರದಲ್ಲಿ ಮುಳುಗಿ ಹೋಗಿದ್ದ ಆ ಕನ್ಯಾಮಣಿಯರಲ್ಲಿ ಕರುಣಾರಾಶಿಯಾದ ವಿದ್ಯಾಸಾಗರನ ಬಂಧುಜನರಲ್ಲಿ ಒಬ್ಬಳು ಇದ್ದಳು. ಆಕೆಯು ಈತನ ಬಳಿಗೆ ಬಂದು ಲಜ್ಜಾದೈನ್ಯಗಳಿಂದ ಮೋರೆ ತಗ್ಗಿಸಿಕೊಂಡು, ನೇತ್ರಕಮಲಗಳಿಂದ ಸುರಿಯುವ ಅಶ್ರುಧಾರೆಯನ್ನು ಸೀರೆಯ ಸೆರಗಿನಿಂದ ಒರಸಿಕೊಳ್ಳುತ್ತಾ ಗದ್ಗದಕಂಠೆಯಾಗಿ, ಆ ಮಹಾನುಭಾವನ ಸಂಗಡ ತಮ್ಮ ದುರವಸ್ಥೆಯನ್ನು ಕುರಿತು ಹೀಗೆಂದು ಮೊರೆಯಿಟ್ಟುಕೊಂಡಳು.

" ಎಲೈ ಕರುಣಾಸಾಗರನೇ! ಈ ಭರತಖಂಡದಲ್ಲಿ ಪತಿಯ ಮೃತ-ಕಳೇಬರದೊಂದಿಗೆ ಕಲೆತು ಬೆಂಕಿಯಲ್ಲಿ ಬಿದ್ದು ಘೋರ ಮರಣಾರ್ತಿಯನ್ನು ಹೊಂದಬೇಕಾದ ವಿಧವೆಯರಿಗೆ ಅವರ ಪಾಲಿನ ವಿಧಿಯಂತೆ ಜನ್ಮಿಸಿ, ಪ್ರಾಣಗಳನ್ನೊಪ್ಪಿಸಿ, ಮಾತೃದೇಶಕ್ಕೂ, ಮಾನವಜಾತಿಗೂ ಮಹೋಪಕಾರವನ್ನು ಮಾಡಿದ ಪುರುಷಾವತಂಸನಾದ ಶ್ರೀ ರಾಜಾ ರಾಮಮೋಹನರಾಯರು, ಆ ಸಹಗಮನ ಘೋರದುರಾಚಾರವ್ಯಾಘ್ರಮುಖದಿಂದ ಆ ಮಹಾತ್ಮನ ಅನುಗ್ರಹದಿಂದ ತಪ್ಪಿಸಿಕೊಂಡ ವಿತಂತುಗಳನ್ನು ಯಾವಜ್ಜೀವಪರ್ಯಂತವೂ ಅನುಭವಿಸಬೇಕಾದ ಐಹಿಕ ನರಕವಾದ ವೈಧವ್ಯದುಃಖದದೆಸೆಯಿಂದ ಬಿಡುಗಡೆ ಮಾಡಿಸಿ ಸೌಖ್ಯವನ್ನುಂಟುಮಾಡಿದ ಪರಮ ಪ್ರಜ್ಞಾಸಾಗರರಾದ ವಿದ್ಯಾಸಾಗರರು ತಾವು. ಅಂತಹ ಮಹಾನುಭಾವರಾದ ತಮ್ಮ ಸನ್ನಿಧಿಯಲ್ಲಿ ಕಾರ್ಯಾರ್ಥಿಯಾಗಿ ಹೆಂಗಸಾದ ನಾನು ಮಾಡಲಿಕ್ಕೆ ಯತ್ನಿಸಿದ ವಿಜ್ಞಾಪನೆಯನ್ನು ಲಾಲಿಸತಕ್ಕದ್ದು. ನಮ್ಮ ಕುಲೀನ ಬ್ರಾಹ್ಮಣರಲ್ಲಿ " ಕುಲೀನ ಪದ್ಧತಿ " ಎಂಬ ದುರಾಚಾರವು ಮುಖ್ಯವಾಗಿ ಬಡಕುಟುಂಬದಲ್ಲಿ ಹುಟ್ಟಿ ನಮ್ಮಂತಹ ಅಬಲೆಯರನ್ನು ಸಡಬಾರದ ಕಷ್ಟಗಳ ಪಾಲುಮಾಡಿ ಬಿಡುತ್ತಲಿದೆ. ಆದುದರಿಂದ ಎಲೈ ಆರ್ತಜನಬಂಧುವೇ! ಅಮಿತವಾದ ನಮ್ಮ ವ್ಯಥೆಯನ್ನು ತಪ್ಪಿಸಿ, ಪುಣ್ಯವನ್ನು ಸಂಪಾದಿಸಿಕೊ. ನಿನ್ನ ಹೊರತು ನಮ್ಮ ಮೊರೆಯನ್ನಾಲಿಸುವ ದಯಾಹೃದಯರೂ, ಸಮರ್ಥರೂ, ಮತ್ತಾರು ಕಾಣಿಸಲಿಲ್ಲ. " ಎಂದು ಕಣ್ಣೀರು ಕರೆದಳು. ಆಗ ವಿದ್ಯಾಸಾಗರನು ಶೋಕಾಯತ್ತಚಿತ್ತೆಯಾದ ಆ ಯುವತಿಯನ್ನು ಸಂತೈಸಿ ಹಿಂದೂಸಂಘದಲ್ಲಿ ವ್ಯಾಪಿಸಿರುವ ಈ ದುರಾಚಾರವನ್ನು ನಿರ್ಮೂಲ ಮಾಡುವುದಕ್ಕೆ ನಿಶ್ಚಯಿಸಿ, ಆಕೆಗೆ ತಕ್ಕ ಸಮಾಧಾನಗಳನ್ನು ಹೇಳಿ ಕಳುಹಿಸಿದನು.

ಮತ್ತು ಇಂತಹ ಸಂದರ್ಭವು ಮತ್ತೊಂದು ಸಂಭವಿಸಿತು. ನಮ್ಮ ವಿದ್ಯಾಸಾಗರನಿಗೆ ವಿದ್ಯಾರಂಭ ಮಾಡಿಸಿದ ಕಲಿಕಾಂತನೆಂಬ ಉಪಾಧ್ಯಾಯನನ್ನು ಕುರಿತು ಮೊದಲು ಬರೆದಿರುವ ವಿಷಯವು ವಾಚಕರಿಗೆ ಜ್ಞಾಪಕದಲ್ಲಿರಬಹುದು. ಆ ಕಲಿಕಾಂತನಿಗೆ ಹಲವರು ಭಾರ್ಯೆಯರಿದ್ದರು. ಅವರಲ್ಲಿ ಸುಮಾರು ಹದಿನೆಂಟು ವರುಷಗಳ ವಯಸ್ಸುಳ್ಳ ಯುವತಿಯೊಬ್ಬಳನ್ನು ಸಂಗಡ ಕರೆದುಕೊಂಡು ಒಬ್ಬ ಸ್ತ್ರೀಯು ವೀರಸಿಂಹಗ್ರಾಮದಲ್ಲಿದ್ದ ವಿದ್ಯಾಸಾಗರನ ಮನೆಗೆ ಬಂದು ಆತನನ್ನು ನೋಡಿ, ತಾನು ಕಲಿಕಾಂತನ ಪತ್ನಿ

ಯರಲ್ಲಿ ಒಬ್ಬಳೆಂದು ತಿಳಿಸಿ, ಇಂತೆಂದಳು. ಅಯ್ಯಾ! ನನ್ನ ಮಗಳು ಕುಲೀನ ಬ್ರಾಹ್ಮಣರಲ್ಲಿ ಒಬ್ಬ ದೊಡ್ಡ ಮನುಷ್ಯನಿಗೆ ಕೊಟ್ಟು ಮದುವೆ ಮಾಡಲ್ಪಟ್ಟಳು. ಅವನಿಗೆ ಇವಳಲ್ಲದೆ ಇನ್ನೂ ನಾಲ್ವತ್ತು ಮಂದಿ ಭಾರ್ಯೆಯರಿರುವರು. ಸಾಮಾನ್ಯವಾಗಿ ಕುಲೀನರೆಲ್ಲರೂ, ಮಾಡುವ ಹಾಗೆಯೇ ಈತನೂ ವರಶುಲ್ಕವೇ ತನಗೆ ಧನಾರ್ಜನೆಯ ವ್ಯಾಪಾರವಾಗಿ ಏರ್ಪಡಿಸಿಕೊಂಡನು. ಆದುದರಿಂದ ತನಗೆ ವಿಶೇಷವಾಗಿ ದಕ್ಷಿಣೆ ಕೊಡಲುಳ್ಳ ಧನಿಕರ ಹೆಣ್ಣು ಮಕ್ಕಳನ್ನೇ ದಯೆಯಿಂದ ಆದರಿಸುತ್ತಾ, ಉಳಿದವರ ಕಷ್ಟಸುಖಗಳನ್ನು ವಿಚಾರಿಸದೆ ಇದ್ದನು. ವರದಕ್ಷಿಣೆಗಳಿಂದಲೂ, ಕಾಣಿಕೆಗಳಿಂದಲೂ, ನನ್ನ ಅಳಿಯನನ್ನು ತೃಪ್ತಿಪಡಿಸುವಷ್ಟು ಐಶ್ವರ್ಯವು ನನ್ನಲ್ಲಿಲ್ಲ. ನನ್ನ ಏಕಪುತ್ರನ ಆಧಾರದಿಂದಲೇ ನಾನು ಜೀವಿಸುತ್ತಿದ್ದೇನೆ. ಆತನೂ ಸಾಮಾನ್ಯ ಸ್ಥಿತಿಯಲ್ಲಿಯೇ ಇರುವವನಾದ್ದರಿಂದ ಈ ದುರದೃಷ್ಟವಂತೆಯು ನಿಜವಾಗಿ ನೋಡಿದರೆ ವೈಧವ್ಯದ ದೆಶೆಗೆ ಸಮಾನವಾದ ಜೀವಿತವನ್ನೇ ಕಳೆಯುತ್ತಿರುವಳು. ಈಗ ಆತನು ಈಕೆಯನ್ನು ಪೋಷಿಸುವುದಕ್ಕೊಡಂಬಡಲಿಲ್ಲ. ಆದುದರಿಂದ ಅನಾಥೆಯಾದ ನನ್ನ ಮಗಳೊಡನೆ ನಾನು ಮನೇ ಬಿಟ್ಟು ಹೊರಟು ಎಲ್ಲಿಯಾದರೂ ತಲೆತಪ್ಪಿಸಿಕೊಳ್ಳುವುದಕ್ಕೆ ಹೊರಟೆವು. ತರುವಾಯ ನಾವು ಒಬ್ಬ ಸಮೀಪ ಬಂಧುವಿನ ಮನೆಗೆ ಹೋದೆವು. ಆ ದೊಡ್ಡ ಮನುಷ್ಯನು ನಮ್ಮನ್ನು ದಾಸಿಯರನ್ನಾಗಿ ಇಟ್ಟುಕೊಳ್ಳಲಿಕ್ಕೆ ಕೂಡ ಸಮ್ಮತಿಸಲಿಲ್ಲ. ತರುವಾಯ ನನ್ನ ಸವತಿಯ ಮಗನೊಬ್ಬನು ನಮ್ಮನ್ನು ಆದರಿಸಿದ್ದರಿಂದ ಆತನ ಬಳಿಗೆ ಸೇರಿ ನಾವಿಬ್ಬರೂ ಕೆಲವು ದಿನಗಳತನಕ ಜೀವಯಾತ್ರೆಯನ್ನು ನಡಿಸಿದೆವು. ಅಯ್ಯೋ! ನಮ್ಮ ಕಷ್ಟಗಳನ್ನೆಷ್ಟೆಂದು ಹೇಳಿಕೊಳ್ಳೋಣ. ಕೆಲವು ಕಾಲ ಹಾಗೆ ವಾಸಮಾಡಿಕೊಂಡಿದ್ದ ಮೇಲೆ ಅವನ ಮನೆಯಲ್ಲಿನ ಹೆಂಗಸರು ನಮ್ಮನ್ನು ನಿರ್ದಯೆಯಿಂದಲೂ, ತಿರಸ್ಕಾರಭಾವದಿಂದಲೂ ನೋಡುತ್ತಾ ನಮಗೆ ಹಲವು ತೊಂದರೆಗಳನ್ನು ಕೊಡುತ್ತಾ ಬಂದುದರಿಂದ ಆ ಬಾಧೆಗಳಿಗೆ ತಡೆಯಲಾರದೆ ಆತನ ಆಶ್ರಯವನ್ನು ತೊರೆದು ಬಂದೆವು. ಇಂತಹ ಅಸಹಾಯಸ್ಥಿತಿಯಲ್ಲಿರುವ ನಾವು ಸಾಮಾನ್ಯವಾಗಿ ಮಾನವತಿಯರಾದ ಸ್ತ್ರೀಯರು ಕಷ್ಟಕಾಲದಲ್ಲಿ ಮಾಡುವ ಅವಿವೇಕಕೃತ್ಯವಾದ ಆತ್ಮಹತ್ಯೆಯ ಕೆಲಸಕ್ಕೆ ಮಾತ್ರ ಏತಕ್ಕೆ ಪ್ರಯತ್ನ ಮಾಡದೆ ಹೋದೆವೋ ಕಾಣೆನು. ಆಗ ವೀರಸಿಂಹಗ್ರಾಮದಲ್ಲಿ ಬಡವರಿಗೂ ಅನಾಥರಿಗೂ ಕಷ್ಟಗಳನ್ನು ವಿಚಾರಿಸಿ

ಸಹಾಯ ಮಾಡತಕ್ಕ ಪುರುಷಶ್ರೇಷ್ಠನೊಬ್ಬನಿರುವನೆಂದು ಕೇಳಿ, ತುಂಬ ಆಶೆಯಿಂದ ಇಲ್ಲಿಗೆ ಓಡಿ ಬಂದೆವು. ಸಿಭಾಗ್ಯವಂತೆಯರಾದ ನಮ್ಮ ಚರಿತ್ರೆಯು ಇಷ್ಟೆ!" ಎಂದು ಬಿನ್ನವಿಸಿ ಕಣ್ಣೀರು ಕಾಲುವೆಯಾಗಿ ಹರಿಯಲು ದುಃಖಿಸುತ್ತಾ ಅಡಗಿಕೊಂಡು ನಿಂತಿದ್ದ ಯುವತಿಯರನ್ನು ನೋಡಿ ವಿದ್ಯಾಸಾಗರನು ವಿಷಾದಮಗ್ನಮಾನಸಿಯರಾಗಿದ್ದ ಆ ತಾಯಿಮಕ್ಕಳನ್ನು ತುಂಬ ದಯೆಯಿಂದ ಆದರಿಸಿ ಸಮುಚಿತಗೌರವದಿಂದ ಸಂತೈಸಿ, ಹೀಗೆ ಪ್ರತ್ಯುತ್ತರವಿತ್ತನು. "ಅಮ್ಮಾ! ಹೆದರಬೇಡಿರಿ. ನಿಮ್ಮ ತೊಂದರೆಗಳನ್ನೆಲ್ಲಾ ಹೇಗಾದರೂ ತಪ್ಪಿಸಬೇಕೆಂದು ಸಂಕಲ್ಪಿಸಿರುವೆನು. ಆದರೆ ಮತ್ತೊಂದು ವಿಷಯವನ್ನು ಹೇಳುವೆನು. ಕೇಳಿರಿ, ಈ ಲೋಕದಲ್ಲಿ ಯಾವ ಮನುಷ್ಯನೇ ಆದರೂ ದಾರಿದ್ರ್ಯಪೀಡಿತನಾಗಿ ಹೀನದೆಶೆಗೆ ಬಂದಾಗ ಎಷ್ಟು ಆಪ್ತರಾಗಿದ್ದರೂ ಬಂಧುಗಳ ಬಳಿಗೆಹೋಗಿ ಸೇರಬಾರದು. ಬಡತನಬಂದಾಗ ನೆಂಟರಬಾಗಿಲ ಸೇರಬಾರದು. ಎಂಬ ದಾಸರ ಪದವನ್ನು ಬಾಲ್ಯದಲ್ಲಿಯೇ ನಿಮ್ಮ ಗುರುಗಳು ಬೋಧಿಸಿರುವುದನ್ನು ಮರೆತಿರಾ? ಮತ್ತು ಈವಿಷಯವನ್ನು ಕುರಿತು ಅನುಭವಶಾಲಿಗಳಾದ ಪಂಡಿತವರ್ಯರು ಹೇಳಿರುವುದನ್ನು ಕೇಳಿ

ಶ್ಲೋಕ॥ ವರಮಸಿಧಾರಾ ತರುತಲವಾಸೋ।
ವರಮಿಹಭಿಕ್ಷಾ, ವರಮುಪವಾಸ:॥
ವರಮತಿ ಘೋರೇ ನರಕೇ ಪತನಂ।
ನ ಚ ಧನ ಗರ್ವಿತಬಾಂಧವ ಶರಣಂ॥

" ಎಂದರೆ ಹರಿತವಾದ ಕತ್ತಿಯ ಬಾಯಲ್ಲಿಯಾದರೂ. ಮರದ ನೆರಳಿನಲ್ಲಿಯಾದರೂ, ವಾಸಮಾಡಬಹುದು. ಗತಿಯಿಲ್ಲದಾಗ ಭಿಕ್ಷೆಯನ್ನೆತ್ತಿಕೊಂಡಾದರೂ ಜೀವಿಸಬಹುದು. ಅಥವಾ ನಿರಾಹಾರವಾಗಿ ಹಸಿದುಕೊಂಡಿರಬಹುದು. ಅಥವಾ ತುಂಬ ಭಯಂಕರವಾದ ನರಕದಲ್ಲಿ ಬಿದ್ದು ಆ ದುಃಖವನ್ನಾದರೂ ಸಹಿಸಬಹುದು. ಆದರೆ ಧನಮದಾಂಧರಾದ ಬಂಧುಗಳ ಮರೆಹೊಕ್ಕು ಸಹಿಸಲಾಗದು."

ಆದುದರಿಂದ ನೀವು ನಿಮ್ಮ ಬಂಧುಗಳ ಬಳಿ ಸೇರಿದುದೇ ನಿಮ್ಮ ಕಷ್ಟದು:ಖಗಳು ಅತಿಶಯವಾಗಲಿಕ್ಕೆ ಕಾರಣವಾಯಿತು. ಎಂದು ಅವರಿಗೆ ನೀತಿಬೋಧೆಯನ್ನು ಮಾಡಿ, ಅವರಿಗೆ ತಾನು ಮೊದಲು ಮಾಡಿದ ವಾಗ್ದಾನದಂತೆ ಆ ದಿನ ಸಾಯಂಕಾಲ ಆ ನಾರೀಮಣಿಯ ಪತಿಯೂ, ತನ್ನ ಪೂರ್ವದ

ಉಪಾಧ್ಯಾಯನೂ ಆದ ಕಲಿಕಾಂತ ಚತರ್ಜಿಯವರನ್ನು ಕರೆಯಿಸಿಕೊಂಡು, ಆತನ ಹೆಂಡತಿ ಮತ್ತು ತಾಯಿ ಇವರಿಬ್ಬರ ಸಂರಕ್ಷಣಾರ್ಥವಾದ ಖರ್ಚುಗಳನ್ನೆಲ್ಲಾ ತಾನೇ ಭರಿಸುವೆನೆಂತಲೂ, ಕಲಿಕಾಂತನು ಅವರನ್ನು ಕುರಿತು ತಕ್ಕ ಎಚ್ಚರಿಕೆ ಮಾತ್ರ ತೆಗೆದುಕೊಳ್ಳಬೇಕೆಂತಲೂ, ಆತನಿಗೆ ವಿಜ್ಞಾಪಿಸಿದನು. ಆ ಮೇರೆಗೆ ಆತನನ್ನೊಡಂಬಡಿಸಿ, ತನ್ನ ವಾಗ್ದಾನದಂತೆ ತಾನು ಬದುಕಿರುವತನಕ ಅವರನ್ನು ಪೋಷಿಸಿ, ಅವರ ಕಷ್ಟಗಳನ್ನು ತೊಲಗಿಸಿದನು. ತರುವಾಯ ಆತನು ಈ ವಿಷಯವಾಗಿ ತನ್ನ ಶಕ್ತಿಯನ್ನೆಲ್ಲಾ ಧಾರೆಯೆರೆದನು. ಹಿಂದೂ ಜನರಲ್ಲಿನ ಕುಲೀನ ಪದ್ಧತಿಯನ್ನು ತಪ್ಪಿಸಲಿಕ್ಕೆ ತಕ್ಕ ಕಾನೂನನ್ನು ಏರ್ಪಡಿಸಬೇಕೆಂದು ಸರಕಾರದವರನ್ನು ಪ್ರಾರ್ಥಿಸಿ ೧೮೫೫ ನೇ ಡಿಶಂಬರ್ ೨೭ ನೇ ತಾರೀಖಿನಲ್ಲಿ ೨೫ ಸಾವಿರ ಜನರ ಸಹಿ ಮಾಡಿಸಿ, ಪ್ರಭುತ್ವದವರಿಗೆ ಒಂದು ಮಹಜರನ್ನು ದಾಖಲ್ ಮಾಡಿಸಿದನು. ಅದರಲ್ಲಿ ಬರದ್ವಾನ್ ಮಹಾರಾಜರಾದ ಮಹತಪ್‌ಚಂದ್ರಬಹದ್ದರವರೂ ಅನೇಕ ವಿದ್ಯಾಧಿಕ ಧನಸಂಪನ್ನರಾದ ದೊಡ್ಡ ಮನುಷ್ಯರೂ ಕೈಬರಹ ಹಾಕಿದ್ದರು. ಸ್ಥಳಸಂಕೋಚದಿಂದ ಅದನ್ನೆಲ್ಲ ಇಲ್ಲಿ ಉದಾಹರಿಸದೆ ವಾಚಕರ ತಿಳುವಳಿಕೆಗೋಸ್ಕರ ಅಲ್ಲಲ್ಲಿ ಸ್ವಲ್ಪ ಭಾಗಗಳನ್ನು ಮಾತ್ರ ಇಲ್ಲಿ ಭಾಷಾಂತರಿಸಿರುವೆವು.

"............ಕುಲೀನರು ವಿವಾಹಗಳನ್ನು ಧನಾಶಾಪಾಶಬದ್ಧರಾಗಿಯೇ ಮಾಡುತ್ತಿರುವರು. ಆದರೆ ನಿಜವಾಗಿ ವೈವಾಹಿಕ ವಿಧ್ಯುಕ್ತಗಳನ್ನು ನೆರವೇರಿಸುವ ಅಭಿಪ್ರಾಯವು ಅವರಲ್ಲಿ ರವೆಯಷ್ಟಾದರೂ ಕಾಣಬಾರದು. ಆದುದರಿಂದ ಈ ಪ್ರಕಾರ ಹೆಸರಿಗೆ ಮಾತ್ರವೇ ಮದುವೆ ಮಾಡಿಕೊಂಡ ಹೆಂಗಸರು ಈ ಪತಿಗಳಿಂದ ಲೇಶವಾದರೂ ಸುಖವನ್ನು ಪಡೆಯದೆ, ಬೇರೆ ಮಾರ್ಗವು ಯಾವುದೂ ತೋರದೆ, ತಮ್ಮ ದುರದೃಷ್ಟಕ್ಕೆ ವಿದ್ಯಾವಿಹೀನತೆಯು ಸಹಾಯವಾಗಲು ಕೊಟ್ಟ ಕೊನೆಗೆ ನೀತಿಬಾಹ್ಯವಾದ ನಡತೆಗಳಲ್ಲಿ ಬೀಳುವರು.

........ಈ ಆಚಾರವು ಅಶಾಸ್ತ್ರೀಯವೆಂದು ಹಿಂದೂ ಧರ್ಮಶಾಸ್ತ್ರಗಳು ಉದ್ಘೋಷಿಸುತ್ತಲಿದ್ದರೂ ಇದರ ಸಂಸ್ಕರಣವು ಪ್ರಸ್ತುತಸಾಂಘಿಕ ದುಸ್ಥಿತಿಯಲ್ಲಿ ಬಹು ಜನರ ಅಭಿಪ್ರಾಯಗಳಿಗೂ ಆಚಾರಗಳಿಗೂ, ಭಿನ್ನ

ವಾಗಿ ಕಾಣಬರುವುದರಿಂದ ಅದನ್ನು ತೊಲಗಿಸುವುದು ತುಂಬ ಅಸಾಧ್ಯವು. ಆದುದರಿಂದ ಅದಕ್ಕೆ ತಕ್ಕ ಚಿಕಿತ್ಸೆ ಆವಶ್ಯಕವೆಂದರೆ ಪ್ರಭುತ್ವದವರ ಶಾಸನ ನಿರ್ಮಾಣಕ್ಕೆ ಮೀರಿದುದು ಯಾವುದೂ ಇಲ್ಲವು.

ಹೀಗೆ ಒಂದು ವರುಷದಲ್ಲಿಯೇ ಸರಕಾರದವರಿಗೆ ಅನೇಕ ಮನವಿಗಳು ಕೊಡಲ್ಪಟ್ಟವು. ಅದರಲ್ಲಿ ಮುಖ್ಯವಾಗಿ ನದ್ಯಾಮಹಾರಾಜರಾದ ಸತೀಶಚಂದ್ರರಾಯ ಬಹದೂರರವರೂ, ದೀನಾಜೀಪುರದ ರಾಜರವರೂ, ಮೊದಲಾದವರು ಸೇರಿದ್ದರು. ೧೮೫೬ನೇ ಜುಲೈ ೨೨ನೇ ತಾರೀಖಿನದಿನ ಧಾಕಾ ಜಮೀನದಾರರಾದ ಬಾಬೂರಾಜ ಮೋಹನರಾಯರವರು ದಾಖಲ್ ಮಾಡಿದ ಮಹಜರಿನಲ್ಲಿ ಬಹುಜನ ಸಂಸ್ಕೃತ ಪಂಡಿತರು ಕೂಡ ರುಜುಮಾಡಿದ್ದರು. ಅದರಲ್ಲಿ “ ಬಾಲೆಯರಿಗೆ ವಿವಾಹವಾದ ಮೇಲೆ ಅವರ ಗಂಡಂದಿರು ಅವರನ್ನು ಕುರಿತು ತಕ್ಕ ಎಚ್ಚರಿಕೆ ತೆಗೆದುಕೊಳ್ಳದೇ ಬಿಡುವುದರಿಂದ ಸಾಮಾನ್ಯವಾಗಿ ಅವರು ತಾಯಿತಂದೆಗಳ ಸಂರಕ್ಷಣೆಯಲ್ಲಿಯೇ ಇದ್ದಾರೆ. ಅವರಿಗೆ ಹೆಸರಿಗೆ ಮಾತ್ರ ವಿವಾಹವಾಗುತ್ತಿದೆ. ಆದರೆ ಪಾಪ! ಗ್ರಹಚಾರವಶದಿಂದ ಹಾಗೆ ಮದುವೆ ಮಾಡಿಕೊಂಡ ಆ ಪತಿಯು ಮೃತನಾದ ತರುವಾಯ ಶಾಸ್ತ್ರಾಚಾರಾದಿಗಳಿಂದ ಹಿಂದೂ ವಿಧವೆಯರಿಗೆ ಸಂಭವಿಸುವ ದುರವಸ್ಥೆಗಳನ್ನೆಲ್ಲಾ ಅವರು ಅನುಭವಿಸಬೇಕಾಗಿದೆ. ” ಈ ಪ್ರಕಾರ ಹಲವು ವಾಕ್ಯಗಳಿರುವವು.

ಆದರೂ ಅರ್ಜಿದಾರರ ಪ್ರಯತ್ನಗಳೆಲ್ಲವೂ ನಿಷ್ಫಲಗಳಾದುವು. ಹಿಂದೂಜನ ಬಾಹುಳ್ಯಾಭಿಪ್ರಾಯಗಳಿಗೆ ವಿರೋಧವಾಗಿ ಇದುವರೆಗೇ ಸರಕಾರದವರು ಸ್ತ್ರೀಪುನರ್ವಿವಾಹದ ಕಾನೂನನ್ನು ಜಾರಿಯಲ್ಲಿ ತಂದರು. ಆದುದರಿಂದ ಬಹುಜನಾಭಿಪ್ರಾಯಕ್ಕೆ ವ್ಯತಿರೇಕವಾಗಿರುವ ಕಾನೂನು ಮತ್ತೊಂದನ್ನು ಏರ್ಪಾಡು ಮಾಡಲಿಕ್ಕೆ ಅವರು ಮುಂದುವರಿಯದೆ ಹೋದರು. ಇದಲ್ಲದೆ ೧೮೫೭ನೇ ಸಂವತ್ಸರದಲ್ಲಿ ಜರುಗಿದ ಸಿಪಾಯಿಗಳ ದೊಡ್ಡದಂಗೆಯ ಸಂಗತಿಯನ್ನು ದೇಶಚರಿತ್ರೆಗಳನ್ನೋದುವವರೆಲ್ಲರೂ ತಿಳಿದೇ ಇದ್ದರೂ ತದಿತರರ ತಿಳುವಳಿಕೆಗಾಗಿ ಇಲ್ಲಿ ಸ್ವಲ್ಪ ಮಟ್ಟಿಗೆ ಪ್ರಸಂಗಿಸುವೆವು.

ಸ್ವಲ್ಪ ಹೆಚ್ಚು ಕಡಿಮೆ ಉತ್ತರಹಿಂದುಸ್ಥಾನದ ಪ್ರಭುತ್ವದವರ ಸೇನಾನಿವಾಸಸ್ಥಾನಗಳಲ್ಲಿನ ಶಿಪಾಯಿಗಳೆಲ್ಲರೂ ಸರಕಾರದವರ ಮೇಲೆಯೇ

ತಿರುಗಿ ಬಿದ್ದರು. ದೊರೆತನದವರಿಗೆ ಅಧೀನರಾಗಿ ಜೀವಿಸುವ ಇವರು ತಮ್ಮ ಯಜಮಾನರ ಮೇಲೆ ತಿರುಗಿ ಬೀಳುವಷ್ಟು ಕೃತಘ್ನರೇ ಎಂದು ಸಾಮಾನ್ಯವಾಗಿ ಯಾರಾದರೂ ಪ್ರಶ್ನಮಾಡಬಹುದು. ಆದರೆ ಈ ಊಹೆ ತಪ್ಪು. ಆ ದಂಗೆಗೆ ಮುಖ್ಯಕಾರಣಗಳು ಯಾವುವೆಂದರೆ—

೧. ತತ್ಪೂರ್ವದಲ್ಲಿ ಗವರ್ನರ್‌ಜನರಲ್ ಆಗಿದ್ದ ಡಾಲ್‌ಹೂಸಿ ಪ್ರಭುಗಳವರು ಸ್ವದೇಶಪ್ರಭುಗಳ ಕಡೆಯಿಂದ ದೇಶಗಳನ್ನು ಸಂಪಾದಿಸಿ ಇಂಡಿಯಾದಲ್ಲಿ ಬ್ರಿಟೀಷ್ ರಾಜ್ಯವನ್ನು ವಿಸ್ತಾರಗೊಳಿಸಿದರು.

೨. ರಾಜ್ಯಪದಭ್ರಷ್ಟರಾದ ದೇಶೀಯ ಪ್ರಭುಗಳಿಗೆ ಕೆಲವು ಅಕ್ರಮಗಳು ಜರುಗಿದವು.

೩. ನೂತನವಾಗಿ ಏರ್ಪಾಡು ಮಾಡಲ್ಪಟ್ಟ ತಂತಿಯ ಟಪಾಲು, ರೇಲ್ವೆ ಮುಂತಾದ ಅದ್ಭುತವಿಷಯಗಳಿಂದ ಅವಿವೇಕಿಗಳಾದ ಪ್ರಜೆಗಳು ದುರ್ಭ್ರಾಂತಿಯುಕ್ತಮನಸ್ಕರಾದರು. ಎಂದು ಇತಿಹಾಸಕಾರರು ಕೆಲವರು ಬರೆದಿರುವರು. ಈ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿರುವುದರಿಂದ ಇದು ಎಷ್ಟರ ಮಟ್ಟಿಗೆ ಆದರಣೀಯವೋ ನಾವು ಊಹಿಸಲಾರದೆ ಇರುವೆವು.

೪. ಸ್ತ್ರೀಪುನರ್ವಿವಾಹಶಾಸನ ನಿರ್ಮಾಣವೇ ಮೊದಲಾದ ಮತ ಸಂಬಂಧವಾದ, ಪ್ರಜೆಗಳಿಗೆ ಅಸೂಯವನ್ನುಂಟುಮಾಡುವ ಕಾರ್ಯಗಳಲ್ಲಿ ಸರ್ಕಾರದವರು ಸಂಬಂಧವನ್ನುಂಟುಮಾಡಿಕೊಂಡದ್ದು. ಇವೇ ಮೊದಲಾದ ಇನ್ನೂ ಕೆಲವು ಕಾರಣಗಳಿರುವುವು.

ಈ ಕಾರಣಗಳಿಂದ ಸಿಪಾಯಿಗಳೆಲ್ಲರೂ ರಾಜದ್ವೇಷಬುದ್ಧಿಯುಳ್ಳವರಾಗಿ ಪ್ರಾರಂಭದಲ್ಲಿ ಬರಹಾಂಪುರ, ಮೀರತ್ತು, ದೆಹಲಿ, ಲಕ್ನೋ, ಕಾನ್ಪುರ ಮೊದಲಾದ ಕಡೆಗಳಲ್ಲಿದ್ದವರೆಲ್ಲರೂ, ಏಕಗ್ರೀವರಾಗಿ ಎದುರುಬಿದ್ದು, ಕ್ರೋಧಾವಿಷ್ಟರಾಗಿ ತಮ್ಮಮೇಲಿನ ಅಧಿಕಾರಿಗಳಲ್ಲಿ ಹಲವರನ್ನು ಕೊಂದುಹಾಕಿದರು. ಇಂಗ್ಲೆಂಡಿನ ಸರ್ಕಾರದವರು ಸಹ ಭಯಪಟ್ಟರು. ಆ ಕಾಲದಲ್ಲಿ ಲೋಕವಿಶ್ರುತ ಬಲಪರಾಕ್ರಮಶಾಲಿಗಳಾದ ಪಂಜಾಬ ರಾಷ್ಟ್ರದಲ್ಲಿನ ಸಿಕ್ಕರೆಂಬ ಒಂದು ಜಾತಿಯ ದೇಶೀಯರೇ ಸರಕಾರದವರ ಪಾಲಿನ ಸಂಜೀವಿನಿಯಂತೆ ಅವರಿಗೆ ಸಹಾಯವನ್ನು ಮಾಡಿ, ಸ್ವದೇಶೀಯರೊಂದಿಗೆ ಹೋರಾಡಿ ಸರಕಾರದವರಿಗೆ ಬರುವ ಅಪಾಯವನ್ನು ತಪ್ಪಿಸಿದರು.

ಈ ಸಂದರ್ಭದಲ್ಲಿ ಸ್ತ್ರೀಪುನರ್ವಿವಾಹಶಾಸನನಿರ್ಮಾಣಾದಿ ಕೆಲಸಗಳು ಯುಕ್ತವಾದವುಗಳೇ, ಸಾಧ್ಯಗಳೇ ಎಂದು ವಿಚಾರಿಸಬಾರದು. ಇಲ್ಲಿ ಗಮನಿಸಬೇಕಾದ ವಿಷಯಗಳೇನಂದರೆ— ಬಹುಜನಾಭಿಪ್ರಾಯಾನುಸಾರವಾಗಿ ಕಾರ್ಯಗಳನ್ನು ನೆರವೇರಿಸುವುದು ಶ್ರೇಯಸ್ಕರವಾದುದು. ಸರ್ವ ಜನರಿಗೂ ಅನುಕೂಲವಾದ ಕಾರ್ಯಕ್ರಮವೇ ಧರ್ಮವೆಂತಲೂ, ಪ್ರತಿಕೂಲವಾದ ಕಾರ್ಯಕ್ರಮವೇ ಅಧರ್ಮವೆಂತಲೂ ಪರಿಗಣಿಸಲ್ಪಡುವುದು. ಪುಣ್ಯಪಾಪಗಳೆಂದರೆ ಇವೇ ಅಲ್ಲವೆ? ಬಹುಜನರಿಗೆ ಹಿತವಾಗಿ ಅವರ ಸೌಖ್ಯಸಂದಾಯಕಗಳಾಗುವವೇ ಪುಣ್ಯಕಾರ್ಯಗಳು. ತದ್ವ್ಯತಿರಿಕ್ತ ಕಾರ್ಯಗಳೇ ಪಾಪಕೃತ್ಯಗಳೆನಿಸುವುವು. ಜನಸಂಘದ ಆಚಾರ-ಸ್ವಭಾವ-ವರ್ತನ-ಭಾವಾದಿಗಳು ಭಿನ್ನಗಳಾಗಿರುವಂತೆ ಅವರಲ್ಲಿ ಪ್ರವೃತ್ತಗಳಾಗುವ ಧರ್ಮಗಳೂ ಭಿನ್ನಗಳಾಗುವುವು. ಆದುದರಿಂದ ಒಂದು ಜಾತಿಯವರಿಗೆ ಅವಶ್ಯಕರಣೀಯಗಳಾದ ಕಾರ್ಯಗಳು ಮತ್ತೊಂದು ಜಾತಿಯವರಿಗೆ ಭಯಂಕರ ಪಾಪಕೃತ್ಯಗಳಾಗಿ ತೋರುವುವು. ಚಿಕ್ಕಪ್ಪ, ದೊಡ್ಡಪ್ಪ, ಇವರ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಳ್ಳುವುದು ಪರಮಧರ್ಮನಿದಾನವಾದ ಕಾರ್ಯವೆಂದು ಮಹಮ್ಮದೀಯರು ಭಾವಿಸುವರು. ಅದೇ ಘೋರ ಪಾಪಕೃತ್ಯವೆಂದು ಹಿಂದೂಜನರು ತಿಳಿಯುವರು. ಆದುದರಿಂದ ಯಾವ ಜಾತಿಯಲ್ಲಿ ಯಾವುದು ಸರ್ವಜನ ಸಮಾದರಣೀಯವಾಗಿರುವುದೋ ಅಂಥ ಕಾರ್ಯವು ಪುಣ್ಯಕಾರ್ಯವಾಗಿ ಆ ಜಾತಿಯವರಿಂದ ತಿಳಿಯಲ್ಪಡುವುದು. ಒಂದು ಜಾತಿಯಲ್ಲಿಯೇ ಈ ಕಾಲದಲ್ಲಿ ಧರ್ಮವೆನಿಸಿರುವುದು, ಕೆಲವು ಕಾಲಾಂತರಗಳು ಕಳೆದ ಮೇಲೆ ಆ ಜಾತಿಯವರು ನಯ ವಿದ್ಯಾದಿಗಳಲ್ಲಿ ಅಭಿವೃದ್ಧಿ ಹೊಂದಿದ ಹಾಗೆಲ್ಲ ಅಧರ್ಮವೆನಿಸಿ ಬದಲಾಯಿಸುವುದೂ ಉಂಟು. ದೇವರನ್ಯಾಯ (ಗಂಡನು ಸತ್ತಮೇಲೆ ಮೈದುನನನ್ನು ಕೂಡಿ ಪುತ್ರರನ್ನು ಪಡೆವುದು )ವನ್ನು ಈ ಕಾಲದಲ್ಲಿ ಯಾರು ಆದರಿಸುವರು? ಮತಸಾಂಘಿಕ ರಾಜಕೀಯ ವಿಷಯಗಳಲ್ಲೆಲ್ಲ ಈ ಸಿದ್ಧಾಂತವೇ ಸತ್ಯವಾಗುವುದು. ಅರಸರು ಸರ್ವ ಪ್ರಜೆಗಳಿಗೂ ಅನುಕೂಲವಾದ ಕಾರ್ಯಗಳನ್ನು ಮಾಡುತ್ತಾ, ಅವರನ್ನು ಆಗಾಗ ವಿದ್ಯಾವಂತರನ್ನಾಗಿಯೂ, ವಿವೇಕಿಗಳನ್ನಾಗಿಯೂ ಮಾಡುತ್ತಿದ್ದರೆ ಅಧರ್ಮವು ಅಷ್ಟಕಷ್ಟಕ್ಕೆ ತನಗೆ ತಾನೇ ನಶಿಸುವುದು. ಇದನ್ನು ತಿಳಿದೇ ಪ್ರಭುತ್ವದವರು ಕುಲೀನಪದ್ಧತಿಯನ್ನು ಕುರಿತು, ಯಾವ ಶಾಸನವನ್ನಾಗಲಿ ಏರ್ಪಡಿ

ಸಲು ಮನಸ್ಸು ಕೊಡದೆ ಹೋದರೋ ಏನೋ? ಆದರೆ ವಿದ್ಯಾಸಾಗರನು ಅಸಾಧಾರಣ ಮನೋಬಲವನ್ನೂ, ಕಾರ್ಯನಿಶ್ಚಲತ್ವವನ್ನೂ, ದಾರ್ಢ್ಯವನ್ನೂ, ಉಳ್ಳವನಾಗಿದ್ದನಲ್ಲವೇ? ಆತನು ಅಡ್ಡಿ ಬಂದಕೂಡಲೇ ಹೆದರಿ ನಿರಾಶಗೊಳ್ಳುವಂತಹ ಭೀರುವಲ್ಲ. ತರುವಾಯ ೫ ವರುಷಗಳಾದ ಮೇಲೆ ಈ ವಿಷಯದಲ್ಲಿ ಮರಳಿ ಪ್ರಯತ್ನ ಮಾಡಿ ನೋಡೋಣವೆಂದು ತನ್ನ ಸ್ನೇಹಿತರನ್ನೆಲ್ಲಾ ಪ್ರೋತ್ಸಾಹಪಡಿಸಿ, ೧೮೯೯ ನೇ ವರುಷದಲ್ಲಿ ೨೧೦೦೦ ಮಂದಿಯ ಸಹಿ ಮಾಡಿಸಿ ಮತ್ತೊಂದು ಅರ್ಜಿಯನ್ನು ದಾಖಲು ಮಾಡಿಸಿದನು. ಅದರಲ್ಲಿ ಮುಖ್ಯವಾಗಿ ನದ್ಯಾಮಹಾರಾಜರಾದ ಸತೀಶಚಂದ್ರರಾಯ ಬಹದ್ದರವರೂ, ರಾಜಸತ್ಯಚರಣ ಘೋಷಾಲರವರೂ, ರಾಜಪ್ರತಾಪಚಂದ್ರ ಸಿಂಹ್ವರವರೂ, ಸೇರಿದ್ದರು. ಆಗ ಬಂಗಾಳಕ್ಕೆ ಲೆಫ್ಟಿನೆಂಟ್ ಗವರ್ನರರಾಗಿದ್ದ ಸರ್‌ಶಸಿಲ್, ಬೀಡರ್‌ಪ್ರಭುಗಳ ಸಮ್ಮುಖಕ್ಕೆ ಅರ್ಜಿದಾರರ ಪ್ರತಿನಿಧಿಗಳಾಗಿ, ರಾಜಸತ್ಯಾಚರಣ ಘೋಷಾಲ್, ಪಂಡಿತ ಭಾರತಚಂದ್ರಶಿರೋಮಣಿ, ಈಶ್ವರಚಂದ್ರ ವಿದ್ಯಾಸಾಗರ, ಪ್ರಸನ್ನಕುಮಾರ ಸರ್ವಾಧಿಕಾರಿ, ಮೊದಲಾದವರನ್ನು ನಿಯಮಿಸಿ, ೧೮೯೯ ನೇ ವರುಷ ಮಾರ್ಚಿ ೧೫ರಲ್ಲಿ ಕಳುಹಿಸಿದರು. ಅವರಲ್ಲಿ ಸತ್ಯಾಚರಣ ಘೋಷಾಲರವರು ಪ್ರಾಮುಖ್ಯತೆಯನ್ನು ವಹಿಸಿ ಗವರ್ನರವರ ಶಾಸನ ನಿರ್ಮಾಣ ಸಭಿಕರ ಸಮ್ಮುಖದಲ್ಲಿ ತಮ್ಮ ಆಗಮನಕ್ಕೆ ಕಾರಣವಾದ, ಕುಲೀನಪದ್ಧತಿಯಿಂದ ಉಂಟಾಗುವ ಹಲವು ಬಗೆಯಾದ ಕಷ್ಟಗಳನ್ನು ಸಹೇತುಕವಾಗಿ ಸ್ಪಷ್ಟೀಕರಿಸಿದರು. ವಿದ್ಯಾಸಾಗರರು ಏಕಪತ್ನೀವ್ರತದ ಆವಶ್ಯಕತೆಯನ್ನು ಶಾಸ್ತ್ರಪ್ರಮಾಣಸಹಿತವಾಗಿ ಸಿದ್ಧಾಂತೀಕರಿಸುತ್ತಾ, ಕುಲೀನಪದ್ಧತಿಯು ಅಶಾಸ್ತ್ರೀಯವೂ ಕ್ರೂರವೂ ಆದುದೆಂದು ಶ್ರೋತೃಗಳ ಮನಸ್ಸು ಕರಗುವಂತೆ ಉಪನ್ಯಾಸ ಮಾಡಿದರು.

ಶ್ಲೋಕ ॥ ಮದ್ಯಪಾsಸಾಧುವೃತ್ತಾ ಚ ಪ್ರತಿಕೂಲಾ ಚ ಯಾಭವೇತ್ ।
ವ್ಯಾಧಿತಾವಾಧಿವೇತ್ತ್ಯಸ್ಯ(?)ಹಿಂಸ್ರಾರ್ಥಘ್ನೀ ಚ ಸರ್ವದಾ ॥

ಎಂದರೆ ಪುರುಷನು ತನ್ನ ಹೆಂಡತಿ ಮದ್ಯಪಾನಾದಿ ದುರಭ್ಯಾಸಗಳಿಗೆ ಅವಕಾಶ ಕೊಟ್ಟವಳಾದರೂ, ಅಥವಾ ವಿಶ್ವಾಸವಿಲ್ಲದವಳಾದರೂ, ಅಥವಾ ಯಾವಾಗಲೂ ಪತಿಯ ಇಷ್ಟಕ್ಕೆ ವಿರೋಧವಾಗಿ ವರ್ತಿಸುವವಳಾದರೂ ಅಥವಾ ಸಿತ್ಯ ವ್ಯಾಧಿಗ್ರಸ್ತೆಯಾದರೂ, ದುರ್ನಯಚಿತ್ತಳಾದರೂ, ಹಣವನ್ನು

ಹಾಳುಮಾಡತಕ್ಕವಳಾದರೂ ಇವುಗಳಲ್ಲಿ ಯಾವ ದುರ್ಗುಣಗಳನ್ನಾದರೂ ಹೊಂದಿದ್ದಲ್ಲಿ ಆಕೆಯನ್ನು ಬಿಟ್ಟುಬಿಟ್ಟು ಬೇರೆ ಹೆಂಡತಿಯನ್ನು ಮದುವೆ ಯಾಗಬಹುದು.

ಶ್ಲೋಕ ॥ ವಂಧ್ಯಾಷ್ಟಮೇಧಿವೇ(?) ದ್ಯಬ್ದೇ ದಶಮೇ ತು ಮೃತಪ್ರಜಾ ।
ಏಕಾದಶೇ ಸ್ತ್ರೀಜವನೀ ಸದ್ಯಸ್ತ್ವಪ್ರಿಯವಾದಿನೀ ॥

"ಎಂದರೆ ಹೆಂಡತಿಯು ಬಂಜೆಯಾಗಿದ್ದಲ್ಲಿ ೮ನೆಯ ವರುಷದಲ್ಲಿಯೂ, ಆಕೆಯಲ್ಲಿ ಹುಟ್ಟಿದ ಮಕ್ಕಳು ಸಾಯುತ್ತಿದ್ದರೆ ೧೦ನೆಯ ವರುಷದಲ್ಲಿಯೂ, ಆಕೆಗೆ ಹೆಣ್ಣುಮಕ್ಕಳೇ ಆಗುತ್ತಿದ್ದರೆ ೧೧ನೆಯ ವರುಷದಲ್ಲಿಯೂ, ಆಕೆ ದುರ್ಭಾಷೆಗಳನ್ನಾಡುವವಳಾದರೆ ಕಾಲಹರಣ ಮಾಡದೆ ಆದೇ ನಿಮಿಷದಲ್ಲಿಯೂ, ಬಿಟ್ಟು ಪುರುಷನು ಮತ್ತೊಬ್ಬ ಹೆಂಡತಿಯನ್ನು ಮದುವೆಯಾಗಬಹುದು." ಎಂದು ಮನುಸ್ಮೃತಿಯಲ್ಲಿನ ಪ್ರಮಾಣಗಳನ್ನು ತಿಳಿಸುತ್ತಾ, ವಿದ್ಯಾಸಾಗರನು ಉಪನ್ಯಾಸ ಮಾಡಿದನು. ಇದರಿಂದ ಶಾಸನ ನಿರ್ಮಾಣವು ಆವಶ್ಯಕವೆಂದು ಗವರ್ನರವರಿಗೇನೇ ತಿಳಿದರೂ ಮೇಲೆ ವಿವರಿಸಿದ ಕಾರಣಗಳಿಂದ ಕಾರ್ಯಸಾಹಸ ಮಾತ್ರ ಮಾಡದೆ ಇದ್ದರು. ಆದುದರಿಂದ ವಿದ್ಯಾಸಾಗರನು ವಿತಂತುವಿವಾಹ ಪ್ರಯತ್ನದಂತೆಯೇ ಈ ಕಾರ್ಯದಲ್ಲಿಯೂ, ಸಫಲ ಮನೋರಥನಾಗದೆ ಇದ್ದನು. ಈ ವಿಷಯದಲ್ಲಿ ಈಗ ಬಂಗಾಳಾ ದೇಶದಲ್ಲಿನ ಸಂಘಸಂಸ್ಕರ್ತರು ಪ್ರಯತ್ನಪಡುತ್ತಲೇ ಇರುವರು. ಹಿಂದೂ ಜನರು ವೇದಶಾಸ್ತ್ರಗಳು ತಮಗೆ ಪ್ರಮಾಣಗಳೆಂದು ವಾದಿಸುವುದರಿಂದ ವಿತಂತುವಿವಾಹಾದಿಕಾರ್ಯಗಳು ಅಶಾಸ್ತ್ರೀಯಗಳಲ್ಲವೆಂದು ಪ್ರಮಾಣವಚನಗಳನ್ನು ತೋರಿಸಿದಲ್ಲಿ ಅವರು ಅಂಗೀಕರಿಸುವರೆಂದು ವಿದ್ಯಾಸಾಗರನು ಕೆಲವು ಕಾಲದತನಕ ನಂಬಿದ್ದನು. ಆದರೆ ಶಾಸ್ತ್ರಾಧಾರಗಳನ್ನು ತೋರಿಸಿದಮೇಲೆ ಕೂಡ ಅಂತವರು ಆ ಕಾರ್ಯವನ್ನು ನಿರಾಕರಿಸಿದಾಗ ಅವರು ವಾಸ್ತವವಾಗಿ ವೇದಶಾಸ್ತ್ರಾದಿಗಳಲ್ಲಿ ನಿಜವಾದ ನಂಬಿಕೆ ಇಲ್ಲದವರೆಂದು ಆತನು ಈಚೆಗೆ ತಿಳಿದುಕೊಂಡನು. ಹುಡುಗಿಯರಿಗಾಗಲಿ ಹುಡುಗರಿಗಾಗಲಿ ಕಡುಬಾಲ್ಯದಲ್ಲಿಯೇ ವಿವಾಹ ಮಾಡುವುದು ಶಾಸ್ತ್ರಸಮ್ಮತವಲ್ಲವೆಂತಲೂ, ದೇಶಕ್ಕಾಗಲಿ ಜನರಿಗಾಗಲಿ ಕ್ಷೇಮಕರವಾದುದಲ್ಲವೆಂತಲೂ, ಸಂಘಕ್ಕೆ ಇದು ಒಂದು ದುರಾಚಾರವೆಂತಲೂ, ಆತನು ಸಂಪೂರ್ಣವಾಗಿ ಕಂಡುಹಿಡಿದನು. ಆತನು ಈ

ಪ್ರಕಾರವಾಗಿ ತನ್ನ ಮಗಳಿಗೂ, ಗಂಡುಮಕ್ಕಳಿಗೂ, ಚೆನ್ನಾಗಿ ಪ್ರಾಯ ಬಂದಮೇಲೆಯೇ ಮದುವೆ ಮಾಡಿದನು. ಆತನು ಮಾಡಿದ ಸಂಘಸಂಸ್ಕರಣ ವನ್ನು ಕುರಿತು ಅವಕಾಶವಿರುವಮಟ್ಟಿಗೆ ಆಲೋಚಿಸಿದೆವು. ಇನ್ನು ಆತ ನು ಮಾಡಿದ ಮಹೋಪಕಾರಗಳನ್ನು ವಿಚಾರಿಸಿ ನೋಡೋಣ.

---

## ಮೂರನೆಯ ಅಧ್ಯಾಯ

### ಉದ್ಯೋಗ; ಲೋಕವ್ಯವಹಾರಧರ್ಮ; ವಿದ್ಯಾವ್ಯಾಪಕ

ಈಶ್ವರಚಂದ್ರ ವಿದ್ಯಾಸಾಗರನ ಜೀವಿತವೆಲ್ಲವೂ, ಅಗಣಿತಗಳಾದ ಸತ್ಯಾಚರಣೆಗಳಿಂದಲೂ, ಅದ್ಭುತಸದ್ಗುಣಸಂಪದದಿಂದಲೂ ತುಂಬಿದೆ. ಅಮಿತವಾದ ಪರಿಶ್ರಮ, ಅಧಿಕಕಾರ್ಯಾಸಕ್ತಿ, ಶಾಂತಿಯಿಂದ ಕೂಡಿದ ಕ್ಷಮೆ, ಬೇಸರವಿಲ್ಲದ ಹಿಡಿತ, ನಿಶ್ಚಿತವಾದ ಆತ್ಮಪ್ರತ್ಯಯ, ಎಲ್ಲರನ್ನು ಒಡಹುಟ್ಟಿದವರಂತೆ ನೋಡುವಿಕೆ, ಫಲಾಪೇಕ್ಷೆಯಿಲ್ಲದಿರುವಿಕೆ, ಕಷ್ಟದಲ್ಲಿ ಧೈರ್ಯ, ಐಶ್ವರ್ಯದಲ್ಲಿ ತಾಳ್ಮೆ, ಅಪಾರವಾದ ಭೂತದಯೆ, ಮಿತಿಯಿಲ್ಲದ ಸ್ವೇಚ್ಛಾಭಿಲಾಷೆ ನಿರುಪಮಾನವಾದ ಸ್ವಾರ್ಥತ್ಯಾಗ, ಅಸಾಧಾರಣವಾದ ಆತ್ಮಗೌರವ, ಮೊದಲಾದ ಸುಗುಣಗಳೆಲ್ಲವೂ ಈತನ ಜೀವಿತದಲ್ಲಿ ಯಾವಾಗಲೂ ಸಹಜಗಳಾಗಿಯೇ ಪ್ರದರ್ಶಿಸಲ್ಪಟ್ಟವೆ. ೧೮೪೧ ನೇಸಂವತ್ಸರದ ಡಿಸೆಂಬರು ತಿಂಗಳಲ್ಲಿ ವಿಲ್ಲಿಯಂದುರ್ಗಕಲಾಶಾಲೆಯ ( Fort Willium College ) ಅಧಿಕಾರಿಯಾದ "ಮಾರ್ಷಲ್" ದೊರೆಯವರು ವಿದ್ಯಾಸಾಗರನ ಯೋಗ್ಯತೆಯನ್ನು ಅದುವರೆಗೆ ಚೆನ್ನಾಗಿ ತಿಳಿದವರಾದುದರಿಂದ ತಮ್ಮ ಪ್ರತಿಷ್ಠಾಪನೆ( Institution ) ಯಲ್ಲಿ ತಿಂಗಳಿಗೆ ಐವತ್ತು ರೂಪಾಯಿಗಳ ವೇತನವನ್ನುಳ್ಳ ಸಂಸ್ಕೃತ ಪ್ರಧಾನೋಪಾಧ್ಯಾಯತ್ವವನ್ನು ಕೊಟ್ಟರು. ಇದೇ ಈಶ್ವರಚಂದ್ರನ ಮೊದಲನೆಯ ಉದ್ಯೋಗವು. ಆ ಕಾಲದ ಇಂಗ್ಲಿಷರು ದೇಶೀಯರಲ್ಲಿ ಹೆಚ್ಚಾಗಿ ದಯಾಗೌರವಾನುರಾಗಗಳನ್ನುಳ್ಳವರಾಗಿದ್ದರು. "ಮಾರ್ಷಲ್" ದೊರೆಯವರು ನಿಷ್ಪಕ್ಷಪಾತಬುದ್ಧಿಯುಳ್ಳವರಾಗಿದ್ದದರಿಂದ ವಿದ್ಯಾಸಾಗರರಿಗೆ ಈ ಕೆಲಸವನ್ನು ಕೊಟ್ಟರು.

ವಿದ್ಯಾಸಾಗರನು ಈ ಉದ್ಯೋಗಕಾಲದಲ್ಲಿ ತನ್ನ ಸ್ವತಂತ್ರಾನುರಾಗವನ್ನೂ ನ್ಯಾಯದೃಷ್ಟಿಯನ್ನೂ ಹೊರಪಡಿಸಿದನು. ಪೋರ್ಟವಿಲಿಯಂ ಕಲಾಶಾಲೆಯಲ್ಲಿ ಇಂಗ್ಲೆಂಡಿನಿಂದ ಇಲ್ಲಿಗೆ ಬಂದ ಧರ್ಮಪರಿಪಾಲನಾಧಿಕಾರಿಗಳು ದೇಶಭಾಷೆಯನ್ನು ಕಲಿಯಬೇಕಾಗಿದ್ದಿತು. ಆ ಪರೀಕ್ಷೆಗಳಲ್ಲಿ ಕೃತಾರ್ಥರಾಗದೆ ತಪ್ಪಿದವರು ಮರಳಿ ಸ್ವದೇಶಕ್ಕೆ ಹಿಂದಿರುಗಬೇಕಾಗಿದ್ದಿತು. ಅನೇಕರು ಇಂತಹ ಪರಾಭವವನ್ನು ಹೊಂದಿ ಹೋಗುತ್ತಿದ್ದರು. ಆದುದರಿಂದ ಆ ಕಲಾಧಿಪತಿಯಾದ ಮಾರ್ಷಲ್‌ದೊರೆಯವರು, ಇದಕ್ಕೆ ಚಿಂತಿಸಿ ಅವರ ಪರೀಕ್ಷೆಗಳನ್ನು ಸ್ವಲ್ಪಮಟ್ಟಿಗೆ ಸುಲಭಪಡಿಸಿ ಅವರಿಗೆ ಅನುಕೂಲ ಮಾಡಿಕೊಡಿರೆಂದು ವಿದ್ಯಾಸಾಗರನನ್ನು ಬೇಡಿದರು. ನಿಷ್ಪಕ್ಷಪಾತಹೃದಯನಾದ ಈತನು ಆ ಕೃತ್ಯಕ್ಕೆ ಎಷ್ಟುಮಾತ್ರವೂ ಒಡಂಬಡದೆ, ತನ್ನನ್ನು ಹೀಗೆ ನಿರ್ಬಂಧಪಡಿಸುವುದಾದರೆ ತನ್ನ ಉದ್ಯೋಗವನ್ನು ಬಿಟ್ಟು ಬಿಡುವೆನೆಂದು ಸ್ಪಷ್ಟವಾಗಿ ಹೇಳಿಬಿಟ್ಟನು. ವಿವೇಕಿಯಾದ ಆ ದೊರೆಯು ಆ ಮಾತಿಗೆ ತುಂಬ ಸಂತೋಷಿಸಿ ತನ್ನ ಕೈಕೆಳಗಿನ ಉದ್ಯೋಗಸ್ಥನ ನ್ಯಾಯ ಧೈರ್ಯಗಳನ್ನು ಬಹಳವಾಗಿ ಹೊಗಳಿದನು. ಆ ಕಾಲದಲ್ಲಿ ವಿದ್ಯಾಸಾಗರನು ತುಂಬ ದಾರಿದ್ರ್ಯದಿಂದ ಬಾಧೆಪಡುತಲಿದ್ದರೂ ಈ ಐವತ್ತು ರೂಪಾಯಿಗಳ ಉದ್ಯೋಗವನ್ನು ಕೂಡ ಲಕ್ಷ್ಯಮಾಡದೆ ಧೈರ್ಯವನ್ನೇ ಅವಲಂಬಿಸಿ ನುಡಿದನು. ಈತನು ಉದ್ಯೋಗದಲ್ಲಿ ಪ್ರವೇಶಿಸಿದ ಕೂಡಲೆ ಏಕಕಾಲದಲ್ಲಿ ಇಂಗ್ಲೀಷ ಹಿಂದೀಭಾಷೆಗಳನ್ನು ಅಭ್ಯಾಸಿಸತೊಡಗಿದನು. ಕಲಾಶಾಲೆಯಲ್ಲಿನ ಬಾಲಕರನ್ನು ಹಿಂದೀಭಾಷೆಯಲ್ಲಿ ಪರೀಕ್ಷಿಸಲಿಕ್ಕೂ, ಆ ಪ್ರತಿಷ್ಠಾಪನಾಧಿಪತಿಯವರಿಗೆ ಸಂಸ್ಕೃತವನ್ನು ಕಲಿಸಲಿಕ್ಕೂ ಈತನು ಈ ಭಾಷೆಗಳನ್ನು ಕಲಿಯಬೇಕಾದುದು ಆವಶ್ಯಕವಾಯಿತು. ಬಂಗಾಳೀಭಾಷೆಯೊಂದಿಗೆ ಸಂಬಂಧವುಳ್ಳ ಹಿಂದೀಭಾಷೆಯನ್ನು ಜಾಗ್ರತೆಯಲ್ಲಿಯೇ ಕಲ್ತುಕೊಂಡನು. ಆದರೆ ಅನ್ಯಭಾಷೆಯಾದ ಇಂಗ್ಲಿಷನ್ನು ಕಲಿಯಲಿಕ್ಕೋಸ್ಕರ ಸ್ವಲ್ಪ ಪ್ರಯಾಸಪಟ್ಟನು. ಸುಪ್ರಸಿದ್ಧ ವಕ್ತೃಗಳಲ್ಲಿ ಅಗ್ರಗಣ್ಯರಾದ ಶ್ರೀಜಿತ್ ದೇಶಭಕ್ತ ಬಾಬೂ ಸುರೇಂದ್ರನಾಥ ಬೆನರ್ಜಿಯವರ ಜನಕನಾದ ಬಾಬು ದುರ್ಗಾಚರಣ ಬೆನರ್ಜಿಯ ಸಹಾಯದಿಂದ ಈತನು ಇಂಗ್ಲಿಷನ್ನು ಅಭ್ಯಾಸಿಸಿದನು. ಆಗ ಆತನು ಹೇರ್‌ಪಾಠಶಾಲೆಯಲ್ಲಿ ಒಬ್ಬ ಉಪಾಧ್ಯಾಯನಾಗಿದ್ದನು. ಪೋರ್ಟವಿಲ್ಲಿಯಂ ಕಲಾಶಾಲೆಯಲ್ಲಿ ಮೊದಲನೆಯ ಗುಮಾಸ್ತೆಕೆಲಸ ಒಂದು ಖಾಲಿಯಾಯಿತು. ಆಗ ವಿದ್ಯಾಸಾಗರನ

ಶಿಫಾರಸ್ಸಿನಿಂದ ಮಾರ್ಷಲ್‌ದೊರೆಯುವರು ಆತನಿಗೆ ತಿಂಗಳಿಗೆ ಎಂಭತ್ತು ರೂಪಾಯಿಗಳ ಸಂಬಳವುಳ್ಳ ಆ ಉದ್ಯೋಗವನ್ನು ಕೊಟ್ಟರು. ತರುವಾಯ ಇವರಿಬ್ಬರಿಗೂ ಮತ್ತಷ್ಟು ಗಾಢಮೈತ್ರಿಯುಂಟಾಯಿತು. ದುರ್ಗಾಚರಣ ಬೆನರ್ಜಿಯವರು ಆಗ ವೈದ್ಯಸಂಬಂಧವಾದ ಉಪನ್ಯಾಸಗಳನ್ನು ಬಹಳವಾಗಿ ಕೇಳುತಲಿದ್ದುದರಿಂದ ಆ ವಿಷಯದಲ್ಲಿ ಅಭಿಲಾಷೆ ಹೆಚ್ಚಿ ಕಲ್ತುಕೊಂಡು ದೊಡ್ಡ ವೈದ್ಯಶಾಸ್ತ್ರಜ್ಞನಾದನು. ಆತನು ವೈದ್ಯನಾದುದು ನಮ್ಮ ವಿದ್ಯಾಸಾಗರನ ಲೋಕೋಪಕಾರಪ್ರಯತ್ನಗಳಿಗೆ ತುಂಬ ಸಹಾಯಕರವಾಗಿದ್ದಿತು. ವಿದ್ಯಾಸಾಗರನು, ರಾಜನಾರಾಯಣದಾಸ, ಬಾಬು ನೀಲಮಾಧವಮುಖರ್ಜಿ, ಬಾಬು ರಾಜನಾರಾಯಣಗುಪ್ತ ಎಂಬ ಮೂವರ ಬಳಿಯಲ್ಲಿಯೂ ಇಂಗ್ಲಿಷನ್ನು ಕಲ್ತನು. ಅವರಲ್ಲಿ ಕಡೆಯವನಿಗೆ ತಿಂಗಳಿಗೆ ೧೫ ರೂಪಾಯಿಗಳಂತೆ ವೇತನವನ್ನು ಕೊಟ್ಟು ಮನೆಯಲ್ಲಿ ಸ್ವಲ್ಪಕಾಲ ಕಲ್ತುಕೊಂಡನು. ಮೊತ್ತಮೊದಲು ಗಣಿತಶಾಸ್ತ್ರವನ್ನು ಕಲಿಯಲಪೇಕ್ಷಿಸಿದನು. ಆದರೂ ಅವನಿಗೆ ಅದು ರುಚಿಸದಕಾರಣ ಅದನ್ನು ಬಿಟ್ಟು ನಂದಕೃಷ್ಣದಾಸನ ಹತ್ತಿರ ಷೇಕ್‌ಸ್ಪಿಯರ್ ಮಹಾ ಕವಿರಚಿತಗಳಾದ ಇಂಗ್ಲಿಷಭಾಷಾಗ್ರಂಥಗಳನ್ನು ಕಲ್ತನು. ಆ ವೇಳೆಯಲ್ಲಿ ಆತನಿಗೆ ರಾಧಾಕಾಂತದೇವ ಬಹದ್ದೂರ, ಬಾಬು ಅಕ್ಷಯಕುಮಾರದತ್ತ ಮೊದಲಾದ ಅನೇಕ ವಿದ್ವಾಂಸರ ಸಂಗಡ ತುಂಬ ಸ್ನೇಹವಾಯಿತು. ಅವರುಗಳೆಲ್ಲ ಆತನಲ್ಲಿ ಒಳ್ಳೆಯ ಅಭಿಪ್ರಾಯವುಳ್ಳವರಾಗಿದ್ದರು. ಆ ಕಾಲದಲ್ಲಿ ಅಕ್ಷಯಕುಮಾರನು ತತ್ವಬೋಧನಿಯೆಂಬ ಬಂಗಾಳೀ ಮಾಸಪತ್ರಿಕೆಗೆ ಸಂಪಾದಕನಾಗಿದ್ದನು. ಈತನೂ ವಿದ್ಯಾಸಾಗರನೂ ಕಲೆತು ಅವರ ಸ್ವಭಾಷೆಯಾದ ಬಂಗಾಳೀ ಸಾಹಿತ್ಯವನ್ನು ಅತ್ಯಧಿಕವಾಗಿ ವೃದ್ಧಿಗೊಳಿಸಿದರು. ಅಕ್ಷಯಕುಮಾರನ ಪ್ರೋತ್ಸಾಹದಿಂದ ಈಶ್ವರಚಂದ್ರನು ಶ್ರೀಮಹಾಭಾರತವನ್ನು ಭಾಷಾಂತರಮಾಡಲಿಕ್ಕೆ ಯತ್ನಿಸಿ, ಆದಿಪರ್ವವನ್ನು ತತ್ವಬೋಧಿನಿ ಪತ್ರಿಕೆಯ ಸಂಚಿಕೆಗಳಲ್ಲಿಯೇ ಪ್ರಕಟಿಸುತ್ತಿದ್ದಾಗ ಕಾಳೀಪ್ರಸನ್ನನೆಂಬಾತನು ತಾನು ಆ ಪ್ರಯತ್ನವನ್ನು ಅದುವರೆಗೇನೇ ಮಾಡಿದ್ದೇನೆಂತಲೂ, ಅದರಿಂದ ಆ ಕಾರ್ಯವನ್ನು ಬಿಡಬೇಕೆಂತಲೂ, ಪ್ರಾರ್ಥಿಸಲು ವಿದ್ಯಾಸಾಗರನು ತನ್ನ ಪ್ರಯತ್ನವನ್ನು ನಿಲ್ಲಿಸಿಬಿಟ್ಟನು. ಆದಿಪರ್ವವನ್ನು ಬರೆಯಲಿಕ್ಕೆ ಮುಂಚೆ ವಿದ್ಯಾಸಾಗರನು ವಾಸುದೇವಚರಿತ್ರೆ, ವಿತಲಪಂಚವಾಶತಿ ಎಂಬ ಪುಸ್ತಕಗಳನ್ನು ರಚಿಸಿ ತನ್ನ ಭಾಷಾಂತರೀಕರಣಪ್ರಜ್ಞೆಯನ್ನು ಲೋಕಕ್ಕೆ

ತಿಳಿಯಪಡಿಸಿದದು. ತರುವಾಯ ರಾಜಾ ಕೃಷ್ಣಬಾಬು ಎಂಬಾತನು ಸಂಸ್ಕೃತಭಾಷೆಯನ್ನು ಕಲಿಯಬೇಕೆಂಬ ಕುತೂಹಲವುಳ್ಳವನಾಗಿ, ತನಗೆ ಕಲಿಸಿಕೊಡಬೇಕೆಂದು ವಿದ್ಯಾಸಾಗರನನ್ನು ಬೇಡಲು, ಈತನು ಉಪ ಕ್ರಮಣಿಕೆಯೆಂಬ ಸಣ್ಣ ವ್ಯಾಕರಣ ಸಂಗ್ರಹವನ್ನು ಬರೆದನು. ಸಂಸ್ಕೃತ ವನ್ನು ಪ್ರಾರಂಭಿಸುವವರಿಗೆ ಇದಕ್ಕಿಂತಲೂ ಸುಲಭವಾಗಿ ಓದತಕ್ಕ ಗ್ರಂಥ ವು ಮತ್ತೊಂದೂ ಇಲ್ಲ. ವಿದ್ಯಾಸಾಗರನ ಸೂಕ್ಷ್ಮಬುದ್ಧಿಯನ್ನು ತಿಳಿಯ ಪಡಿಸುವುದಕ್ಕೆ ಇದೊಂದೇ ಸಾಕಾಗಿದೆ.

ಈತನು ಎರಡೂವರೆ ವರ್ಷಗಳ ತನಕ ರಾಜಕೃಷ್ಣಬಾಬುವಿಗೆ ವ್ಯಾಕರಣ, ಸಾಹಿತ್ಯ, ಸ್ಮೃತಿ, ಮೊದಲಾದವುಗಳನ್ನು ಚನ್ನಾಗಿ ಕಲಿಸಿದು ದರಿಂದ ಆ ವಿದ್ಯಾರ್ಥಿಯೂ ಕೂಡ ತುಂಬ ಪ್ರಸಿದ್ಧನಾದನು. ಆದುದರಿಂದ ಪ್ರತಿದಿನವೂ ಆ ಗುರುಶಿಷ್ಯರ ಸಂದರ್ಶನಕ್ಕಾಗಿ ಅನೇಕ ಜನರು ಬಂದು ಹೋಗುತಲಿದ್ದರು. ಮದನ ಮೋಹನತರ್ಕಾಲಂಕಾರನು ವಿದ್ಯಾಸಾಗರನ ವ್ಯಾಕರಣವರ್ಗದಲ್ಲಿ ಸಹಾಯನಾಗಿ ಇದ್ದುದರಿಂದಲೂ ಅವರಿಬ್ಬರಿಗೆ ಒಳ್ಳೆ ಯ ಸ್ನೇಹವುಂಟಾಯಿತು. ಮತ್ತು ದ್ವಾರಕಾನಾಥ ವಿದ್ಯಾಭೂಷಣ, ಗಿರೀಶ ಚಂದ್ರ ವಿದ್ಯಾರತ್ನ, ಪಂಡಿತ ಜಯನಾಥತರ್ಕ ಪಂಚಾನನು, ನಿಮಿಚಂದ್ರ ಶಿರೋಮಣಿ ಮೊದಲಾದವರೆಲ್ಲರೂ ಆತನ ಸ್ನೇಹಿತರಾದರು. ಆತನು ಅವರ ಏಳ್ಗೆಗಾಗಿ ತುಂಬ ಶ್ರಮಪಟ್ಟು ಅವಕಾಶದೊರೆದಾಗಲೆಲ್ಲ ತಕ್ಕ ಸಹಾಯ ಮಾಡುತ್ತಿದ್ದನು. ಆತನು ಫೋರ್ಟವಿಲಿಯಂ ಕಲಾಶಾಲೆಯಲ್ಲಿ ಇರುವಾಗ ಮಾರ್ಷಲ್ ಮೊದಲಾದ ಮೇಲಿನ ಅಧಿಕಾರಿಗಳಿಂದ ವಿಶೇಷವಾದ ಗೌರವನ್ನು ಪಡೆಯುತ್ತಾ ಬಂದನು. ಆತನು ಅಲ್ಲಿ ಪ್ರವೇಶಿಸಿದ ಮೊದಲುಗೊಂಡು, ವಿದ್ಯಾ ಸಂಬಂಧವಾದ ಅನೇಕ ಬದಲಾವಣೆಗಳನ್ನು ಮಾಡಿಸಿದನು. ಅದು ವರೆಗೆ ಈ ಕಲಾಶಾಲೆಯಲ್ಲಿ ಇಂಗ್ಲಿಷಭಾಷೆಯನ್ನು ಕಲಿಸಬೇಕೇ, ಬೇಡವೇ, ಎಂಬ ದೊಡ್ಡ ವಿವಾದವು ನಡೆದು, ೧೮೩೫ನೆಯ ಸಂವತ್ಸರದಲ್ಲಿ ಆಕ್ಲಂಡ್ ಪ್ರಭುವು ಗವರ್ನರ ಜನರಲ್ಲಾಗಿ ಬಂದಾಗ ಇಂಗ್ಲಿಷಭಾಷೆಯ ಮೂಲಕ ಪಶ್ಚಿಮ ದೇಶದವರ ಜ್ಞಾನವನ್ನು ಈ ದೇಶದವರಿಗೆ ಕಲಿಸತಕ್ಕುದೆಂದು ನಿರ್ಣಯಿಸಿದರು. ೧೮೩೭ನೆಯ ಸಂವತ್ಸರದಲ್ಲಿ ಫಾರಸಿಯು ರಾಜ ಭಾಷೆ ಯಾಗಿರಬಾರದೆಂದು ಅಪ್ಪಣೆಯಾಯಿತು. ಆಗ ಇಂಗ್ಲಿಷ ಪಾಠಶಾಲೆಗಳ ಸಂಖ್ಯೆಯನ್ನು ಹೆಚ್ಚಿಸತೊಡಗಿದರು. ವಿದ್ಯಾಸಾಗರನು ಕಲಾಶಾಲೆಯಲ್ಲಿ

ಉಪಾಧ್ಯಾಯನಾಗಿದ್ದಾಗ ಆಗಿನ ಗವರ್ನರ ಜನರಲ್ ಹಾರ್ಡಿಂಜ್ ಪ್ರಭುವು ಆ ಕಾಲೇಜನ್ನು ನೋಡಲಿಕ್ಕೆ ಬರಲು, ಅವರ ಸಂಗಡ ವಿದ್ಯಾರ್ಥಿಗಳ ಕಷ್ಟನಷ್ಟಗಳನ್ನು ಕುರಿತು ಈತನು ಅವರಿಗೆ ವಿಶದವಾಗಿ ತಿಳಿಸಿದನು. ಅದರ ಮೇಲೆ ಆ ಪ್ರಭುವು ದೇಶಭಾಷೆಯ ಪಾಠ ಶಾಲೆಗಳನ್ನು ಏರ್ಪಡಿಸುವುದೆಂದು ಅಪ್ಪಣೆಕೊಟ್ಟನು.

೧೮೪೪ನೆಯ ಸಂವತ್ಸರದಿಂದ ೧೮೪೬ನೆಯ ಸಂವತ್ಸರದವರೆಗೆ ನೂರೊಂದು ಪಾಠಶಾಲೆಗಳು ಸ್ಥಾಪಿಸಲ್ಪಟ್ಟವು. ಆ ವಿಷಯವಾಗಿ ವಿದ್ಯಾಸಾಗರನು ತುಂಬ ಪ್ರಯತ್ನಪಟ್ಟುದರಿಂದ ಅದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುವ ಭಾರವನ್ನು ಆತನಿಗೇ ವಹಿಸಿ ಬಿಟ್ಟರು. ಅಂತಹ ಕಾರ್ಯವನ್ನು ನೆರವೇರಿಸುವುದರಲ್ಲಿ ಆತನು ನಿಷ್ಪಕ್ಷಪಾತನಾಗಿ ವರ್ತಿಸಿದುದರಿಂದ ಬಹು ಮಂದಿಗೆ ಆತನ ಮೇಲೆ ಅಸೂಯೆಯುಂಟಾಯಿತು ವಿದ್ಯಾಸಾಗರನು ತಾನು ಉದ್ಯೋಗ ಮಾಡುತ್ತಿರುವಾಗ ತನ್ನ ತಂದೆಯು ಸುದಾ ನೌಕರಿ ಮಾಡುವುದು ಆತನಿಗೆ ಇಷ್ಟವಿಲ್ಲದೆ, ಒಂದು ದಿನ ತನ್ನ ತಂದೆಯೊಂದಿಗೆ ಹೀಗೆ ಬಿನ್ನವಿಸಿದನು. “ ಅಪ್ಪಾ ನಾನು ತಿಂಗಳಿಗೆ ಐವತ್ತು ರೂಪಾಯಿಗಳನ್ನು ಸಂಪಾದಿಸುತ್ತಿರುವೆನು. ನಮ್ಮ ಕುಟುಂಬದ ವೆಚ್ಚಕ್ಕೆ ಈ ಹಣವೇ ಸಾಲದೆ? ನೀವು ಕೂಡ ಕಷ್ಟಪಡುವುದೇತಕ್ಕೆ? ನೀವು ವೃದ್ಧರಾದುದರಿಂದ ದೇಹದಾರ್ಢ್ಯವು ತಗ್ಗುತ್ತಾ ಬಂದಿರುವುದು. ನಾನು ನಿಮಗೆ ತಿಂಗಳೊಂದಕ್ಕೆ ಇಪ್ಪತ್ತು ರೂಪಾಯಿಗಳಂತೆ ಕೊಡುವೆನು. ದಯಮಾಡಿ ನಮ್ಮ ಸ್ವಂತ ಗೃಹಕ್ಕೆ ಹೋಗಿ, ವಿಶ್ರಾಂತಿ ಪಡೆದು ದೇವರ ನಾಮಸ್ಮರಣೆಯನ್ನು ಮಾಡಿಕೊಂಡಿರ ಬಹುದು ” ಎಂದು ಬೇಡಲು ಆ ವೃದ್ಧನು ತನ್ನ ಪ್ರಿಯಪುತ್ರನ ಕೋರಿಕೆಯಂತೆ ತನ್ನ ಉದ್ಯೋಗವನ್ನು ಬಿಟ್ಟು ಬಿಟ್ಟು ವೀರಸಿಂಹಗ್ರಾಮದಲ್ಲಿಯೇ ಇದ್ದನು. ಅಂದಿನಿಂತಲೂ ಆತನು ತನ್ನ ವಾಗ್ದಾನವನ್ನು ತಪ್ಪದೆ ತಿಂಗಳಿಗೆ ಇಪ್ಪತ್ತು ರೂಪಾಯಿಗಳಂತೆ ಆ ವೃದ್ಧ ಜನನೀಜನಕರಿಗೆ ಕಳುಹುತ್ತಲಿದ್ದನು. ಉಳಿದ ಮುವ್ವತ್ತು ರೂಪಾಯಿಗಳಲ್ಲಿ ತಾನೂ ತನ್ನ ಒಡಹುಟ್ಟಿದವರಿಬ್ಬರೂ ಚಿಕ್ಕಪ್ಪನ ಮಕ್ಕಳಿಬ್ಬರೂ, ಸೋದರತ್ತೆಯ ಮಕ್ಕಳಿಬ್ಬರೂ, ಚಿಕ್ಕಮ್ಮನ ಮಗನೊಬ್ಬನೂ ಒಬ್ಬ ಆಳೂ ಸೇರಿ ಒಂಭತ್ತು ಮಂದಿ ಕಲ್ಕತ್ತೆಯಲ್ಲಿ ಜೀವನಾ ಮಾಡಿಕೊಂಡಿದ್ದರು. ಇವರಲ್ಲದೆ ನಿತ್ಯವೂ ಬರುವ ಅತಿಥಿ ಅಭ್ಯಾಗತರು ಕೆಲವರಿರುವರು. ಮನೆಯಲ್ಲಿದ್ದವರೇ ಸರತಿಯಂತೆ ಅಡಿಗೆ

ಮುಂತಾದ ಗೃಹಕೃತ್ಯವನ್ನು ಮಾಡಿಕೊಳ್ಳುತ್ತಿದ್ದರು. ಯಜಮಾನನಾದ ವಿದ್ಯಾಸಾಗರನು ಕೂಡ ತನ್ನ ಸರತಿ ಬಂದಾಗ ಸ್ವಲ್ಪವೂ ಗರ್ವಪಡದೆ ತನ್ನ ವಿಧಾಯುತವನ್ನು ಕ್ರಮವಾಗಿ ನೆರವೇರಿಸುತ್ತಿದ್ದನು. ಇದೇ ಆತನ ತಾಯಿ ತಂದೆಗಳಲ್ಲಿ ನಡೆದುಕೊಂಡ ನಡತೆ.

೧೮೪೭ನೆಯ ಸಂವತ್ಸರದಲ್ಲಿ ಸಂಸ್ಕೃತ ಕಲಾಶಾಲೆಯಲ್ಲಿ ಪಂಡಿತನಾದ ಗಂಗಾಧರ ತರ್ಕವಾಗೀಶನಿಗೆ ವಾಂತಿಭೇದಿರೋಗವು ತಗಲಿರುವುದೆಂದು ಕೇಳಿದ ಕೂಡಲೆ ವೈದ್ಯವನ್ನು ತಿಳಿದ ತನ್ನ ಮಿತ್ರನಾದ ದುರ್ಗಾಚರಣ ಬೆನರ್ಜಿಯೊಂದಿಗೆ ಅಲ್ಲಿಗೆ ಹೋಗಿ ಆತನ ಸಹಾಯದಿಂದ ಆರೋಗಿಗೆ ತಾನೆ ಉಪಚಾರ ಮಾಡಿ ಅವನ ವ್ಯಾಧಿ ನಿವಾರಣೆ ಮಾಡಿಸಿದರು. ಮತ್ತೊಂದು ಸಾರಿ ತನ್ನ ನೆರೆ ಮನೆಯವನ ನೌಕರನಿಗೆ ಅದೇ ವ್ಯಾಧಿ ಸಂಭವಿಸಿತು. ನಿರ್ದಯನಾದ ಅವನ ಯಜಮಾನನು ಅವನನ್ನು ಬೀದಿಗೆ ತಳ್ಳಿಬಿಟ್ಟನು. ಆಗ ಆತನು ಮುಂಚಿನಂತೆಯೇ ಅಲ್ಲಿಗೆ ಹೋಗಿ ಅವನನ್ನು ತನ್ನ ಕೈಗಳ ಮೇಲೆ ಎತ್ತಿಕೊಂಡು ಬಂದು ತನ್ನ ಹಾಸಿಗೆಯ ಮೇಲೆಯೇ ಮಲಗಿಸಿಬೇಕಾದ ಉಪಚಾರಗಳನ್ನು ಮಾಡಿ ಅವನಿಗೆ ಪ್ರಾಣದಾನವನ್ನು ಮಾಡಿದನು.

ಈಶ್ವರಚಂದ್ರನು ಈ ೫೦ ರೂಪಾಯಿಗಳ ಉದ್ಯೋಗದಲ್ಲಿದ್ದಾಗ ಸಂಸ್ಕೃತ ಕಲಾಶಾಲೆಯಲ್ಲಿಯೇ ತಿಂಗಳಿಗೆ ೭೦ ರೂಪಾಯಿಗಳ ವೇತನವುಳ್ಳ ಪ್ರಥಮ ವ್ಯಾಕರಣೋಪಾಧ್ಯಾಯನ ಕೆಲಸವು ಖಾಲಿಯಾಯಿತು. ಆಗ ಮಾರ್ಷಲ್ ಮೊದಲಾದವರು ಈ ಉದ್ಯೋಗವನ್ನು ನೀನು ಅಂಗೀಕರಿಸಬೇಕೆಂದು ಈತನನ್ನು ಪ್ರಾರ್ಥಿಸಿದರು. ಅದಕ್ಕೆ ಆತನು ಸಮ್ಮತಿಸದೆ ಆ ಪದವಿಗೆ ತಾರಾನಾಥ ತರ್ಕವಾಚಸ್ಪತಿ ಎಂಬಾತನು ತನಗಿಂತಲೂ ಶಕ್ತನಾಗಿಯೂ ಅರ್ಹನಾಗಿಯೂ ಇರುವನೆಂದು ತಿಳಿದು ಆತನಿಗೆ ಆ ಉದ್ಯೋಗವನ್ನು ಕೊಡಿಸಿ, ಕಲ್ಕತ್ತೆಗೆ ೫೦ ಮೈಲುಗಳ ದೂರದಲಿದ್ದ "ಕಾಲ್ನಾ" ಎಂಬ ಆತನ ಸ್ವಗ್ರಾಮಕ್ಕೆ ತಾನು ಒಂಟಿಯಾಗಿಯೇ ನಡೆದು ಹೋಗಿ ಆತನಿಗೆ ಅಶುಭವಾರ್ತೆಯನ್ನು ತಿಳಿಸಿ, ಆತನ ಸಮ್ಮತಿ ಪಡೆದು ಬಂದನು. ತರ್ಕವಾಚಸ್ಪತಿಯು ವಿದ್ಯಾಸಾಗರನಿಂದ ಆ ವೃತ್ತಾಂತವನೆಲ್ಲ ಕೇಳಿ ಆತನ ನಿರ್ಲೋಹತ್ವಕ್ಕೆ ಆಶ್ಚರ್ಯಗೊಂಡು ಇಂತೆಂದನು. "ಓಹೋ? ವಿದ್ಯಾಸಾ

ಗರನೇ? ನೀನು ಸಾಮಾನ್ಯ ಮನುಷ್ಯಮಾತ್ರನಲ್ಲ. ಈಶ್ವರಾಂಶ ಸಂಭೂತನು. ಹಾಗಲ್ಲದಿದ್ದರೆ ಸಾಮಾನ್ಯ ಮನುಷ್ಯನು ಯಾವನಾದರೂ ಇಂತಹ ನಿಷ್ಕಾಮಿಯಾಗಿರುವನೇ?" ವಿದ್ಯಾಸಾಗರನು ಶನಿವಾರದದಿನ ಕಲ್ಕತ್ತೆಯಿಂದ ಹೊರಟು ಭಾನುವಾರದದಿನ ಕಾಲ್ನಾವಿಗೆ ಸೇರಿ, ಮರಳಿ ಸೋಮವಾರದದಿನ ಪಾಠಶಾಲೆಯ ವೇಳೆಗೆ ಸರಿಯಾಗಿ ಬಂದು ಸೇರಿದನು. ಇದರಿಂದ ಈತನ ದೇಹದಾರ್ಢ್ಯವೆಂತದೋ ವಾಚಕರೇ ಊಹಿಸಬಹುದು. ಈತನ ನಡಿಗೆಯ ಸಾಮರ್ಥ್ಯವನ್ನು ತಿಳಿಸುವ ದೃಷ್ಟಾಂತಗಳು ಅನೇಕವಾಗಿರುವವು. ಸ್ಥಲ ಸಂಕೋಚದಿಂದ ಇಲ್ಲಿ ಅವುಗಳನ್ನು ವಿವರಿಸಿಲ್ಲ. ಈತನು ಈ ಉದ್ಯೋಗದಲ್ಲಿದ್ದಾಗಲೇ ಈತನ ಎರಡನೆಯ ತಮ್ಮನಾದ ಶಂಭುಚಂದ್ರನ ವಿವಾಹಕ್ಕೆ ಬರಬೇಕೆಂದು ಇವನಿಗೆ ಮನೆಯಿಂದ ಪತ್ರಬಂದಿತು. ಅದರಲ್ಲಿ ಈತನ ತಾಯಿಯು, ಎಷ್ಟುತೊಂದರೆಗಳಿದ್ದರೂ, ಬಿಟ್ಟು ಆ ವಿವಾಹಸಮಯಕ್ಕೆ ತಪ್ಪದೆ ಬರಬೇಕೆಂದು ಒತ್ತಿ ಬರೆದಿದ್ದಳು. ಈತನು ಹಾಗೆಯೇ ಹೊರಡಬೇಕೆಂದೆಣಿಸಿ, ತನಗೆ ರಜಾಕೊಡಿಸಬೇಕೆಂದು ಪಾಠಶಾಲೆಯ ಅಧಿಕಾರಿಗಳಿಗೆ ಬಿನ್ನವತ್ತಳೆಯನ್ನು ಕಳುಹಿದನು. ಆದರೆ ಅವರು ಸಮ್ಮತಿಸದೆ ಹೋದುದರಿಂದ ಪ್ರಯಾಣವನ್ನು ಮಾನಸಿಕ ಮಾಡಬೇಕಾಗಿ ಬಂದಿತು. ಆದಿನ ರಾತ್ರಿ ಇವನು ಮಲಗಿಕೊಂಡಾಗ ತನ್ನ ತಾಯಿಗೆ ತಾನು ಮಾಡಬೇಕಾಗಿರುವ ಆಶಾಭಂಗಕ್ಕಾಗಿ ತುಂಬ ಚಿಂತಿಸಿ, ಆ ಉದ್ಯೋಗವನ್ನು ಬಿಟ್ಟು ಬಿಟ್ಟಾದರೂ. ಹೋಗಿ, ತನ್ನ ತಾಯಿಯಮನಸ್ಸನ್ನು ಸಂತೋಷಪಡಿಸಬೇಕೆಂದು ನಿರ್ಣಯಿಸಿ ಮರುದಿನ ಮರಳಿ ಅಪ್ಪಣೆಕೊಡಬೇಕೆಂದನು. "ಅಯ್ಯಾ? ನೀವು ನನಗೆ ಈ ವೇಳೆ ಊರಿಗೆ ಹೋಗಿ ಬರಲು ಅಪ್ಪಣೆಕೊಡದ ಪಕ್ಷದಲ್ಲಿ ದಯಮಾಡಿ ನನ್ನನ್ನು ಈ ಉದ್ಯೋಗದಿಂದ ಬಿಡುಗಡೆ ಮಾಡಿರಿ, ನನಗೆ ಮುಂದೆ ಈ ಕೆಲಸವು ಅಗತ್ಯವಿಲ್ಲ. ನನ್ನ ಉದ್ಯೋಗಕ್ಕೆ ಆಶೆಪಟ್ಟು ನಮ್ಮಮ್ಮನ ಮನಸ್ಸನ್ನು ನೋಯಿಸಲಾರೆನು." ಆಶ್ಚರ್ಯಕರವಾದ ಈತನ ಮಾತೃಭಕ್ತಿಗೂ. ಸಾಹಸ ವೃತ್ತಿಗೂ "ಮಾರ್ಷಲ್" ದೊರೆಯವರು ತುಂಬ ಸಂತೋಷಿಸಿ, ಬದಲು ಹೇಳದೆ, ಒಡನೆಯೇ ಅಪ್ಪಣೆ ಕೊಟ್ಟು ಕಳುಹಿಸಿದರು. ಆಹಾ, ಈತನ ಮಾತೃಭಕ್ತಿಯೆಂತಹುದು! ಮಾತೃ ಸೇವೆಗಾಗಿ ಸರ್ವ ಸೌಖ್ಯವನ್ನೂ ಪರಿತ್ಯಜಿಸುವ ಪರಮಧಾರ್ಮಿಕನು ಈತನೇ ಅಲ್ಲವೇ? ಆತ್ಮಭೋಗಗಳನ್ನು ಗಣನೆಗೆ ತಾರದೆ ಮಾತೃ

ಸೇವೆಯೇ ಪರಮಕರ್ತವ್ಯವಾಗಿ ಭಾವಿಸಿದ ನಮ್ಮ ವಿದ್ಯಾಸಾಗರನು ಸಾಮಾನ್ಯಪುರುಷನೇ?

ಈ ಪ್ರಕಾರವಾಗಿ ಅಪ್ಪಣೆಯನ್ನು ಪಡೆದ ಕೂಡಲೆ ವಿದ್ಯಾಸಾಗರನು ಬೇಗ ತನ್ನ ಮನೆಗೆ ಹೋಗಿ ಶ್ರೀರಾಮನೆಂಬ ತನ್ನ ಭೃತ್ಯನನ್ನು ಸಂಗಡ ಕರೆದುಕೊಂಡು ಸಾಯಂಕಾಲ ಮೂರು ಗಂಟೆಯ ಹೊತ್ತಿನಲ್ಲಿ ಕಲಕತ್ತೆಯಿಂದ ವೀರಸಿಂಹಗ್ರಾಮಕ್ಕೆ ಹೊರಟನು. ಆಗ ಮಳೆಗಾಲವಾಗಿದ್ದುದರಿಂದ ಆಕಾಶವೆಲ್ಲವೂ ಮೋಡಗಳಿಂದ ತುಂಬಿ ಸಿಡಿಲು ಗುಡುಗುಗಳು ಭಯಂಕರಗಳಾಗಿ ದಿಕ್ಕುಗಳನ್ನೆಲ್ಲ ವ್ಯಾಪಿಸಿ ಬಿರುಮಳೆ ಸುರಿಯುತ್ತಿದ್ದರೂ, ಮಾರ್ಗವೆಲ್ಲವೂ ಕೆಸರು, ಕಲ್ಲು, ಮುಳ್ಳುಗಳಿಂದ ತುಂಬಿದ್ದರೂ, ಮಾತೃಸೇವಾಯುಕ್ತಚಿತ್ತನಾದ ಈತನು ಇವುಗಳನ್ನೆಲ್ಲ ಲಕ್ಷ್ಯಮಾಡದೆ ಆ ರಾತ್ರಿ ಗಾಢಾಂಧಕಾರದಲ್ಲಿ ದಾರೀ ನಡೆದು, ಕೃಷ್ಣರಾಯಪುರವನ್ನು ಸೇರಿ ಸೇವಕನ ನಿರ್ಬಂಧದಿಂದ ಆ ರಾತ್ರಿ ಅಲ್ಲಿಯೇ ವಿಶ್ರಮಿಸಿಕೊಂಡಿದ್ದು ಮರುದಿನ ಬೆಳಗಿನ ಜಾವದಲ್ಲಿಯೇ ಎದ್ದು ಅಲ್ಲಿಗೆ ಸಮೀಪದಲ್ಲಿದ್ದ ಸೇವಕನ ಮನೆಗೆ ಅವನನ್ನು ಕಳುಹಿಸಿಬಿಟ್ಟು, ಅಲ್ಲಿಂದ ಮುಂದೆ ಇಪ್ಪತ್ತೈದು ಮೈಲುಗಳ ದೂರದಲ್ಲಿದ್ದ ತನ್ನ ಗ್ರಾಮಕ್ಕೆ ಬಲು ವೇಗದಿಂದ ನಡೆಯುತ್ತಾ ಹೋಗುವಾಗ ದಾರಿಯಲ್ಲಿ ದಾಮೋದಲ ನದಿಯು ಪೂರ್ಣಪ್ರವಾಹವಾಗಿ ಹರಿಯುತ್ತಿರಲು, ಹೆದರದೆ ಅದರಲ್ಲಿ ಧುಮುಕಿ ಈಸಿಕೊಂಡು ಸುರಕ್ಷಿತವಾಗಿ ಆಚೆಯ ದಡವನ್ನು ಸೇರಿದನು. ಮತ್ತಷ್ಟು ದೂರ ಹೋಗುವಾಗ್ಗೆ ದ್ವಾರಕೇಶ್ವರವೆಂಬ ಮತ್ತೊಂದು ನದಿ ಅಡ್ಡವಾಗಿರಲು ಅದನ್ನು ಕೂಡ ಹಾಗೆಯೇ ದಾಟಿ ಕಳ್ಳರ ಹಾವಳಿಯಿಂದ ಭಯಂಕರವಾಗಿದ್ದ ಕಾಡುದಾರಿಯಲ್ಲಿಯೇ ಹೋಗಿ ಕಷ್ಟವನ್ನು ಗಣಿಸದೆ ತನ್ನ ಮನೆಯನ್ನು ಸೇರಿದನು. ಆಗ ಈತನ ಬರವನ್ನೇ ಹಾರೈಸುತ್ತಾ ಎಷ್ಟು ಹೊತ್ತಾದರೂ ಬಂದಿಲ್ಲವೆಂದು ಚಿಂತಿಸುತ್ತಾ ಕುಳಿತಿದ್ದ ತಾಯಿಯ ಬಳಿಗೆ ಹೋಗಿ ನಮಸ್ಕಾರಮಾಡಿ ಸಂತೈಸಲು ಅವರಿಬ್ಬರಿಗೂ ಮನಶ್ಶಾಂತಿಯಾಯಿತು, ವಿದ್ಯಾಸಾಗರನ ಮಾತೃಭಕ್ತಿಯನ್ನು ತಿಳಿಸುವುದಕ್ಕೆ ಇದೊಂದೇ ನಿದರ್ಶನವಲ್ಲವೆಂದು ತಿಳಿಯಿರಿ.

"ಕಾಸ್ಟು" ಎಂಬ ಧರ್ಮಪರಿಪಾಲನಾಧಿಕಾರಿಯೊಬ್ಬನು ತನ್ನನ್ನು ಕುರಿತು ಒಂದು ಸಣ್ಣ ಸಂಸ್ಕೃತ ಶ್ಲೋಕವನ್ನು ಬರೆದು ಕೊಡಿರೆಂದು ಬೇಡಲು ವಿದ್ಯಾಸಾಗರನು ಆ ಶ್ಲೋಕವನ್ನು ಬರೆದು ಕೊಟ್ಟನು. ಸ್ವಲ್ಪ

ಸಂಸ್ಕೃತ ಜ್ಞಾನವುಳ್ಳ ಆ ಅಧಿಕಾರಿಯು ಅದನ್ನು ನೋಡಿ ಮೆಚ್ಚಿಕೊಂಡು ಆಗಲೇ ೩೦೦ ರೂಪಾಯಿಗಳನ್ನು ಬಹುಮಾನವಾಗಿ ಕೊಟ್ಟನು. ಆದರೆ ಈತನು ಆ ಹಣವನ್ನು ಸ್ವಪ್ರಯೋಜನಕ್ಕಾಗಿ ಉಪಯೋಗಿಸಿಕೊಳ್ಳಲಿಕ್ಕೆ ಅಪೇಕ್ಷಿಸದೆ, ವರ್ಷಕ್ಕೆ ೫೦ ರೂಪಾಯಿಗಳಂತೆ ಸಂಸ್ಕೃತಭಾಷೆಯಲ್ಲಿ ಶ್ರೇಷ್ಠತರವಾದ ನಿಬಂಧವನ್ನು ಬರೆದವರಿಗೆ ಕೊಡುವಂತೆ ಏರ್ಪಡಿಸಿದನು. ಪ್ರತಿಫಲಾಪೇಕ್ಷೆ ಇಲ್ಲದ ಧರ್ಮಗುಣವು ಇದಕ್ಕಿಂತಲೂ ಬೇರೆಯುಂಟೆ? ಆ ಬಹುಮಾನ ಪರೀಕ್ಷೆಯಲ್ಲಿ ಎರಡನೆಯ ಸಂವತ್ಸರ ತನ್ನ ತಮ್ಮನಾದ ದೀನಬಂಧುವಿಗೆ ಬರಬೇಕಾದ ಬಹುಮಾನವನ್ನು ತಾನೇ ಪರೀಕ್ಷಾಧಿಕಾರಿಯಾದುದರಿಂದ ಶ್ರೀಶಚಂದ್ರ ವಿದ್ಯಾರತ್ನನಿಗೆ ಕೊಡಿಸಿದನು. ಆತನು ಸಂಸ್ಕೃತಭಾಷೆಯಲ್ಲಿ ಅನೇಕವಾಗಿ ಉದ್ಬೋಧನ ಶ್ಲೋಕಗಳನ್ನು ಬರೆದಿದ್ದನು. ಪೂರ್ವದ ಪುರಾಣಗಳಲ್ಲಿ ಹೇಳಿರುವಂತೆ ಶಾಲ್ಮಲಿ ಮೊದಲಾದ ನವದ್ವೀಪಗಳನ್ನು ಕುರಿತು, ಹೊಸ ಭೂಗೋಳಶಾಸ್ತ್ರಕ್ಕೆ ಅನುಗುಣವಾಗಿ ನಾನೂರೊಂದು ಶ್ಲೋಕಗಳನ್ನು ಬರೆದನು. ಉತ್ತರ ರಾಮಚರಿತ್ರೆ, ಮೇಘದೂತ, ಶಾಕುಂತಲ ಮೊದಲಾದ ಕೆಲವು ಗ್ರಂಥಗಳಿಗೆ ಸಂಗ್ರಹ ವ್ಯಾಖ್ಯಾನಗಳನ್ನು ಬರೆದನು. ವಿಲ್ಲಿಯಂ ದುರ್ಗ ಕಲಾಶಾಲೆಯಲ್ಲಿ ಪ್ರವೇಶಿಸಿದ ಮೇಲೆ ಯುರೋಪಖಂಡದಿಂದ ಬರುವ ಆಂಗ್ಲೇಯೋದ್ಯೋಗಿಗಳ ವಿನಿಯೋಗಕ್ಕೋಸ್ಕರ ಒಂದು ಸಣ್ಣ ಕಾದಂಬರಿಯನ್ನು ಬಂಗಾಳೀ ಭಾಷೆಯಲ್ಲಿ ಸುಲಭ ಶೈಲಿಯಿಂದ ಬರೆಯಬೇಕೆಂದು ಬೇಡಲು ವಿದ್ಯಾಸಾಗರನು “ ವಾಸುದೇವಚರಿತ್ರೆ ” ಎಂಬುದನ್ನು ರಚಿಸಿದನು. ಆತನು ಬಂಗಾಳಿಯಲ್ಲಿ ಬರೆದ ವಚನಕಾವ್ಯಗಳಲ್ಲಿ ಇದೇ ಮೊದಲನೆಯದು. ಆ ಚರಿತ್ರೆಯು ಸಂಸ್ಕೃತದಲ್ಲಿರುವ ಶ್ರೀಮದ್ಭಾಗವತದಿಂದ ಸಂಗ್ರಹಿಸಿ ಬರೆಯಲ್ಪಟ್ಟುದು. ಸುಲಭವಾದ ಶೈಲಿ, ನಿರ್ದುಷ್ಟವಾದ ಭಾಷೆ, ಧಾರಾಳವಾಗಿ ಅಂದವಾದ ರಚನಾ ಸೌಲಭ್ಯವುಳ್ಳ ವಚನಕಾವ್ಯವಾವುದೂ ಇಷ್ಟು ಚಮತ್ಕಾರವಾಗಿ ಅದುವರೆಗೆ ಯಾರಿಂದಲೂ ಬರೆಯಲ್ಪಟ್ಟಿರಲಿಲ್ಲ. ಆದರೂ ಅದರಲ್ಲಿ ಭಗವಂತನೆನ್ನಿಸಲ್ಪಡುವ ಶ್ರೀಕೃಷ್ಣನ ಲೀಲೆಗಳು ಸಂಪೂರ್ಣವಾಗಿ ವರ್ಣಿಸಲ್ಪಟ್ಟಿರುವುದರಿಂದ ಕಲಾಶಾಲಾಧಿಕಾರಿಗಳು ಅದನ್ನು ಪರೀಕ್ಷಾಗ್ರಂಥವಾಗಿ ಅಂಗೀಕರಿಸದೆ ಬಿಟ್ಟರು. ಸಾವಿರವೇತಕ್ಕೆ? ಆ ಪುಸ್ತಕವನ್ನೋದಿದವರಿಗೆ ಮಾತ್ರವೇ ಅದರ ಸಮಾಧುರ್ಯ ತಿಳಿಯುವುದು. ರಾಜಾರಾಮಮೋಹನರಾಯ್, ರಾಜೇಂದ್ರ

ರಾಮಮಿತ್ರ, ಕೆ. ಎಂ. ಬೆರ್ನಜಿ, ಮೊದಲಾದವರು ಕೂಡ ತಮ್ಮ ಸ್ವಭಾಷೆಯಾದ ಬಂಗಾಳೀ ಸಾಹಿತ್ಯಾಭಿವೃದ್ಧಿಗಾಗಿ ತುಂಬ ಶ್ರಮಪಟ್ಟರು. ೧೮೪೬ನೆಯ ಸಂವತ್ಸರದಲ್ಲಿ ವಿದ್ಯಾಸಾಗರನು ಫೋರ್ಟವಿಲಿಯಂ ಕಾಲೇಜಿನಲ್ಲಿದ್ದ ತನ್ನ ಉದ್ಯೋಗವನ್ನು ಬಿಟ್ಟುಬಿಡಬೇಕಾಗಿ ಬಂದಿತು. ಇದಕ್ಕೆ ಕೆಲವು ದಿನಗಳ ಮುಂಚೆ ಸಂಸ್ಕೃತ ಕಲಾಶಾಲೆಯಲ್ಲಿನ ಸಹಾಯಕಾರ್ಯದರ್ಶಿಯ ಉದ್ಯೋಗವು ತೆರವಾಯಿತು. ಆ ಶಾಲೆಯ ಕಾರ್ಯದರ್ಶಿಯಾದ ಬಾಬು ರಸೋಮಿದತ್ತರು ಅದುವರೆಗೆ ವಿದ್ಯಾಸಾಗರನ ಸಂಗತಿಯನ್ನರಿತವರಾಗಿದ್ದುದರಿಂದ ಎಷ್ಟೋ ಪ್ರಯತ್ನಿಸಿ, ಈತನನ್ನು ಆ ಉದ್ಯೋಗದಲ್ಲಿ ಸೇರುವಂತೆ ಒಡಂಬಡಿಸಿದನು. ಅದಕ್ಕೆ ತಿಂಗಳು ಒಂದಕ್ಕೆ ೫೦ ರೂಪಾಯಿಗಳ ವೇತನವಿದ್ದಿತು. ವಿಲ್ಲಿಯಂದುರ್ಗ ಕಲಾಶಾಲೆಯನ್ನು ಬಿಡುವಾಗ್ಗೆ ಅದರ ಅಧ್ಯಕ್ಷನಾದ ಮಾರ್ಷಲ್‌ದೊರೆಯವರೊಡನೆ ಇಂತೆಂದನು—“ ಅಯ್ಯಾ! ನನಗೆ ಅಲ್ಲಿ ಯಾವುದಾದರೂ ವ್ಯತಿರಿಕ್ತವಾಗಲಿ, ಅನಿಷ್ಟವಾಗಲಿ, ನಡೆದರೆ ನನ್ನ ಉದ್ಯೋಗವನ್ನು ಬಿಟ್ಟು ಬಿಡುವೆನು. ಏತಕ್ಕೆಂದರೆ ಸ್ವಂತ ಪ್ರಯೋಜನವನ್ನು ಅಪೇಕ್ಷಿಸಿ, ಅನ್ಯಾಯಾಕ್ರಮಗಳಿಗೆ ಒಳಪಡುವುದು ನನ್ನ ಸ್ವಭಾವವಲ್ಲ. ನನ್ನ ಸ್ವಪ್ರಯೋಜನದಮೇಲೆ ನನಗೆ ಹೆಚ್ಚಾದ ಶ್ರದ್ಧೆ ಇಲ್ಲ. ಅದರೆ ನನ್ನ ಪ್ರಿಯಜನಕನಿಗೆ ತೊಂದರೆಯುಂಟಾಗುವುದೆಂಬ ಭಯದಿಂದ ನಾನು ಹಾಗೆ ಮಾಡಲೆತ್ನಿಸಿದೆನು. ಆದುದರಿಂದ ನನ್ನ ತಮ್ಮನಾದ ದೀನಬಂಧು ನ್ಯಾಯರತ್ನನೆಂಬುವನು ಒಳ್ಳೇ ಪಂಡಿತನಾಗಿಯೂ, ನಿಜವಾದ ಯೋಗ್ಯತೆಯುಳ್ಳವನಾಗಿಯೂ, ಇರುವುದರಿಂದ ನನ್ನ ಈ ಕೆಲಸವನ್ನು ಆತನಿಗೆ ಕೊಡಿಸಬೇಕೆಂದು ಕೋರುವೆನು.” ಆ ಪ್ರಕಾರವಾಗಿಯೇ ಆತನ ತಮ್ಮನನ್ನು ಪಂಡಿತಾಗ್ರೇಸರನಾಗಿ ನಿಯಮಿಸಿದರು. ಆ ಕಾಲದಲ್ಲಿ ಸಂಸ್ಕೃತ ಕಲಾಶಾಲೆಯು ಅಷ್ಟು ಉತ್ತಮ ಸ್ಥಿತಿಯಲ್ಲಿರಲಿಲ್ಲ. ಉಪಾಧ್ಯಾಯರಾಗಲಿ, ವಿದ್ಯಾರ್ಥಿಗಳಾಗಲಿ ಪಾಠಶಾಲೆಗೆ ಬರುವುದಕ್ಕೂ ಹೋಗುವದಕ್ಕೂ ನಿಯಮಿತಕಾಲವಾವುದೂ ಇರಲಿಲ್ಲ. ಅವರವರ ಇಷ್ಟಬಂದಂತೆ ಮಾಡುತ್ತಿದ್ದರು. ಬಹುಮಂದಿ ಉಪಾಧ್ಯಾಯರು ಪ್ರಾತಃಕಾಲದಲ್ಲಿ ನಿದ್ರಿಸುವ ಅಭ್ಯಾಸವುಳ್ಳವರಾಗಿದ್ದರು. ವಿದ್ಯಾಸಾಗರನು ಆ ಪ್ರತಿಷ್ಠಾಪನೆಯಲ್ಲಿನ ಉದ್ಯೋಗವನ್ನು ವಹಿಸಿಕೊಂಡ ಕೂಡಲೆ ಪ್ರಥಮದಲ್ಲಿ ಕಲಾಶಾಲೆಯಲ್ಲಿನ ಕಾರ್ಯನಿರ್ವಾಹಕಸಮಯ (Time tables) ಗಳನ್ನು ನಿರ್ಣಯಿಸಿದನು. ಉಪಾಧ್ಯಾಯರು ನಿಯಮಿತ

ಕಾಲಕ್ಕೆ ಬಾರದೆ ಹೋಗುವದುರಭ್ಯಾಸವನ್ನು ತಪ್ಪಿಸಲಿಕ್ಕಾಗಿ ಆತನು ಒಂದು ಯುಕ್ತಿ ಮಾಡಿದನು. ಒಂದುದಿನ ತಾನು ಸರಿಯಾದ ಕಾಲಕ್ಕೆ ಮುಂದಾಗಿಯೇ ಬಂದು ಕಲಾಶಾಲೆಯ ಸಿಂಹದ್ವಾರದ ಮುಂದುಗಡೆ ಅತ್ತಲಿಂದಿತ್ತ ತಿರುಗುತ್ತಿದ್ದು ಆಲಸ್ಯವಾಗಿ ಬಂದವರಿಗೆಲ್ಲ ನಮಸ್ಕಾರಮಾಡಿ ಒಳಕ್ಕೆ ಕಳುಹಿಸಿದನು. ತರುವಾಯ ಅವರೆಲ್ಲರೂ ನಾಚಿಕೊಂಡು ಮರು ದಿನದಿಂದ ಎಚ್ಚರವಾಗಿದ್ದು ಸರಿಯಾದ ವೇಳೆಗೆ ಬರುತ್ತಿದ್ದರು. ಸ್ವಲ್ಪ ದಿನಗಳಲ್ಲಿಯೇ ಸಾಮಾನ್ಯವಾಗಿ ಪ್ರತಿವಿಷಯದಲ್ಲಿಯೂ ಅಗತ್ಯವಾದ ಮಾರ್ಪಾಡುಗಳನ್ನು ಮಾಡಿ ಕಲಾಶಾಲೆಯನ್ನು ಉತ್ತಮ ಸ್ಥಿತಿಗೆ ತಂದನು. ಆತನು ಏರ್ಪಡಿಸಿದ ಕೆಲವು ನಿಬಂಧನೆಗಳು ಈಗಲೂ ಆಚಾರಣೆಯಲ್ಲಿವೆ. ಆತನು ಈ ಸಂಸ್ಕೃತ ಕಲಾಶಾಲೆಯಲ್ಲಿರುವಾಗ ಹಿಂದೂ ಕಲಾಶಾಲಾಧಿಪತಿಯಾಗಿದ್ದ "ಕಾರ್" ದೊರೆಯೊಡನೆ ಹೋರಾಡಿದನು. ಒಂದುದಿನ ಆತನು ಸ್ವಂತ ಕೆಲಸದ ಮೇಲೆ ಆ ದೊರೆಯ ದರ್ಶನಕ್ಕೆ ಹೋಗಲು ಆ ದೊರೆಯು ಆತನನ್ನು ಮನ್ನಿಸದೆ, ಆದರಿಸದೆ ಅಗೌರವವಾಗಿ ಕಂಡನು. ಆಗ ವಿದ್ಯಾಸಾಗರನು ತನ್ನ ಕೆಲಸವನ್ನು ನೆರವೇರಿಸಿಕೊಂಡು ಇತರ ಮಾತುಗಳ ನಾಡದೆ ಹೊರಟು ಹೋದನು. ಆದರೂ ಯೋಚನೆಯಿಲ್ಲದ ಆ ದೊರೆ ಮಾಡಿದ ಅಕೃತ್ಯವನ್ನು ಮಾತ್ರ ಮರೆಯಲಿಲ್ಲ. ಕೆಲವು ದಿವಸಗಳ ಮೇಲೆ ಸಂದರ್ಭವಶದಿಂದ ಆ ದೊರೆಗೆ ಇವನಲ್ಲಿ ಕೆಲಸವಿದ್ದುದರಿಂದ ಈತನ ಬಳಿಗೆ ಬಂದನು. ಆಗ ತಾನು ಕುಳಿತಿದ್ದ ಖುರ್ಚಿಯ ಹೊರತಾಗಿ ಅಲ್ಲಿ ಕುಳಿತುಕೊಳ್ಳಲಿಕ್ಕೆ ಮತ್ತಾವ ಆಸನವೂ ಇಲ್ಲದಂತೆ ಮಾಡಿ, ಆ ದೊರೆಯವರು ತನ್ನನ್ನು ನೋಡಲಿಕ್ಕೆ ಬರಬಹುದೆಂದು ಅಪ್ಪಣೆಕೊಟ್ಟು, ಆತನು ಬಂದಾಗ ತನಗೆ ಸಹಜವಲ್ಲದ ಕೃತ್ರಿಮಗರ್ವವನ್ನು ಅಭಿನಯಿಸುತ್ತ ಸ್ವಲ್ಪ ಹೊತ್ತಿನವರೆಗೂ ಮಾತನಾಡದೆ, ಆದರಿಸದೆ, ತನಗೆ ಆತನು ಮೊದಲಲ್ಲಿ ಮಾಡಿದುದರ ಎರಡರಷ್ಟು ಅಗೌರವವನ್ನುಂಟುಮಾಡಿ ಕಳುಹಿದನು. ಅವಮಾನಗೊಂಡ ಆ ದೊರೆಗೆ ಮನಸ್ಸಿನಲ್ಲಿ ರೋಷವು ಉಕ್ಕುತ್ತಿದ್ದರೂ ಶಾಂತದಿಂದ ತನ್ನ ಕೆಲಸವನ್ನು ನೆರವೇರಿಸಿಕೊಂಡು, ತನ್ನ ಪೂರ್ವದ ಬುದ್ಧಿಲೋಪವು ಜ್ಞಾಪಕಕ್ಕೆ ಬಾರದೆ ವಿದ್ಯಾಶಾಖಾ ಕಾರ್ಯದರ್ಶಿಯಾದ (Secretary to the Education Council) ಮೌಟ್ ದೊರೆಯವರಿಗೆ ಆ ದೇಶೀಯನು ತನಗೆ ಮಾಡಿದ ಅವಮಾನವನ್ನು ಕುರಿತು ಫಿರಿಯಾದು

ಮಾಡಿದನು. ತರುವಾಯ ಮೌಟ ದೊರೆಯುವರು ವಿದ್ಯಾಸಾಗರನ ಚರ್ಯೆಯನ್ನು ಕುರಿತು ಸಮಾಧಾನವನ್ನು ಬೇಡಲು, ಆತನು ಆ ವರ್ತಮಾನವೆಲ್ಲ ಆಮೂಲಾಗ್ರವಾಗಿ ಬಿನ್ನೈಸಿದ ತರುವಾಯ ಈ ದೇಶೀಯನ ಧೈರ್ಯಕ್ಕೆ ತುಂಬ ಸಂತೋಷಿಸಿ ಅವರ ವಿವಾದವನ್ನು ಸಮಾಧಾನಗೊಳಿಸಿದರು. ವಿದ್ಯಾಸಾಗರನು ಆ ಉದ್ಯೋಗದಲ್ಲಿದ್ದಾಗಲೇ ಸಾಹಿತ್ಯಪಂಡಿತಪದವಿಯು ತೆರವಾಯಿತು. ರಸೋಮಿದತ್ತ ಮುಂತಾದವರು ಆ ಉದ್ಯೋಗವನ್ನು ಕೈಗೊಳ್ಳಬೇಕೆಂದು ಈತನನ್ನು ಬಲವಂತ ಮಾಡಿದರೂ ತನಗೆ ಅದಕ್ಕಿಂತ ಹೆಚ್ಚು ವೇತನ ಸಿಕ್ಕುವುದಾಗಿದ್ದರು ಪ್ರಸ್ತುತೋದ್ಯೋಗದ ಹಾಗೆ ಕಲಾಶಾಲಾಭಿವೃದ್ಧಿಗೆ ಅಗತ್ಯವಾದ ಮಾರ್ಪುಗಳನ್ನು ಮಾಡಲು ಆ ಉದ್ಯೋಗದಲ್ಲಿ ಅವಕಾಶವಿಲ್ಲದುದರಿಂದ ಆತನು ಈ ಉದ್ಯೋಗಕ್ಕೆ ಸಮ್ಮತಿಸದೆ ಅದಕ್ಕೆ ಅರ್ಹನಾದ ಮದನಮೋಹನ ತರ್ಕಾಲಂಕಾರನೆಂಬ ತನ್ನ ಸ್ನೇಹಿತನಿಗೆ ಅದನ್ನು ಕೊಡಿಸಿದನು.

ಈ ವೇಳೆಯಲ್ಲಿ ವಿದ್ಯಾಸಾಗರನಿಗೆ ಒಂದು ವಿಪತ್ತು ಸಂಭವಿಸಿತು. ಆತನ ಮೂರನೆಯ ತಮ್ಮನಾದ ಹರಿಶ್ಚಂದ್ರನೆಂಬ ಹನ್ನೆರಡು ವರುಷದ ಬಾಲಕನು ವಿದ್ಯಾಭ್ಯಾಸಕ್ಕಾಗಿ ಕಲ್ಕತ್ತೆಗೆ ಬಂದನು. ಅವನು ತುಂಬ ಬುದ್ಧಿವಂತನಾಗಿಯೂ ವಿದ್ಯಾಸಾಗರನಿಗೆ ಪ್ರಿಯನಾದ ತಮ್ಮನಾಗಿಯೂ ಇದ್ದನು. ಆ ಹುಡುಗನು ವಾಂತಭೇದಿಯ ಉಪದ್ರದಿಂದ ಮೃತ್ಯುದೇವತೆಗೆ ಬಲಿಯಾದನು. ಆಗ ಈಶ್ವರಚಂದ್ರನಿಗೆ ಅಪಾರವಾದ ದುಃಖ ಉಂಟಾಯಿತು. ಅವನ ತಾಯಿಯು ಪುತ್ರಶೋಕವನ್ನು ತಾಳಲಾರದೆ ಆಹಾರಗಳನ್ನು ವರ್ಜಿಸಿ ಕೃಶಳಾಗುತ್ತಿರುವಳೆಂದು ತಿಳಿದು ತನ್ನ ಇಬ್ಬರು ತಮ್ಮಂದಿರನ್ನು ಆಕೆಯ ದುಃಖೋಪಶಮನಕ್ಕಾಗಿ ಮನೆಗೆ ಕಳುಹಿಸಿ, ಆರು ತಿಂಗಳಾದ ಮೇಲೆ ಹಿಂದಕ್ಕೆ ಕರೆಯಿಸಿಕೊಂಡನು. ಹೀಗೆ ಕೆಲವು ದಿನಗಳಾದ ತರುವಾಯ ವಿದ್ಯಾಸಾಗರನು ತಾನು ಮಾಡುವ ವಿದ್ಯಾಸಂಸ್ಕರಣಗಳೆಲ್ಲವೂ ರಸೋಮಿದತ್ತ, ಮೌಟ್, ಮೊದಲಾದವರಿಗೆ ಇಷ್ಟವಿಲ್ಲವೆಂದು ತಿಳಿದು, ಅವರು ತನಗೆ ವ್ಯತಿರೇಕಾಭಿಪ್ರಾಯವುಳ್ಳವರಾದುದರಿಂದ ಆ ಉದ್ಯೋಗವನ್ನು ಬಿಟ್ಟು ಬಿಟ್ಟನು. ಆತನ ಬಂಧು ಮಿತ್ರಾದಿಗಳೆಲ್ಲರೂ ಎಷ್ಟು ವಿಧವಾಗಿ ಹೇಳಿದರೂ ಕೇಳದೆ, ತನ್ನ ಮನೋನಿಶ್ಚಯದ ಪ್ರಕಾರವೇ ನಡಿಸಿದನು. ಉದ್ಯೋಗವನ್ನು ಬಿಟ್ಟು ಈ ದೊಡ್ಡ ಕುಟುಂಬವನ್ನು ಹೇಗೆ ಪೋಷಿ

ಸುವೆ? ಎಂದು ಅವರು ಕೇಳಿದಾಗ ಈತನು ಉತ್ತರಕೊಟ್ಟದ್ದೇನಂದರೆ—ಮರ್ಯಾದೆಗೂ, ಆತ್ಮಗೌರವಕ್ಕೂ ಭಂಗ ಬರುವ ಉದ್ಯೋಗವನ್ನು ಮಾಡುವುದಕ್ಕಿಂತ ಕಾಯಿಪಲ್ಯದ ಅಂಗಡಿಯನ್ನಾಗಲಿ, ಪಸಾರೆ ಅಂಗಡಿಯನ್ನಾಗಲಿ, ಇಟ್ಟುಕೊಂಡು ಜೀವಿಸುವುದು ಲೇಸು. ಪ್ರತಿಯೊಬ್ಬರಿಗೂ ಅಕಾರಣವಾಗಿ ತಗ್ಗಿ ನಡೆಯುವುದಾಗಲಿ, ಅವರನ್ನು ಆಶ್ರಯಿಸುವುದಾಗಲಿ, ಮುಖಸ್ತುತಿ ಮಾಡುವುದಾಗಲಿ, ನನ್ನ ಸ್ವಭಾವವಲ್ಲ.

ಉದ್ಯೋಗವು ಹೋಯಿತೆಂದು ಆತನಿಗೆ ಸ್ವಲ್ಪವಾದರೂ ಚಿಂತೆಯಿರಲಿಲ್ಲ. ತನ್ನ ತಮ್ಮನಾದ ದೀನಬಂಧುವು ವಿಲಿಯಂಕಲಾಶಾಲೆಯಲ್ಲಿ ಸಂಪಾದಿಸುತ್ತಿದ್ದ ೫೦ ರೂಪಾಯಗಳಿಂದ ಕಲ್ಕತ್ತೆಯಲ್ಲಿ ಕುಟುಂಬವನ್ನು ಪೋಷಿಸುತ್ತಾ ತಿಂಗಳು ಒಂದಕ್ಕೆ ೫೦ ರೂಪಾಯಿಗಳಂತೆ ಸಾಲಮಾಡಿ ತನ್ನ ತಂದೆಗೆ ಕಳುಹುತ್ತಾ ಬಂದನು. ಆಗಲಾದರೂ ತಾನು ಅದುವರೆಗೆ ಅನೇಕ ಮಂದಿ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದ ಸಹಾಯ ದ್ರವ್ಯವನ್ನು ತಪ್ಪಿಸಲೇ ಇಲ್ಲ.

೧೮೪೯ನೆಯ ಸಂವತ್ಸರದ ಮಾರ್ಚಿ ತಿಂಗಳ ತನಕ ಆತನು ತಿರುಗಿ ಉದ್ಯೋಗದಲ್ಲಿ ಪ್ರವೇಶಿಸಲಿಲ್ಲ. ಈ ಕಾಲದಲ್ಲಿ ಈತನು ಇಂಗ್ಲಿಷ, ಹಿಂದೀ ಭಾಷೆಗಳನ್ನು ಚನ್ನಾಗಿ ಕಲಿತನು. ತನ್ನ ಮಿತ್ರನಾದ ಮೌಟ್ ದೊರೆಯ ಶಿಫಾರಸಿನ ಮೇಲೆ ಆತನ ಮಿತ್ರನೊಬ್ಬನಿಗೆ ಸಂಸ್ಕೃತ ಮತ್ತು ಬಂಗಾಳೀ ಭಾಷೆಗಳನ್ನು ಕೆಲವು ತಿಂಗಳ ತನಕ ಬೋಧಿಸಿದನು. ಕೃತಜ್ಞನಾದ ಆ ವಿದ್ಯಾರ್ಥಿಯು ಗುರುದಕ್ಷಿಣೆಗಾಗಿ ತಿಂಗಳೊಂದಕ್ಕೆ ೫೦ ರೂಪಾಯಿಗಳಂತೆ ಲೆಖ್ಖಮಾಡಿ ಈತನಿಗೆ ಕೊಡಲಿಕ್ಕೆ ಬಂದನು. ತನ್ನ ಸ್ನೇಹಿತನ ಕೋರಿಕೆಯಂತೆ ಮಾಡಿದ ಉಪಕಾರಕ್ಕೆ ಪ್ರತಿಫಲವನ್ನು ಹೊಂದಲಾರೆನೆಂದು ಹೇಳಿ ತನಗೆ ಇಕ್ಕಟ್ಟಿನ ಸಮಯದಲ್ಲಿ ಪ್ರಯೋಜನಕರವಾಗಿದ್ದ ಮೂರು ನಾಲ್ಕು ನೂರು ರೂಪಾಯಿಗಳನ್ನು ಬಿಟ್ಟು ಬಿಟ್ಟನು. ಭಲಾ! ಆತನ ಔದಾರ್ಯ ಗುಣವನ್ನೇನೆನ್ನಬಹುದು. ೧೮೪೭ ರಲ್ಲಿ ವಿದ್ಯಾಸಾಗರನು ವಿತ್ತಲ ಪಂಚವಿಂಶತಿ ಎಂಬ ಬಂಗಾಳೀ ವಚನಕಾವ್ಯವನ್ನು ಬರೆದು ಪ್ರಕಟಿಸಿದನು. ಆ ವಿಲ್ಲಿಯಂ ದುರ್ಗಕಲಾಶಾಲೆಯ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಅದು ಪ್ರಚುರಿಸಲ್ಪಟ್ಟಿತು. ಅದು ಒಂದು ಹಿಂದೀ ಪುಸ್ತಕಕ್ಕೆ ಸರಿಯಾದ ಭಾಷಾಂತರೀಕರಣವಾಗಿದ್ದಿತು. ಇದು ಒಳ್ಳೇ ಸರಣಿ

ಯಲ್ಲಿ ಅತಿ ಮಧುರುವಾಗಿ ಬರೆಯಲ್ಪಟ್ಟಿತ್ತು. ಮೊದಲನೆಯ ಮುದ್ರಣದಲ್ಲಿ ಅಗತ್ಯವಾದ ಕೆಲವು ಬದಲಾವಣೆಗಳನ್ನು ಎರಡನೆಯ ಮುದ್ರಣದಲ್ಲಿ ಮಾಡಿದನು. ಇದೇ ಕಾಲದಲ್ಲಿ ವಿದ್ಯಾಸಾಗರನೂ ಮದನಮೋಹನ ತರ್ಕಾಲಂಕಾರನೂ ಸೇರಿ ೬೦೦ ರೂಪಾಯಿಗಳಿಂದ ಸಂಸ್ಕೃತ ಮುದ್ರಾಕ್ಷರ ಶಾಲೆಯೊಂದನ್ನು ಸ್ಥಾಪಿಸಿದರು. ಇದರಲ್ಲಿ ಬಂಗಾಳೀಭಾಷೆಗೆ ಕಾಳಿದಾಸನೆನಿಸಿಕೊಂಡ ಭಾರತಚಂದ್ರನೆಂಬ ಪ್ರಸಿದ್ಧಕವಿಯ ಪುಸ್ತಕಗಳು ಪ್ರಾರಂಭದಲ್ಲಿ ಪ್ರಚುರಿಸಲ್ಪಟ್ಟವು. ಭಾರತಚಂದ್ರ, ದಾಶರಥಿರಾಯ, ಈಶ್ವರಚಂದ್ರಗುಪ್ತ, ರಸಿಕಚಂದ್ರರಾಯ, ಮೊದಲಾದ ಬಂಗಾಳೀ ಕವಿಗಳಲ್ಲಿ ವಿದ್ಯಾಸಾಗರನಿಗೆ ತುಂಬ ಗೌರವವಿದ್ದಿತು.

೧೮೪೮ನೆಯ ಸಂವತ್ಸರದಲ್ಲಿ ವಂಗ್ಯದೇಶದ ಚರಿತ್ರೆಯ ಎರಡನೆಯ ಭಾಗವು ಪ್ರಚುರಿಸಲ್ಪಟ್ಟಿತು. ಅದರಲ್ಲಿ ಸುರಾಜದೌಲನ ಕಾಲದ ಮೊದಲುಗೊಂಡು ಬೆಂಟಿಂಕ್ ಪ್ರಭುವಿನ ಕಾಲದವರೆಗಿನ ಬಂಗಾಳಾದೇಶದ ಚರಿತ್ರೆಯು ವಿಶದವಾಗಿ ಹೇಳಲ್ಪಟ್ಟಿದೆ. ಅದಕ್ಕೆ ಹಿಂದಿನಕಾಲದ ಇತಿಹಾಸವನ್ನು ರಾಮುಗತಿ ನಾರಾಯಣ ರತ್ನನೆಂಬುವನು ಬರೆದಿದ್ದುದರಿಂದ ಇದನ್ನು ಎರಡನೆಯ ಭಾಗವೆಂದು ಕರೆಯಬೇಕಾಯಿತು. ವಿದ್ಯಾಸಾಗರನು ಇಂಗ್ಲಿಷಿನಿಂದ ಭಾಷಾಂತರೀಕರಿಸಿದ ಮೊದಲನೆಯ ಪುಸ್ತಕವಿದು.

೧೮೪೯ ನೆಯ ಸಂವತ್ಸರದ ಮಾರ್ಚಿ ತಿಂಗಳಲ್ಲಿ ಫೋರ್ಟವಿಲಿಯಂ ಕಾಲೇಜಿನ ಕೋಶಾಧಿಪತಿಯ ಉದ್ಯೋಗವನ್ನು ಬಾಬೂ ದುರ್ಗಾಚರಣ ಬೆನರ್ಜಿಯವರು ಕಾರಣಾಂತರದಿಂದ ಬಿಟ್ಟು ಬಿಟ್ಟು ವೈದ್ಯ ವೃತ್ತಿಯನ್ನವಲಂಭಿಸಿದರು. ಆಗ ಮಾರ್ಷೆಲ್ ದೊರೆಯವರು ಆ ಉದ್ಯೋಗವನ್ನು ೮೦ ರೂಪಾಯಿಗಳ ಸಂಬಳದ ಮೇಲೆ ವಿದ್ಯಾಸಾಗರನಿಗೆ ಕೊಟ್ಟರು. ಆಗ ವಿದ್ಯಾಸಾಗರನು ಒಳ್ಳೆಯ ಸ್ಥಿತಿಯಲ್ಲಿದ್ದುದರಿಂದ ಇಂಗ್ಲಿಷ ವಿದ್ಯೆಯನ್ನು ಮತ್ತಷ್ಟು ಹೆಚ್ಚಾಗಿ ಕಲಿತನು. ಆತನ ಇಂಗ್ಲಿಷ ನಿಬಂಧರಚನಾಸಾಮರ್ಥ್ಯವನ್ನು ಆಂಗ್ಲೇಯರು ಸುದಾ ಬಹಳವಾಗಿ ಮೆಚ್ಚುತ್ತಲಿದ್ದರು. ೧೮೫೦ ನೆಯ ವರುಷದಲ್ಲಿ ವಿದ್ಯಾಸಾಗರನು ಜೀವನಚರಿತ್ರೆಯೆಂಬ ಪುಸ್ತಕವನ್ನು ಪ್ರಚುರಿಸಿದನು. ಅದರಲ್ಲಿ ವಿದೇಶೀಯ ಮಹಾಪುರುಷರ ಜೀವಿತಚರಿತ್ರೆಗಳು ಬರೆಯಲ್ಪಟ್ಟವೆ. ಈ ಪುರುಷಶ್ರೇಷ್ಠರು ತಮ್ಮ ದೇಶಕ್ಷೇಮಕ್ಕಾಗಿ ತಮ್ಮ ಜೀವ

ವನ್ನು ಧಾರೆಯೆರೆದರು. ಘನಕಾರ್ಯಗಳಿಂದ ಜಾತೀಯ ಪ್ರತಿಷ್ಠೆಯನ್ನು ಸಂಪಾದಿಸಿದ ಲೋಕಬಾಂಧವರು. ಅವರು ಎಲ್ಲಾ ಜಾತಿಗಳವರಿಗೂ ಉಪ ಕಾರಿಗಳಾಗಿದ್ದರು. ಈತನು ಸ್ವದೇಶದ ಮಹಾನುಭಾವರ ಜೀವಿತ ಚರಿತ್ರೆ ಗಳನ್ನು ಕೂಡ ಬರೆಯಬೇಕೆಂದು ಯೋಚಿಸಿದ್ದನಂತೆ. ಆದರೆ ದೇಹಾರೋ ಗ್ಯವು ಕೆಟ್ಟುದರಿಂದ ಆ ಪ್ರಯತ್ನವು ನೆರವೇರದೆ ಹೋಯಿತು. ಆ ಕಾಲ ದಲ್ಲಿ ವಿದ್ಯಾಸಾಗರನ ಕುಟುಂಬದಲ್ಲಿ ಸಂತೋಷಕರವಾದ ಒಂದು ಸಂಗತಿ ಜರುಗಿತು. ೧೮೪೯ನೇ ನವಂಬರು ೧೪ ರಲ್ಲಿ ವಿದ್ಯಾಸಾಗರನ ಏಕ ಪುತ್ರ ನಾದ ನಾರಾಯಣಚಂದ್ರನು ಜನ್ಮಿಸಿದನು. ತರುವಾಯ ಕಾಲಕ್ರಮದಿಂದ ಆತನಿಗೆ ನಾಲ್ಕಾರು ಪುತ್ರಿಯರು ಹುಟ್ಟಿದರು ಹೀಗೆ ವಿದ್ಯಾಸಾಗರನು ಪುತ್ರ ಜನನದ ಸಂತೋಷದಲ್ಲಿರುವಾಗಲೇ ಈತನ ನಾಲ್ಕನೆಯ ತಮ್ಮನಾದ ಹರಿ ಶ್ಚಂದ್ರನೆಂಬ ಎಂಟು ವರ್ಷಗಳ ಹುಡುಗನು ಕಲ್ಕತ್ತೆಯಲ್ಲಿ ವಿದ್ಯಾಭ್ಯಾಸ ಕ್ಕಾಗಿ ಬಂದು, ಕೆಲವು ವ್ಯಾಧಿಯಿಂದ ಲೋಕಾಂತರಗತನಾದನು.

ವಿದ್ಯಾಸಾಗರನು ವಿಲ್ಲಿಯಂ ದುರ್ಗ ಕಲಾಶಾಲೆಯ ಉದ್ಯೋಗವನ್ನು ೧೮೫೦ರಲ್ಲಿ ಎರಡನೆಯ ಸಾರಿ ಬಿಟ್ಟುಬಿಟ್ಟು ಮರುದಿನವೇ ಸಂಸ್ಕೃತ ಕಲಾ ಶಾಲೆಯ ಸಾಹಿತ್ಯಪಂಡಿತರಲ್ಲಿ ಮುಖ್ಯಸ್ಥನಾಗಿ ತಿಂಗಳಿಗೆ ೯೦ ರೂಪಾಯಿ ಗಳ ಸಂಬಳದಿಂದ ಮೌಟ್ ಮೊದಲಾದ ಅಧಿಕಾರಿಗಳ ಬಲವಂತದಿಂದ ನಿಯಮಿಸಲ್ಪಟ್ಟನು. ತರುವಾಯ ಈತನು ಆ ಕಲಾಶಾಲೆಯ ಅಧ್ಯಕ್ಷನಾಗಿರ ಲಿಕ್ಕೂ ಸಮ್ಮತಿಸಿದನು. ಆದರಂತೆ ೧೮೫೧ನೇ ಜನವರಿ ತಿಂಗಳಲ್ಲಿ ಈತನು ಆ ಪ್ರತಿಷ್ಠಾಪನೆಯ ಪ್ರಧಾನೋಪಾಧ್ಯಾಯನಾದನು.

ಆ ಕಾಲದಲ್ಲಿ ಆ ಸಂಸ್ಕೃತ ಕಲಾಶಾಲೆಯು ದಿನದಿನಕ್ಕೂ ಕ್ಷೀಣಿಸುತ್ತ ತುಂಬ ಶಿಥಿಲದಶೆಯಲ್ಲಿದ್ದುದರಿಂದ ವಿದ್ಯಾಶಾಖೆಯ ನಿರ್ವಾಹಕಸಂಘದವರು ಆ ವಿಷಯವನ್ನು ಕುರಿತು ಸಂಪೂರ್ಣವಾದ ಒಂದು ವರದಿ ( Report ) ಯನ್ನು ಬರೆಯಲಿಕ್ಕೆ ಅರ್ಹನೆಂದು ವಿದ್ಯಾಸಾಗರನನ್ನು ಪ್ರಾರ್ಥಿಸಲು ಆತನು ಅದರಂತೆಯೇ ಒಂದು ವರದಿಯನ್ನು ಬರೆದು ಆ ಸಂಘದವರ ಮುಂದೆ ಇಟ್ಟನು. ಆ ವರದಿಯಿಂದ ವಿದ್ಯಾಸಾಗರನ ಅದ್ಭುತವಾದ ಆಲೋಚನಾ ಶಕ್ತಿಯೂ, ಸೂಕ್ಷ್ಮಬುದ್ಧಿಯೂ, ಸುಲಭಕರವಾದ ನೂತನ ಮಾರ್ಗಾವ ಲಂಬನಾದೃಷ್ಟಿಯೂ ವ್ಯಕ್ತವಾಗದೆ ಇರವು. ಕ್ಲುಪ್ತವಾಗಿ ಆ ಕಲಾಶಾಲೆಗೆ

ಸಂಬಂಧಿಸಿದ ವಿಷಯಗಳೆಲ್ಲವನ್ನು ಚರ್ಚಿಸುತ್ತಾ, ಅವುಗಳಲ್ಲಿನ ಲೋಪಗಳನ್ನು ತೋರಿಸಿ, ಅವುಗಳಿಗೆ ತಕ್ಕ ನಿವಾರಣೋಪಾಯಗಳನ್ನು ಸೂಚಿಸುತ್ತಾ, ಶ್ರೋತೃಗಳಿಗೆ ಆಶ್ಚರ್ಯವುಂಟಾಗುವಂತೆ ಬರೆದಿದ್ದನು. ಆ ಸಂಘದವರು ಅದನ್ನು ವಿಮರ್ಶೆಮಾಡಿ ಆ ಕಲಾಶಾಲೆಯ ದುಸ್ಥಿತಿಗಳನ್ನು ಸಮವರಿಸುವ ಮಾರ್ಗವನ್ನು ಕಾಣದೆ, ಆ ಕಾಲೇಜನ್ನೇ ತೆಗದು ಹಾಕಬೇಕೆಂದು ಯೋಚಿಸಿದ್ದರು. ಆದರೂ ಸಮರ್ಥನೀಯವಾದ ವಿದ್ಯಾಸಾಗರನ ವಿಮರ್ಶನೆಯನ್ನು ನೋಡಿ, ಸ್ವಲ್ಪಮಟ್ಟಿಗೆ ಧೈರ್ಯವನ್ನವಲಂಬಿಸಿ, ಅದನ್ನು ಅಭಿವೃದ್ಧಿಗೆ ತರಲು ಪ್ರಯತ್ನಿಸತಕ್ಕುದೆಂದು ನಿಶ್ಚಯಿಸಿದರು. ಈ ಕಾಲೇಜು ಇಂದಿನವರಿಗೂ ನಿಂತಿರುವುದಕ್ಕೂ ಶಾಶ್ವತವಾದ ಅದರ ಅಭಿವೃದ್ಧಿಗೂ ಈತನೇ ಮುಖ್ಯ ಕಾರಣನಾಗಿರುವನು. ಬಂಗಾಳಾದೇಶದಲ್ಲಿ ವಿದ್ಯಾಸ್ಥಾಪನೆಗಾಗಿ ಈಶ್ವರಚಂದ್ರನ ಹಾಗೆ ಪ್ರಯತ್ನಪಟ್ಟವರಲ್ಲಿ ಬಾಬೂ ಬಸದೇವ ಮುಖರ್ಜಿ ಎಂಬಾತನೊಬ್ಬನು. ಇವರಿಬ್ಬರೂ ತಮ್ಮ ಮಾತೃದೇಶಾಭಿವೃದ್ಧಿಗಾಗಿ ಔದಾರ್ಯದಿಂದ ತಮ್ಮ ಬುದ್ಧಿ-ವಿದ್ಯಾ-ಧನಾದಿಗಳನ್ನೆಲ್ಲ ವಿನಿಯೋಗಮಾಡಿದರು. ಮೇಲೆ ವಿವರಿಸಿದ ವಿದ್ಯಾವಿಷಯವಾದ ವರದಿಯಿಂದಲೇ ವಿದ್ಯಾಸಾಗರನಿಗೆ ಲೋಕವ್ಯವಹಾರದಲ್ಲಿ ಒಳ್ಳೆಯ ಹೆಸರು ಬಂದಿತು. ಆತನು ಕಲಾಶಾಲೆಯಲ್ಲಿನ ವಿದ್ಯಾರ್ಥಿಗಳ ಉಪಯೋಗಕ್ಕೋಸ್ಕರ ಅನೇಕ ಪುಸ್ತಕಗಳನ್ನು ಬರೆದು ಪ್ರಕಟಿಸಿದನು ಆತನು ಆ ಕಲಾಶಾಲೆಯ ಅಭಿವೃದ್ಧಿಗಾಗಿ ಮಾಡಿದ ಏರ್ಪಾಡುಗಳು ಇನ್ನೂ ಅನೇಕಗಳಿರುವುವು.

ಅದುವರೆಗೆ ಆ ಕಲಾಶಾಲೆಯನ್ನು ಕಾರ್ಯದರ್ಶಿ, ಸಹಾಯಕಾರ್ಯದರ್ಶಿ ಎಂಬುವರಿಬ್ಬರು ತಮ್ಮ ಸ್ವಾಧೀನದಲ್ಲಿಟ್ಟುಕೊಂಡು ಬೇಕಾದ ಏರ್ಪಾಡುಗಳನ್ನು ಮಾಡುತ್ತಲಿದ್ದರು. ೧೮೫೧ನೆಯ ಸಂವತ್ಸರದಲ್ಲಿ ಆ ಉದ್ಯೋಗಗಳೆರಡನ್ನೂ ಸೇರಿಸಿ ತಿಂಗಳಿಗೆ ೧೫೦ ರೂಪಾಯಿಗಳ ವೇತನದಿಂದ ಪ್ರಧಾನೋಪಾಧ್ಯಾಯ ಪದವಿಯೊಂದನ್ನೇರ್ಪಡಿಸಿ, ಅದನ್ನೇ ನಮ್ಮ ವಿದ್ಯಾಸಾಗರನಿಗೆ ಕೊಟ್ಟರು. ಆ ಕಾಲೇಜನ್ನು ಅಭಿವೃದ್ಧಿಸ್ಥಿತಿಗೆ ತರುವುದೇ ಈತನ ಮುಖ್ಯೋದ್ದೇಶವಾಗಿತ್ತು. ಈ ಉದ್ಯೋಗದಲ್ಲಿ ಪ್ರವೇಶಿಸಿದ ಮೊದಲು ತನ್ನ ಶಕ್ತಿಯಿದ್ದ ಮಟ್ಟಿಗೂ ಹಾಗೆಯೇ ಮಾಡಲಿಕ್ಕೆ ಯತ್ನಿಸಿದನು. ಮೊತ್ತ ಮೊದಲು ಉಪಾಧ್ಯಾಯರೂ, ವಿದ್ಯಾರ್ಥಿಗಳೂ, ಆಲಸ್ಯವಾಗಿ ಬರುವ ದುರಭ್ಯಾಸವನ್ನು ತಪ್ಪಿಸಿ ಕ್ರಮವಾಗಿ ಕೆಲಸಮಾಡುವ ಕಾಲಗಳನ್ನು ನಿರ್ಣಯಿ

ಸಿದನು. ತರುವಾಯ ಕಲಾಶಾಲೆಯಲ್ಲಿನ ಒಳಲೋಪಗಳನ್ನು ಸಮವರಿಸಿ ಅದರ ಅಭಿವೃದ್ಧಿಗೆ ತಕ್ಕ ಮಾರ್ಗಗಳನ್ನಾಲೋಚಿಸಿದನು. ವಿದ್ಯಾಶಾಲೆಯು ಜಯಪ್ರದವಾಗಿರಬೇಕಾದರೆ ಅದಕ್ಕೆ ವಿದ್ಯಾರ್ಥಿಗಳ ಅಭಿಮಾನವೂ ಐಕ್ಯ ಮತ್ಯವೂ ಅತ್ಯಾವಶ್ಯಕಗಳೆಂತಲೂ ಅವುಗಳನ್ನು ನಯವಾದ ಮಾರ್ಗಗ ಳಿಂದ ಪಡೆಯತಕ್ಕುದೇ ಹೊರ್ತು ತೀವ್ರ ಮಾರ್ಗವನ್ನವಲಂಬಿಸಿದರೆ ಸಾಧ್ಯ ವಲ್ಲವೆಂತಲೂ ಚೆನ್ನಾಗಿ ಕಂಡು ಹಿಡಿದು, ಈತನು ಅವರಲ್ಲಿ ಸೇರಿ ನಡೆ ಯುತ್ತಿದ್ದನು. ಬೋಧನೇತರ ಸಮಯಗಳಲ್ಲಿ ಮಿತ್ರರಂತೆ ಅವರೊಂದಿಗೆ ಸರಸಸಲ್ಲಾಪಗಳನ್ನಾಡುತ್ತಾ ಆಗಾಗ್ಗೆ ಅವರ ಮನಸ್ಸಂತೋಷಾರ್ಥವಾಗಿ ಮಿಠಾಯಿ ಮೊದಲಾದ ಪದಾರ್ಥಗಳನ್ನು ಹಂಚುತ್ತಾ ಬಹಳ ಸಲಿಗೆಯಿಂದ ನಡೆದುಕೊಳ್ಳುತ್ತಿದ್ದರೂ ವ್ಯವಹಾರಸಮಯಗಳಲ್ಲಿ ಮುಖನೋಡದೆ ಅಗತ್ಯ ವೆಂದು ತೋರಿದಾಗ ಕಾಠಿಣ್ಯವನ್ನು ಕೂಡ ಅವಲಂಬಿಸುತ್ತಾ ತನ್ನ ಕರ್ತ ವ್ಯವನ್ನು ಮಾತ್ರ ನ್ಯಾಯವಾಗಿ ನೆರವೇರಿಸುತ್ತಲಿದ್ದನು. ಆ ಕಠಿಣತ್ವವು ಸಹಜವಾದುದಲ್ಲದೆ ಸಮಯೋಚಿತವಾಗಿದ್ದುದರಿಂದ ಸ್ವಲ್ಪಕಾಲದಲ್ಲಿಯೇ ಇಲ್ಲದೆ ಹೋಗುತ್ತಿದ್ದಿತು. ಕೋಪವಡಗಿದ ಕೂಡಲೇ ಆತನ ಮುಖವು ವಿಕಾಸದಿಂದಲೂ ಉಲ್ಲಾಸದಿಂದಲೂ ಮೆರೆಯುತ್ತಿದ್ದಿತು. ಬಾಲಕರನ್ನು ಶಿಕ್ಷಿಸುವುದಕ್ಕೆ ಆತನಿಗೆ ಎಷ್ಟು ಮಾತ್ರವೂ ಇಷ್ಟವಿರಲಿಲ್ಲ. ಪೆಟ್ಟುಗಳನ್ನು ಹೊಡೆಯುವುದು ಆತನಿಗೆ ಸಹಿಸದು. ಒಳ್ಳೆಯ ಮಾತುಗಳಿಂದಲೂ ಹೇತ್ವ ಜ್ಞಾನಬೋಧೆಗಳಿಂದಲೂ, ಅವರನ್ನು ವಶಪಡಿಸಿಕೊಂಬುದೇ ಆತನ ಅಭಿ ಪ್ರಾಯ. ಸಮಯಸ್ಫೂರ್ತಿಯುಳ್ಳ ಚಮತ್ಕಾರಪ್ರಸಂಗಗಳಿಗೆ ಆತನೇ ಹೆಸ ರಿಟ್ಟವನು. ನಿತ್ಯ ಸಂತೋಷಕ್ಕೆ ಅವನೇ ತೌರುಮನೆ. ಒಂದುದಿನ ಒಬ್ಬ ಉಪಾಧ್ಯಾಯನು ಬಾಲಕನೊಬ್ಬನನ್ನು ಶಿಕ್ಷಿಸುತ್ತಿದ್ದುದನ್ನು ನೋಡಿ ಸಹಿ ಸದೆ, ಇನ್ನು ಮುಂದೆ ಯಾವ ಉಪಾಧ್ಯಾಯನಾದರೂ, ದೇಹದಂಡನೆ ಮಾಡಕೂಡದೆಂದು ಆಜ್ಞಾಪಿಸಿದನು. ಆತನು ಕೊನೆಗಾಲದಲ್ಲಿ ಸ್ಥಾಪಿಸಿದ ಒಂದು ಪಾಠಶಾಲೆಯಲ್ಲಿನ ಉಪಾಧ್ಯಾಯನು ವಿದ್ಯಾರ್ಥಿಯೊಬ್ಬನನ್ನು ಅಕ್ರಮ ವಾಗಿ ಹೊಡೆದನೆಂದು ತಿಳಿದು ಅದನ್ನು ವಿಚಾರಿಸಿ, ಆ ಬೋಧಕನನ್ನು ಉದ್ಯೋಗದಿಂದ ತೊಲಗಿಸಿದನು. ವಿದ್ಯಾರ್ಥಿಗಳನ್ನು ಆಗಾಗ್ಗೆ ತನ್ನ ಮನೆಗೆ ಕರೆಯಿಸಿಕೊಂಡು ಭೋಜನಮಾಡಿಸುವ ಅಭ್ಯಾಸವಿಟ್ಟಿದ್ದನು. ಮನೆಯಲ್ಲಿ ದ್ದಾಗ ಎಳೆಯ ಮಕ್ಕಳು ಬಂದರೆ ಅವರನ್ನು ಮನ್ನಿಸಿ ಮಾತನಾಡುತ್ತಿದ್ದನು.

ಒಂದಾನೊಂದು ದಿನ ಕಲ್ಕತ್ತೆಯ ವೈದ್ಯಶಾಲೆಯ ಪ್ರಧಾನೋಪಾಧ್ಯಾಯನು ತನ್ನ ವಿದ್ಯಾರ್ಥಿಗಳನ್ನು ನಿಂದಿಸಿ, ಅವಮಾನಪಡಿಸಿದುದರಿಂದ ಅವರೆಲ್ಲರೂ ಸೇರಿ ಒಂದು ಸಭೆಮಾಡಿ ಆ ತಪ್ಪುಗಾರನು ತಮ್ಮ ಕ್ಷಮೆಯನ್ನು ಬೇಡಿದ ಹೊರತು ತಮ್ಮಲ್ಲಿ ಯಾವನಾದರೂ ಆ ಕಲಾಶಾಲೆಗೆ ಹೋಗಕೂಡದೆಂದು ತೀರ್ಮಾನಿಸಿಕೊಂಡರು. ಅದರಂತೆಯೇ ಅವರೆಲ್ಲರೂ ಐಕಮತ್ಯದಿಂದ ಕೆಲವು ತಿಂಗಳ ತನಕ ಆ ಶಾಲೆಗೆ ಹೋಗದೆ ತಮ್ಮ ಪ್ರತಿಜ್ಞೆಯನ್ನು ನೆರವೇರಿಸಿಕೊಂಡರು. ಆಗ ಅವರಲ್ಲಿ ವಿದ್ಯಾರ್ಥಿವೇತನಗಳನ್ನು ಪಡೆಯುವ ಕೆಲವರು ಬಾಲಕರು ವಿದ್ಯಾಸಾಗರನ ಬಳಿಗೆ ಹೋಗಿ ಹೇಳಿಕೊಂಡರು. ಆತನು ಮರಳಿ ಕಲಾಶಾಲೆಗೆ ಹೋಗಿ ಸೇರಿರೆಂದು ಅವರಿಗೆ ಸಲಹೆಕೊಟ್ಟನು. ಆಗ ಅವರ ಮುಖ್ಯಸ್ಥನಾದ ವಿಜಯಕೃಷ್ಣಗೋಸ್ವಾಮಿಯೆಂಬ ವಿದ್ಯಾರ್ಥಿಯು ಹಾಗೆ ಮಾಡಿದರೆ ತಮ್ಮ ಆತ್ಮಗೌರವಕ್ಕೆ ಭಂಗ ಬರುವುದೆಂದು ಪ್ರಸಂಗಿಸಿದನು. ಅದಕ್ಕಾತನು ತುಂಬ ಸಂತೋಷಿಸಿ, ಲೆಫ್ಟಿನೇಂಟ್ ಗವರ್ನರವರ ಸಂಗಡ ಮಾತನಾಡಿ ಆ ಉಪಾಧ್ಯಾಯನನ್ನು ಕರೆಸಿ ವಿವಾದಗ್ರಸ್ತರಾದ ಆ ಗುರುಶಿಷ್ಯರುಗಳನ್ನು ಸಮ್ಮತಿಪಡಿಸಿದನು. ಅಂದಿನಿಂದ ಆತ್ಮಗೌರವಾಸಕ್ತಿಯುಳ್ಳ ಆ ಬಾಲಕನ ಮೇಲೆ ಈಶ್ವರಚಂದ್ರನು ತುಂಬ ದಯಾಪ್ರೇಮಗಳುಳ್ಳವನಾಗಿದ್ದನು. ಅದಕ್ಕೆ ಮುಂಚೆ ಸಂಸ್ಕೃತ ಕಲಾಶಾಲೆಯಲ್ಲಿ ಬ್ರಹ್ಮ, ಕ್ಷತ್ರಿಯ, ವೈಶ್ಯರ ಹೊರತು ಉಳಿದ ಶೂದ್ರರು ( ಕಾಯಸ್ಥರು ) ಓದ ಕೂಡದೆಂಬ ನಿಬಂಧನೆಯಿದ್ದಿತು. ಪ್ರಕೃತದಲ್ಲಿ ನಮ್ಮ ಸಾಂಘಿಕವಲಯದಲ್ಲಿರುವ ಕುಲಪ್ರತಿಬಂಧವು ನಾಲ್ವತ್ತು ವರ್ಷಗಳ ಹಿಂದೆ ಜಾತೀಯ ಜೀವನವೇ ಮೊದಲಾದ ಸರ್ವ ವಿಷಯಗಳಲ್ಲಿಯೂ ವ್ಯಾಪಿಸಿದ್ದಿತು. ಇಂತಹ ನಿಬಂಧನೆಯನ್ನು ನೋಡಿ ಈತನು ಸಹಿಸಲಾರದೆ ವಿದ್ಯಾಶಾಖಾನಿರ್ವಾಹಕ ಸಂಘದವರಿಗೆ ೧೮೫೧ ನೆಯ ಸಂವತ್ಸರದ ಮಾರ್ಚ ೩೦ ನೆಯ ದಿನ ಹೇತುಕವಾದ ಕೆಲವು ನಿದರ್ಶನಗಳೊಂದಿಗೆ ಮತ್ತೊಂದು ವಿಮರ್ಶನೆಯನ್ನು ಕಳುಹಿದನು. ಶೂದ್ರರು ಸಂಸ್ಕೃತವನ್ನು ಕಲಿತರೆ ಹಿಂದೂಶಾಸ್ತ್ರಗಳು ಅಪವಿತ್ರಗಳಾಗುವುವೆಂದು ಆ ಕಾಲದ ಪೂರ್ವಾಚಾರಪರಾಯಣರು ನಂಬಿದ್ದರು. ವಿದ್ಯಾಸಾಗರನು ಮಾಡಲೆಳಸಿದ ಈ ಪ್ರಯತ್ನಕ್ಕೆ ಅವರು ಆತಂಕಪಡಿಸಿದರು. ಆದರೆ ವಿದ್ಯಾಸಾಗರನು ಅವರು ಹೇಳಿದ ಹೇತುಗಳಿಂದಲೇ ಆ ಪಂಡಿತರನ್ನು ಸೋಲಿಸಿದನು.

ಮತ್ತು ಆತನು ಸಂಸ್ಕೃತ ಕಲಾಶಾಲೆಯಲ್ಲಿ ಕಡಮೆಯ ವರ್ಣದವರು ಸಂಸ್ಕೃತವನ್ನು ಅಭ್ಯಾಸಿಸಲು ಅವಕಾಶವಿಲ್ಲದಿದ್ದರೆ ನೀವು ಧನದಾಸೆಯಿಂದ ವಿದೇಶೀಯರಾದ ಪಾಶ್ಚಾತ್ಯರಿಗೆ ಸಂಸ್ಕೃತ ವಾಙ್ಮಯ ಗ್ರಂಥಗಳನ್ನು ಬೋಧಿಸುತ್ತಾ, ಹಿಂದೂ ವೇದಾಂತ ಮಾರ್ಗಗಳನ್ನು ಹೇಗೆ ಉಪದೇಶಿಸಿದಿರಿ? ಅವರಿಗೆ ಸಮಾನರಾದ ಕಾಯಸ್ಥಕುಲಜರು ಆ ಹಕ್ಕುಗಳನ್ನೇ ಏತಕ್ಕೆ ಹೊಂದಲರ್ಹರಲ್ಲದೆ ಹೋದರು. ಎಂದು ವಾದಿಸುತ್ತಾ ಪ್ರತಿಪಕ್ಷದವರ ಬಾಯಿಮುಚ್ಚಿ ಕಳುಹಿಬಿಟ್ಟನು. ಅಂದಿನಿಂದಲೂ ಆ ಕಲಾಶಾಲೆಯಲ್ಲಿ ಸಕಲ ವರ್ಣಗಳವರು ಸಮಾನವಾಗಿ ವಿದ್ಯಾಭ್ಯಾಸವನ್ನು ಹೊಂದುತ್ತಾ, ಅದರ ಪ್ರಯೋಜನವನ್ನು ಪಡೆಯುತ್ತಾ ಬಂದರು. ಸಂಸ್ಕೃತ ಕಲಾಶಾಲೆಯಲ್ಲಿನ ವಿದ್ಯಾರ್ಥಿಗಳಿಂದ ಜೀತ ( School fees )ಗಳನ್ನು ತೆಗೆದುಕೊಳ್ಳುವ ಪದ್ಧತಿಯನ್ನು ಈಶ್ವರಚಂದ್ರನೇ ಏರ್ಪಡಿಸಿದವನು. ಸಂಸ್ಕೃತ ವಿದ್ಯಾಭ್ಯಾಸ ಕ್ರಮದಲ್ಲಿ ಈತನು ಮಾಡಿದ ಮಾರ್ಪಾಡುಗಳಲ್ಲಿ ಮುಖ್ಯವಾದುದು ಪುರಾತನ ಪದ್ಧತಿಗಳನ್ನು ತೆಗೆದು ಹಾಕಿ, ನವೀನಬೋಧನಾ ಮಾರ್ಗಗಳನ್ನು ಅವಲಂಬಿಸುವಂತೆ ಮಾಡಿದುದೇ. ಬಾಲಕರು ಪೂರ್ವದ ಪದ್ಧತಿಯಂತೆ "ಮುಗ್ಧಬೋಧೆ" ಎಂಬ ವ್ಯಾಕರಣವನ್ನಾರಂಭಿಸಿ ಸಂಸ್ಕೃತವನ್ನು ಕಲಿತುಕೊಳ್ಳುತ್ತಿದ್ದರು. ಈ ಪುಸ್ತಕವು ಬಾಲಪಾಠಕ್ಕೆ ಸ್ವಲ್ಪವೂ ಅನುಕೂಲವಾದುದಲ್ಲವಾದುದರಿಂದ ವಿದ್ಯಾಸಾಗರನು "ಉಪಕ್ರಮಣಿಕೆ" "ಕೌಮುದಿ" (ನಾಲ್ಕು ಭಾಗಗಳು) ವ್ಯಾಕರಣಗಳನ್ನು ಕಾಲಕ್ರಮದಿಂದ ಅಭ್ಯಾಸಿಸುವಂತೆ ಮಾಡಿ ಸುಲಭಕರವಾದ ವಿದ್ಯಾಭಿವೃದ್ಧಿಯ ಮಾರ್ಗವನ್ನು ಕಂಡುಹಿಡಿದನು. ಮತ್ತು ರಾಮಾಯಣ, ಮಹಾಭಾರತ, ಪಂಚತಂತ್ರ, ಮುಂತಾದ ಗ್ರಂಥಗಳಿಂದ ಕೆಲವು ಉತ್ತಮಭಾಗಗಳನ್ನು ಆರಿಸಿ ತೆಗೆದು "ಋಜುಪಾಠ" ಎಂಬ ಹೆಸರಿನಿಂದ ಮೂರು ಭಾಗಗಳಾಗಿ ಪ್ರಚುರಗೊಳಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟನು. ಎಪ್, ಏ; ಬಿ. ಏ; ವಿದ್ಯಾರ್ಥಿಗಳ ಸಂಸ್ಕೃತ ಪಾಠಗಳಿಗೆ ಸುಲಭ ಶೈಲಿಯಿಂದ, ವ್ಯಾಖ್ಯಾನ ವಿಶೇಷಾಂಶ ( Notes )ಗಳನ್ನು ಬರೆಯುತ್ತಿದ್ದನು. ಈ ಮೇರೆಗೆ ತಾನು ಕಂಡುಹಿಡಿದ ಹೊಸಮಾರ್ಗಗಳನ್ನು ಬಳಕೆಯಲ್ಲಿ ತಂದನು. ಕಲಾಶಾಲೆಯ ಅಭಿವೃದ್ಧಿಗೋಸ್ಕರ ಇಷ್ಟು ಕಷ್ಟಪಟ್ಟುದರಿಂದಲೂ, ತನ್ನ ಇಬ್ಬರು ಪ್ರಿಯಸಹೋದರರ ಅಕಾಲ ಮರಣದ ದುಃಖದಿಂದಲೂ, ಆತನ

ಆರೋಗ್ಯವು ಸ್ವಲ್ಪಮಟ್ಟಿಗೆ ಕೆಟ್ಟುಹೋಯಿತು. ಆದರೂ ರಕ್ತಪುಷ್ಟಿ ಮಾತ್ರ ತಗ್ಗಲಿಲ್ಲ. ೧೮೪೯ನೆಯ ವರುಷದಲ್ಲಿ ಬೇಥ್ಯೂನ್ ದೊರೆಯವರು ಹಿಂದೂ ಸುಂದರಿಯರ ವಿದ್ಯಾಭಿವೃದ್ಧಿಗಾಗಿ ಕಲ್ಕತ್ತೆಯಲ್ಲಿ ಒಂದು ಬಾಲಿಕಾಪಾಠ ಶಾಲೆಯನ್ನು ಸ್ಥಾಪಿಸಿದರು. ಆ ದೊರೆ ನಮ್ಮ ವಿದ್ಯಾಸಾಗರನ ಮುಖ್ಯ ಸ್ನೇಹಿತನು. ದೇಶೀಯರಲ್ಲಿ ತುಂಬ ಪ್ರೇಮವುಳ್ಳ ಮಹಾತ್ಮನು. ಆತನು ಪ್ರಯತ್ನಿಸಿದ ಈ ಸತ್ಕಾರ್ಯಕ್ಕೆ ವಿದ್ಯಾಸಾಗರನು ತುಂಬ ಸಹಾಯಕನಾಗಿದ್ದನು. ಮೊತ್ತಮೊದಲು ೧೮೩೦ರಲ್ಲಿ ಬಂಗಾಳದಲ್ಲಿ ಪ್ರಥಮ ಬಾಲಿಕಾ ಪಾಠಶಾಲೆಯೊಂದು ಸ್ಥಾಪಿಸಲ್ಪಟ್ಟಿತು. ಅದರಿಂದ ಬಹುಮಂದಿ ಸ್ತ್ರೀಯರು ಲಾಭವನ್ನು ಪಡೆದರು. ೧೮೪೭ರಲ್ಲಿ ಕಲ್ಕತ್ತೆಯಲ್ಲಿ ಎಲ್ಲಾ ಸುಮಾರು ೮೦೦ ಮಂದಿ ವಿದ್ಯಾರ್ಥಿನಿಯರನ್ನುಳ್ಳ ಐವತ್ತು ಬಾಲಿಕಾ ಪಾಠಶಾಲೆಗಳು ಇದ್ದುವು. ಪ್ರಪಂಚದಲ್ಲೆಲ್ಲಾ ನಾಗರೀಕಾಗ್ರೇಸರರೆನಿಸಿದ ಹಿಂದೂ ಜನರು ತಮ್ಮ ನೀಚದಶೆಯಿಂದ ವಿಮುಕ್ತರಾಗಿ ಪೂರ್ವದ ಔನ್ನತ್ಯವನ್ನು ಪಡೆಯಲೆಳಿಸಿದರೆ ಪ್ರಥಮತಃ ಅವರ ಸ್ತ್ರೀಯರ ದುಸ್ಥಿತಿಯನ್ನು ನೆಟ್ಟಗೆ ಮಾಡಬೇಕೆಂದು ಬೇಥ್ಯೂನ್‌ದೊರೆಯವರ ಮುಖ್ಯಾಭಿಪ್ರಾಯವಾಗಿದ್ದಿತು. ಆಗ ಕ್ರಿಸ್ತಿಯ ಮತವು ಸ್ವಲ್ಪವಾಗಿ ವ್ಯಾಪಿಸುತ್ತಿದ್ದುದರಿಂದ ಆಂಗ್ಲೇಯ ಪದ್ಧತಿಗಳನ್ನನುಸರಿಸಿ ಇಂತಹ ಸ್ತ್ರೀವಿದ್ಯಾನಿಲಯವನ್ನೇರ್ಪಡಿಸುವುದು ಬಹು ಕಷ್ಟವಾಗಿದ್ದಿತು. ಮದನಮೋಹನ ತರ್ಕಾಲಂಕಾರನೇ ಮೊದಲಾದ ವಿದ್ಯಾಸಾಗರನ ಮಿತ್ರರೂ ಇವರ ಪ್ರಯತ್ನಕ್ಕೆ ಸಹಾಯಕರಾದರು. ಸ್ತ್ರೀವಿದ್ಯೆಯು ಶಾಸ್ತ್ರ ಸಮ್ಮತವಲ್ಲವೆಂದು ಆಗ ತಮ್ಮ ಬಾಲೆಯರನ್ನು ಪಾಠಶಾಲೆಗೆ ಕಳುಹದ ತಂದೆತಾಯಿಗಳನ್ನು ಸಂಘದಿಂದ ಬಹಿಷ್ಕರಿಸಿದರು. ಬೆಥ್ಯೂನ್‌ದೊರೆಯವರು ಆಟದ ಬೊಂಬೆ ಮೊದಲಾದ ವಿಚಿತ್ರ ವಸ್ತುಗಳನ್ನು ಬಾಲಿಕೆಯರಿಗೆ ಪ್ರೋತ್ಸಾಹ ಉಂಟಾಗುವದಕ್ಕೋಸ್ಕರ ಬಹುಮಾನವಾಗಿ ಹಂಚಿಸಿದರು. ಮತ್ತು ಆ ಪಾಠಶಾಲೆಯ ವೆಚ್ಚಗಳಲ್ಲಿ ವಿಶೇಷಭಾಗವನ್ನು ಅವರೇ ವಹಿಸಿದರು. ಪಾಠಶಾಲೆಯ ಮನೆಯನ್ನು ಕಟ್ಟುವುದಕ್ಕಾಗಿ ಚಂದಾಹಣವನ್ನು ಶೇಖರ ಮಾಡಿದರು. ಹಿಂದೂ ದೇಶದಲ್ಲೆಲ್ಲಾ ಸ್ತ್ರೀಯರಿಗೆ ಉತ್ತಮ ವಿದ್ಯೆಯನ್ನು ಕಲಿಸುವದಕ್ಕೆ ತಕ್ಕ ಪ್ರತಿಷ್ಠಾಪನೆಯು ಇದೊಂದೇ. ಅದರಲ್ಲಿ ಸರ್ವಕಲಾಶಾಲೆಯ ಶಿಕ್ಷಣವು ಸುದಾ ಕೊಡಲ್ಪಡುತ್ತಿದೆ. ಶ್ರೀರಾಜಾರಾಮಮೋಹನರಾಯರಂತೆಯೇ ವಿದ್ಯಾಸಾಗರನಿಗೂ ಸ್ತ್ರೀಯರಲ್ಲಿ ತುಂಬ ಆದರವಿತ್ತು.

ಅವರ ವಿದ್ಯಾಭಿವೃದ್ಧಿಯನ್ನು ಕುರಿತು ಆತನು ಹೀಗೆ ಹೇಳುತ್ತಿದ್ದನು. "ನಮ್ಮ ದೇಶದಲ್ಲಿನ ಪುರುಷರು ಹೆಂಗಸರನ್ನು ವಿದ್ಯಾಗಂಧವಿಲ್ಲದವರನ್ನಾಗಿ ಮಾಡಿ ಅವರಿಗೆ ಮಹತ್ತರವಾದ ಕರ್ತವ್ಯಗಳನ್ನು ವಿಧಿಸುತ್ತಿದ್ದಾರೆ. ವಿದ್ಯೆಯಿಲ್ಲದಿದ್ದರೆ ಪುರುಷನಾದರೂ ಪಶುವಿಗೆ ಸಮಾನನೆಂದು ಅವರೇ ಹೇಳುತ್ತಿರುವರು. ಅಂತಹ ಸ್ಥಿತಿಯಲ್ಲಿ ಅವಿವೇಕಿಗಳಾಗಿ ಅಜ್ಞಾನಸಮುದ್ರದಲ್ಲಿ ಮುಳುಗಿರುವ ತಮ್ಮ ಸ್ತ್ರೀಯರು ಮಾತ್ರ ಅವರ ವಿಧಾಯಕ ಕೃತ್ಯಗಳನ್ನು ಕ್ರಮವಾಗಿ ನೆರವೇರಿಸಬೇಕೆಂದರೆ ಹೇಗೆ ಸಾಧ್ಯವಾಗುವದು?

ಶ್ಲೋ॥ ಕಾರ್ಯೇಷು ದಾಸೀ ಕರಣೇಷು ಮಂತ್ರೀ।
ರೂಪೇ ಚ ಲಕ್ಷ್ಮೀ ಕ್ಷಮಯಾಧರಿತ್ರೀ॥
ಮೋಷೇ ತು ಮಾತಾ ಶಯನೇ ತು ರಂಭಾ।
ಷಟ್ಕರ್ಮಯುಕ್ತಾ ಕುಲಧರ್ಮಪತ್ನೀ॥

ಕುಮಾರಿಯು ಸುದಾ ತುಂಬ ಶ್ರದ್ಧೆಯಿಂದ ಬೆಳಸಲ್ಪಟ್ಟು ವಿದ್ಯೆ ಕಲಿಸಲ್ಪಡಲಿಕ್ಕೆ ಅರ್ಹಳಾಗಿರುವಳು, ಎಂದು ಇದೆ."

ವಿದ್ಯಾವಿಹೀನೆಯಾದ ಹೆಂಡತಿಯು ಮೇಲೆ ವಿಧಿಸಲ್ಪಟ್ಟ ಉತ್ಕೃಷ್ಟ ಧರ್ಮಗಳನ್ನು ತನ್ನ ಪತಿಯಲ್ಲಿ ಹೇಗೆ ನೆರವೇರಿಸಬಲ್ಲಳು? ಆದುದರಿಂದ ಸ್ತ್ರೀಯರಾಗಲಿ, ಪುರುಷರಾಗಲಿ, ವಿವೇಕಸಂಪತ್ತನ್ನು ಹೊಂದಿ ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ವಿದ್ಯೆಯು ಅತ್ಯಾವಶ್ಯಕವು. ವಿದ್ಯಾಭ್ಯಾಸ ಮಾಡಿಸಿದರೆ ಸ್ತ್ರೀಯರು ಪುರುಷರಂತೆಯೇ ಸಕಲ ಶಾಸ್ತ್ರಗಳನ್ನು ಕಲಿಯಬಲ್ಲರೆಂತಲೂ, ಧನುರ್ವಿದ್ಯೆಯನ್ನು ಕಲಿಸಿದರೆ ರಣರಂಗದಲ್ಲಿ ಶತ್ರುಬಲವನೋಡಿಸುವರೆಂತಲೂ, ರಾಜಕೀಯ ತಂತ್ರಗಳನ್ನು ಕಲಿಸಿದರೆ ರಾಜ್ಯಲಕ್ಷ್ಮೀಭಾರವನ್ನು ವಹಿಸಬಲ್ಲರೆಂತಲೂ, ಮತ್ತಾವ ವಿಷಯದಲ್ಲಿಯಾದಲ್ಲಿಯಾದರೂ ಪುರುಷರೊಂದಿಗೆ ಸಮಾನರಾಗಿ ಇರಬಲ್ಲರೆಂತಲೂ, ವಿದ್ಯಾಸಾಗರನು ತಿಳಿದಿದ್ದನು. ಮತ್ತು ಇದೇ ಅಭಿಪ್ರಾಯಗಳನ್ನು ಇತರರಿಗೆ ಉದಾಹರಣಪೂರ್ವಕವಾಗಿ ಬೋಧಿಸಿ ನಂಬಿಸುತ್ತಿದ್ದನು.

ಮಹರ್ಷಿಪ್ರೋಕ್ತಗಳಾದ ಹಿಂದೂ ಶಾಸ್ತ್ರಗಳಿಂದ ಸ್ತ್ರೀಯರಿಗೆ ವಿದ್ಯೆ ಕಲಿಸುವುದು ಶಾಸ್ತ್ರೀಯವಾದುದೆಂದು ತಕ್ಕ ಆಧಾರಗಳನ್ನು ತೋರಿಸಿ, ವಾದಿಸುತ್ತಿದ್ದನು. "ಕನ್ಯಾಪ್ಯೇವಂ ಪಾಲನೀಯಾ ಶಿಕ್ಷಣೀಯಾತಿಯತ್ನತಃ" ಎಂಬ

ಮನುಸ್ಮೃತಿಯ ವಾಕ್ಯವನ್ನು ಕೈಕೊಂಡು ಬೇಥ್ಯೂನ್ ಪ್ರತಿಷ್ಠಾಪನೆಗೆ ಬಾಲಿಯರನ್ನು ಕುಳ್ಳಿರಿಸಿಕೊಂಡು ಹೋಗುವ ಬಂಡಿಯ ಎರಡು ಪಕ್ಕಗಳಲ್ಲಿಯೂ ಬರೆಯಿಸಿದನು. ಪೂರ್ವಾಚಾರಪರಾಯಣರಾದವರು ಕೊಡುತ್ತಿದ್ದ ತೊಂದರೆಗಳನ್ನೆಲ್ಲ ಧೀರಮನಸ್ಕರಾದ ಬೇಥ್ಯೂನ್, ವಿದ್ಯಾಸಾಗರ ಇವರಿಬ್ಬರೂ, ಮನೋದಾರ್ಢ್ಯದಿಂದ ಕಳೆದುಕೊಟ್ಟು ಕೊನೆಗೆ ತಮ್ಮ ಪ್ರಯತ್ನಗಳನ್ನೀಡೇರಿಸಬಲ್ಲವರಾದರು. ವಿದ್ಯಾಸಾಗರನು ೧೮೬೯ರವರೆಗೆ ಆ ಪಾಠಶಾಲಿಯ ಕಾರ್ಯದರ್ಶಿಯಾಗಿದ್ದನು. ಆತನು ಅಲ್ಲಿಯ ಬಾಲೆಯರನ್ನು ತನ್ನ ಪುತ್ರಿಯರಂತೆಯೇ ತುಂಬ ದಯೆಯಿಂದ ನೋಡುತ್ತಿದ್ದನು. ಸಂಸ್ಕೃತ ಕಲಾಶಾಲೆಯಲ್ಲಿ ಅಭ್ಯಾಸ ಮಾಡುವವರಿಗೆ ಉಚಿತವಾಗಿ ವಿದ್ಯೆ ಕಲಿಸುವ ವಾಡಿಕೆ ಇದ್ದುದರಿಂದ ಆ ಪಾಠಶಾಲೆಯ ಧನಸಹಾಯವು ದಿನದಿನಕ್ಕು ಕ್ಷೀಣಿಸುತ್ತಾ ಬಂದಿತು. ಆಗ ವಿದ್ಯಾಸಾಗರನು ಅದನ್ನಾಲೋಚಿಸಿ ಫೀ ತೆರಲಾರದ ಬಡವಿದ್ಯಾರ್ಥಿಗಳು ಹೊರತು ಉಳಿದ ಧನಿಕರ ಮಕ್ಕಳಿಂದ ಜೀತವನ್ನು ವಸೂಲ ಮಾಡುವ ಪದ್ಧತಿಯನ್ನು ಏರ್ಪಡಿಸಿದನೆಂದು ಮೊದಲೇ ಹೇಳಲ್ಪಟ್ಟದೆ. ಆ “ ಬೇಥ್ಯೂನ್ ಸ್ತ್ರೀವಿದ್ಯಾಲಯ ”ದಲ್ಲಿ ಅನೇಕ ನಾರೀಮಣಿಯರು ಉತ್ತಮ ವಿದ್ಯೆಯನ್ನು ಕಲಿತು ಬಿ. ಏ. ಪದವಿಯನ್ನು ಪಡೆದಿದ್ದಾರೆ. ಆತನು ಮಾಡಿದ ಮುಖ್ಯ ಕಾರ್ಯಗಳಲ್ಲಿ ಮತ್ತೊಂದಾವುದೆಂದರೆ,—ಕಾಲವಿಶೇಷದಿಂದ ಶಿಥಿಲವಾಗುತ್ತಲಿರುವ ಸಾಹಿತ್ಯಸಂಬಂಧವಾದ ಕೈ ಬರವಣಿಗೆಯ ಪುಸ್ತಕಗಳನ್ನೆಲ್ಲ ಮುದ್ರಿಸಿ ಕಲಾಶಾಲೆಯ ಪುಸ್ತಕಭಂಡಾರದಲ್ಲಿರಿಸಿದನು, ಮತ್ತು ಹಲವು ವೇದಾಂತಗ್ರಂಥಗಳನ್ನು ಪುನರ್ಮುದ್ರಣ ಮಾಡಿಸಿದನು. ಆಗಲಾತನು ಆ ಕೆಲಸವನ್ನು ಮಾಡಿಸದಿದ್ದರೆ ಆ ವಾಙ್ಮಯಕ್ಕೆ ತುಂಬ ನಷ್ಟವುಂಟಾಗುತ್ತಲಿದ್ದಿತು. ತರುವಾಯ ಆತನು ತನ್ನ ಸಂಸ್ಕೃತಿ ಗ್ರಂಥಗಳನ್ನು ಪ್ರಚುರಿಸತೊಡಗಿದನು. ೧೮೫೧ನೆಯ ಸಂವತ್ಸರದಲ್ಲಿ “ ಬೋಧೋದಯ, ಶಿಶುಶಿಕ್ಷೆ ( ನಾಲ್ಕನೆಯ ಭಾಗ )” ಎಂಬಿವು ಪ್ರಚುರಿಸಲ್ಪಟ್ಟವು. ಆ ಸಂವತ್ಸರದಲ್ಲಿಯೇ ಸಂಸ್ಕೃತಿಕ ವಿದ್ಯೆಯನ್ನಾರಂಭಿಸುವವರಿಗೆ ವಜ್ರಾಯುಧವೆನಿಸಲ್ಪಡುವ “ ಉಪಕ್ರಮಣಿಕೆ ” ಎಂಬ ವ್ಯಾಕರಣವನ್ನು ಪ್ರಕಟಿಸಿದನು. ಆ ಕಾಲದತನಕ ಬಂಗಾಳದೇಶದ ಪಾಠಶಾಲೆಗಳಿಗೆ ಬೇಸಗೆ ರಜಾಕೊಡುವ ಪದ್ಧತಿ ಇರಲೇ ಇಲ್ಲ. ಅದರಿಂದ ಉಪಾಧ್ಯಾಯರೂ ವಿದ್ಯಾರ್ಥಿಗಳೂ ಪಡುತ್ತಿದ್ದ ಕಷ್ಟಗಳನ್ನು ನೋಡಿ ಅವುಗಳನ್ನು ಹೇಗಾ

ದರೂ ನಿವಾರಿಸಬೇಕೆಂದು ಯೋಚಿಸಿ, ಈ ಪದ್ಧತಿಯನ್ನು ಏರ್ಪಾಡು ಮಾಡಿದನು.

ವಿದ್ಯಾಸಾಗರನ ಅಮಿತದಾತೃತ್ವವನ್ನೂ, ಮಿತವಿಲ್ಲದ ಪರೋಪಕಾರ ಬುದ್ಧಿಯನ್ನೂ, ನೋಡಿ ಜನರೆಲ್ಲರೂ ಇವನು ತುಂಬ ಹಣಗಾರನೆಂದು ಹೇಳಿಕೊಳ್ಳುತ್ತಿದ್ದರು. ಆತನ ದಯಾರ್ದ್ರಹೃದಯವೇ ಈ ದಾತೃತ್ವಕ್ಕೆ ಕಾರಣವೆಂದು ತಿಳಿಯಲಾರದ ಕೆಲವರು ಮೂಢರು ಈ ದುರ್ವದಂತಿಯನ್ನು ನಂಬಿ ೧೮೫೩ನೆಯ ಇಸವಿ ಮೇ ೩೧ನೆಯ ದಿನ ರಾತ್ರಿ ವೀರಸಿಂಹಗ್ರಾಮದಲ್ಲಿದ್ದ ಇವನ ಮನೆಯನ್ನು ಪ್ರವೇಶಿಸಿದರು. ಆ ಕಳ್ಳರು ತಮ್ಮ ಮನಸ್ಸು ಬಂದಹಾಗೆಲ್ಲ ಕದ್ದುಕೊಂಡು ಹೋದರು. ಆಗ ಬೇಸಗೆಯ ವಿರಾಮಕಾಲವಾಗಿದ್ದುದರಿಂದ ಈತನು ಮನೆಯಲ್ಲಿಯೇ ಇದ್ದನು. ಆದರೆ ಶತ್ರುಬಲವು ತನ್ನ ಬಲವನ್ನತಿಕ್ರಮಿಸಿ ಇದ್ದುದರಿಂದ ಅಲೋಚಿತ ಕಾರ್ಯಕ್ಕೆ ದುಡುಕದೆ ಉಪಾಯದಿಂದ ಅಪಾಯವನ್ನು ತಪ್ಪಿಸಿಕೊಂಡನು.

೧೮೬೮ನೆಯ ವರುಷದಲ್ಲಿ ಆದಾಯದ ತೆರಿಗೆಯ ಅಧಿಕಾರಿಯಾದ ಹಾರಿಸನ್ ಎಂಬಾತನು ವೀರಸಿಂಹಗ್ರಾಮಕ್ಕೆ ಬಂದಿದ್ದಾಗ ವಿದ್ಯಾಸಾಗರನ ತಾಯಿಯು ಆ ಅಧಿಕಾರಿಯನ್ನು ತನ್ನ ಮನೆಯಲ್ಲಿ ಔತನವನ್ನು ಸ್ವೀಕರಿಸಬೇಕೆಂದು ಹೇಳಿಕಳುಹಿದಳು. ಆತನು ಆಕೆಯ ದಯಾಗುಣಕ್ಕೆ ತುಂಬಾ ಸಂತೋಷಿಸಿಕೊಂಡು ಮನೆಗೆ ಬಂದು ಭೋಜನಮಾಡುವಾಗ ಸಂಭಾಷಣವಶದಿಂದ ಆಕೆಯ ವಶದಲ್ಲಿ ಎಷ್ಟು ಬಂಗಾರವುಂಟೆಂದು ಆಕೆಯನ್ನು ಕೇಳಿದನು. ಅದಕ್ಕೆ ಆಕೆಯು ತನ್ನ ಬಳಿಯಲ್ಲಿ ನಾಲ್ಕು ಬಂಗಾರದ ಗಟ್ಟಿಗಳವೆಯೆಂದು ಪ್ರತ್ಯುತ್ತರವಿತ್ತಳು. ಅವನು ಅದರ ಅರ್ಥವನ್ನು ಗ್ರಹಿಸಲಾರದೆ ಹೋದನು. ಆಗಲಾ ಮಹನೀಯಳು ತನ್ನ ನಾಲ್ವರು ಮುದ್ದುಮಕ್ಕಳನ್ನು ತೋರಿಸಿ, "ಇವೇ ನನ್ನ ಬಂಗಾರದ ಗಟ್ಟಿಗಳು" ಎಂದು ಹೇಳಲು ಆತನು ಆಶ್ಚರ್ಯಾನಂದಭರಿತನಾದನು. ೧೮೫೭ನೇ ಸಂವತ್ಸರದಲ್ಲಿ ವಿದ್ಯಾಸಾಗರನ ಉಪಕ್ರಮಣಿಕೆಯೊಂದಿಗೆ ಋಜುಪಾಠದ ಮೊದಲನೆಯ ಭಾಗವು ಪ್ರಚುರಿಸಲ್ಪಟ್ಟಿತು. ಆತನು ಸಂಸ್ಕೃತ ಕಲಾಶಾಲಾಧ್ಯಕ್ಷನಾಗುವದಕ್ಕಿಂತ ಮುಂಚೆ "ನೀತಿಬೋಧೆ" ಎಂಬ ಪುಸ್ತಕವನ್ನು ಪ್ರಾರಂಭಿಸಿ ಸ್ವಲ್ಪಮಟ್ಟಿಗೆ ಬರೆದು ಅವಕಾಶವಿಲ್ಲದೆ ರಾಜಾಕೃಷ್ಣ ಬೆನರ್ಜಿ ಎಂಬವನಿಗೆ ಸಂಪೂರ್ತಿ ಮಾಡಿಕೊಳ್ಳುವುದೆಂದು ಹೇಳಿಕೊಟ್ಟು ಬಿಟ್ಟನು. ತರುವಾಯ ಆತನು "ಕಥಾ

ಮಾಲೆ" ಯೆಂಬ ಗ್ರಂಥವನ್ನು ಪ್ರಚುರಿಸಿದನು. ಅದರಲ್ಲಿ ನೀತಿಜ್ಞಾನ ಬೋಧಕಗಳಾಗಿ ಬಾಲಕರಿಗೆ ತುಂಬ ಉತ್ಸಾಹವನ್ನು ಹುಟ್ಟಿಸುವ ತಿರ್ಯಗ್ಜಂತುಗಳ ಕಥೆಗಳು ಅನೇಕವಿರುವುವು. ೧೮೫೩ರಲ್ಲಿ ಋಜುಪಾಠದ ಎರಡನೆಯ ಭಾಗವೂ, ಆ ಮಾರನೆಯ ವರುಷದಲ್ಲಿ ಮೂರನೆಯ ಭಾಗವೂ, ವ್ಯಾಕರಣದ ಕೌಮುದಿಯಲ್ಲಿನ ಒಂದೆರಡನೆಯ ಭಾಗಗಳೂ, ೧೮೫೪ರಲ್ಲಿ ಕೌಮುದಿಯ ಮೊದಲನೆಯ ಭಾಗವು ಪ್ರಕುರಿಸಲ್ಪಟ್ಟವು.

೧೮೫೩ರಲ್ಲಿ ವಿದ್ಯಾಸಾಗರನು ತನ್ನ ಸ್ವಗ್ರಾಮದಲ್ಲಿ ಉಚಿತವಾಗಿ ವಿದ್ಯೆಯನ್ನು ಕಲಿಸುವ ದಿನಪಾಠಶಾಲೆಯೊಂದನ್ನೂ, ಹಗಲುಹೊತ್ತು ವಿದ್ಯೆ ಕಲಿಯಲು ಅವಕಾಶವಿಲ್ಲದ ರೈತರ ಮಕ್ಕಳಿಗಾಗಿ ರಾತ್ರಿಯ ಪಾಠಶಾಲೆಯೊಂದನ್ನೂ, ಸ್ಥಾಪಿಸಿದನು. ಅದರ ಸ್ಥಾಪನೆಗೆ ತಕ್ಕ ಪ್ರದೇಶವನ್ನು ಕೊಂಡುಕೊಳ್ಳುವುದೇ ಮೊದಲಾದ ವೆಚ್ಚವನ್ನೆಲ್ಲ ತಾನೇ ಭರಿಸಿದನು. ಆತನು ಈ ಪಾಠಶಾಲೆಗಳಿಗಾಗಿ ತಿಂಗಳೊಂದಕ್ಕೆ ೪೫೦ ರೂಪಾಯಿಗಳ ತನಕ ವೆಚ್ಚಮಾಡಬೇಕಾಗಿದ್ದಿತು. ಇವುಗಳಲ್ಲದೆ ವೀರಸಿಂಹಗ್ರಾಮದಲ್ಲಿ ಬಡವರಾದ ರೋಗಿಗಳ ಉಪಯೋಗಕ್ಕೋಸ್ಕರ ಧರ್ಮವೈದ್ಯಶಾಲೆಯೊಂದನ್ನು ಸ್ಥಾಪಿಸಿ ಇದರ ವೆಚ್ಚವನ್ನೆಲ್ಲ ತಾನೇ ವಹಿಸಿಕೊಂಡನು. ಕಲಾಶಾಲೆಯಲ್ಲಿ ಈತನು ಮಾಡಿದ ಏರ್ಪಾಡುಗಳಿಂದ ಅದು ತುಂಬ ಅಭಿವೃದ್ಧಿಸ್ಥಿತಿಗೆ ಬರುತ್ತಿದ್ದಿತು. ಆಗಲಾ ಕಲಾಶಾಲಾಧಿಕಾರಿಗಳು ಆತನ ಕಷ್ಟಗಳನ್ನಾಲೋಚಿಸಿ ೧೮೫೪ನೆಯ ಜನವರಿ ತಿಂಗಳಿಂದ ಆತನ ವೇತನವನ್ನು ತಿಂಗಳಿಗೆ ೩೦೦ ರೂಪಾಯಿಗಳಂತೆ ಏರ್ಪಡಿಸಿದರು. ಆದುದರಿಂದಲೇ ಆತನು ಅಷ್ಟು ಧರ್ಮಕಾರ್ಯಗಳನ್ನು ಮಾಡಲು ಅವಕಾಶ ಉಂಟಾಯಿತು. ಇಂಗ್ಲಿಷನ್ನೂ ದೇಶಭಾಷೆಯನ್ನೂ ಬೋಧಿಸುವ ಉದ್ದೇಶದಿಂದ ೧೮೫೫ನೆಯ ಸಂವತ್ಸರದಲ್ಲಿ ಸರಕಾರದವರ ಸಹಾಯದಿಂದ ದೇಶದಲ್ಲಿನ ವಿವಿಧ ಪ್ರದೇಶಗಳಲ್ಲಿ ಪಾಠಶಾಲೆಗಳನ್ನು ಸ್ಥಾಪಿಸಬೇಕೆಂದು ನಿರ್ಣಯವಾಯಿತು. ಅಂತಹ ಶಾಲೆಗಳಲ್ಲಿ ಹೇಗೆ ವಿದ್ಯೆಯನ್ನು ಕಲಿಸಬೇಕೆಂದು ಈಶ್ವರಚಂದ್ರನನ್ನು ಕೇಳಿದರು. ಈತನು ಒಳ್ಳೇ ಮಾರ್ಗವೊಂದನ್ನುಪದೇಶಿಸಿದನು. ತರುವಾಯ ಆ ಅಧಿಕಾರಿಗಳು ಆ ಪಾಠಶಾಲೆಗಳ ಮೇಲೆ ಪ್ರತ್ಯೇಕ ಪರೀಕ್ಷಾಧಿಪತಿ (Special Inspector of School) ಯಾಗಿ ತಿಂಗಳಿಗೆ ೩೦೦ ರೂಪಾಯಿಗಳ ಮೇಲೆ ಈಶ್ವರಚಂದ್ರನನ್ನೇ ನಿಯಮಿಸಿದರು. ಈಗ ಆತನಿಗೆ ತಿಂಗಳು

ಒಂದಕ್ಕೆ ೫೦೦ ರೂಪಾಯಿಗಳ ವರಮಾನವೇರ್ಪಟ್ಟಿತು. ನದ್ಯಾ, ಮಿಥುನ ಪುರ, ಬರದ್ವಾನ್, ಹುಗ್ಲಿ ಈ ನಾಲು ಜಿಲ್ಲೆಗಳ ಪಾಠಶಾಲೆಗಳು ಈತನ ಸ್ವಾಧೀನಕ್ಕೆ ಬಂದುವು. ಈ ಪಾಠಶಾಲೆಗಳಲ್ಲಿನ ಉಪಾಧ್ಯಾಯರಿಗೆ ಪ್ರತ್ಯೇಕ ವಾಗಿ ಬೋಧನಾಭ್ಯಾಸನಾ ಪಾಠಶಾಲೆ ( Normal School ) ಯೊಂದನ್ನು ಈತನು ಏರ್ಪಾಡು ಮಾಡಿಸಿದನು. ಈತನು ಹಳ್ಳಿಗಳ ಪಾಠಶಾಲೆಗಳನ್ನು ಪರೀಕ್ಷಿಸಲಿಕ್ಕೆ ಹೋಗುವಾಗ ಬಂಡಿಯಲ್ಲಿ ಹೋಗುತ್ತಾ, ದಾರಿಯಲ್ಲಿ ರೋಗ ಪೀಡಿತರಾಗಲಿ, ಅತಿ ದುರ್ಬಲರಾಗಲಿ, ಸಿಕ್ಕಿದರೆ ಕೂಡಲೆ ಅವರನ್ನು ತನ್ನ ಬಂಡಿಯಲ್ಲಿ ಕುಳ್ಳಿರಿಸಿಕೊಂಡು ಹೋಗಿ ಅವರಿಗೆ ತಕ್ಕ ಉಪಚಾರಗಳನ್ನು ಮಾಡುತ್ತಿದ್ದನು. ದಾರಿಯಲ್ಲಿ ಬಡವರಿಗೂ ಅನಾಥರಿಗೂ ಕೊಡಲಿಕ್ಕೆ ಸಾಕಾದಷ್ಟು ಹಣ ತನ್ನಲ್ಲಿಲ್ಲದೆ ಆತನು ಪ್ರಯಾಣಮಾಡುತ್ತಲಿರಲಿಲ್ಲ. ಯಾಚಕರಿಗೆ ಯಾವಾಗಲಾದರೂ ಇಲ್ಲವೆಂದು ಹೇಳಿ ಬರಿಗೈಯಿಂದ ಅವ ರನ್ನು ಕಳುಹಿದವನೇ ಅಲ್ಲ. ತಾಯಿತಂದೆಗಳಿಲ್ಲದ ಬಾಲಕರನೇಕರಿಗೆ ಅನ್ನವಸ್ತ್ರಗಳನ್ನು ಕೊಟ್ಟು ವಿದ್ಯಾಬುದ್ಧಿಗಳನ್ನು ಕಲಿಸಿದನು. ಕಲಕತ್ತೆಯ ಲ್ಲಿಯೂ ವೀರಸಿಂಹಗ್ರಾಮದಲ್ಲಿಯೂ ಸೇರಿ ದಿನಕ್ಕೆ ೧೦೦ ಮಂದಿಗೆ ಅನ್ನ ಹಾಕಿಸುತ್ತಿದ್ದನು. ಆತನು ತಾಯಿ ಇಲ್ಲದ ಮಕ್ಕಳನ್ನು ಕಂಡಾಗ ತುಂಬ ವಿಚಾರಪಟ್ಟು ಅಂತವರಿಗೆ ಕೈಲಾದಮಟ್ಟಿಗೆ ಸಹಾಯಮಾಡುತ್ತಿದ್ದುದರಿಂದ ಕೆಲವರು ತಾವು ತಾಯಿಗಳಿಲ್ಲದ ತಬ್ಬಲಿಗಳೆಂದು ಸುಳ್ಳಾಡಿ, ಆತನ ಸಹಾ ಯವನ್ನು ಅಪಹರಿಸುತ್ತಿದ್ದರು. ಒಂದೊಂದು ವೇಳೆ ಈತನು ಅವರ ದುರ್ನಡತೆಗಳನ್ನು ತಿಳಿದುಕೊಂಡು ಅವರಿಗೆ ಚೀಮಾರಿ ಮಾತ್ರ ಹಾಕಿ ಕಳುಹುತ್ತಿದ್ದನು.

ವೃದ್ಧನಾದ ವಿದ್ಯಾಸಾಗರನ ತಂದೆಯು ಸ್ವಲ್ಪ ಮುಂಗೋಪಿಯಾಗಿದ್ದು ದರಿಂದ ಆತನು ತನ್ನ ಹೆಂಡತಿಯೊಂದಿಗೆ ಆಗಾಗ್ಗೆ ಕಲಹಿಸುವ ವಾಡಿಕೆ ಇದ್ದಿತು. ಅವರು ಕಾದಾಡುವರೆಂಬ ಮಾತೇ ಹೊರತು ದೀರ್ಘಕ್ರೋಧಿಗಳಾ ಗಿರಲಿಲ್ಲ. ಆದುದರಿಂದ ಒಂದು ಗಳಿಗೆಯಲ್ಲಿಯೇ ಅವರವರು ಸಮಾಧಾನ ಗೊಳ್ಳುತ್ತಿದ್ದರು. ಅವರಿಬ್ಬರ ಕಲಹಗಳನ್ನೂ, ಮರಳಿ ಕೂಡುವಿಕೆಯನ್ನೂ ನೋಡಿ ಇತರರು ನಗುತ್ತಿದ್ದರು. ಆ ದಂಪತಿಗಳ ಕಲಹಕ್ಕೆ ಪತಿಯೇ ಕಾರ ಣನಾಗಿದ್ದನೆಂದು ಹೇಳಬಹುದು. ಆ ಪರಮಸಾಧ್ವೀಮಣಿಯಾದ ಭಗವತೀ ದೇವಿಯು ತುಂಬಾ ದಯಾರ್ದ್ರಹೃದಯಳಾಗಿ ಬಡಬಗ್ಗರನ್ನು ಪ್ರೇಮದಿಂದ

ಆದರಿಸುತ್ತಿದ್ದಳು. ಆಕೆಗೆ ಯಾರಾದರೂ ಏನಾದರೂ ಕೊಡಬೇಕಾಗಿದ್ದರೆ ಅದನ್ನು ಕೊಡಿರೆಂದು ಗಟ್ಟಿಯಾಗಿ ಕೇಳಿದಾಗ ಕೆಲವರು ತಮ್ಮ ಕಷ್ಟಗಳನ್ನು ಹೇಳಿಕೊಳ್ಳುವುದರಿಂದ ತುಂಬ ಕನಿಕರಗೊಳ್ಳುತ್ತಿದ್ದಳು. ಮತ್ತೆ ಕೆಲವರು ಆಕೆಯ ಮಗನಾದ ಈಶ್ವರಚಂದ್ರನನ್ನು ಮುಖಸ್ತುತಿಯಾಗಿ ಆಶೀರ್ವದಿಸಿದರೆ ಬಹಳವಾಗಿ ಉಬ್ಬಿ, ಮರುಮಾತನಾಡದೆ ಹೊರಟು ಹೋಗುತ್ತಿದ್ದಳು. ವಿದ್ಯಾಸಾಗರನು ಯಾವಾಗಲೂ ಗುಣಗಳನ್ನೇ ಗ್ರಹಿಸತಕ್ಕವನೆಂದು ವಾಚಕರು ಇದುವರೆಗೆ ಗ್ರಹಿಸಿ ಇರಬಹುದು ಪ್ರಸನ್ನಕುಮಾರ ಸರ್ವಾಧಿಕಾರಿ ಎಂಬ ಸಮರ್ಥನ ಗುಣಗಳನ್ನು ನೋಡಿ ಆತನು ಅವನನ್ನು ಹಿಂದೂ ಕಲಾಶಾಲೆಯಲ್ಲಿ ಒಬ್ಬ ಉಪಾಧ್ಯಾಯನನ್ನಾಗಿ ನಿಯಮಿಸಿದನು.

ವಿದ್ಯಾಸಾಗರನು ಸಂಸ್ಕೃತಕಲಾಶಾಲಾಧ್ಯಕ್ಷನಾಗಿರುವಾಗಲೇ ವಿದ್ಯಾರ್ಥಿಗಳಿಗೆ ಇಂಗ್ಲೀಷಭಾಷಾಭ್ಯಾಸವು ವಿಧಿಯಾಗಿ ನಿಯಮಿಸಲ್ಪಟ್ಟಿತು. ಆಗ ಈತನು ಕಾಳೀಚರಣ ಘೋಷನೆಂಬ ಇಂಗ್ಲೀಷ ಬಲ್ಲವನೊಬ್ಬನಿಗೆ ಆ ಉದ್ಯೋಗವನ್ನು ಕೊಟ್ಟನು. ಅವನು ಬಹು ಸಣ್ಣ ವಯಸ್ಸಿನವನಾಗಿದ್ದುದರಿಂದ ವಿದ್ಯಾರ್ಥಿಗಳೆಲ್ಲರೂ ಕೂಡಿಕೊಂಡು ದಂಗೆ ಮಾಡಿದರು. ಆ ಸಂಗತಿ ವಿದ್ಯಾಸಾಗರನಿಗೆ ತಿಳಿದು ವಿಚಾರಿಸುವಲ್ಲಿ ಆ ದಂಗೆಗೆ ಕಾರಕನು ಇಂತವನೆಂಬುದು ತಿಳಿಯದೆ ಹೋದುದರಿಂದ ಈತನಿಗೆ ಕೋಪಬಂದು ಆ ಇಯತ್ತೆಯಲ್ಲಿನ ಬಾಲಕರನ್ನೆಲ್ಲ ಪಾಠಶಾಲೆಯಿಂದ ಹೊರಡಿಸಿಬಿಟ್ಟನು. ಆ ಬಾಲಕರೆಲ್ಲರೂ ಸೇರಿ ಮೇಲಿನ ಅಧಿಕಾರಿಯಲ್ಲಿ ಫಿರಿಯಾದು ಮಾಡಲು ಆತನ ಚರ್ಯೆಗೆ ಸಮಾಧಾನಕೊಡಬೇಕೆಂದು ಅಪ್ಪಣೆಯಾಯಿತು. ಆಗ ಆತನು ಇಂತಹ ಸ್ವಲ್ಪ ವಿಷಯಗಳಲ್ಲಿ ಪ್ರಧಾನೋಪಾಧ್ಯಾಯನಿಗೆ ಇಷ್ಟರಮಟ್ಟಿಗೆ ಅಧಿಕಾರವಿರುವುದು ಅಗತ್ಯವೆಂತಲೂ, ಹಾಗಿಲ್ಲದಿದ್ದರೆ ಅವರನ್ನು ಸ್ವಾಧೀನಪಡಿಸಿಕೊಳ್ಳಲಿಕ್ಕೆ ಆಗಲಾರದೆಂತಲೂ, ಹೇಳಲು ಮೇಲಿನ ಅಧಿಕಾರಿಗಳು ಒಪ್ಪಿಕೊಂಡರು. ತರುವಾಯ ಆ ಬಾಲಕರ ಪೋಷಕರಿಗೆ ಆ ಸಂಗತಿ ತಿಳಿದು ವಿದ್ಯಾಸಾಗರನಲ್ಲಿ ಮೊರೆಯಿಟ್ಟುಕೊಳ್ಳಲು ಆತನು ಆ ಬಾಲಕರನ್ನು ಕಾಳೀಚರಣ ಘೋಷನ ಹತ್ತರಕ್ಕೆ ಕರೆಯಿಸಿ ಅವರಿಂದ ಆತನ ಕ್ಷಮಾಪಣೆಯನ್ನು ಬೇಡುವಂತೆ ಮಾಡಿ, ಅವರು ಮನಃಪೂರ್ವಕವಾಗಿ ಪಶ್ಚಾತ್ತಾಪ ಹೊಂದಿದುದನ್ನು ಕಂಡು ಅವರನ್ನು ಮನ್ನಿಸಿಬಿಟ್ಟನು. ಆಹಾ! ಈತನ

ಅಪರಾಧಕ್ಷಮೆಯುನ್ನು ನೋಡಿದಿರಾ! ಈತನಲ್ಲಿ ಮತ್ತೊಂದು ವಿಶೇಷಗುಣ ವಿದ್ದಿತು. ಈ ಲೋಕದಲ್ಲಿ ದೊಡ್ಡವರನ್ನು ಸಣ್ಣವರು ಕ್ಷಮಾಪ್ರಾರ್ಥನೆ ಬೇಡುವುದು ಸಾಮಾನ್ಯವೇ ಹೊರತು, ವಿವೇಕವಂತರಾದ ದೊಡ್ಡವರು ಸಣ್ಣವರಿಗೆ ಅಪರಾಧ ಮಾಡಿದಾಗ ಕ್ಷಮೆಯನ್ನು ಬೇಡುವುದು ಅಪೂರ್ವ. ಒಂದುವೇಳೆ ಆತನು ಪ್ರಮಾದವಶದಿಂದ ತನ್ನ ಕೆಳಗಿನ ಉದ್ಯೋಗಸ್ಥನಾದ ತಾರಾಕುಮಾರಕವಿರತ್ನನೆಂಬುವನಿಗೆ ಸ್ವಲ್ಪ ತಪ್ಪು ಮಾಡಿದುದನ್ನು ತಿಳಿದು ಕೊಂಡಕೂಡಲೇ ಅವನನ್ನು ಕರೆಯಿಸಿ ಬಹು ದೈನ್ಯದಿಂದಿ ತನ್ನ ಅಪರಾಧ ವನ್ನೊಪ್ಪಿಕೊಂಡು ಮನ್ನಣೆ ಬೇಡಿದನು. ಇದೇ ಅಲ್ಲವೇ ನಿಜವಾದ ವಿವೇಕಿ ಗಳ ಧರ್ಮ!

೧೮೫೪ನೆ ವರುಷದಲ್ಲಿ ಈತನು ಬಂಗಾಳೀ ಭಾಷೆಯಲ್ಲಿ ಬರೆದ ಶಾಕುಂತಲವೆಂಬ ಪುಸ್ತಕವನ್ನೂ, ೧೮೫೫ರಲ್ಲಿ ವರ್ಣಪರಿಚಯದ ಒಂದೆ ರಡನೆಯ ಭಾಗಗಳನ್ನೂ ಪ್ರಕಟಿಸಿದನು. ಇವು ಬಂಗಾಳೀಭಾಷೆಯ ವರ್ಣಮಾಲೆಯನ್ನಾರಂಭಿಸುವವರಿಗೆ ತುಂಬ ಉಪಯೋಗಕರನಾದುವು. ವಿದ್ಯಾಸಾಗರನು ಒಂದುದಿನ ತನ್ನ ಸ್ನೇಹಿತನಾದ ಬಾಬೂ ಪ್ಯಾರೀಚರಣ ಸರ್ಕಾರನೊಡನೆ ಮಾತನಾಡುತ್ತಿರುವಾಗ ಪ್ರಸಂಗವಶದಿಂದ ಪಾಠಶಾಲೆಗೆ ಉಪಯೋಗಿಸಲ್ಪಡುವ ಬಂಗಾಳೀಭಾಷೆಯ ಪುಸ್ತಕಗಳನ್ನು ವಿದ್ಯಾಸಾಗ ರನೂ, ಇಂಗ್ಲೀಷ ಭಾಷಾಪುಸ್ತಕಗಳನ್ನು ಈತನ ಸ್ನೇಹಿತನೂ ಬರೆಯು ವಂತೆ ಶಪಥ ಮಾಡಿದರು. ಅವರವರ ಶಪಥಗಳಿಂದ ಆ ಎರಡು ಭಾಷೆಗಳ ಲ್ಲಿಯೂ ಅನೇಕವಾಗಿ ಹೊಸಪುಸ್ತಕಗಳು ಹೊರಪಟ್ಟವು. ೧೮೫೬ರಲ್ಲಿ ಚರಿ ತ್ರಾವಳಿ ಎಂಬ ಮಹಾಪುರುಷರ ಜೀವಿತಗಳು ಪ್ರಕಟಿತವಾದುವು.

ಕಲ್ಕತ್ತೆಯ ಸರ್ವಕಲಾಶಾಲೆಯು ೧೮೫೭ನೆಯ ಸಂವತ್ಸರದ ಜನವರಿ ತಿಂಗಳಲ್ಲಿ ಗವರ್ನರ್‌ಜನರಲ್ ಕ್ಯಾನಿಂಗ್ ಪ್ರಭುಗಳಿಂದ ಸ್ಥಾಪಿಸಲ್ಪಟ್ಟಿತು. ಅದರ ಕಾರ್ಯನಿರ್ವಾಹಕ ಸಂಘದಲ್ಲಿ ೩೯ ಮಂದಿ ಸಾಮಾಜಿಕರಿರುವರು. ಅವರಲ್ಲಿ ಆರುಮಂದಿ ಮಾತ್ರ ಈ ದೇಶದವರಾಗಿಯೂ ಉಳಿದವರೆಲ್ಲ ಇಂಗ್ಲಿ ಷರಾಗಿಯೂ ಇದ್ದರು. ಈ ಆರುಮಂದಿಯಲ್ಲಿ ವಿದ್ಯಾಸಾಗರನೂ ಒಬ್ಬನು. ಆ ಸರ್ವಕಲಾಶಾಲೆಯನ್ನು ಏರ್ಪಾಡು ಮಾಡಿದ ಕೂಡಲೆ ಅದರ ಕಾರ್ಯನಿರ್ವಾ ಹಕಸಂಘದವರು ಒಂದು ಸಭೆ ಕೂಡಿಸಿ, ಸರ್ವಕಲಾಶಾಲೆಯಲ್ಲಿ ಸಂಸ್ಕೃತ ಭಾಷೆಯನ್ನು ಬೋಧಿಸಕೂಡದೆಂತಲೂ ಸಂಸ್ಕೃತಿಕ ಕಲಾಶಾಲೆಯನ್ನು

ಪೂರ್ತಿಯಾಗಿ ತೆಗೆದುಹಾಕಬೇಕೆಂತಲೂ ಒಂದು ಚರ್ಚೆಯನ್ನಾರಂಭಿಸಿದರು. ಆಗ ವಿದ್ಯಾಸಾಗರನು ಅದಕ್ಕೆ ಸಮ್ಮತಿಸದೆ, ತೀವ್ರವಾಗಿ ಚರ್ಚಿಸುತ್ತಾ ಹೋರಾಡಿದುದರಿಂದ ಪ್ರತಿಪಕ್ಷದವರ ಇಷ್ಟವು ನೆರವೇರದೆ ಹೋಯಿತು. ಆ ಸಂವತ್ಸರದಲ್ಲಿಯೇ ವಿದ್ಯಾರ್ಥಿಗಳನ್ನು ಪರೀಕ್ಷಿಸುವುದಕ್ಕೆ ಒಂದು ಉಪಸಂಘವನ್ನೇರ್ಪಡಿಸಿ, ಅಲ್ಲಿನ ಸಭಿಕನಾದ ವಿದ್ಯಾಸಾಗರನನ್ನೂ ಸಂಸ್ಕೃತ, ಬಂಗಾಳಿ, ಹಿಂದಿ, ಆರಿಯಾಭಾಷೆಗಳ ಪರೀಕ್ಷಾಧಿಪತಿಯಾಗಿ ನಿಯಮಿಸಿದರು. ಆ ಕಾಲದಲ್ಲಿ ಜರುಗಿದ ವಿದ್ಯಾಸಂಬಂಧವಾದ ಪ್ರತಿಯೊಂದು ವಿಷಯದಲ್ಲಿಯೂ ಈತನ ಸಂಬಂಧವು ಇದ್ದೇ ಇತ್ತು. ಅದುವರೆಗೂ ವಿದ್ಯಾವಿಷಯಕ ಸಂಘಕ್ಕೆ ಕಾರ್ಯದರ್ಶಿಗಳಾಗಿದ್ದ ಮೌಟ್‌ದೊರೆಯವರು ಅಪ್ಪಣೆಪಡೆದು ತಮ್ಮ ದೇಶಕ್ಕೆ ಹೊರಟು ಹೋದುದರಿಂದ ಅವರ ಸ್ಥಳಕ್ಕೆ "ಯಂಗ್" ಎಂಬ ವಿದೇಶೀಯ ತರುಣನು ಬಂದನು. ೧೮೫೪ ರಲ್ಲಿ ಬಂಗಾಳಕ್ಕೆ "ಹಾಲಿಡೆ" ಎಂಬಾತನು ಮೊದಲನೆಯ ಲೆಪ್ಟಿನೆಂಟ ಗವರ್ನನಾಗಿ ಬಂದನು. ಆತನು ಮೇಲೆ ಹೇಳಿದ ಅನನುಭವಶಾಲಿಯಾದ ಯಂಗ್ ದೊರೆಯನ್ನು ವಿದ್ಯಾವಿಷಯಕ ಸಂಘಕ್ಕೆ ಡೈರೆಕ್ಟರನ್ನಾಗಿ ನಿಯಮಿಸಿದನು. ವಿದ್ಯಾಸಾಗರನೂ ಹಾಲಿಡೇಯವರೂ ಪರಸ್ಪರ ಪ್ರೇಮಗೌರವಗಳುಳ್ಳವರಾಗಿ ಇದ್ದರು. ಆಂಗ್ಲೇಯನಿಗೂ, ದೇಶೀಯನಿಗೂ, ಅಷ್ಟರ ಅನ್ಯೋನ್ಯ ಮೈತ್ರಿಯಿರುವುದು ತುಂಬ ದುರ್ಲಭ. ವಿದ್ಯಾಸಾಗರನು ಲೆಪ್ಟನೆಂಟಗವರ್ನರವರನ್ನು ಪ್ರತಿ ಗುರುವಾರದಲ್ಲಿಯೂ ನೋಡುವ ಅಭ್ಯಾಸವನ್ನಿಟ್ಟುಕೊಂಡಿದ್ದನು. ಅವರಿಬ್ಬರೂ ರಾಜಕೀಯ ಸಂಬಂಧದ ವಿಷಯಗಳನ್ನೂ ಇತರ ವ್ಯವಹಾರಗಳನ್ನೂ ಸಂಭಾಷಿಸುತ್ತಾ ಕಾಲಹರಣ ಮಾಡುತ್ತಿದ್ದರು. ಒಂದು ದಿನ ವಿದ್ಯಾಸಾಗರನು ಪದ್ಧತಿಯಂತೆ ತನ್ನ ಮಿತ್ರನನ್ನು ನೋಡುವುದಕ್ಕೆ ಬಂದನು. ಆಗ ಆತನ ದರಶನಕ್ಕಾಗಿ ಅನೇಕ ದೊಡ್ಡ ಅಧಿಕಾರಿಗಳು ಬಂದು ಬಾಗಿಲು ಬಳಿ ಕಾದುಕೊಂಡಿದ್ದರು. ವಿದ್ಯಾಸಾಗರನು ತಾನು ಬಂದ ಸಂಗತಿಯನ್ನು ಹೇಳಿ ಕಳುಹಿದ ಕೂಡಲೆ ಗವರ್ನರವರ ಅಪ್ಪಣೆಯಾದುದರಿಂದ ಆತನು ಆಗಲೇ ಮಹಡಿಯ ಮೇಲಕ್ಕೆ ಹತ್ತಿಹೋದನು. ಆಗ ಬಾಗಿಲಲ್ಲಿ ಕಾದಿದ್ದ ದೊಡ್ಡ ಮನುಷ್ಯರ ಮುಖ ಕುಂದಿತು. ಗವರ್ನರವರು ಆ ಸಂಗತಿಯನ್ನು ತಿಳಿದು ಅವರಿಗೆ ಹೀಗೆ ಸಮಾಧಾನ ಹೇಳಿದರು. "ಅಯ್ಯಾ ನೀವು ನನ್ನ ಮಾತನ್ನು ದಕ್ಕಿಸುವುದಕ್ಕೆ ಬಂದಿರಿ. ಆತನು ತನ್ನ ಮಾತನ್ನು

ದಕ್ಕಿಸಿಕೊಳ್ಳಲಿಕ್ಕೆ ಬಂದನು. ಇದೇ ನಿಮಗೂ ಆತನಿಗೂ ಇರುವ ತಾರತಮ್ಯ"

ವಿದ್ಯಾಸಾಗರನು ಸಾಮಾನ್ಯವಾಗಿ ಅಂಗರೇಖೆಯನ್ನು ಧರಿಸದೆ ದೋತ್ರ ಉತ್ತರೀಯಗಳನ್ನೆ ಧರಿಸಿ ಹಾಲಿಡೇ ದೊರೆಯವರ ಬಳಿಗೆ ಹೋಗುತ್ತಿದ್ದನು. ಒಂದು ದಿನ ಆ ದೊರೆಯು ಚೋಗೆಯನ್ನು ತೊಟ್ಟು ಕೊಂಡು ದೊಡ್ಡ ಮನುಷ್ಯರ ಬಳಿಗೆ ಹೋದರೆ ಚನ್ನಾಗಿರುವುದೆಂದು ಈತ ನಿಗೆ ಹೇಳಿದನು. ಅದಕ್ಕೆ ವಿದ್ಯಾಸಾಗರನು ಇಂತೆಂದನು "ಅಯ್ಯಾ ಚೋಗೆ ಯನ್ನು ಧರಿಸುವುದು ನನಗೆ ಅಭ್ಯಾಸವಿಲ್ಲದ ವಿಷಯ. ನಾನು ಇದುವರೆಗೂ ಮಾಡಿದ ತಪ್ಪನ್ನು ಕ್ಷಮಿಸಿದಲ್ಲಿ ಇದೇ ನನ್ನ ಕಡೆಯ ದರ್ಶನವಾಗಿ ಭಾವಿಸ ಬಹುದು. ಅಂತಹ ಉಡುಪುಗಳನ್ನು ಧರಿಸಿದರೆ ನನಗೆ ತುಂಬ ಅಸೌಖ್ಯ ವಾಗಿರುವುದು." ಅದಕ್ಕೆ ಹಾಲಿಡೇ ಹೀಗೆಂದರು—"ಅಯ್ಯಾ! ನಿಮ್ಮ ಮನಸ್ಸು ಬಂದಂತೆ ಆಗಲಿ. ಅದು ನಿಮಗೆ ತೊಂದರೆಯಾಗಿದ್ದಲ್ಲಿ ನಿಮಗೆ ಅಂತಹ ನಿರ್ಬಂಧವಿಲ್ಲದೆ ಮಾಡುವೆನು. ನಿಮ್ಮ ಇಷ್ಟಬಂದ ಉಡುಪನ್ನು ಧರಿಸಿಕೊಂಡು ಇಲ್ಲಿಗೆ ದಯಮಾಡಿರಿ. ಹೇಗಾದರೂ ನಿಮ್ಮ ಸಂದರ್ಶನ ಭಾಗ್ಯಲಭಿಸುವುದೇ ನನಗೆ ಪರಮ ಸಂತೋಷವು."

೧೮೫೪ನೆಯ ಸಂವತ್ಸರದಲ್ಲಿ ಆಕರಣೆಗೆ ತಂದ ವಿದ್ಯಾವಿಷಯದ ಆಜ್ಞೆಯಲ್ಲಿ ಇಂಗ್ಲಂಡಿನ ಅಧಿಕಾರಿಗಳು ಇಲ್ಲಿನ ವಿದ್ಯಾವ್ಯಾಪನೆಗಾಗಿ ಅನೇಕ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಲಿಕ್ಕೆ ಅನುಜ್ಞೆಕೊಟ್ಟರು. ಆ ಪ್ರಕಾರವಾಗಿ ವಿದ್ಯಾಸಾಗರನು ತನ್ನ ಅಧಿಕಾರಕ್ಕೆ ಒಳಪಟ್ಟ ನಾಲ್ಕು ಜಿಲ್ಲೆಗಳಲ್ಲಿಯೂ ಅನೇಕ ಪಾಠಶಾಲೆಗಳನ್ನು ಸ್ಥಾಪಿಸಿದನು. ಆಗಿನ ಡೈರೆ ಕ್ಟರ್ ಯಂಗ್ ಎಂಬಾತನು ಇನ್ನು ಮುಂದೆ ಅಂತಹ ಪಾಠಶಾಲೆಗಳನ್ನೇ ಏರ್ಪಡಿಸಕೂಡದೆಂದು ಹೇಳಿದರೂ ಕೇಳದೆ ದೇಶಾಭಿವೃದ್ಧಿಯನ್ನೇ ಕೋರಿ, ತನ್ನ ಇಷ್ಟದಂತೆ ಮಾಡಿದುದರಿಂದ ಅವರಿಬ್ಬರಿಗೂ ಮನಕಷಾಯ ಉಂಟಾಗಿ, ಲೆಫ್ಟಿನೆಂಟ್ ಗವರ್ನರಾಗಿದ್ದ ಹಾಲಿಡೇಯವರಲ್ಲಿ ಫಿರಿಯಾದು ಮಾಡಿದರು. ಅದರ ಮೇಲೆ ಆತನು ಪ್ರಕೃತದಲ್ಲಿ ಈ ಪ್ರಯತ್ನವನ್ನು ನಿಲ್ಲಿ ಸಿರುವುದೆಂದು ವಿದ್ಯಾಸಾಗರನನ್ನು ಬೇಡಿಕೊಂಡು ಈ ಸಂಗತಿಯನ್ನು ಇಂಗ್ಲಂಡಿನಲ್ಲಿಯ ಹುಜೂರು ಸರಕಾರ (Home Government) ಕ್ಕೆ ತಿಳಿಯಪಡಿಸಿದನು. ಅಲ್ಲಿಯ ಮಂತ್ರಿಮಂಡಲದವರು ವಿಚಾರಮಾಡಿ ವಿದ್ಯಾ

ಸಾಗರನ ಪಕ್ಷವಾಗಿಯೇ ತೀರ್ಮಾನಮಾಡಿದರು. ಅದರ ಮೇಲೆ ಆ ಡೈರೆಕ್ಟರನಿಗೆ ಈತನ ಮೇಲೆ ಅಸೂಯೆ ಉಂಟಾಗಿ ತನ್ನ ಹಗೆ ತೀರಿಸಿಕೊಳ್ಳಲಿಕ್ಕೆ ಕಾಲವನ್ನು ನಿರೀಕ್ಷಿಸುತ್ತಿದ್ದನು. ಈ ಮಧ್ಯಕಾಲದಲ್ಲಿ ಹುಜೂರು ಮಂತ್ರಿವರ್ಗದವರು ಬದಲಾಯಿಸಲ್ಪಟ್ಟು ಭಿನ್ನಮತದ ಹೊಸಬರು ಆ ಅಧಿಕಾರಗಳಿಗೆ ಬಂದುದರಿಂದ ಪರಿಪಾಲನೆಯ ವೆಚ್ಚವನ್ನು ತಗ್ಗಿಸಬೇಕೆಂದು ಅಪ್ಪಣೆ ಕೊಟ್ಟರು. ಹಾಲಿಡೇಯುವರು ಅದಕ್ಕೆ ಮುಂಚೆಯೇ ಆಜ್ಞೆಕೊಟ್ಟು, ವಿದ್ಯಾಸಾಗರನ ಅಧಿಕಾರದಲ್ಲಿದ್ದ ಜಿಲ್ಲೆಗಳಲ್ಲಿ ಕೆಲವು ಬಾಲಿಕಾಪಾಠಶಾಲೆಯನ್ನು ಏರ್ಪಡಿಸಿದರು. ಪಟ್ಟಿಯ ಪ್ರಕಾರ ಅವುಗಳ ವೆಚ್ಚವನ್ನೆಲ್ಲ ಕೊಡಿಸುವುದಕ್ಕೆ ವಿದ್ಯಾಸಾಗರನಲ್ಲಿ ದ್ವೇಷವನ್ನುಳ್ಳ ಆ ಡೈರೆಕ್ಟರನಿಗೆ ಅಭಿಮತವಾಗಿರಲಿಲ್ಲ. ವಿದ್ಯಾಸಾಗರನು ಆ ಪಾಠಶಾಲೆಗಳನ್ನು ಸ್ಥಾಪಿಸುವುದಕ್ಕೆ ಬರಹಮೂಲಕವಾದ ಯಾವ ಆಧಾರವೂ ಇಲ್ಲದುದರಿಂದ ಆ ಸಂಗತಿಯನ್ನು ಹಾಲಿಡೆಯುವರೊಂದಿಗೆ ಹೇಳಲು ಆತನು ತನ್ನ ಮೇಲೆ ನ್ಯಾಯಸಭೆಯಲ್ಲಿ ವಿವಾದ ಹೂಡುವುದೆಂತಲೂ, ತಾನು ಅಲ್ಲಿ ಅದನ್ನೊಪ್ಪಿಕೊಳ್ಳುವೆನೆಂತಲೂ ಸೂಚನೆ ಕೊಟ್ಟನು. ಆದರೆ ಈ ಉದಾರಿಯು ಹಾಗೆ ಮಾಡಲಿಕ್ಕೆ ಸಾಹಸಗೊಳ್ಳದೆ, ಆ ವೆಚ್ಚಗಳನ್ನೆಲ್ಲ ತಾನೇ ಭರಿಸಬೇಕೆಂದು ಯೋಚಿಸಿದನು. ಅದರಿಂದ ಆತನು ಮತ್ತಷ್ಟು ಕಷ್ಟಕ್ಕೆ ಸಿಕ್ಕಿದನು. ಹಾಲಿಡೆಯುವರು ಈತನ ಕಷ್ಟಗಳನ್ನು ನೋಡಿ ಯಂಗ್‌ದೊರೆಯೊಂದಿಗೆ ಸಮಾಧಾನಮಾಡಲು ಪ್ರಯತ್ನಿಸಿದರು. ಆದರೆ ಆಂಗ್ಲೇಯನು ಕೇಳದೆ ಹೋದನು. ಯಂಗ್‌ದೊರೆಯು ಅಧಿಕಾರಗರ್ವವುಳ್ಳವನಾಗಿದ್ದುದರಿಂದ ಸ್ವತಂತ್ರಾಭಿಲಾಷೆಯುಳ್ಳ ವಿದ್ಯಾಸಾಗರನಿಗೂ, ಈತನ ಮೇಲ್ಪಟ್ಟ ಅಧಿಕಾರಿಗೂ ಸರಿಬೀಳದೆ ಭಿನ್ನಾಭಿಪ್ರಾಯಗಳು ಉಂಟಾಗುತ್ತಾ ಬಂದವೆಂಬುದು ಇದುವರೆಗೆ ಸ್ಪಷ್ಟವಾಗಿರುವುದು. ಹೀಗೆ ಕ್ರಮಕ್ರಮವಾಗಿ ಮನಸ್ಪರ್ಧೆಗಳು ಹೆಚ್ಚುತ್ತಾ ಬಂದುವು. ಒಂದುದಿನ ಆ ಡೈರೆಕ್ಟರವರು ವಿದ್ಯಾಸಾಗರನನ್ನು ಕರೆಯಿಸಿ ಹಿಂದೂ ಕಲಾಶಾಲೆಯ ಪ್ರಧಾನೋಪಾಧ್ಯಾಯನಲ್ಲಿಗೆ ಹೋಗಿ ಒಂದು ವಿಷಯವಾಗಿ ಮಾತನಾಡಿ ಬರಬೇಕೆಂದು ಆಜ್ಞೆಕೊಟ್ಟರು. ಆ ಕೆಲಸವು ಆತ್ಮಗೌರವಕ್ಕೆ ಭಂಗಕರವೆಂದು ವಿದ್ಯಾಸಾಗರನಿಗೆ ತೋರಿದುದರಿಂದ ದೊರೆಯುವರು ತನ್ನೊಂದಿಗೆ ಕಲೆತುಬಂದಲ್ಲಿ ತಾನು ಅಲ್ಲಿಗೆ ಹೋಗುವೆನೆಂತಲೂ, ತಾನೊಬ್ಬನೇ ಹೋಗಲಾರೆನೆಂತಲೂ ಪ್ರತ್ಯುತ್ತರವಿತ್ತನು. ವಿದ್ಯಾಖಾತೆಯಲ್ಲಿ ಸರ್ವಾಧಿಕಾರಿಯಾದ

ತನ್ನನ್ನು ತನ್ನ ಕೈಕೆಳಗಿನ ಉದ್ಯೋಗಸ್ಥನು ಅಲಕ್ಷ್ಯವಾಗಿ ತಿರಸ್ಕರಿಸಿದ ನೆಂದು ದೊರೆಯುವರು ಕೋಪಿಸಿಕೊಂಡು ನೀನು ಆ ಕೆಲಸವನ್ನು ಮಾಡಿ ಯೇ ತೀರಬೇಕೆಂದು ವಿದ್ಯಾಸಾಗರನಿಗೆ ಒತ್ತಿಹೇಳಿದರು. ಅದರ ಮೇಲೆ ವಿದ್ಯಾಸಾಗರನು ಆತನ ನಿರಂಕುಶಾಧಿಕಾರಕ್ಕೆ ಸ್ವಲ್ಪವೂ ಸೈರಿಸದೆ, ಕೂಡ ಲೇ ಜೇಬಿನಿಂದ ಒಂದು ಕಾಗದವನ್ನು ತೆಗೆದು ಅದರ ಮೇಲೆ ತಿಂಗಳಿಗೆ ೫೦೦ ರೂಪಾಯಿಗಳ ಆದಾಯವುಳ್ಳ ತನ್ನ ಉದ್ಯೋಗಕ್ಕೆ ರಾಜೀನಾಮೆ ಯನ್ನು ಬರೆದುಕೊಟ್ಟು ಇನ್ನು ನನಗೆ ಇಷ್ಟವಿಲ್ಲದ ಕೆಲಸವನ್ನು ಮಾಡಿ ಯೇ ತೀರಬೇಕೆಂದು ಹೇಳುವುದಕ್ಕೆ ತಮಗೆ ಅಧಿಕಾರವಿಲ್ಲವೇ? ಎಂದು ಹೇಳಿ ಹೊರಟು ಹೋದನು. ಸ್ವಾತಿಶಯಪೂರಿತ ಹೃದಯನಾದ ಆ ದೊರೆ ಯು ಈ ದೇಶೀಯನ ಸಾಹಸಕೃತ್ಯಕ್ಕೆ ದಿಗ್ಭ್ರಮೆ ಹೊಂದಿದನು. ವಿದ್ಯಾಸಾ ಗರನು ಉದ್ಯೋಗವನ್ನು ಬಿಟ್ಟುಬಿಡುವುದಕ್ಕೆ ಕೆಲವರು ಮತ್ತೊಂದು ಕಾರಣವನ್ನು ಹೇಳುವರು. ಪಾಠಶಾಲೆಯ ಪರೀಕ್ಷಾಧಿಕಾರಿಯಾಗಿದ್ದಾಗ ವಿದ್ಯಾಸಾಗರನು ಕೆಲವು ರಿಪೋರ್ಟುಗಳನ್ನು ಕಳುಹಿದನು. ಅವುಗಳಲ್ಲಿ ಆ ಪಾಠಶಾಲೆಗಳ ಅಭಿವೃದ್ಧಿಯ ವಿಷಯವಾಗಿ ತಾನು ಕಂಡುಕೊಂಡ ನಿಜ ಸ್ಥಿತಿಗಳನ್ನು ತಿಳಿಯಪಡಿಸಿದ್ದನು. ಯಂಗ್‌ದೊರೆಯುವರು ತಮ್ಮ ಮೇಲಣ ಅಧಿಕಾರಿಯನ್ನು ಸಂತೋಷಗೊಳಿಸುವುದಕ್ಕೋಸ್ಕರ ಕೆಲವು ಸುಳ್ಳು ಬರಹ ಗಳನ್ನು ಬರೆಯಬೇಕೆಂದು ವಿದ್ಯಾಸಾಗರನನ್ನು ಕೇಳಿದರೆಂತಲೂ, ಅದಕ್ಕೆ ಆ ಸತ್ಯಾಭಿಲಾಷೆಯು ಒಡಂಬಡದೆ ತನ್ನ ಉದ್ಯೋಗಕ್ಕೆ ರಾಜೀನಾಮೆಯನ್ನು ಕೊಟ್ಟನೆಂತಲೂ ಕೆಲವರು ಹೇಳುವರು. ಹೇಗೆ ಆದರೆ ಏನು? ಆತ್ಮಗೌರವ ಸಂರಕ್ಷಣೆಗಾಗಿಯೂ ಧರ್ಮ ಪರಿಪಾಲನಾರ್ಥವಾಗಿಯೂ ಯಂಗ್‌ದೊರೆ ಯವರೊಂದಿಗೆ ಹೋರಾಡಿ ತನ್ನ ಉದ್ಯೋಗವನ್ನು ಬಿಟ್ಟುಬಿಟ್ಟುದು ಮಾತ್ರ ಸತ್ಯವಾದುದು. ಆತನು ಹೀಗೆ ಮಾಡಿದ ವಿಷಯವು ಅವನ ಮುಖ್ಯ ಸ್ನೇಹಿತರಾದ ಹಾಲಿಡೇಯುವರಿಗೆ ತಿಳಿದು ಅವರು ತುಂಬ ಆಶ್ಚರ್ಯವನ್ನೂ ವಿಚಾರವನ್ನೂ ಹೊಂದಿ ಆತನನ್ನು ತನ್ನ ಹತ್ತಿರಕ್ಕೆ ಬರಬೇಕೆಂದು ಹೇಳಿ ಕಳುಹಿದರು. ಆತನು ಹಾಗೆಯೇ ಬಂದು ನೋಡಲು ಅವಸರಪಟ್ಟು ಈ ರೀತಿ ಮಾಡಬಾರದೆಂತಲೂ ಯಂಗ್‌ದೊರೆಯೊಂದಿಗೆ ಸಮಾಧಾನದಿಂದ ಇರು ಎಂತಲೂ ಅನೇಕ ವಿಧವಾಗಿ ಬೋಧಿಸಿ ನಿರ್ಬಂಧದಿಂದ ಒಂದು ವರುಷದ ತನಕ ತಡೆದು ಬಿಟ್ಟರು. ಆದರೆ ಯಂಗ್‌ದೊರೆಯುವರು ವಿವೇಕಶೂನ್ಯ

ರಾಗಿ ಕಳೆದುಹೋದ ಕೆಲಸಕ್ಕೆ ಸ್ವಲ್ಪವಾದರೂ ಪಶ್ಚಾತ್ತಾಪ ಹೊಂದದೆ ಹೋದುದರಿಂದ ಅವರ ದ್ವೇಷವು ಮತ್ತಷ್ಟು ಪ್ರಬಲವಾಯಿತು. ಈ ಮಧ್ಯದಲ್ಲಿ ಯಂಗ್‌ದೊರೆಯುವರು ಮತ್ತೊಂದು ಕೆಲಸ ಮಾಡಿದರು.

೧೮೫೭ನೆಯ ಸಂವತ್ಸರದಲ್ಲಿ ಹಿಂದೂ ದೇಶಗಳಲ್ಲಿ ಸಿಪಾಯಿಗಳ ದೊಡ್ಡ ದಂಗೆಯು ಸಂಭವಿಸಿ ದೇಶವೆಲ್ಲವೂ ಅಲ್ಲೋಲಕಲ್ಲೋಲವಾದ ವಿಷಯವು ಹಿಂದೂ ದೇಶದ ಇತಿಹಾಸವನ್ನು ಓದಿದವರಿಗೆಲ್ಲ ತಿಳಿದೇ ಇರುವುದು. ಅದು ಆ ಸಂವತ್ಸರಾರಂಭದಲ್ಲಿ ಬರತ್ಪುರದಲ್ಲಿ ಆರಂಭಿಸಿದ ಒಡನೆಯೇ ದೇಶದ ವಿವಿಧ ಪ್ರದೇಶಗಳಲ್ಲಿನ ಶಿಪಾಯಿಗಳೆಲ್ಲರೂ ಎದುರು ಬಿದ್ದರು. ಆದರೆ ಸ್ವಲ್ಪ ಕಾಲದೊಳಗಾಗಿಯೇ ಬಹುಸುಲಭವಾಗಿ ಆ ದಂಗೆಯು ಅಡಗಿಸಲ್ಪಟ್ಟಿತು. ಮಾರ್ಚಿ, ಏಪ್ರೇಲ್, ಮೇ, ಜೂನ್ ತಿಂಗಳುಗಳಲ್ಲಿ ದೇಶದಲ್ಲೆಲ್ಲಾ ಸಂಕ್ಷೋಭವುಂಟಾಗಿ ತಲ್ಲಣಿಸಲ್ಪಡುತ್ತಲಿತ್ತು. ಕಲ್ಕತ್ತಾ ಪಟ್ಟಣವಾಸಿಗಳಾದ ದೇಶೀಯರೂ, ಯುರೋಪಿಯನರೂ ರಾತ್ರಿಯೂ, ಹಗಲೂ ತಮ್ಮ ಪ್ರಾಣಗಳನ್ನು ಕೈಹಿಡಿಯಲ್ಲಿಟ್ಟುಕೊಂಡು ಕಾಲಕಳೆಯುತ್ತಿದ್ದರು. ಪ್ರಜೆಗಳು ಪ್ರತಿದಿನದಲ್ಲಿಯೂ ಹೊಸ್ತಿಲನ್ನು ದಾಟಿದರೆ ಪ್ರಾಣಗಳು ಹೋಗುವುವೆಂದು ಹೆದರುತ್ತಿದ್ದರು. ಹಿಂದೂ ದೇಶಪರಿಪಾಲನಾಚಕ್ರವು ಹಿಂದಿರುಗುವುದೇನೋ ಎಂದು ತೋರುತಲಿದ್ದಿತು. ಇಂಗ್ಲಿಷ ಯುದ್ಧಭಟರು ಪಟ್ಟಣದಲ್ಲೆಲ್ಲ ಸುತ್ತಾಡುತ್ತಿದ್ದರು. ಸೇನೆಯು ಇತರ ಸ್ಥಳಗಳಿಂದ ಬಂದು ಇಳಿಯುತ್ತಲಿದ್ದಿತು. ಆಗ ವಿದ್ಯಾಸಾಗರನು ಮೇಲಿನ ಅಧಿಕಾರಿಗಳ ಅನುಮತಿ ಇಲ್ಲದೆಯೇ ಕೆಲವು ದಿನಗಳ ತನಕ ಸಂಸ್ಕೃತ ಕಲಾಶಾಲೆಯನ್ನು ಮುಚ್ಚಿಬಿಟ್ಟು, ಅದರಲ್ಲಿ ಸೈನ್ಯದವರು ಇಳಿದುಕೊಳ್ಳಲು ಅಪ್ಪಣೇಕೊಟ್ಟನು. ತರುವಾಯ ಯಂಗ್ ದೊರೆಯುವರು ತನ್ನ ಅಪ್ಪಣೆ ಪಡೆಯದೆ ಹೀಗೆ ಮಾಡಿದುದೇಕೆಂದು ಕೇಳಲು ದೇಶಕ್ಷೇಮಕ್ಕೋಸ್ಕರ ಮಾಡಿದೆನೆಂದು ಈತನು ಉತ್ತರವಿತ್ತನು. ಅದನ್ನು ಮೇಲಿನ ಅಧಿಕಾರಿಗಳಿಗೆ ಹೇಳುವುದಕ್ಕೆ ಆಧಾರವಿಲ್ಲದೆ ಸುಮ್ಮನಿದ್ದು ತನಗೆ ಆತನು ಅವಮಾನ ಮಾಡಿದನೆಂದು ತಿಳಿದನು. ಕೊಟ್ಟಕೊನೆಗೆ ವಿದ್ಯಾಸಾಗರನು ಬಹಳ ಬೇಸತ್ತು ೧೮೫೮ನೇ ಅಗಸ್ಟು ೫ನೆಯ ದಿನ ತನ್ನ ಉದ್ಯೋಗವನ್ನು ಬಿಟ್ಟು ಬಿಟ್ಟಂತೆ ಮೇಲಿನ ಅಧಿಕಾರಿಗಳಿಗೆ ತಿಳಿಸಿದನು. ವಿದ್ಯಾಸಾಗರನು ತನ್ನ ನಿಶ್ಚಿತಾರ್ಥವನ್ನು ಲೆಫ್ಟನೆಂಟ್ ಗವರ್ನರ್ ಹಾಲಿಡೇ ಪ್ರಭುಗಳಿಗೆ ತಿಳಿಸಲು, ಅವರು ತುಂಬಾ ವಿಷಾದಿಸಿದರು. ಏತಕ್ಕೆಂದರೆ ತಿಂಗ

ಳೊಂದಕ್ಕೆ ೫೦೦ ರೂಪಾಯಿಗಳ ವರಮಾನವುಳ್ಳ ಉದ್ಯೋಗವನ್ನು ಸಂಪಾದಿಸಿಕೊಳ್ಳುವುದು ತುಂಬ ಅಸಾಧ್ಯವು. ಪ್ರತಿದಿನವೂ ವಿಶೇಷವಾದ ವೆಚ್ಚವುಳ್ಳ ತನ್ನ ಸ್ನೇಹಿತನು ಕಷ್ಟಕ್ಕೆ ಸಿಕ್ಕಿದನಲ್ಲವೆ ಎಂದು ವಿಚಾರಗೊಂಡನು. ಮೇಲೆ ಉದಾಹರಿಸಿದಂತೆ ವಿದ್ಯಾಸಾಗರನ ರಾಜೀನಾಮೆಯನ್ನು ಮೇಲಿನ ಅಧಿಕಾರಿಗಳು ಒಪ್ಪಿಕೊಂಡರು. ಈ ಕಾಲದಲ್ಲಿಯೇ ಆತನ ಆರೋಗ್ಯವು ಸುದಾ ಕೆಟ್ಟಿತು. ಹೀಗೆ ಎಲ್ಲವೂ ಕೂಡಿ ಬಂದಾಗ ೧೮೫೮ನೇ ನವಂಬರು ತಿಂಗಳಲ್ಲಿ ತನ್ನ ಉದ್ಯೋಗದಿಂದ ನಿವೃತ್ತನಾದನು. ಈ ಕಾರ್ಯ ಮಾಡಿದುದು ಈತನ ಬಂಧುಮಿತ್ರರುಗಳಲ್ಲಿ ಯಾರಿಗೂ ಸಮ್ಮತನಾಗಿರಲಿಲ್ಲ. ಒಂದುದಿನ ಈತನ ಮಿತ್ರನೊಬ್ಬನು ಇವನೊಡನೆ ಇಂತೆಂದನು. " ವಿದ್ಯಾಸಾಗರಾ, ನೀನು ಒಂದು ಕೆಟ್ಟ ಕೆಲಸ ಮಾಡಿದೆ. ತಿಂಗಳಿಗೆ ೫೦೦ ರೂಪಾಯಿಗಳ ಆದಾಯವುಳ್ಳ ಉದ್ಯೋಗವೆಂದರೆ ಬಾಯಮಾತೇ? ಮುಖ್ಯವಾಗಿ ನಿನ್ನಂತಹ ಬಂಗಾಳೀ ಪಂಡಿತರಿಗೆ ಮತ್ತಷ್ಟು ಕಷ್ಟ. ನೀನು ಉದ್ಯೋಗವನ್ನು ಬಿಟ್ಟು ಬಿಟ್ಟು ಏನು ಮಾಡಬೇಕೆಂದಿದ್ದಿಯೇ? ನಿನ್ನ ವೆಚ್ಚವೋ ಬಹುಹೆಚ್ಚಾಗಿದೆ. ಹೇಗೆ ನಿರ್ವಹಿಸುವೆ? " ಎಂದುದಕ್ಕಾತನು ಮಂದಹಾಸದಿಂದ ಹೀಗೆ ಪ್ರತ್ಯುತ್ತರವಿತ್ತನು,—" ಪ್ರಿಯ ಮಿತ್ರನೇ! ನೀನು ಹೇಳಿದುದು ನಿಜ. ನನ್ನ ಉದ್ಯೋಗವು ದುರ್ಲಭವಾದುದೆಂಬುದು ಸುದಾ ನನಗೆ ತಿಳಿದಿದೆ. ಆದರೆ ಈ ಲೋಕದಲ್ಲಿ ಆತ್ಮಗೌರವಕ್ಕಿಂತ ಬೆಲೆಯುಳ್ಳದು ಯಾವುದೂ ಇಲ್ಲವಯ್ಯಾ! ನನ್ನ ಖರ್ಚುಗಳೆಂದರೆ ನಾನು ಸಂಸ್ಕೃತ ಕಲಾಶಾಲೆಯ ಸಹಾಯ ಕಾರ್ಯದರ್ಶಿಯ ಪದವಿಯನ್ನು ಬಿಟ್ಟು ಬಿಟ್ಟಾಗ ಏನು ಮಾಡಿದೆನು? ಮೊದಲಿಗಿಂತಲೂ ನನಗೆ ಈಗಲೇ ಚೆನ್ನಾಗಿದೆ. ನನ್ನ ಪುಸ್ತಕಗಳನ್ನು ಪ್ರಚುರಿಸಿಕೊಂಡರೆ ಸ್ವಲ್ಪ ಮಟ್ಟಿಗೆ ಆದಾಯ ಬರಬಹುದು. "

ದೇಶಜನರ ವಿದ್ಯಾಭಿವೃದ್ಧಿಗಾಗಿ ವಿದ್ಯಾಸಾಗರನು ಪಟ್ಟ ಕಷ್ಟವು ಅಷ್ಟಿಷ್ಟೆಂದು ಹೇಳಲಾಗದು. ಯಾವ ಜಾತಿಯವನಾಗಲಿ, ನಯವರ್ತನದಲ್ಲಿಯಾದರೂ, ರಾಜಕೀಯ ವಿಷಯಗಳಲ್ಲಿಯಾದರೂ ಪುನರಭಿವೃದ್ಧಿಯನ್ನು ಹೊಂದಬೇಕೆಂದು ಅಪೇಕ್ಷಿಸಿದರೆ ಆ ಜಾತಿಯ ಜನಸಾಮಾನ್ಯಕ್ಕೆ ವಿದ್ಯಾಭಿವೃದ್ಧಿಯುಂಟಾದ ಹೊರತು ಸಾಧ್ಯವಲ್ಲವೆಂದು ಈಶ್ವರಚಂದ್ರನು ಚೆನ್ನಾಗಿ ತಿಳಿದಿದ್ದನು. ಆದುದರಿಂದ ತಾನು ಪಾಠಶಾಲೆಯ ಪರೀಕ್ಷಾಧಿಕಾರಿಯಾಗಿದ್ದಾಗಲೇ ತನಗೆ ಸಾಧ್ಯವಾದಮಟ್ಟಿಗೆ ಪಾಠಶಾಲೆಗಳನ್ನು ಸ್ಥಾಪಿಸಿ

ದನು. ಆ ಕಾಲದ ಬಂಗಾಳೀ ಪಂಡಿತರಲ್ಲಿ ಆ ಭಾಷೆಯುಮೂಲಕ ದೇಶ ಚರಿತ್ರೆ, ಭೂಗೋಳ, ಅಂಕಗಣಿತ, ಶಾಸ್ತ್ರ ಮೊದಲಾದುವುಗಳನ್ನು ಸುಲಭ ನಾಗಿ ಬೋಧಿಸತಕ್ಕ ಸಮರ್ಥರು ಸಿಕ್ಕುವುದು ತುಂಬ ಕಷ್ಟವಾಗಿದ್ದಿತು. ಆದುದರಿಂದ ತಕ್ಕ ಉಪಾಧ್ಯಾಯನನ್ನು ಸಂಪಾದಿಸುವುದೇ ಈಶ್ವರಚಂದ್ರ ನಿಗೆ ಮೊದಲು ಕಷ್ಟವಾಗಿ ತೋರಿತು. ಆತನು ಇವುಗಳನ್ನೆಲ್ಲ ಸಹಿಸಿ ಕೊಂಡು ವಿದ್ಯಾಭಿವೃದ್ಧಿಗಾಗಿ ಒಂದು ಹೊಸ ಪದ್ಧತಿಯನ್ನು ಕಂಡು ಹಿಡಿ ದನು. ಅದಾವುದೆಂದರೆ ಪ್ರಜೆಗಳು ಸ್ವಂತವಾಗಿ ಸ್ಥಾಪಿಸಿಕೊಂಡು ತಮಗೆ ತಾವೇ ಕಾರ್ಯನಿರ್ವಾಹ ಮಾಡಿಕೊಳ್ಳುತ್ತಿರುವ ಪಾಠಶಾಲೆಗಳನ್ನು ಸರಕಾ ರದ ಪರೀಕ್ಷಾಧಿಕಾರಿಗಳು ವಿಚಾರಣೆ ಮಾಡಿ, ಅಂತಹ ಸ್ಕೂಲ್‌ಗಳನ್ನು ಪ್ರೋತ್ಸಾಹಪಡಿಸುವುದಕ್ಕಾಗಿ ಅವುಗಳ ಅಭಿವೃದ್ಧಿಗೆ ತಕ್ಕ ಹಾಗೆ ಬಹು ಮಾನವಾಗಿ ಸ್ವಲ್ಪಮಟ್ಟಿಗೆ ದ್ರವ್ಯಸಹಾಯ ಮಾಡುವಿಕೆ. ಈ ಪದ್ಧತಿಯನ್ನ ನುಸರಿಸಿ, ಅನೇಕ ಪಾಠಶಾಲೆಗಳು ಸ್ಥಾಪಿಸಲ್ಪಟ್ಟವು.

ವಿದ್ಯಾಸಾಗರನು ವೀರಸಿಂಹಗ್ರಾಮದಲ್ಲಿ ಕಡು ಬಡವರಾದ ಬಾಲ ಕರ ವಿದ್ಯಾಭಿವೃದ್ಧಿಗಾಗಿ ೧೮೫೩ನೆಯ ಸಂವತ್ಸರದಲ್ಲಿ ತನ್ನ ಪ್ರಿಯಮಾತೆ ಯ ಹೆಸರಿನಲ್ಲಿ "ಭಗವತೀ ವಿದ್ಯಾಲಯ"ವೆಂಬ ಪಾಠಶಾಲೆಯೊಂದನ್ನು ಸ್ಥಾಪಿಸಿದನು. ಅದಕ್ಕಾಗಿ ತಾನು ತಿಂಗಳು ಒಂದಕ್ಕೆ ೩೦೦ ರೂಪಾಯಿಗ ಳಂತೆ ವೆಚ್ಚಮಾಡುತ್ತಾ ತಾನು ಸಾಯುವತನಕ ಅದನ್ನು ಅಭಿವೃದ್ಧಿಗೆ ತಂದನು. ಆದರೆ ಆತನ ತರುವಾಯ ಅದು ದಿನದಿನಕ್ಕೂ ಕ್ಷೀಣವಾಗಿ ಹೋಯಿತು.

ಪಂಡಿತ ಈಶ್ವರಚಂದ್ರ ವಿದ್ಯಾಸಾಗರನ ನಿಷ್ಕಾಮ ಕರ್ಮಗಳಲ್ಲಿ "ಮೆಟ್ರೊಪಾಲಿಟನ್ ಪಾಠಶಾಲೆ"ಯು ಮುಖ್ಯವಾದುದು. ಬಂಗಾಳೀ ವಿದ್ಯಾ ರ್ಥಿಗಳಿಗೆ ಉತ್ತಮ ವಿದ್ಯೆಯನ್ನು ಕಲಿಸುವುದಕ್ಕಾಗಿ ೧೮೬೪ ರಲ್ಲಿ ಅದು ಸ್ಥಾಪಿಸಲ್ಪಟ್ಟಿತು. ಅದರಲ್ಲಿ ಎಫ್. ಏ. ತರಗತಿಗೆ ಕಲಿಸತೊಡಗಿದರು. ತರು ವಾಯ ಅದೇ ಕಲ್ಕತ್ತೆಯ ಸರ್ವಕಲಾಶಾಲೆಯಾಗಿ ೧೮೭೨ ರಲ್ಲಿ ಮಾರ್ಪ ಟ್ಟಿತು. ಈ ಪ್ರತಿಷ್ಠಾಪನೆಯು ಜಯಪ್ರದವಾಗಿ ನಡೆದುಬಂದುದರಿಂದ ೧೮೭೯ ನೆಯ ವರುಷದಲ್ಲಿ ಇಲ್ಲಿ ಬಿ. ಏ. ತರಗತಿಯನ್ನಿಟ್ಟು ಬೋಧಿಸಲಾ ರಂಭಿಸಿದರು. ಅದನ್ನು ಸ್ಥಾಪಿಸಿದಂದಿನಿಂದ ಕೆಲವು ಸಂವತ್ಸರಗಳವರೆಗೆ ಜರಿಗಿದ ಎಪ್. ಏ. ಬಿ. ಏ ಪರೀಕ್ಷೆಗಳ ಫಲಿತಾಂಶಗಳನ್ನು ಯೋಚಿಸಿ

ನೋಡಿದರೆ ಅದು ರಾಜಧಾನಿಯ ಕಲಾಶಾಲೆಗಾಗಲಿ ಮತ್ತು ಇತರ ಕಲಾಶಾಲೆಗಾಗಲಿ ಹಿಂದು ಬೀಳಲಾರದು. ವಿದ್ಯಾಸಾಗರನ ಉದ್ದೇಶವು ತುಂಬ ಔದಾರ್ಯದಿಂದ ಕೂಡಿದ್ದು, ಈತನ ಕೋರಿಕೆಯು ನಿಷ್ಪಕ್ಷಪಾತವುಳ್ಳದ್ದು. ಉತ್ತಮ ವಿದ್ಯೆಯನ್ನು ಸುಲಭವಾಗಿಯೂ, ಅಗ್ಗವಾಗಿಯೂ, ವ್ಯಾಪನೆಗೊಳಿಸುವುದೇ ಈತನ ಮುಖ್ಯೋದ್ದೇಶವಾಗಿದ್ದಿತೇ ಹೊರತು ಈಗಿನಂತೆ ವಿದ್ಯಾಭಿವೃದ್ಧಿಯೇ ಒಂದು ವ್ಯಾಪಾರವೆಂದು ತಿಳಿದು, ಧನಾರ್ಜನೆ ಮಾಡುವುದಾಗಿರಲಿಲ್ಲ. ಆ ಉದ್ದೇಶದಿಂದಲೇ ಕಾಲೇಜು ತರಗತಿಯ ಫೀಜನ್ನು ತಿಂಗಳಿಗೆ ೩ ರೂಪಾಯಿಗಳಂತೆ ಇಳಿಸಿದನು. ಆತನು ಸ್ವಲ್ಪವಾಗಿ ವಾಗ್ಧಾನ ಮಾಡಿ ಹೆಚ್ಚಾಗಿ ನಡಿಸಿಕೊಡುತ್ತಿದ್ದನು. ಆ ಪ್ರತಿಷ್ಠಾಪನೆಯಲ್ಲಿ ವಿದ್ಯಾಸಾಗರನು ಯಾವಾಗಲೂ ಪ್ರಸಿದ್ಧಿಗೊಂಡ ದೇಶೀಯ ಪಂಡಿತರನ್ನೇ ನಿಯಮಿಸುತ್ತ ಬಂದನು. ಅದರ ಕಾರ್ಯನಿರ್ವಾಹಕ ಭಾರವನ್ನು ವಿದ್ಯಾಸಾಗರನು ತನ್ನ ಮೇಲೆ ಹಾಕಿಕೊಂಡುದರಿಂದಲೇ ಅದು ಅಷ್ಟು ಹೆಚ್ಚಾಗಿ ಬಂದಿತು. ಅದರಲ್ಲಿಯ ವಿದ್ಯಾರ್ಥಿಗಳ ಮತ್ತು ಉಪಾಧ್ಯಾಯರ ಉಪಯೋಗಕ್ಕಾಗಿ ವೈದ್ಯನೊಬ್ಬನನ್ನು ಪ್ರತ್ಯೇಕವಾಗಿ ಏರ್ಪಾಡು ಮಾಡಿಸಿದನು. ಆ ಪ್ರತಿಷ್ಠಾಪನೆಯ ಅದ್ಭುತವಾದ ಸುಂದರ ಮಂದಿರವನ್ನು ಒಂದು ಲಕ್ಷವೂ ಐವತ್ತು ಸಾವಿರ ರೂಪಾಯಿಗಳ ಸ್ವಂತ ವೆಚ್ಚದಿಂದ ವಿದ್ಯಾಸಾಗರನೇ ಕಟ್ಟಿಸಿದನು. ಅದರ ದೇದೀಪ್ಯಮಾನವಾದ ಶಿಲ್ಪ, ಕಲಾನೈಪುಣ್ಯವನ್ನು ನೋಡಿ ತಿಳಿಯಬೇಕೇ ಹೊರತು ಬರೆಯಲಿಕ್ಕೆ ತೀರದು. ಆತನು ಆ ಪ್ರಯತ್ನವನ್ನಾರಂಭಿಸಿದಾಗ ದೊಡ್ಡ ಅಧಿಕಾರಿಗಳಲ್ಲಿ ಕೆಲವರು ಹಾಸ್ಯಮಾಡತೊಡಗಿದರು. ಆದರೆ ಅದರ ಪರಿಣಾಮದ ಔನ್ನತ್ಯವನ್ನು ಕಂಡು ಅಂತವರೇ ಲಜ್ಜಾಪರವಶರಾದರು. ಇದರ ಅಭಿವೃದ್ಧಿಯಲ್ಲಿ ವಿದ್ಯಾಸಾಗರನಿಗೆ ಕೆಲವರು ಸಹಾಯ ಮಾಡಿದರು. ಅವರಲ್ಲಿ ಮುಖ್ಯರು ಕೀರ್ತಿಶೇಷರಾದ ಪ್ರಸನ್ನಕುಮಾರ ಲಾಹಿರಿಯವರು, ಎನ್. ಎನ್. ಘೋಷರು, ಬಾಬು ಶಾರದ ರಂಜನರಾಯರವರು.

ವಿದ್ಯಾಸಾಗರನು ರಚಿಸಿದ "ವರ್ಣಪರಿಚಯ"ದ ಮೊದಲುಗೊಂಡು "ಸೀತಾವನವಾಸ"ದ ವರೆಗೆ ಇರುವ ಪುಸ್ತಕಗಳೆಲ್ಲವೂ ಬಂಗಾಳೀ ವಿದ್ಯೆಯನ್ನು ಕಲಿಯುತಕ್ಕವರಿಗೆ ಕ್ರಮವಾಗಿ ತರಗತಿಯ ಪ್ರಕಾರ ತುಂಬ ಉಪಯುಕ್ತವಾಗಿರುವುವು. ಕ್ಷೀಣಿಸುತ್ತಿದ್ದ ಬಂಗಾಳೀ ಭಾಷಾಲಲನೆಗೆ ಪ್ರಸ್ತುತ ನವೀನಾಲಂಕಾರವನ್ನು ತಂದ ಮಹಾನುಭಾವನು ಈತನೇ.

೧೮೫೭ನೆಯ ಸಂವತ್ಸರದಲ್ಲಿ ಸ್ಥಾಪಿಸಲ್ಪಟ್ಟ ಕಲ್ಕತ್ತೆಯ ಸರ್ವಕಲಾಶಾಲೆಗೆ ಈತನೊಬ್ಬ ಕಲಾವೇದಿ ( Fellow ) ಯಾಗಿ ಆರಿಸಲ್ಪಟ್ಟನು. ಆಗಲೇ ಪಾಠಶಾಲೆಗಳಿಂದ ಸಂಸ್ಕೃತಭಾಷೆಯನ್ನು ತೆಗೆದುಹಾಕಬಾರದೆಂದು ಹೋರಾಡಿ ಸಫಲೀಕೃತಮನೋರಥನಾದನು. ಸಂಸ್ಕೃತಭಾಷಾಜ್ಞಾನವಿಲ್ಲದಿದ್ದರೆ ನಮ್ಮ ಪೂರ್ವಿಕರ ಮಹತ್ತರವಾದ ಆದರ್ಶನವನ್ನು ಊಹಿಸಿ ತಿಳಿಯುವದಕ್ಕಾಗಲಿ ಸಾಧ್ಯವಲ್ಲವು. ಹಿಂದೂಜನರ ಭೂತಕಾಲದ ಸಾಂಘಿಕ ಮತವಿಷಯಗಳನ್ನು ತಿಳಿದುಕೊಳ್ಳಬೇಕಾಗಿದ್ದರೆ ಸಂಸ್ಕೃತವನ್ನೇ ಕಲಿಯಬೇಕು. ಹೀಗೆ ದೇಶದ ಜನರ ವಿದ್ಯಾಭಿವೃದ್ಧಿಗಾಗಿ ತನ್ನ ಶಕ್ತಿಯಿದ್ದಮಟ್ಟಿಗೆ ಪ್ರಯತ್ನಪಟ್ಟನು. ವಾಚಕರಿರಾ, ಆತ್ಮಗೌರವವೆಂಬುದೆಂತಹುದೊ ಮನುಷ್ಯನಿಗೆ ಇಹಪರಸೌಖ್ಯದಾಯಕವಾದುದು ಇದೇ ಅಲ್ಲವೇ? ಪುರುಷಸಿಂಹರಿಗೆ ಮುಖ್ಯ ಲಕ್ಷಣವಿದೇ ಎಂದು ತಿಳಿಯಿರಿ. ಈ ಪ್ರಕಾರವಾಗಿ ನಮ್ಮ ಕಥಾನಾಯಕನು ಪ್ರಪಂಚವ್ಯವಹಾರದಲ್ಲಿಯಾದರೂ ನೀಚವೃತ್ತಿಗೆ ಒಳಪಡದೆ, ಆತ್ಮಗೌರವಾದಿ ಸದ್ಗುಣಗಳನ್ನೇ ಗ್ರಹಿಸಿ ಮುಂದಿನ ಕಾಲದವರಿಗೆಲ್ಲ ಉದಾಹರಣತುಲ್ಯನಾಗಿ ವರ್ತಿಸಿದನು. ಇನ್ನು ಆತನು ಈ ಲೋಕಕ್ಕೆ ಮಾಡಿದ ಮಹೋಪಕಾರಗಳಲ್ಲಿ ಒಂದಾದ ಸಂಘಸಂಸ್ಕರಣವನ್ನು ಕುರಿತು ಹೇಗೆ ಕಷ್ಟಪಟ್ಟನೆಂಬುದನ್ನು ಸಾಧ್ಯವಾದಮಟ್ಟಿಗೆ ಮುಂದೆ ತಿಳಿಸುವೆವು.

---

## ಐದನೆಯ ಅಧ್ಯಾಯ.

### ಲೋಕೋಪಕಾರಧುರೀಣತೆ.

ವಿದ್ಯಾಸಾಗರನು ದಯಾಸಾಗರನು. ಆರ್ತಜನರಿಗೆ ಆಪದ್ಬಾಂಧವನು. ಬಡವರ ಪಾಲಿಗೆ ನಿಕ್ಷೇಪ. ಯಾಚಕರಿಗೆ ಕಲ್ಪವೃಕ್ಷ. ಸುಗುಣಶೀಲಗಳಿಗೆ ತೌರುಮನೆ. ಔದಾರ್ಯಕ್ಕೆ ಆಡುಂಬೊಲ. ಸ್ವಭಾವವಾಗಿ ದಾತೃವೇ ಹೊರತು ಹೊಗಳಿಕೆಯ ದಾತೃವಲ್ಲ. ಲೋಕದಲ್ಲಿ ಪ್ರತಿಒಬ್ಬನ ಜೀವಿತದಲ್ಲಿನ ವಿವಿಧಾಂಶಗಳಲ್ಲಿನ ಐಕ್ಯಭಾವವನ್ನು ವ್ಯಕ್ತಪಡಿಸುವ ಸಂವಿಧಾನವು ಯಾವುದಾದರೂ ಒಂದಿರುವುದು. ವಿದ್ಯಾಸಾಗರನಲ್ಲಿ ಅಂತಹ ವಿಷಯವು ಕರುಣಾತಿಶಯವು. ಆತನ ಜೀವಿತಕಾಲದಲ್ಲಿನ ಇಷ್ಟಾರ್ಥಗಳನ್ನೆಲ್ಲ ಅದೇ

ನೆರವೇರಿಸಿತು. ಆತನ ಲೋಕೋಪಕಾರಪರಾಯಣತೆಯು ಅನೇಕ ರೂಪಗಳಲ್ಲಿ ವಿಜೃಂಭಿಸಿ ಪ್ರಸಿದ್ಧಿಹೊಂದಿತು. ಆ ಮಹಾತ್ಮನ ದಾತೃತ್ವವನ್ನು ಪ್ರಕಟಗೊಳಿಸುವ ಧರ್ಮಕಾರ್ಯಗಳು ಲೆಕ್ಕಿಸಲಳವಿಲ್ಲದೆ ಇದ್ದುವು. ಗತಿಯಿಲ್ಲದವರಿಗೆ ಮಿತಿಯಿಲ್ಲದ ಸಹಾಯಮಾಡುತ್ತಾ, ಪರರ ಸಂಕಟಗಳನ್ನು ತನ್ನ ಕಷ್ಟಗಳನ್ನಾಗಿ ಭಾವಿಸುತ್ತಾ, ತನ್ನ ಕೈಯಲಾದ ಮಟ್ಟಿಗೆ ಅವುಗಳನ್ನು ಪರಿಹರಿಸಲು ಪ್ರಯತ್ನಿಸುತ್ತಿದ್ದನೆಂದು ತಿಳಿಸುವುದಕ್ಕೆ ಕೆಲವು ಉದಾಹರಣೆಗಳನ್ನು ಮಾತ್ರ ಇಲ್ಲಿಕೊಡುವೆವು.

ಆತನು ನಾಳೆಯದಿನ ತನ್ನ ಗತಿಯೇನಾಗುವುದೋ ಎಂಬುದನ್ನು ಆಲೋಚಿಸದೆಯೇ ಬಡಬಗ್ಗರಿಗೆ ತನ್ನ ಕೈಯಲ್ಲಿದ್ದ ಹಣವನ್ನೆಲ್ಲ ಕೊಟ್ಟು ಬಿಡುತ್ತಿದ್ದನು. ಅನಾಥರನ್ನೂ, ಬಡವರನ್ನೂ, ಕಿವುಡ, ಹೆಳವ, ಕುರುಡ, ಭಿಕ್ಷುಕ ಮೊದಲಾದ ದೌರ್ಭಾಗ್ಯವಂತರನ್ನೂ, ಅನ್ನ ವಸ್ತ್ರಗಳಿಂದ ಆದರಿಸಿ, ಅವರ ಕಷ್ಟಗಳನ್ನು ಪರಿಹರಿಸುವುದೇ ತನ್ನ ನಿತ್ಯವ್ರತವಾಗಿ ಇಟ್ಟುಕೊಂಡಿದ್ದನು. ಹಾಗೆ ಮಾಡುವುದಕ್ಕಾಗಿಯೇ ಆತನು ಕಂಕಣವನ್ನು ಕಟ್ಟಿಕೊಂಡಿದ್ದನು. ಇಂತಹ ಮಹೋದ್ದೇಶಬೀಜವು ಆತನ ಹೃದಯಸೀಮೆಯಲ್ಲಿ ಬಾಲ್ಯದಿಂದಲೂ ನೆಟ್ಟಿದ್ದು, ಸತ್ಸಹವಾಸವೆಂಬ ನೀರಿನ ಸಹಾಯದಿಂದ ಅಂಕುರಿಸಿ, ದಿನೇದಿನೇ ವೃದ್ಧಿಹೊಂದಿ, ಮಹಾವೃಕ್ಷವಾಗಿ ದೃಢವಾಗಿ ನಿಂತಿದ್ದಿತು. ಸಂಸ್ಕೃತಶಾಲೆಯಲ್ಲಿ ನಮ್ಮ ಈಶ್ವರಚಂದ್ರನು ವಿದ್ಯಾರ್ಥಿಯಾಗಿದ್ದ ಕಾಲದಲ್ಲಿಯೇ ಆತನು ಪಡೆಯುತ್ತಿದ್ದ ೮ ರೂಪಾಯಿಗಳ ವಿದ್ಯಾರ್ಥಿವೇತನವನ್ನು ಪ್ರತಿತಿಂಗಳಲ್ಲಿಯೂ ಬಡವರಾದ ತನ್ನ ಸಹಾಧ್ಯಾಯಿಗಳ ಸಹಾಯಕ್ಕೋಸ್ಕರ ವಿನಿಯೋಗಿಸುತ್ತಿದ್ದ ಸಂಗತಿಯನ್ನು ವಾಚಕರು ಮೊದಲೇ ಓದಿರುವರಷ್ಟೆ. ಆಗಾಗ ಅವರಲ್ಲಿ ಕೆಲವರಿಗೆ ಬಟ್ಟೆ ಮುಂತಾದುವುಗಳನ್ನು ಕೊಡಲಿಕ್ಕೆ ತನ್ನ ಬಳಿಯಲ್ಲಿ ಹಣವಿಲ್ಲದೆ, ಇತರರ ಹತ್ತಿರ ಬದಲು ತಂದು ಕೊಡುತ್ತಿದ್ದನು. ಪಾಠಶಾಲೆಯ ವಿರಾಮದಿನಗಳಲ್ಲಿ ಆತನು ತನ್ನ ಊರಿಗೆ ಹೋದಾಗ ಅಲ್ಲಿನ ಬಡಬಗ್ಗರ ಮನೆಗೆ ಹೋಗಿ ಅವರ ಕಷ್ಟಸುಖಗಳನ್ನು ವಿಚಾರಿಸಿ, ಅವರಲ್ಲಿ ಕೆಲವರಿಗೆ ಹಣವನ್ನೂ, ಮತ್ತೆ ಕೆಲವರಿಗೆ ಅಶನವಸನಗಳನ್ನೂ ಕೊಟ್ಟು ಸಹಾಯ ಮಾಡುತ್ತಿದ್ದನು. ಅನಂತರ ಆತನು ಉದ್ಯೋಗ ಮಾಡಿಕೊಂಡಿದ್ದು, ತಾನು ಸ್ವಗ್ರಾಮಕ್ಕೆ ಹೋದಾಗೆಲ್ಲ ಸುಮಾರು ೫೦೦ ರೂಪಾಯಿಗಳ ಬೆಲೆಯುಳ್ಳ ವಸ್ತ್ರಗಳನ್ನೂ, ೬೦೦ ರೂ. ಗಳ

ರೊಕ್ಕವನ್ನೂ ತನ್ನ ಸಂಗಡ ತೆಗೆದುಕೊಂಡು ಹೋಗಿ ಅವರಿಗೆ ಸ್ವೇಚ್ಛೆಯಿಂದ ಹಂಚುತ್ತಿದ್ದನು. ಆತನ ಬಳಿಗೆ ಬಂದ ಯಾಚಕರು ಯಾವಾಗಲೂ ತಾವು ಯೋಚಿಸಿಕೊಂಡು ಬಂದುದಕ್ಕಿಂತ ಹೆಚ್ಚಾಗಿಯೇ ಸಹಾಯವನ್ನು ಪಡೆಯುತ್ತಿದ್ದರು. ಯಾಚಕರು ತನ್ನ ಮನೆಗೆ ಬಂದಾಗ ಸಂಭ್ರಮದಿಂದ ಅವರನ್ನು ಇದಿರ್ಗೊಂಡು ಉಚಿತ ಪ್ರಕಾರದಿಂದ ಸನ್ಮಾನಿಸಿ, ತುಂಬ ಧಾರಾಳವಾಗಿ ಗುಪ್ತದಾನಮಾಡಿ ಸಂತೋಷಪಡಿಸಿ ಕಳುಹುತ್ತಿದ್ದನು. ಈ ಧಾರ್ಮಿಕನ ಗುಣಗಳನ್ನು ನೋಡಿ, ಇವನಲ್ಲಿ ಹೆಚ್ಚಾದ ಹಣವಿದೆಯೆಂದು ಕೊಂಡು ಕೆಲವರು ಕಳ್ಳರು ಒಂದುದಿನ ಈತನ ಮನೆಯನ್ನು ಪ್ರವೇಶಿಸಿದರು. ಆತನು ದೊರೆತನದವರ ಉದ್ಯೋಗದಿಂದ ನಿವೃತ್ತನಾದ ಮೇಲೆ, ನಿರ್ವ್ಯಾಪಾರನಾಗಿರದೆ ತನ್ನ ದೇಶಕ್ಕೆ ಮೊದಲಿಗಿಂತಲೂ ಇಮ್ಮಡಿಯಾದ ಉಪಕಾರ ಮಾಡತೊಡಗಿದನು. ಬಂಗಾಳೀ ಭಾಷೆಯಲ್ಲಿ ಆತನು ಬರೆದ ಪುಸ್ತಕಗಳು ಮೃದುಮಧುರಶೈಲಿಯಲ್ಲಿಯೂ, ಶಯ್ಯಾಸೌಷ್ಟವದಲ್ಲಿಯೂ, ಪಾರಿಶುದ್ಧದಲ್ಲಿಯೂ ತುಂಬ ಹೆಸರುಗೊಂಡಿವೆ. ಸರಕಾರದ ಉದ್ಯೋಗವನ್ನು ಬಿಟ್ಟುದರಿಂದ ಆತನಿಗೆ ಸ್ವಲ್ಪವಾದರೂ ನಷ್ಟವಿಲ್ಲ. ಆತನು ಬರೆದ ಪುಸ್ತಕಗಳು ಪಾಠಶಾಲೆಗಳಲ್ಲಿ ಓದುವ ಬಾಲಕರಿಗೆ ಅತ್ಯಂತ ಉಪಯುಕ್ತಗಳಾಗಿದ್ದುದರಿಂದ ವಿದ್ಯಾಸಾಗರನು ಉದ್ಯೋಗವನ್ನು ಬಿಟ್ಟುಕೊಟ್ಟ ಮೇಲೆ ಸಹ ಅಂತಹ ಗ್ರಂಥಗಳನ್ನೇ ಪ್ರಚುರಿಸುತ್ತಾ ಬಂದನು. ಹಳ್ಳಿಯ ಮಠಗಳಲ್ಲಿಯೂ, ಪಾಠಶಾಲೆಗಳಲ್ಲಿಯೂ, ಪ್ರತಿ ಹುಡುಗನೂ ಆ ಮಹನೀಯನ ಗ್ರಂಥಗಳನ್ನೇ ಓದುತ್ತಲಿದ್ದುದರಿಂದ ಆತನಿಗೆ ತಿಂಗಳೊಂದಕ್ಕೆ ಸುಮಾರು ೫೦೦೦ ರೂಪಾಯಿಗಳ ಆದಾಯವು ಕೆಲವು ಕಾಲವೂ, ೩,೦೦೦ ರೂ. ಗಳ ಆದಾಯವು ಕೆಲವು ಕಾಲವೂ ಬರುತ್ತಲಿದ್ದಿತು. ವಂಗದೇಶದ ವಿದ್ಯಾಲಯಗಳಲ್ಲಿ ಈಗಲೂ ಈತನಿಂದ ರಚಿಸಲ್ಪಟ್ಟ ಸಂಸ್ಕೃತ ಮತ್ತು ಬಂಗಾಳಿ ಗ್ರಂಥಗಳು ಓದಿಸಲ್ಪಡುತ್ತಿವೆ. ಬಂಗಾಳಿ ಭಾಷೆಗೆ ಆತನಂತೆ ಕಳೆತುಂಬಿಸಿದವರು ಒಬ್ಬರೂ ಇಲ್ಲ. ಆದುದರಿಂದ ಬಂಗಾಳೀ ಭಾಷೆಗೆ ಆತನು ಗ್ರಂಥರೂಪವಾಗಿ ಮಾಡಿದ ಮಹೋಪಕಾರಕ್ಕೋಸ್ಕರ ಆತನಲ್ಲಿ ಆ ದೇಶಸ್ಥರು ತುಂಬ ಕೃತಜ್ಞರಾಗಿರುವರು.

ಒಂದಾನೊಂದುದಿನ ಒಬ್ಬನು ಹಾಲುಕರೆಯುತ್ತಿದ್ದಾಗ ವಿದ್ಯಾಸಾಗರನು ಅದನ್ನು ನೋಡಿದನು. ಆಗ ಅಲ್ಲಿ ಕಟ್ಟಿಹಾಕಲ್ಪಟ್ಟಿದ್ದ ಅದರ ಕರುವು ಅರಚಿ

ಕೊಳ್ಳುತ್ತಲಿತ್ತು. ಅದರಿಂದ ದಯಾಸಾಗರನ ಮನಸ್ಸು ತುಂಬ ನೊಂದಿತು. ಆಕಳ ಕರುವು ಕೂಗಿಕೊಳ್ಳುತ್ತಿದ್ದುದನ್ನು ಕಂಡು, ಆತನು ಬಹಳ ವ್ಯಸನ ಪಟ್ಟನು. ಅಂದಿನಿಂದ ಮುಂದೆ ತಾನು ಯಾವಾಗಲೂ ಹಾಲು ಕುಡಿಯುವುದಿಲ್ಲ ವೆಂದು ಪ್ರತಿಜ್ಞೆಮಾಡಿದನು. ಅದರಂತೆ ತನ್ನ ಜೀವಿತಕಾಲದಲ್ಲಿ ಎಂದೆಂದೂ ಹಾಲು ಕುಡಿಯಲೇ ಇಲ್ಲ. ಆದರೂ ತಿಂಗಳೊಂದಕ್ಕೆ ೮೦ ರೂಪಾಯಿಯ ಬೆಲೆಯ ಆಕಳಹಾಲನ್ನು ರೋಗಿಗಳು ಮುಂತಾದವರ ವಿನಿಯೋಗಕ್ಕಾಗಿ ಕೊಳ್ಳುತ್ತಿದ್ದನು. ವಸಂತಕಾಲದಲ್ಲಿ ಮಾವಿನಹಣ್ಣುಗಳನ್ನು ಕೊಂಡು ತಂದು, ಬಡಬಗ್ಗರಿಗೂ ಬಂಧುಗಳಿಗೂ ತೃಪ್ತಿಯಾಗುವಂತೆ ಹಂಚುತ್ತಿದ್ದನು. ಪ್ರತಿ ವಸಂತಋತುವಿನಲ್ಲಿಯೂ ಆತನು ಮಾವಿನಹಣ್ಣಿಗಾಗಿಯೇ ೧೦೦೦ ರೂಪಾ ಯಿಗಳನ್ನು ವೆಚ್ಚಮಾಡಿ, ಅದನ್ನು ಕೊಂಡುಕೊಳ್ಳಲಾರದವರಿಗೆ ಕೊಟ್ಟು, ಅವರ ಕೋರಿಕೆಯನ್ನು ತೀರಿಸುತ್ತಿದ್ದನು. ಸಂಘಸಂಸ್ಕಾರವಿಷಯದಲ್ಲಿ ಆತನು ಮಾಡಿದ ಪ್ರಯತ್ನಗಳು ಅಷ್ಟಿಷ್ಟೆಂದು ಹೇಳತೀರದು. ಆ ಸಂಗ ತಿಯನ್ನಿದುವರೆಗೇ ತಿಳಿಸಿರುವೆವು. ಪರರ ಸಹಾಯವು ಸ್ವಲ್ಪವೂ ಇಲ್ಲದೆ, ಸ್ತ್ರೀಪುನರ್ವಿವಾಹಗಳನ್ನು ಮಹಾವೈಭವದಿಂದ ಮಾಡಿಸುತ್ತಲಿದ್ದುದರಿಂದ ಆತನು ಸಾಲಗಾರನಾದನು. ಆ ವಿವಾಹದ ವೆಚ್ಚಗಳನ್ನೂ, ಆ ದಂಪತಿಗಳ ಸಂರಕ್ಷಣೆಗಾಗಿ ತರುವಾಯ ಆಗಬೇಕಾದ ಖರ್ಚುಗಳನ್ನೂ ತಾನೇ ವಹಿಸಿ ದನು. ಆತನು ಯಾವಾಗಲೂ ತನ್ನ ಒಡವೆಯನ್ನು ಇತರರು ತಿನ್ನಬೇಕೇ ಹೊರತು ತಾನು ಒಬ್ಬರ ದ್ರವ್ಯವನ್ನು ಸ್ವಲ್ಪವಾದರೂ ಅನುಭವಿಸಬಾರ ದೆಂದು ತಿಳದಿದ್ದನು. ಅದೇಪ್ರಕಾರವಾಗಿ ತಾನು ಯಾವಾಗಲೂ ಇತರರಿಗೆ ಸಹಾಯಮಾಡುತ್ತಾ, ಇತರರ ಸಹಾಯವನ್ನು ಬಹು ಸ್ವಲ್ಪವಾಗಿ ಹೊಂದು ತ್ತಾ ಇದ್ದನು. ಸ್ತ್ರೀಪುನರ್ವಿವಾಹಗಳಿಗಾಗಿ ಆತನು ೫೦,೦೦೦ ರೂಪಾಯಿ ಗಳ ಸಾಲ ತೆಗೆದನು. ಆತನು ನದ್ಯಾ (ನವದ್ವೀಪ) ಮೊದಲಾದ ಜಿಲ್ಲೆಗ ಳಲ್ಲಿ ಪಾಠಶಾಲೆಯ ಪರೀಕ್ಷಾಧಿಕಾರಿಯಾಗಿ ಗ್ರಾಮಾಂತರಗಳಿಗೆ ಪ್ರಯಾಣ ಮಾಡುತ್ತಿದ್ದಾಗ ಮಾರ್ಗಮಧ್ಯದಲ್ಲಿ ಸಿಕ್ಕಿದ ದೀನನಾದ ಪ್ರತಿಒಬ್ಬನಿಗೂ ಒಂದೊಂದು ಬೆಳ್ಳಿಯ ನಾಣ್ಯವನ್ನು ಕೊಡುತ್ತಲಿದ್ದನು. ಹೀಗೆ ಆತನು ಸಂಚರಿಸುತ್ತಿದ್ದಾಗ ಅನೇಕಜನ ವಿದ್ಯಾರ್ಥಿಗಳು ಸಹಾಯಕ್ಕಾಗಿ ಮೊರೆಯಿ ಡುತ್ತಿದ್ದರು. ಆಗ ಅವರಲ್ಲಿ ಕೆಲವರಿಗೆ ಹಣಕೊಡುತ್ತಾ, ಕೆಲವರಿಗೆ ಉಚಿತ ವಾಗಿ ವಿದ್ಯೆಕಲಿಸುವುದಕ್ಕೆ ಅಪ್ಪಣೆ ಮಾಡುತ್ತಾ ಸಹಾಯಮಾಡಿದನು. ಹೀಗೆ

ಆತನಿಂದ ಸಹಾಯ ಹೊಂದಿದವರಲ್ಲಿ ಕೆಲವರು ತರುವಾಯ ಉನ್ನತಸ್ಥಿತಿಗೆ ಬಂದು, ಮಾತೃದೇಶಾಭಿವೃದ್ಧಿಗೆ ಪ್ರಯತ್ನಪಡುವ ಪ್ರಮುಖರಲ್ಲಿ ಗಣಿಸಲ್ಪಡಲರ್ಹರಾದರು. ಈತನ ಸಹಾಯವಿಲ್ಲದಿದ್ದರೆ ಅವರು ಇಂತಹ ಸ್ಥಿತಿಗೆ ಬರಲು ಅವಕಾಶವಿರಲಿಲ್ಲ. ವಿದ್ಯಾಸಾಗರನು ಹಳ್ಳಿಪಳ್ಳಿಗಳಲ್ಲಿ ಸಂದುಗೊಂದಿಗಳಲ್ಲಿ ಸಾಮಾನ್ಯ ಮನುಷ್ಯನಂತೆ ತಿರುಗುತ್ತಿದ್ದಾಗ ಮಾಸಿದ ಹರಕು ಬಟ್ಟೆಗಳನ್ನು ಧರಿಸಿ, ನೋಡಲಿಕ್ಕೆ ಅಸಹ್ಯರಾಗಿ ಕಾಣುವ ಬಡವರ ಮಕ್ಕಳನ್ನು ನೋಡಿ ತುಂಬ ಕನಿಕರಗೊಂಡು, ಅವರ ಹತ್ತಿರಕ್ಕೆ ಹೋಗಿ, ಅವರ ಸ್ಥಿತಿಗಳನ್ನು ವಿಚಾರಿಸಿ, ಅವರಿಗೆ ತಕ್ಕ ಸಹಾಯವನ್ನು ಮಾಡಿಕಳುಹುತ್ತಿದ್ದನು. ಬರದ್ವಾನ್ ಜಿಲ್ಲೆಯಲ್ಲಿ ಹೀನಕುಲಸ್ಥರಾದ ಈ ದರಿದ್ರರಲ್ಲಿ ಕೆಲವರು ಶುದ್ಧಾಂಗವಾಗಿ ಸಹಾಯವಿಲ್ಲದವರನ್ನು ತನ್ನ ಸಂಗಡ ಕರೆದುಕೊಂಡುಹೋಗಿ, ತನಗೆ ಅಗತ್ಯವಿಲ್ಲದಿದ್ದರೂ ಅವರಿಗೆ ಯಾವುದೋ ಒಂದು ಉದ್ಯೋಗವನ್ನು ಕೊಟ್ಟು, ಪೋಷಿಸುತ್ತಾ ಬಂದನು. ಇತರರಿಗೆ ಧರ್ಮೋಪದೇಶಮಾಡಿ ಕಾರ್ಯದೂರವಾಗಿರುವಂತಹ ಈ ಕಾಲದ ಕೆಲವು ಸಂಘಸಂಸ್ಕರಣರಂತೆ ಅಲ್ಲದೆ ಈತನು ನಿಜವಾದ ಅಭಿಮಾನವನ್ನು ತೋರಿಸಿದ ಕಾರ್ಯದಕ್ಷನು. ಅದೇ ವಿಧವಾಗಿ ಪರರ ಕಷ್ಟಗಳಿಗೆ ಮರುಗಿ, ನಿಟ್ಟುಸಿರುಗಳಬಿಡುತ್ತಾ, ಸುಮ್ಮನೆ ವ್ಯರ್ಥವೇದಾಂತಗಳನ್ನು ಹೇಳುವ ಈಗಿನ ಮಿಥ್ಯಾವಾಗ್ಮಿಗಳಲ್ಲಿ ಆತನು ಸೇರದೆ ಆರ್ತಜನರಲ್ಲಿ ತನಗಿರುವ ಅನುಪಮಾನವಾದ ದಯಾರಸವನ್ನು ಕಾರ್ಯತಃ ಮಾಡಿ ಮಾಡಿ ತೋರುವ ಸ್ವಭಾವವುಳ್ಳವನು. ತನ್ನ ಸಹಾಯವನ್ನು ಕೋರಿಬಂದವರಿಗೆ ಆಶಾಭಂಗಮಾಡದೆ, ಸಂತೋಷಪಡಿಸಿ ಕಳುಹುವತನಕ ಆತನಿಗೆ ಏನೂ ತೋರದು.

ವಿದ್ಯಾಸಾಗರನು ಒಂದುದಿನ ಕಲ್ಕತ್ತೆಯಲ್ಲಿ ತನ್ನ ಸ್ನೇಹಿತನಾದ ಪಂಡಿತ ಶಿವನಾಥ ಶಾಸ್ತ್ರಿಯವರ ಹಜಾರದಲ್ಲಿ ಕುಳಿತುಕೊಂಡಿರುವಾಗ ಸುಮಾರು ಒಂಭತ್ತು ವರುಷ ವಯಸ್ಸುಳ್ಳ ಸುಂದರವದನಾರವಿಂದೆಯಾದ ಒಬ್ಬ ಬಾಲಾಮಣಿಯು ಈತನ ದೃಷ್ಟಿಪಥಕ್ಕೆ ಬಿದ್ದಳು. ಆಗಲಾತನು ಆ ಬಾಲೆಯ ವಿಷಯವನ್ನು ಕುರಿತು ವಿಚಾರಿಸಲು ಆಕೆಯು ಕಡುಬಡವನಾದ ಆ ನೆರೆಮನೆಯವನ ವಿತಂತು ಕುಮಾರಿಯೆಂದು ತಿಳಿಯಿತು. ಆ ಮಾತನ್ನು ಕೇಳಿದ ಒಡನೆಯೇ ಆತನ ಕಣ್ಣುಗಳಿಂದ ಕಣ್ಣೀರು ಕಾಲುವೆಯಾಗಿ ಹರಿಯಲಾರಂಭಿಸಿತು. ಹೀಗೆ ಸ್ವಲ್ಪ ಹೊತ್ತು ಚಿಂತಿಸಿ, ಆ ಕನ್ನೆಯನ್ನು ತಾಯಿ

ತಂದೆಗಳ ಸಂಗಡ ಕರೆದುಕೊಂಡು ತನ್ನ ಬಳಿಗೆ ಬಂದಲ್ಲಿ ಅವರಿಗೆ ಬೇಕಾದ ಸಹಾಯಗಳನ್ನು ಮಾಡುವೆನೆಂತಲೂ, ಆ ಸಂಗತಿಯನ್ನು ಆಕೆಯ ತಾಯಿ ತಂದೆಗಳೊಡನೆ ಹೇಳಬೇಕೆಂತಲೂ ವಿದ್ಯಾಸಾಗರನು ಶಿವನಾಥ ಶಾಸ್ತ್ರಿಯವರನ್ನು ಬೇಡಿಕೊಂಡನು. ಅವರು ಆ ಪ್ರಕಾರವಾಗಿ ಆ ಬಾಲೆಯನ್ನು ಕರೆದುಕೊಂಡು ಆತನ ಬಳಿಗೆ ಬರಲು ಅವನು ತನ್ನ ವಾಗ್ದಾನದಂತೆ ಅವರಿಗೆ ಕೆಲವು ನೂತನ ವಸ್ತ್ರಗಳನ್ನೂ, ಸ್ವಲ್ಪ ದ್ರವ್ಯವನ್ನೂ ಕೊಟ್ಟು, ಮುಂದೆ ಅವರು ಬಂದಾಗಲೆಲ್ಲ ತನ್ನ ಶಕ್ತಿಯಿದ್ದಮಟ್ಟಿಗೆ ಸಹಾಯಮಾಡುವೆನೆಂದು ಹೇಳಿಕಳುಹಿಸಿದನು.

ಒಂದಾನೊಂದು ದಿನ ವಿದ್ಯಾಸಾಗರನು ತನ್ನ ಮೈಯಲ್ಲಿ ಆಲಸ್ಯವಾಗಿದ್ದುದರಿಂದ ವೀರಸಿಂಹಗ್ರಾಮದಲ್ಲಿಯೇ ಇದ್ದನು. ಆಗ ಒಬ್ಬ ವಿತಂತುವು ಆತನ ಬಳಿಗೆ ಬಂದು, ಕಾಲುಗಳಮೇಲೆ ಅಡ್ಡಬಿದ್ದು, ಬಹಳವಾಗಿ ವಿಲಾಪಿಸತೊಡಗಿದಳು. ಆಗ ಆತನು ಆಕೆಯನ್ನು ಎಬ್ಬಿಸಿ, ಸಂತೈಸಿ, ಆಕೆಯ ದುಃಖಕಾರಣವನ್ನು ವಿಚಾರಿಸಲು ಆಕೆಯು ಹೀಗೆಂದಳು,—" ಅಯ್ಯಾ! ನಾನು ದಿಕ್ಕಿಲ್ಲದ ಒಬ್ಬ ದುರದೃಷ್ಟವಂತೆ. ನನ್ನ ಪತಿಯು ನನ್ನನ್ನು ಇಹಲೋಕನರಕವೆಂದೆನ್ನಿಸಿಕೊಳ್ಳುವ ಈ ವೈಧವ್ಯದುಃಖದಲ್ಲಿ ತಳ್ಳಿ ಬಿಟ್ಟು ಹೋಗುವಾಗ ನನ್ನ ಜೀವನಾಧಾರಕ್ಕಾಗಿ ತಕ್ಕ ಭೂವಸತಿಯನ್ನು ಸ್ವಲ್ಪ ಮಟ್ಟಿಗೆ ಇಟ್ಟು ಹೋಗಿದ್ದನು. ಈಗ ನನ್ನ ಸಮೀಪ ಬಂಧುಗಳೂ, ಮೃತನಾದ ನನ್ನ ಪತಿಯ ವಾರಸುದಾರರಲ್ಲಿ ಕೆಲವರೂ ಮಾಯೋಪಾಯಗಳಿಂದ ನನ್ನ ಆಸ್ತಿಯನ್ನು ಅಪಹರಿಸಿ, ನನ್ನ ಬಾಯಹತ್ತಿರ ಇರುವ ತುತ್ತನ್ನು ಕೂಡ ಕಿತ್ತುಕೊಳ್ಳಲಿಕ್ಕೆ ಯತ್ನಿಸಿರುವರು. ಅವರು ಹಾಗೆ ಮಾಡಿಬಿಟ್ಟರೆ, ಈ ಲೋಕದಲ್ಲಿ ನನ್ನಂತಹ ನಿರ್ಭಾಗ್ಯಳು ಮತ್ತಾವಳೂ ಇರಳು. ನನ್ನ ಮೊರೆಯನ್ನು ಲಾಲಿಸುವರು ಒಬ್ಬರೂ ಇಲ್ಲದ್ದರಿಂದ ತಮ್ಮ ಸುಗುಣಜಾಲವನ್ನು ಕೇಳಿ, ನಿಮ್ಮ ಸಾನಿಧ್ಯವನ್ನು ಸೇರಿರುವೆನು " ಎಂದಳು. ವಿದ್ಯಾಸಾಗರನು ಸಾವಧಾನದಿಂದ ಈ ಮಾತುಗಳನ್ನೆಲ್ಲ ಕೇಳಿ, ದ್ರೋಹಬುದ್ಧಿಯನ್ನವಲಂಬಿಸಿದ ಆಕೆಯ ಬಂಧುಗಳನ್ನು ಕರೆಯಿಸಿದನು. ಆತನು ಅವರಿಗೆ ಎಷ್ಟು ವಿಧಗಳಿಂದ ಬೋಧಿಸಿದರೂ, ಅವರು ಕೇಳದೆ ಮೂರ್ಖತ್ವದಿಂದ ಮರಳಿ ಹೋದುದರಿಂದ ಇವನು ಆಲೋಚಿಸಿದ ಸಾಮೋಪಾಯವು ನೆರವೇರದೆ ಹೋಯಿತು. ಆದರೂ ಆತನು ಆಕೆಗೆ ಸಹಾಯ

ಮಾಡುವೆನೆಂದು ವಾಗ್ದಾನಮಾಡಿ ಆಕೆಯ ವಿಷಯವಾಗಿ ಆಕೆಯ ಪ್ರತಿಕಕ್ಷಿಯವರೊಂದಿಗೆ ಹೋರಾಡಲಿಕ್ಕೆ ಯತ್ನಿಸಿದನು. ಆತನು ಯೋಚಿಸದೆ ಇದ್ದ ಕೆಲವು ಆತಂಕಗಳು ಬಂದುವು. ಆಕೆಗೆ ಸಹಾಯ ಮಾಡಿದರೆ ಈತನಿಗೆ ಹಾನಿ ಬರುವದೆಂದು ಕೆಲವರು ಹೆದರಿಸಿದರು. ಆಕೆಯ ಪ್ರತಿಕಕ್ಷಿಗಳು ತುಂಬ ಕ್ರೂರರಾಗಿಯೂ, ದುರ್ಮಾರ್ಗಪ್ರವರ್ತಕರಾಗಿಯೂ ಇದ್ದರು. ಆಕೆಗೆ ಸಹಾಯ ಮಾಡಬಾರದೆಂದು ಹೇಳಲಿಕ್ಕೆ ಬಂದವರ ಸಂಗಡ, ಆತನು ತನ್ನ ಪ್ರಾಣಗಳನ್ನಾದರೂ ಧಾರೆಯೆರೆದು ಆಕೆಗೆ ಸಹಾಯ ಮಾಡುವೆನೆಂದು ಹೇಳಿದನು. ಆತನು ಈ ವಿಧವಾಗಿಯೇ ಕಷ್ಟಪಟ್ಟು ಕೊನೆಗೆ ಸಫಲಮನೋರಥನಾಗಿ ಆ ದೀನೆಯನ್ನು ಕಾಪಾಡಿದನು.

ಮತ್ತೊಂದುವೇಳೆ ಜಗನ್ಮೋಹನತರ್ಕಾಲಂಕಾರನೆಂಬ ಒಬ್ಬ ಬ್ರಾಹ್ಮಣ ಪಂಡಿತನು ವಿದ್ಯಾಸಾಗರನ ಬಳಿಗೆ ಬಂದು ತಾನು ದೊಡ್ಡ ತೊಂದರೆಯಲ್ಲಿ ಸಿಕ್ಕಿದ್ದೇನೆಂತಲೂ, ತನಗೆ ಅದೇ ಕ್ಷಣದಲ್ಲಿ ೫೦೦ ರೂಪಾಯಿಗಳು ದೊರೆಯದೆ ಹೋದರೆ ಲಜ್ಜಾಗೌರವಗಳ ಪಾಲಾಗುವುದಕ್ಕಿಂತ ಆತ್ಮಹತ್ಯೆ ಮಾಡಿಕೊಳ್ಳುವುದೇ ಲೇಸಾಗಿದೆಯೆಂತಲೂ ವಿಜ್ಞಾಪಿಸಿಕೊಂಡನು. ಆಗ ವಿದ್ಯಾಸಾಗರನು ಆತನ ಮಾತುಗಳನ್ನು ನಂಬಿ ಕೂಡಲೇ ಅಷ್ಟು ಹಣವನ್ನು ಕೊಟ್ಟು ಕಳುಹಿಂಬಿಟ್ಟನು. ಮರಳಿ ಆ ಬ್ರಾಹ್ಮಣನಿಂದ ಆ ಹಣವನ್ನು ಹಿಂದಕ್ಕೆ ತೆಗೆದುಕೊಳ್ಳಲೇ ಇಲ್ಲ.

ಮತ್ತೊಂದುಸಾರಿ ಹುಗ್ಲಿ ಜಿಲ್ಲೆಯೊಳಗಿನ ಜಹಾನಾಬಾದದಿಂದ ಮತ್ತೊಬ್ಬ ಪಂಡಿತನು ವಿದ್ಯಾಸಾಗರನ ಬಳಿಗೆ ಬಂದು ಮೊದಲಿನ ಪಂಡಿತನಂತೆಯೇ ಪ್ರಾಣಾವಸರ ಬಂದಿದೆಯೆಂದು ಹೇಳಲು, ಆತನು ಬೇಡಿದ ೩೦೦ ರೂಪಾಯಿಗಳನ್ನು ಕೊಟ್ಟು ಕಳುಹಿಸಿದನು. ಮರಳಿ ಆ ಹಣವನ್ನು ತೆಗೆದುಕೊಳ್ಳಲಿಲ್ಲ.

ಕಾಳೀಘಟ್ಟದಲ್ಲಿ ಕ್ಷೇತ್ರಮೋಹನ ಹಾಲ್‌ದಾರ್ ಎಂಬಾತನು ತನಗೆ ಸಾಲಕೊಟ್ಟವರು ತನ್ನ ಆಸ್ತಿಯನ್ನು ಜಪ್ತಿಮಾಡಿ ಹರಾಜುಮಾಡಿಸಲಿಕ್ಕೆ ಸಿದ್ಧರಾಗಿದ್ದಾಗ, ವಿದ್ಯಾಸಾಗರನ ಬಳಿಗೆ ಬಂದು, ೪೦೦ ರೂಪಾಯಿಗಳನ್ನು ತೆಗೆದುಕೊಂಡು ಹೋಗಿ, ತನ್ನ ಆಸ್ತಿಯನ್ನು ಕಾಪಾಡಿಕೊಂಡನು. ಆದರೂ ಈತನು ಉಳಿದವರಂತಲ್ಲದೆ ಕೆಲವುಕಾಲದ ಮೇಲೆ ಆ ಹಣವನ್ನು ಹಿಂದಕ್ಕೆ

ಕೊಡುವುದಕ್ಕೆ ವಿದ್ಯಾಸಾಗರನ ಬಳಿಗೆ ಬಂದನು. ಆದರೆ ಆತನು ಅವನ ನ್ಯಾಯಶೀಲತೆಗೆ ಮೆಚ್ಚಿ, ಆ ಹಣವನ್ನು ಅವನಿಗೇನೆ ಕೊಟ್ಟುಬಿಟ್ಟನು.

ಮತ್ತೊಂದು ಸಂದರ್ಭದಲ್ಲಿ ವೈಷ್ಣವ ಶರಣಸರಕಾರ ಎಂಬಾತನು ವಿದ್ಯಾಸಾಗರನ ಬಳಿ ಅದೇ ಮೇರೆಗೆ ೪೦೦ ರೂಪಾಯಿಗಳನ್ನು ತೆಗೆದು ಕೊಂಡನು. ವಿದ್ಯಾಸಾಗರನು ತನ್ನಲ್ಲಿ ಹಣವಿಲ್ಲದೆ ಇದ್ದುದರಿಂದ ಈ ಹಣ ವನ್ನು ಮತ್ತೊಬ್ಬನಲ್ಲಿ ಮುಬಾದಲೆಯಾಗಿ ತಂದುಕೊಟ್ಟನು. ಆದರೂ ಆತನು ಈ ಹಣವನ್ನು ವಿದ್ಯಾಸಾಗರನಿಗೆ ಹಿಂದಕ್ಕೆ ಕೊಡಲೇ ಇಲ್ಲ. ವಿದ್ಯಾಸಾಗರನೇ ಈ ಸಾಲವನ್ನು ತೀರಿಸಿದನು.

ಹುಗ್ಲಿ ಜಿಲ್ಲಾ ಸಂಧಿಪುರದ ವಾಸಸ್ಥನಾದ ಶ್ಯಾಮಚರಣ ಚಾಟರ್ಜಿ ಎಂಬಾತನು ಒಂದುಸಾರಿ ವಿದ್ಯಾಸಾಗರನ ಬಳಿಗೆ ಬಂದು ತನಗೆ ಒಂದು ನಿಮಿಷದಲ್ಲಿ ೫೦೦ ರೂಪಾಯಿಗಳನ್ನು ಸಹಾಯ ಮಾಡದಿದ್ದರೆ ತನ್ನ ಆಸ್ತಿ ಯಾದ ಭೂಮಿಯೆಲ್ಲವೂ ನಾಶವಾಗಿ ಹೋಗುವುದೆಂದು ಬಹಳವಾಗಿ ಗೋಳಿ ಡಲು, ವಿದ್ಯಾಸಾಗರನು ಅವನು ಕೋರಿದಷ್ಟು ಹಣವನ್ನು ಕೊಟ್ಟುಬಿಟ್ಟನು. ಮರಳಿ ಅವನು ಹಣವನ್ನು ಹಿಂದಿರುಗಿಸಲೇ ಇಲ್ಲ.

ಮತ್ತೊಂದುವೇಳೆ ವಿದ್ಯಾಸಾಗರನು ಕೀರ್ತಿಶೇಷನಾದ ತನ್ನ ಮಿತ್ರ ಶ್ಯಾಮಚರಣ ವಿಶ್ವಾಸನೆಂಬುವನ ಮನೆಯ ಜಗಲಿಯ ಮೇಲೆ ಕುಳಿತಿದ್ದನು. ಆಗ ಹಾಕ್‌ಬೇಡಿ (ಕೈಸರಪಳಿ) ಹಾಕಲ್ಪಟ್ಟ ಇಬ್ಬರು ಅಪರಾಧಿಗಳನ್ನು ಒಬ್ಬ ಪೋಲೀಸಿನವನು ಆ ಮಾರ್ಗವಾಗಿ ಕರೆದೊಯ್ಯುತ್ತಿದ್ದನು. ಆ ಇಬ್ಬರ ಬಾಕಿ ಇರುವ ೫೦೦ ರೂಪಾಯಿಗಳಿಗೆ ಅವರ ಮೇಲಣ ಬಾಕೀದಾ ರನು ನ್ಯಾಯಸಭೆಯಲ್ಲಿ ಫಿರ್ಯಾದುಮಾಡಲು, ನ್ಯಾಯಾಧಿಪತಿಯ ಆಜ್ಞೆಯಂತೆ ಅವರು ಹೀಗೆ ಒಯ್ಯಲ್ಪಡುತ್ತಿರುವರೆಂದು ಶ್ಯಾಮಚರಣನು ವಿದ್ಯಾಸಾಗರನಿಗೆ ಹೇಳಿದನು. ಆಗ ಆತನ ಬಳಿಯಲ್ಲಿ ಹಣವಿಲ್ಲದೆ ಇದ್ದುದರಿಂದ ಅವರನ್ನು ದುರವಾಯಸ್ಥಿತಿಯಿಂದ ರಕ್ಷಿಸುವುದಕ್ಕಾಗಿ ಬೇಕಾದಷ್ಟು ಹಣವನ್ನು ಮತ್ತೊ ಬ್ಬ ದೊಡ್ಡ ಮನುಷ್ಯನಲ್ಲಿ ತಂದುಕೊಟ್ಟು ಅವರನ್ನು ಬಿಡಿಸಿದನು. ಅವರು ಆ ಹಣವನ್ನು ಲೇಣೇದಾರನಿಗೆ ಕೊಟ್ಟು ತಮ್ಮ ಮಾನವನ್ನು ಕಾಪಾಡಿ ಕೊಂಡರು. ಆದರೆ ಅವರೂ ಕೂಡ ಮೊದಲಿನವರಂತೆಯೇ ವಿದ್ಯಾಸಾಗರನಿಗೆ ಹಣವನ್ನು ಕೊಡಲೇ ಇಲ್ಲ. ಆತನೇ ಬದಲು ತಂದ ಹಣವನ್ನು ಕೊಟ್ಟು ತೀರಿಸಿದನು.

ಕಲಕತ್ತೆಯಲ್ಲಿನ ದೊಡ್ಡ ವಂಶದಲ್ಲಿ ಹುಟ್ಟಿದ ದೊಡ್ಡ ಮನುಷ್ಯನೊಬ್ಬನು ಸಂಕಟದಲ್ಲಿ ಸಿಕ್ಕಿ ವಿದ್ಯಾಸಾಗರನ ಹೊಣೆಯ ಮೇಲೆ ಒಬ್ಬರ ಬಳಿ ೫೦೦೦ ರೂಪಾಯಿಗಳ ಸಾಲ ತೆಗೆದುಕೊಂಡನು. ಆತನು ಆ ಕಡವನ್ನು ತೀರಿಸಲಿಕ್ಕೆ ಮುಂಚೆಯೇ ಮೃತನಾದುದರಿಂದ ಆತನ ಮರಣಾಂತರ ಆ ಮೊತ್ತವನ್ನೆಲ್ಲ ವಿದ್ಯಾಸಾಗರನೇ ತೀರಿಸಿಬಿಟ್ಟನು. ಕಡು ಬಡವರಿಗೂ ಅಸಹಾಯಕರಿಗೂ ವಿದ್ಯಾಸಾಗರನು ಮಾಡಿದ ಸಹಾಯಗಳು ಅಪಾರವಾದುವುಗಳೆಂದು ಈ ದೃಷ್ಟಾಂತಗಳಿಂದ ತಿಳಿಯಬರುವುದು. ಅವುಗಳನ್ನೀಗ ಲೆಕ್ಕಿಸಲಿಕ್ಕೆ ಯತ್ನಿಸುವುದಕ್ಕಿಂತ ಹೆಡ್ಡತನದ ಕೆಲಸವಿಲ್ಲ. ಏತಕ್ಕೆಂದರೆ ಸಮುದ್ರದಲ್ಲಿನ ಜಲಬಿಂದುಗಳನ್ನು ಲೆಕ್ಕಮಾಡಲು ಪ್ರಯತ್ನಿಸುವನ ಹಾಗೆ ವಿಫಲ ಮನೋರಥನಾಗುವನು. ಬ್ರೈಂಚೀವಾಸಸ್ಥರಾದ ಗೋಕುಲಚಂದ್ರವಾಸನು, ಗೋವಿಂದಚಂದ್ರವಾಸನು ಎಂಬ ಅಣ್ಣತಮ್ಮಂದಿರಿಬ್ಬರೂ ನೀಲಕಮಲ ಬೆನರ್ಜಿಯವರಿಗೆ ಕೊಡಬೇಕಾಗಿದ್ದ ಸಾವಿರ ರೂಪಾಯಿಗಳ ಸಾಲಕ್ಕಾಗಿ ಅವರ ಮನೆಗಳನ್ನು ಹರಾಜು ಹಾಕುವುದಕ್ಕೆ ಸಿದ್ಧವಾಗಿದ್ದಾಗ ವಿದ್ಯಾಸಾಗರನು ಆ ಹಣವೆಲ್ಲ ಅವರಿಗೆ ಉಚಿತವಾಗಿ ಕೊಟ್ಟು, ಆ ವಿಪತ್ತಿನಿಂದ ಅವರನ್ನು ತಪ್ಪಿಸಿದನು.

ಹೀಗೆ ಕೆಲವು ಕಾಲ ಕಳೆದ ಮೇಲೆ ವೀರಸಿಂಹಗ್ರಾಮಕ್ಕೆ ಹತ್ತಿರವಿರುವ ರಾಧಾನಗರದ ಜಮೀನ್‌ದಾರರಾದ ವೈದ್ಯನಾಥ ಚೌದುರಿ ಎಂಬಾತನು ಲೋಕವಿಖ್ಯಾತರಾದ ರಾಮಮೋಹನರಾಯರವರ ಕುಮಾರನಾದ ರಾಮಪ್ರಸಾದರಾಯರಿಗೆ ತನ್ನ ಸಂಸ್ಥಾನವನ್ನೆಲ್ಲ ೫೦,೦೦೦ ರೂಪಾಯಿಗಳಿಗೆ ಆಧಾರಮಾಡಿದನು ಆತನು ಮೃತನಾದ ತರುವಾಯ ಅವನ ಮಗನು ಕೂಡ ಇನ್ನೂ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಅವರ ಹತ್ತಿರವೇ ತೆಗೆದುಕೊಂಡನು. ಆಗ್ಗ ಅವರ ಸಾಲವು ೭೫,೦೦೦ ರೂಪಾಯಿ ಆಯಿತು. ವೈದ್ಯನಾಥನ ಮಗ ಶಿವನಾರಾಯಣನು ಆ ಋಣವನ್ನು ತೀರಿಸಲಿಕ್ಕೆ ಮುಂಚೆಯೇ ಲೋಕಾಂತರವನ್ನೆಯ್ದಿದನು. ತರುವಾಯ ಆತನ ಮಕ್ಕಳಿಬ್ಬರೂ ತಮ್ಮ ತಾಯಿಯನ್ನು ಸಂಗಡ ಕರೆದುಕೊಂಡು ವಿದ್ಯಾಸಾಗರನ ಬಳಿಗೆ ಬಂದು ಬಹು ದೈನ್ಯದಿಂದ ಸಹಾಯವನ್ನು ಪ್ರಾರ್ಥಿಸಿದರು. ಆಗಲಾ ದಯಾಸ್ವರೂಪನು ಅವರ ಪೂರ್ವದ ಔನ್ನತ್ಯವನ್ನೂ, ಪ್ರಸ್ತುತದ ಹೀನಸ್ಥಿತಿಯನ್ನೂ ನೆನಪಿಗೆ ತಂದುಕೊಂಡು, ಸ್ವಲ್ಪಹೊತ್ತು ವಿಚಾರಗೊಂಡು ಅವರಿಗೆ

ತಪ್ಪದೆ ತಾನು ಸಹಾಯಮಾಡುವೆನೆಂದು ಅಭಯವಿತ್ತನು. ರಾಮಪ್ರಸಾದನು ಆ ಆಧಾರಸ್ವತ್ತನ್ನು ತಾನೇ ಹೊತ್ತು ಹಾಕಬೇಕೆಂಬ ದುರಾಶೆಯಿಂದ ಆ ಸುತ್ತುಮುತ್ತಲೂ ಇರುವ ವರ್ತಕರು ಯಾರೂ ತನ್ನ ಬಾಕೀದಾರನಿಗೆ ಸಹಾಯಮಾಡಬಾರದೆಂದು ಹೆದರಿಸಿದನು. ಆದುದರಿಂದ ವಿದ್ಯಾಸಾಗರನು ಎಷ್ಟು ಪ್ರಯತ್ನಮಾಡಿದರೂ ನೆರವೇರದೆ ಇದ್ದಿತು. ಆಗಲಾತನು ಎರಡು ಸಾವಿರ ರೂಪಾಯಿಗಳ ವೆಚ್ಚವನ್ನಿಟ್ಟುಕೊಂಡು, ಆರು ತಿಂಗಳತನಕ ವಿವಿಧ ಪ್ರದೇಶಗಳಿಗೆ ಪ್ರಯಾಣಮಾಡಿ, ತಿರುಗಿ ತಿರುಗಿ ಕೊಟ್ಟಕೊನೆಗೆ ಬಾಬೂ ಕಾಳಿದಾಸಘೋಷನ ಬಳಿ ೫೦,೦೦೦ ರೂಪಾಯಿಗಳನ್ನೂ, ಮತ್ತೊಬ್ಬ ವರ್ತಕನಲ್ಲಿ ೫೦,೦೦೦ ರೂಪಾಯಿಗಳನ್ನೂ ಸೇರಿಸಿ ಲಕ್ಷ ರೂಪಾಯಿಗಳನ್ನು ಸಂಪಾದಿಸಿಕೊಂಡು ಬಂದನು. ಆಗಲಾ ಮೊತ್ತವನ್ನು ಕೊಡಲಿಕ್ಕೆ ಹೋಗಲು, ರಾಮಪ್ರಸಾದನು ತೆಗೆದುಕೊಳ್ಳದೆ ತಕರಾರು ಮಾಡಿದನು. ಆದರೆ ಕಡೆಯಲ್ಲಿ ಹೇಗೋ ಸಮ್ಮತಿಗೊಂಡು, ಹಣವನ್ನು ತೆಗೆದುಕೊಂಡನು. ವಿದ್ಯಾಸಾಗರನು ಮಾಡಿದ ಈ ಘನಕಾರ್ಯಕ್ಕಾಗಿ ದೇಶವೆಲ್ಲವೂ ಆತನನ್ನು ಹೊಗಳತೊಡಗಿತು. ಆತನು ಹೀಗೆ ಆ ಪುರಾತನ ರಾಜಕುಟುಂಬವನ್ನು ಆ ಆಪತ್ತಿನಿಂದ ತಪ್ಪಿಸಿದನು. ಆದರೆ ಕಾಲಕರ್ಮವಶದಿಂದ ಆ ಸಂಸ್ಥಾನವೆಲ್ಲವೂ ಮರಳಿ ದಿನೇ ದಿನೇ ಕ್ಷೀಣಿಸಿ ಕೊಟ್ಟಕೊನೆಗೆ ಹರಾಜಿನಲ್ಲಿ ಮಾರಲ್ಪಟ್ಟಿತು. ಆಗಲಾ ಕುಟುಂಬದಲ್ಲಿ ಉಳಿದಿದ್ದ ವಿತಂತುಗಳಿಬ್ಬರಿಗೂ, ಒಬ್ಬೊಬ್ಬರಿಗೆ ತಿಂಗಳೊಂದಕ್ಕೆ ೩೦ ಮೂವತ್ತು ರೂಪಾಯಿಗಳಂತೆ ವಿದ್ಯಾಸಾಗರನೇ ಮನೋವೃತ್ತಿಯಾಗಿ ಕೊಡುತ್ತಾ ಬಂದು ಅವರನ್ನು ಪೋಷಿಸಿದನು.

ವಿದ್ಯಾಸಾಗರನು "ಹಿಂದೂ ಪೇಟ್ರಿಯಾಟ್" "ಸೋಮಪ್ರಕಾಶ" ಮೊದಲಾದ ಕೆಲವು ವೃತ್ತಾಂತಪತ್ರಿಕೆಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡು ಅವುಗಳನ್ನು ತುಂಬ ಸಾಮರ್ಥ್ಯದಿಂದ ಬಹುಕಾಲ ನಡಿಸಿಕೊಂಡು ಬಂದನು. ಅವುಗಳ ಅಭಿವೃದ್ಧಿಗೆ ತಕ್ಕ ವಿಶೇಷ ಧನ ಸಹಾಯವನ್ನು ಕೂಡ ಮಾಡಿ, ಅವುಗಳ ಮೂಲಕ ದೇಶಜನಾಭಿವೃದ್ಧಿಗಾಗಿ ಶ್ರಮಪಟ್ಟನು. ವಿದ್ಯಾಸಾಗರನು ಪ್ರಥಮ ಸ್ತ್ರೀಪುನರ್ವಿವಾಹ ಮಾಡಿಸಲಿಕ್ಕೆ ಸಂಕಲ್ಪಿಸಿದಾಗ ಹಲವರು ಆತನಿಗೆ ಸಹಾಯಕರಾಗಿರುವೆವೆಂದು ವಾಗ್ದಾನ ಮಾಡಿದ್ದರು. ಅವರಲ್ಲಿ ತುಂಬ ಧನಿಕರಾಗಿಯೂ, ಹೆಸರುವಾಸಿಯನ್ನು

ಪಡೆದವರಾಗಿಯೂ ಇರುವವರನೇಕರು ಆ ವಿವಾಹಮಹೋತ್ಸವಕ್ಕೆ ತಾವು ಬರುವೆವೆಂತಲೂ, ಬೇಕಾದ ದ್ರವ್ಯಸಹಾಯ ಮಾಡುವೆವೆಂತಲೂ ಹೇಳಿದ್ದರು. ಆದರೆ ಇವರಲ್ಲಿ ಬಹುಜನ ಸಮಯಬಂದಾಗ ಹಿಂದಕ್ಕೆ ಸರಿದರು. ಅಂತವರಲ್ಲಿ ಮೇಲೆ ಪ್ರಶಂಸಿಸಿದ ಬಾಬು ರಾಮಪ್ರಸಾದರಾಯರವರೂ ಒಬ್ಬರು. ಈ ವಿವಾಹವಾದ ಕೆಲವು ಕಾಲದಮೇಲೆ ವಿದ್ಯಾಸಾಗರನು ರಾಮಪ್ರಸಾದನನ್ನು ಸಂದರ್ಶಿಸಿ, ಆತನ ಒಡಂಬಡಿಕೆಯನ್ನು ಜ್ಞಾಪಕಗೊಳಿಸಲು, ಆತನು ನಿಸ್ಸಂಶಯವಾಗಿ ನಿಮ್ಮ ಉದ್ಯಮವು ನನಗೆ ಅನುಕೂಲವಾಗಿಯೇ ಇದೆ. ನನ್ನ ದ್ರವ್ಯಸಹಾಯವನ್ನು ಕೂಡ ನೀವು ನಂಬಿಕೊಂಡಿರಬಹುದು. ಆದರೆ ನಾನು ಆ ವಿವಾಹಮಹೋತ್ಸವಕ್ಕೆ ಬಾರದೆ ಇದ್ದರೆ ನಿಮಗೆ ಏನಾದರು ತೊಂದರೆಯುಂಟೆ? ಎಂದು ಕೇಳಿದನು. ಆ ಹೇಡಿಮಾತುಗಳಿಗೆ ವಿದ್ಯಾಸಾಗರನು ಬೇಸತ್ತು, ಸ್ವಲ್ಪ ಹೊತ್ತು ಏನೂ ಮಾತನಾಡಲಾರದೆ ಸುಮ್ಮನಿದ್ದು ಕಡೆಗೆ ಅಲ್ಲಿ ಗೋಡೆಯಲ್ಲಿ ಅಲಂಕರಿಸಿದ್ದ ರಾಜಾರಾಮಮೋಹನರಾಯರವರ ಚಿತ್ರಪಟವನ್ನು ತರ್ಜನೀಬೆರಳಿನಿಂದ ತೋರಿಸಿ "ಇನ್ನು ಇದನ್ನು ಇಲ್ಲಿ ಏತಕ್ಕೆ ಕಟ್ಟಿರುವೆ? ಇದನ್ನು ತೆಗೆದು ದೂರವಾಗಿ ಒಗೆ" ಎಂದು ಹೇಳಿ ಹೊರಟು ಹೋದನು.

ವಿದ್ಯಾಸಾಗರನ ವಿತರಣೆಯ ಕಾರ್ಯಗಳನ್ನು ಇನ್ನೂ ಅದೇ ಕೆಲಸವಾಗಿ ಬರೆದರೆ ವಾಚಕರು ಬೇಸರಗೊಳ್ಳುವರೇನೋ ಎಂಬ ಭಯದಿಂದ ಮತ್ತೊಂದು ಸಂದರ್ಭವನ್ನು ಮಾತ್ರ ಬರೆದು ಇಷ್ಟರಲ್ಲಿಯೇ ವಿರಮಿಸಲೆಳಸಿರುವೆವು. ೧೮೫೬ ನೆಯ ವರ್ಷದಲ್ಲಿ ಮೆಷಿಲ್ ಮಧುಸೂದನದತ್ತನೆಂಬಾತನು ಇಂಗ್ಲೆಂಡಿಗೆ ಧರ್ಮಶಾಸ್ತ್ರವನ್ನು ಓದಲಿಕ್ಕಾಗಿ ಹೊರಟನು. ಆತನು ಅಲ್ಲಿಗೆ ಹೋಗುವಾಗ್ಗೆ ತನ್ನ ಆಸ್ತಿಯನ್ನೆಲ್ಲ ಒಬ್ಬ ರಾಜರಿಗೆ ಕೊಟ್ಟು, ಅದರಿಂದ ಬರುವ ಆದಾಯವನ್ನೆಲ್ಲ ತನಗೆ ಕಳುಹಬೇಕೆಂದು ಏರ್ಪಾಡು ಮಾಡಿಕೊಂಡು ಹೋದನು. ಆದರೆ ಆ ದೊಡ್ಡ ಮನುಷ್ಯನು ಕೆಲವು ಕಾಲದ ತನಕ ಕಳುಹಿಸುತ್ತಾ ಬಂದು, ಆ ಮೇಲೆ ಸುಮ್ಮನೆ ಆದನು. ಇದರಿಂದ ವಿದೇಶದಲ್ಲಿದ್ದ ಮಧುಸೂದನನು ತುಂಬ ಕಷ್ಟಗಳಿಗೆ ಸಿಕ್ಕಿ, ಆತನ ಹೆಸರಿನಲ್ಲಿ ಎಷ್ಟು ಪತ್ರಗಳನ್ನು ಬರೆದರೂ, ಆತನು ಪ್ರತ್ಯುತ್ತರ ಬರೆಯಲಿಲ್ಲ. ಆಗ ಆತನು ಅನುಭವಿಸಲಿಕ್ಕಿದ್ದ ಫ್ರಾನ್ಸ್‌ಕಾರಾಗೃಹಶಿಕ್ಷೆ (French Jail) ಯಿಂದ ಆತನನ್ನೂ, ಆತನ ಹೆಂಡತಿಯನ್ನೂ, ಮಕ್ಕಳನ್ನೂ ತಪ್ಪಿಸಿದವನು

ನಮ್ಮ ವಿದ್ಯಾಸಾಗರನೇ. ಮಧುಸೂದನನು ಮನಃಪೂರ್ತಿಯಾಗಿ ತನ್ನ ಶ್ರೇಯೋಭಿಲಾಷಿಗಳೆಂದು ನಂಬಿದವರೇ ಆತನಿಗೆ ಪಡಲಾಗದ ಕಷ್ಟಗಳ ಪಾಲುಮಾಡಿದರು. ಆತನು ಇಂಗ್ಲೆಂಡಿನಿಂದ ಫ್ರಾನ್ಸುದೇಶಕ್ಕೆ ಹೋಗುವಾಗ ರೂಪಲಾವಣ್ಯವತಿಯಾದ ಒಬ್ಬ ಫ್ರೆಂಚರ ತರುಣಿಯು ಆತನ ಸ್ನೇಹಿತೆಯಾದಳು. ಆತನು ಆ ದೇಶವನ್ನು ಸೇರಿದ ಮೊದಲುಗೊಂಡು ಆಕೆಯೇ ಆತನಿಗೆ ಸಹಾಯಕಳಾಗಿದ್ದು ಆಗಾಗ್ಗೆ ಧನಸಹಾಯವನ್ನು ಸುದಾ ಮಾಡುತ್ತಿದ್ದಳು. ಆತನಿಗೆ ವಿದ್ಯಾಸಾಗರನ ಸಹಾಯ ಸಿಕ್ಕುವತನಕ ಆ ಅವಮಾನದಿಂದ ತಪ್ಪಿಸಿದವಳು ಈಕೆಯೇ. ವಿದ್ಯಾಸಾಗರನಿಗೆ ಫ್ರಾನ್ಸುದೇಶದಿಂದ ಮಧುಸೂದನನು ಆಗಾಗ್ಗೆ ಬರೆಯುತ್ತಿದ್ದ ಪತ್ರಗಳನ್ನು ನೋಡಿದರೆ ಆತನು ಇವನಿಗೆ ಮಾಡಿದ ಉಪಕಾರಗಳನ್ನು ತಿಳಿಯಬಹುದು. ಆದುದರಿಂದ ಅವುಗಳಲ್ಲಿ ಕೆಲವನ್ನು ಇದರ ಕೆಳಗೆ ಭಾಷಾಂತರಿಸಿ ಬರೆದಿರುವೆವು.

---

ಕಾರ್ಸೈಲ್ಸ್ ಫ್ರಾನ್ಸು
೩ನೇ ಜೂನ್ ೧೮೬೪.

ಅಯ್ಯಾ!

ನೀನು ಸಾಮಾನ್ಯ ಪುರುಷನಾಗಿದ್ದಲ್ಲಿ ನಾನು ಇದುವರೆಗೂ ನಿನ್ನ ಹೆಸರಿಗೆ ಬರೆಯದೆ ಹೋದುದಕ್ಕೆ ಸತ್ವಗರ್ಭಿತವಾದ ಒಂದು ಕ್ಷಮಾಪಣೆಯನ್ನು ಬೇಡುತ್ತಾ, ಈ ಪತ್ರವನ್ನು ಬರೆಯತೊಡಗುವೆನು. ನಮಗೆ ಆಪತ್ತುಗಳು ಬಂದಾಗ ನಾವು ನಮಗೆ ನಿಶ್ಚಯವಾದ ಪ್ರಾಣಾಪ್ತನೆಂತಲೂ ಕ್ಷೇಮಾಭಿಲಾಷಿಯೆಂತಲೂ, ಗೌರವವುಳ್ಳವನನ್ನೇ ಹೊರತು ಇತರ ಜನರ ಮರೆಹೊಗಲಾರೆವೆಂಬುದನ್ನು ನೀನು ಚನ್ನಾಗಿ ತಿಳಿದೇ ಇರುವೆ.

ಎರಡು ವರ್ಷಗಳ ಹಿಂದೆ ನಿಷ್ಕಪಟಿಯಾಗಿಯೂ ದೃಢಗಾತ್ರನಾಗಿಯೂ ಇದ್ದ ನನ್ನ ತಂದೆಯು ನಿನ್ನ ಕೈಯ ಮೇಲೆ ಕೈ ಹಾಕಿ, ಮೃತಪಟ್ಟ ಸಂಗತಿ ನಿನಗೆ ತಿಳಿಯುವುದಲ್ಲವೆ? ಈಗ ಆತನ ಕುಮಾರನಾದ ನಾನು ದುರಾಗತ ದುರ್ಮಾರ್ಗಪ್ರವರ್ತನೆಗಳಲ್ಲಿ ಬಿದ್ದುದರಿಂದ ನನಗೆ ಈ ಘೋರ ದುರವಸ್ಥೆಯು ಪ್ರಾಪ್ತವಾಗಿದೆ. ಒಬ್ಬನು ನನ್ನ ಮಿತ್ರನೆಂತಲೂ, ನನ್ನ ಅಭಿವೃದ್ಧಿಯನ್ನು ಬಯಸುವನೆಂತಲೂ ನಾನು ದೃಢವಾಗಿ ನಂಬಿದ್ದೆನು. ಈ ವಿಷಯವನ್ನು ತಿಳಿದರೆ ನೀನು ತಪ್ಪದೆ ವಿಷಾದಮಗ್ನಮಾನಸನಾಗುವೆ

ಯೆಂದು ನಾನು ನಿಜವಾಗಿ ಬಲ್ಲೆನು. ನಾನು ಕಲ್ಕತ್ತೆಯಿಂದ ಹೊರಟು ಬರುವಾಗ, ನನ್ನ ಹೆಂಡತಿಯೂ, ಇಬ್ಬರು ಮಕ್ಕಳೂ, ಅಲ್ಲಿಯೇ ಇದ್ದರು. ಆ ಕುಟುಂಬಕ್ಕೆ ತಿಂಗಳೊಂದಕ್ಕೆ ೧೫೦ ರೂಪಾಯಿಗಳು ಕೊಡುವಂತೆ ಏರ್ಪಾಡು ಮಾಡಿದ್ದೆನು. ಆತನು ಆ ದ್ರವ್ಯದಲ್ಲಿ ಸ್ವಲ್ಪ ಭಾಗವನ್ನು ಕೊಡಲು ಅದನ್ನು ೧೮೬೩ನೇ ವರುಷ ಜೂನ್ ತಿಂಗಳಲ್ಲಿ ಓರಿಯಂಟಲ್ ಬ್ಯಾಂಕಿನಲ್ಲಿ ಸಂಗ್ರಹ ಮಾಡಿಟ್ಟೆನು. ಅದು ವೆಚ್ಚವಾಗಿ ಹೋದ ತರುವಾಯ ನನ್ನ ಹೆಂಡತಿ ಪಟ್ಟ ಕಷ್ಟಗಳನ್ನು ವರ್ಣಿಸಲಾರೆನು. ಆ ಖಾತೇದಾರನು ಕೊಟ್ಟ ಬಾಧೆಗಳನ್ನು ಸಹಿಸಲಾರದೆ, ಆಕೆಯು ಕಲ್ಕತ್ತೆಯಿಂದ ಓಡಿಹೋದಳು. ೧೮೬೩ನೇ ಮೇ ೨ನೇ ತಾರೀಖಿನಲ್ಲಿ ಆಕೆಯು ಇಂಗ್ಲೆಂಡನ್ನು ತಲಿಪಿದಳು. ಅಂದಿನಿಂದ ಇದುವರೆಗೂ ಆತನು ಒಂದು ಕಾಸನ್ನಾದರೂ ನಮಗೆ ಕಳುಹಿಸಿಕೊಟ್ಟಲ್ಲಿ ೧೮೬೨ನೇ ವರ್ಷದಿಂದಲೂ ನನ್ನ ಆಸ್ತಿಯ ಮೇಲೆ ಬಂದವರಮಾನವೆಲ್ಲವೂ ಆತನ ಬಳಿಯಲ್ಲಿಯೇ ನಿಂತಿದೆ. ಅಂದಿನಿಂದ ಎಂಟು ಪತ್ರಗಳನ್ನು ಬರೆದರೂ ಆತನು ಒಂದಕ್ಕಾದರೂ ಒಂದು ವಾಕ್ಯವನ್ನಾಗಲಿ, ಪ್ರತ್ಯುತ್ತರಕೊಡಲಿಲ್ಲ

ಈಗ ನಾನು ಫ್ರಾನ್ಸ್ ಸೆರೆಮನೆಗೆ ಹೋಗುತ್ತಿದ್ದೇನೆ. ನನ್ನ ಹೆಂಡತಿಯೂ ಮಕ್ಕಳೂ ಇಲ್ಲಿನ ಅನಾಥರಕ್ಷಣಾಲಯ ಒಂದರಲ್ಲಿ ಅಡಗಿಕೊಳ್ಳಬೇಕಾಗಿದೆ. ನನಗೆ ಈಗ ಹಿಂದೂಸ್ಥಾನದಲ್ಲಿ ಸುಮಾರು ೪೦೦೦ ರೂಪಾಯಿಗಳು ಬರಬೇಕಾಗಿವೆ. ನನ್ನ ಪ್ರಕೃತಾವಸ್ಥೆಯಿಂದ ನನ್ನನ್ನು ರಕ್ಷಿಸತಕ್ಕ ಸ್ನೇಹಿತನು ನೀನೊಬ್ಬನೇ. ಈ ವಿಷಯದಲ್ಲಿ ಧೀರಹೃದಯನಾಗಿಯೂ ಅಸಾಧಾರಣ ಪ್ರಜ್ಞಾವಂತನಾಗಿಯೂ ಇರುವ ನೀನು ಅನುಗ್ರಹಿಸಿ ಕೆಲಸ ಮಾಡತಕ್ಕದು. ಒಂದು ದಿನವಾದರೂ ತಡವು ಮಾಡಬಾರದು.

---

"ವಾರ್ಸೇಲ್ಸ್, ಫ್ರಾನ್ಸು"
೨ನೇ ಜೂನ್ ೧೮೬೪.

ಅಯ್ಯಾ!

ಫ್ರಾನ್ಸ್ ಕಾರಾಗೃಹ ಶಿಕ್ಷೆಯ ಅವಮಾನದಿಂದ ನಾನೊಬ್ಬ ಫ್ರಾನ್ಸ್ ಕನ್ಯಾಮಣಿಯಿಂದ ತಪ್ಪಿಸಲ್ಪಟ್ಟೆನೆಂದು ಕೇಳಲಿಕ್ಕೆ ನೀನು ತುಂಬ ಸಂತೋಷಗೊಳ್ಳುವೆ. ನಾನು ಒಂದು ಹೊಗೆಬಂಡಿಯಲ್ಲಿ ಪ್ರಯಾಣ ಮಾಡುತ್ತಿ

ದ್ದಾಗ ನನಗೆ ಆಕೆಯ ಪರಿಚಯವುಂಟಾಯಿತು. ಅಂದಿನಿಂದಲೂ ಆಕೆಯು ನನ್ನಲ್ಲಿ ತುಂಬ ಅನುರಾಗವುಳ್ಳವಳಾದಳು. ನಮ್ಮ ದುರದೃಷ್ಟಕಾಲದಲ್ಲಿ ಆಕೆಯು ನಮಗೆ ದ್ರವ್ಯಸಹಾಯವನ್ನು ಮಾಡುತ್ತಾ ಬಂದಳು. ಆಕೆಯು ನನ್ನೊಂದಿಗೆ ನಮ್ಮ ಯಜಮಾನನ ಬಳಿಗೆ ಬಂದು ತನ್ನ ಕೈಯಲ್ಲಿ ಆದ ಮಟ್ಟಿಗೆ ಶಿಫಾರಸು ಮಾಡಿ, ಈ ತಿಂಗಳ ಕೊನೆಯ ತನಕ ಜಾಮೀನಿನ ಮೇಲೆ ಸುಮ್ಮನಿರುವಂತೆ ಒಡಂಬಡಿಸಿದಳು. ವರ್ತಕರು ನಮಗೆ ದಿನಸಿಕೊಡುವುದನ್ನು ನಿಲ್ಲಿಸಿ ಬಿಟ್ಟರು. ಹಸಿವಿನಿಂದ ಬಾಧೆಪಡಲಾರದೆ, ಇಲ್ಲಿರುವ ನನ್ನ ಸ್ನೇಹಿತರ ಬಳಿಯಲ್ಲಿ ಸ್ವಲ್ಪ ಹಣವನ್ನು ಧರ್ಮಚಂದಾವಾಗಿ ತೆಗೆದುಕೊಂಡೆನು. ನಮಗೆ ಇಲ್ಲಿ ಯಾವ ಆಸ್ತಿಯೂ ಇಲ್ಲ. ಇರತಕ್ಕವುಗಳೆಲ್ಲವೂ ಸರಕಾರದವರ ಸ್ವಾಧೀನವಾಗಿ ಹೋದುವು. “ ಉಗುರು ಸುತ್ತಿನ ಮೇಲೆ ಒನಕೆಯ ಪೆಟ್ಟು ” ಎಂಬ ಗಾದೆಯಂತೆ ಆ ವೇಳೆಯಲ್ಲಿಯೇ ನನ್ನ ಹೆಂಡತಿಯು ಹೆರಲಿಕ್ಕೆ ಸಿದ್ಧವಾದಳು.

ನಾನು ಕಲ್ಕತ್ತೆಯನ್ನು ಬಿಟ್ಟು ಹೊರಟು ಸರಿಯಾಗಿ ಎರಡು ವರ್ಷಗಳಾದುವು. ನಾನು ಇಂತಹ ನೀಚದೆಶೆಗೆ ಬಂದು ಇಷ್ಟು ಬಾಧೆಗಳನ್ನನುಭವಿಸುವೆನೆಂದು ನನ್ನ ಕನಸಿನಲ್ಲಿಯೂ ಎಣಿಸಿರಲಿಲ್ಲ. .. ............ ನಾನು ಇಲ್ಲಿ ಅಸೌಖ್ಯದಿಂದಲೂ, ಚಿತ್ತಾತುರದಿಂದಲೂ ಕಾಲವನ್ನು ಕಳೆಯುತ್ತಿದ್ದರೂ ಸುಮಾರಾಗಿ ಫ್ರೆಂಚ್‌ಭಾಷೆಯನ್ನು ಕಲ್ತುಕೊಂಡೆನು. ನಾನು ಈಗ ಆ ಭಾಷೆಯಲ್ಲಿ ಚನ್ನಾಗಿ ಮಾತನಾಡಬಲ್ಲೆನು. ಅದಕ್ಕಿಂತಲೂ ಚನ್ನಾಗಿ ಬರೆಯಬಲ್ಲೆನು. ಇಟಾಲಿಯನ್ ಭಾಷಾಭ್ಯಾಸವನ್ನು ಕೂಡ ಆರಂಭಿಸಿದೆನು. ಜರ್ಮನ್‌ಭಾಷೆಯನ್ನು ಕೂಡ ಕಲಿಯಬೇಕೆಂದಿರುವೆನು. ಅದು ಸಾಧ್ಯವಾಗದೆ ಹೋದರೆ ನಾನು ಯುರೋಪ್ ಖಂಡವನ್ನು ಬಿಟ್ಟು ಹೊರಡುವಷ್ಟರೊಳಗೆ ಸ್ಪಾನಿಯೂ, ಪೋರ್ಚುಗಲ್‌ಭಾಷೆಗಳನ್ನು ಕಲ್ತುಕೊಳ್ಳುವೆನು. ನನ್ನ ವಿಚಾರಸ್ಥಿತಿಯ ಹೊರತು ಬೇರೆಯಾವುದನ್ನಾಗಲಿ ಆಲೋಚಿಸಿಕೊಳ್ಳುವುದಕ್ಕೆ ನನ್ನ ಮನಸ್ಸು ಈಗ ತಕ್ಕುದಾಗಿಲ್ಲ. ಇಲ್ಲದಿದ್ದರೆ ನಿಮಗೆ ಉಲ್ಲಾಸತರವಾದ ಸಂಗತಿಗಳನ್ನು ಸಂಪುಟಗಳ ಹಾಗೆ ಬರೆಯಬಲ್ಲೆನು.

---

“ವಾರ್ಸೆಲ್ಸ್ ಫ್ರಾನ್ಸ್”
೩ನೇ ಸೆಪ್ಟಂಬರ್ ೧೮೬೪.

ಪ್ರಿಯಮಿತ್ರನೇ!

ಕಳೆದ ತಿಂಗಳ ೨೮ನೇ ತಾರೀಖು ಆದಿತ್ಯವಾರದ ಪ್ರಾತಃಕಾಲ ನಾನು ಕುಳಿತುಕೊಂಡು ಓದುತ್ತಿದ್ದೆನು. ಆಗ ಬಾಷ್ಪಜಲಪೂರಿತನಯನೆಯಾದ ನನ್ನ ಹೆಂಡತಿ ನನ್ನ ಬಳಿಗೆ ಬಂದು ಹೀಗೆ ಗೋಳಾಡಿದಳು. “ಪಾಪ! ಮಕ್ಕಳು ಸಂತೆಗೆ ಹೋಗಬೇಕೆಂದು ಎಷ್ಟೋ ಕುತೂಹಲದಿಂದಿದ್ದಾರೆ. ಆದರೆ ನನ್ನ ಬಳಿಯಲ್ಲಿ ಮೂರು ಫ್ರಾಂಕುಗಳು ಮಾತ್ರವೇ ಇವೆ. ಇಂಡಿಯಾದಲ್ಲಿನ ಜನರು ನಮ್ಮನ್ನು ಏಕೆ ಇಷ್ಟು ನಿರ್ದಯದಿಂದ ನೋಡುತ್ತಿರುವರು?” ಅದಕ್ಕೆ ನಾನು ಹೀಗೆಂದೆನು. “ಈ ದಿನವೇ ಟಪಾಲು ಬರುವುದು. ನಮಗೆ ಶುಭವರ್ತಮಾನವು ಬರಬಹುದೆಂದು ನನಗೆ ನಿಶ್ಚಯವಾಗಿ ತಿಳಿಯುವುದು. ಏತಕ್ಕೆಂದರೆ, ನಾನೀಗ ಮೊರೆಹೊಕ್ಕಿರುವ ಮನುಷ್ಯನು ಸಾಮಾನ್ಯ ಪುರುಷನಲ್ಲ. ಪುರಾತನ ಪುರುಷರಂತಹ ವಿವೇಕಸಂಪನ್ನನು; ಆಂಗ್ಲೇಯರಂತೆ ದೇಹಬಲವುಳ್ಳವನು; ಕೋಮಲಹೃದಯವುಳ್ಳವನು.’’ ನಾನು ಊಹಿಸಿದಂತೆಯೇ ಒಂದು ಘಂಟೆಯ ಹೊತ್ತಿಗೆ ನೀವು ಬರೆದ ಪತ್ರವೂ ೧೫೦೦ ರೂಪಾಯಿಗಳೂ ಸೇರಿದುವು. ಎಲೈ ಸುಪ್ರಸಿದ್ಧನೇ! ಎಲೈ ಪ್ರಾಣಮಿತ್ರನೇ! ಎಲೈ ದಯಾಮಯನೇ! ನನ್ನ ಕೃತಜ್ಞತೆಯನ್ನು ಸಿನಗೆ ಯಾವ ರೀತಿಯಲ್ಲಿ ತೋರಿಸಲಿ? ಇದುವರೆಗೂ ನಾನು ಬರೆದ ಪತ್ರಗಳು ನನ್ನ ಸ್ಥಿತಿಯನ್ನು ಕುರಿತು ಸ್ವಲ್ಪಮಟ್ಟಿಗೆ ನಿನಗೆ ತಿಳಿಸಿಯೇ ಇವೆ; ಆದುದರಿಂದ ಈಗ ನಾನು ಆ ವಿಷಯವನ್ನು ಬರೆಯಲಾರದೆ ಬಿಟ್ಟೆನು. ನಾನು ನಿನ್ನ ಕೈಗಳಲ್ಲಿ ಬಿದ್ದ ಮೊದಲು ನನ್ನ ಕಷ್ಟಗಳು ಪರಿಹಾರವಾಗಿ, ದಡ ಸೇರಿದೆನೆಂದು ನಿರ್ಭಯವಾಗಿ ತಿಳಿದಿದ್ದೇನೆ.

ಮತ್ತೊಂದನ್ನು ಹೇಳುವೆನು. ನನ್ನ ಆಸ್ತಿಯನ್ನು ಆಧಾರಮಾಡಿ ನೀನು ನನಗೆ ಹಣವನ್ನು ಕಳುಹದೆ ಹೋದರೆ ನಾನು ಇಲ್ಲಿ ನಿಲ್ಲಲಿಕ್ಕಾಗಲಿ, ಕೃತಕೃತ್ಯನಾಗಿ ಮರಳಿ ಸ್ವದೇಶಕ್ಕೆ ಬರಲಿಕ್ಕಾಗಲಿ ಅವಕಾಶವಿಲ್ಲ. ಏತಕ್ಕೆಂದರೆ,—ನಾನು ಕಲಕತ್ತೆಯಿಂದ ಬಂದ ತರುವಾಯ ನನ್ನ ಕೈಯಲ್ಲಿ ಒಂದು ಕಾಸಾಗಲಿ ಇಲ್ಲ. ಇದರಿಂದ ನನ್ನ ಸಾಲಗಳು ಬೆಳೆಯುತ್ತವೆ.

ಅವುಗಳನ್ನು ತೀರಿಸುವುದಕ್ಕೆ ತಕ್ಕ ದ್ರವ್ಯವು ಅಗತ್ಯವಾಗಿದೆ................ ನೀನು ನಿಜವಾಗಿ ಕೋಮಲಹೃದಯನೆಂದು ನಾನು ಭಾವಿಸುವುದು ಸರಿಯೋ ಅಲ್ಲವೇ ? "

ಸ್ವಾರ್ಥಪರಿತ್ಯಾಗವಾಡಿ ಸಹಜ ಕಾರುಣ್ಯವನ್ನು ತೋರಪಡಿಸುವ ಕಾಲವು ವಿದ್ಯಾಸಾಗರನಿಗೆ ಲಭಿಸಿತು. ಆತನು ಮಧುಸೂದನನಿಗೆ ಕಳು ಹಿದ ಹಣವು ಇಷ್ಟೇ ಅಲ್ಲ. ಯುರೋಪಖಂಡದಲ್ಲಿದ್ದ ಆತನಿಗೋಸ್ಕರ ಆಗಾಗ್ಗೆ ೬೦೦೦ ರೂಪಾಯಿಗಳನ್ನು ಕಳುಹಿಸಿದನು. ಈ ಹಣವೆಲ್ಲವನ್ನು ಸಾಲಮಾಡಿದ್ದನು. ತಾನು ಸಂಕಟಪಡುತ್ತಿದ್ದರೂ ಕೂಡ ಪರದೇಶದಲ್ಲಿ ರುವ ಮನುಷ್ಯನು ಎಷ್ಟು ತೊಂದರೆಪಡುವನೋ ಎಂದು ಆತನಿಗೆ ಸಹಾಯ ಮಾಡುತ್ತಾ ಬಂದನು. ಈ ಮೇರೆಗೆ ಮಧುಸೂದನನು ಕೃತಾರ್ಥನಾಗಲಿಕ್ಕೆ ಈಶ್ವರಚಂದ್ರನು ತುಂಬ ಸಹಾಯಮಾಡಿದನು.

ಯಾವದಾದರೂ ಒಂದು ಅಕ್ರಮ ಕೃತ್ಯವನ್ನು ಮಾಡುತ್ತಿದ್ದರೆ, ವಿದ್ಯಾ ಸಾಗರನು ಅದನ್ನು ನೋಡಿ ಸಹಿಸಲಾರನು. ಆ ಅನ್ಯಾಯವನ್ನು ತಪ್ಪಿಸು ವುದಕ್ಕೆ ತನ್ನ ಶಕ್ತಿಯಿದ್ದ ಮಟ್ಟಿಗೆ ಪ್ರಯತ್ನಿಸದೆ ಬಿಡುತ್ತಿರಲಿಲ್ಲ. ಸುಮಾರು ೧೮೬೪ ನೆಯ ವರುಷದಲ್ಲಿ ಹುಗ್ಲಿಜಿಲ್ಲೆಯ ಜಹಾನಾಬಾದ್ ಸಬ್‌ಡಿವಿಜನ್ ಅಧಿಕಾರಕ್ಕೆ ಒಳಪಟ್ಟ ಪ್ರಜಗಳ ಮೇಲೆ ಆದಾಯದ ತೆರಿಗೆ (Income tax) ನಿರ್ಣಯಿಸುವುದಕ್ಕೆ ಸರಕಾರದ ಕಡೆಯಿಂದ ಒಬ್ಬ ಅಧಿಕಾರಿ ಕಳುಹಲ್ಪ ಟ್ಟನು. ಆತನು ಸರಕಾರದವರಿಗೆ ಪ್ರೀತಿಯನ್ನುಂಟು ಮಾಡುವುದೇ ತಮ್ಮ ಮುಖ್ಯೋದ್ದೇಶವೆಂದು ತಿಳಿದಿರುವ ಈ ಕಾಲದ ಕೆಲವು ದೇಶೀಯೋದ್ಯೋಗ ಸ್ಥರಂತೆಯೇ ಈ ತೆರಿಗೆಯ ಮೂಲಕ ಸರಕಾರಕ್ಕೆ ಹೆಚ್ಚು ಆದಾಯವನ್ನು ತೋರಿಸಬೇಕೆಂದೆಣಿಸಿ, ಬಡವರ್ತಕರ ಮೇಲೆಯೂ ಅನ್ನವಸ್ತ್ರಗಳಿಗೆ ಮಾತ್ರ ಲೋಪವಿಲ್ಲದೆ ಜೀವನಾ ಮಾಡುತ್ತಿರುವ ಸಾಮಾನ್ಯ ಜನರ ಮೇಲೆ ಯೂ ಹೊರಲಾರದಷ್ಟು ಕರ ( ತೆರಿಗೆ )ವನ್ನು ವಿಧಿಸತೊಡಗಿದನು. ಆಗಲಾ ದಿಕ್ಕಿಲ್ಲದ ಜನರು ತಮ್ಮ ಇಕ್ಕಟ್ಟುಗಳನ್ನು ತಪ್ಪಿಸಿ, ಕಾಪಾಡತಕ್ಕ ಮಹಾನು ಭಾವನು ಮತ್ತಾವನೂ ಇಲ್ಲವೆಂದು ಯೋಚಿಸಿ, ಎಲ್ಲರೂ ಗುಂಪು ಕೂಡಿ, ಈ ವಿದ್ಯಾಸಾಗರನ ಬಳಿಗೆ ಬಂದು ಆ ಅಧಿಕಾರಿ ಮಾಡಿದ ಕ್ರೂರ ಕೃತ್ಯ ವನ್ನು ಹೇಳಿಕೊಂಡರು. ಪ್ರಜೆಗಳು ತಾವು ನಿಜವಾಗಿಯೂ ಅಂತಹ ತೆರಿಗೆ ಯನ್ನು ಕೊಡಲಾರೆವೆಂತಲೂ, ತಾವು ಬಡವರೆಂತಲೂ ಋಜುಮಾಡಿ

ಕೊಟ್ಟರೂ ಅವುಗಳನ್ನೆಲ್ಲ ಲಕ್ಷ್ಯಮಾಡದೆ ಅಧಿಕಾರವೆಂಬ ಆಯುಧವನ್ನು ಕೈಯಲ್ಲಿ ಹಿಡಿದುಕೊಂಡಿರುವ ಆ ಉದ್ಯೋಗಿಯು ತನ್ನ ಮನಸ್ಸು ಬಂದಂತೆ ತೆರಿಗೆಗಳನ್ನು ವಿಧಿಸಿಕೊಂಡನು. ಹೀಗೆ ಅನ್ಯಾಯವಾಗಿ ತೆರಿಗೆ ಹಾಕಲ್ಪಟ್ಟ ಆ ಕಡು ಬಡವರ ಕಡೆಯ ಪ್ರತಿನಿಧಿಯಾಗಿ ವಿದ್ಯಾಸಾಗರನು ಧರ್ಮಸಂಸ್ಥಾಪನೆಗೋಸ್ಕರ ಆ ಅಧಿಕಾರಿಯ ಬಳಿಗೆ ಹೋದನು. ಆಗಲಾತನು ಈ ವಿದ್ಯಾಸಾಗರನನ್ನು ಸನ್ಮಾನಿಸದೆ, ಆತನ ಮಾತುಗಳನ್ನೆಲ್ಲ ಗಾಳಿಗೆ ತೂರಿಬಿಟ್ಟನು. ಆತನು ಈ ಬಡ ಬ್ರಾಹ್ಮಣನ ಮಾತೇನು? ಎಂದು ಅಲಕ್ಷ್ಯಮಾಡಿರಬಹುದು ಅಷ್ಟೇ ಹೊರತು ಆತನ ಸಾಮರ್ಥ್ಯವನ್ನು ಅವನ್ನು ಬಲ್ಲನೆ? ಕೂಡಲೇ ವಿದ್ಯಾಸಾಗರನು ಕಲ್ಕತ್ತೆಗೆ ಬಂದು ಬಂಗಾಳದೇಶದ ಲೆಫ್ಟನೆಂಟ ಗವರ್ನರವರ ಸಂದರ್ಶನಮಾಡಿದನು. ತರುವಾಯ ಆತನ ಸಂಗಡ ಆ ಉದ್ಯೋಗಿಯು ಅಲ್ಲಿ ಮಾಡಿದ ನಿರಂಕುಶವಾಗಿಯೂ ಅಕ್ರಮವಾಗಿಯೂ ಇರುವ ಕೃತ್ಯಗಳನ್ನೆಲ್ಲ ವಿಶದವಾಗಿ ತಿಳಿಯಪಡಿಸಿ, ಆ ಬಡಬಗ್ಗರ ಕಡೆಯ ಪ್ರತಿನಿಧಿಯು ತಾನೆಂತಲೂ, ತನ್ನ ಫಿರ್ಯಾದಿಯ ಮೊರೆಗಳನ್ನು ಲಾಲಿಸುವುದಕ್ಕೆ ಒಂದು ಸಭೆಯನ್ನು ಏರ್ಪಡಿಸಿ ಕೊಡಬೇಕೆಂತಲೂ ಪ್ರಾರ್ಥಿಸಿದನು. ಅದರಮೇಲೆ ಆ ಗವರ್ನರವರು ಈ ವಿಷಯವನ್ನು ವಿಚಾರಿಸುವುದಕ್ಕೆ ಬರದ್ವಾನ್ ಜಿಲ್ಲೆಯ ಕಲೆಕ್ಟರ್ ಹಾರಿಸನ್ ದೊರೆಯವರನ್ನು ನಿಯಮಿಸಿದರು. ಆತನು ವಿದ್ಯಾಸಾಗರನ ಸಂಗಡ ಹೋಗಿ, ಜಹಾನಾಬಾದಿನ ವಿವಿಧ ಪ್ರದೇಶಗಳನ್ನು ನೋಡಿದನು. ಅಲ್ಲಲ್ಲಿ ಆತನು ವಿಚಾರ ಮಾಡಿದ್ದರಲ್ಲಿ ಬಹು ಮಂದಿಗೆ ಅಕ್ರಮ ತೆರಿಗೆಗಳು ವಿಧಿಸಲ್ಪಟ್ಟಿರುವೆಂದು ತಿಳಿದುಕೊಂಡು, ಆ ಅಧಿಕಾರಿಯು ಮಾಡಿಸಿದ್ದ ದೌರ್ಜನ್ಯವನ್ನು ರದ್ದುಮಾಡಿಸಿದನು. ದೇಶದ ಜನರ ಕಷ್ಟವನ್ನು ತಪ್ಪಿಸಲಿಕ್ಕಾಗಿ ವಿದ್ಯಾಸಾಗರನು ಎರಡು ತಿಂಗಳವರೆಗೆ ವಿದ್ಯಾದಾನಗಳಲ್ಲದೆ ಬಹು ಪ್ರಯಾಸಪಟ್ಟನು

ವಿದ್ಯಾಸಾಗರನು ಮತ್ತೊಂದು ವಿಧವಾಗಿ ಧರ್ಮಕಾರ್ಯವನ್ನು ಮಾಡಿದನು. ತನ್ನ ಬಂಧುಗಳಿಗೂ, ಸ್ನೇಹಿತರಿಗೂ, ಪರಿಚಯವುಳ್ಳವರಿಗೂ ಮಾತ್ರವಲ್ಲದೆ ಬೇಕಾದವರಿಗೆಲ್ಲ ಉದ್ಯೋಗಗಳನ್ನು ಕೊಡಿಸಿ ಜೀವನಾಧಾರಗಳನ್ನು ತಪ್ಪಿಸಿದನು. ಈ ಸಂಬಂಧವಾಗಿ ಕೆಲವು ಉದಾಹರಣೆಗಳನ್ನು ಗಮನಿಸಬೇಕು. ಹಿಂದಿನ ಅಧ್ಯಾಯಗಳಲ್ಲಿ ವಿದ್ಯಾಸಾಗರನು ಕಲ್ಕತ್ತೆಯ ನಿವಾಸಿಯಾದ [illegible] ಸಿಂಹನೆಂಬಾತನ ಮನೆಯಲ್ಲಿ ತನ್ನ ಬಾಲ್ಯದಿಂದ

ಬೆಳೆದನೆಂತಲೂ, ಆತನ ತಂಗೆಯು ಆ ಮನೆಯ ಯಜಮಾನನ ಬಳಿ ಉದ್ಯೋಗ ಮಾಡಿದ್ದನೆಂತಲೂ, ಆ ಮನೆಯ ಸ್ತ್ರೀಯರೆಲ್ಲರು ಆತನಲ್ಲಿ ತುಂಬ ದಯಾಪ್ರೇಮಗಳುಳ್ಳವರಾಗಿದ್ದರೆಂತಲೂ ವಾಚಕರು ಮೊದಲು ಓದಿಯೇ ಇರುವರು! ಆ ಕುಟುಂಬದವರ ಆದರಣೆಯನ್ನು ಆತನು ಯಾವಾಗಲೂ ಮರೆಯದೆ ತನ್ನ ಜೀವಿತಕಾಲದಲ್ಲೆಲ್ಲ ಅವರಲ್ಲಿ ತುಂಬ ಕೃತಜ್ಞತೆಯಿಂದ ಇದ್ದನು.

ಹೀಗಿರುವಲ್ಲಿ ವಿದ್ಯಾಸಾಗರನು ಪಾಠಶಾಲೆಗಳ ಪರೀಕ್ಷಾಧಿಕಾರದಲ್ಲಿದ್ದಾಗ 'ಕಾರಡ' ಎಂಬ ಗ್ರಾಮದಲ್ಲಿದ್ದ ಒಂದು ಪಾಠಶಾಲೆಯನ್ನು ನೋಡಲಿಕ್ಕೆ ಹೋದನು. ಆತನು ತಾನು ಬಂದ ಕೆಲಸವನ್ನು ಮುಗಿಸಿಕೊಂಡು ಹೊರಡುವಾಗ, ರಾಜಕುಟುಂಬದಲ್ಲಿನ ಒಬ್ಬ ದೊಡ್ಡ ಮನುಷ್ಯನು ಬಂದು, ಅಂತಃಪುರದಲ್ಲಿರುವ ಒಬ್ಬ ತರುಣೀಮಣಿಯು ಆತನನ್ನು ನೋಡಲಪೇಕ್ಷಿಸಿರುವಳೆಂದು ಹೇಳಲು, ಆತನು ಅದೇ ಪ್ರಕಾರ ಒಳಕ್ಕೆ ಹೋದನು. ಆಗ ತನ್ನನ್ನು ನೋಡಲಿಕ್ಕೆಳಸಿದ ಯುವತಿಯು ಜಗದ್ದುರ್ಲಭನ ಮಗಳೆಂತಲೂ, ಆಕೆಯನ್ನು ತನ್ನ ಬಾಲ್ಯದಲ್ಲಿ ಬಹಳವಾಗಿ ತಾನು ಆಡಿಸುತ್ತಿದ್ದನೆಂತಲೂ ಅವನಿಗೆ ನೆನಪಿಗೆ ಬಂದಿತು. ಆಕೆಯು ಈತನನ್ನು ನೋಡಿ ಕೂಡಲೇ ಬಿಕ್ಕಿಬಿಕ್ಕಿ ಅಳತೊಡಗಿದಳು. ವಿದ್ಯಾಸಾಗರನು ಆಕೆಯನ್ನು ಸಂತೈಸಿ, ಆಕೆಯ ದುಃಖಕಾರಣವನ್ನು ವಿಚಾರಿಸಲಾಗಿ ಹೀಗೆಂದು ಆಕೆ ವಿಲಪಿಸಿದಳು. "ಬಾಬೂ! ವಿದ್ಯಾಸಾಗರನೇ! ನಾನು ಈ ರಾಜಕುಟುಂಬದವರ ಆಧಾರದಿಂದ ಜೀವಿಸಬೇಕಾಗಿ ಬಂದಿತು. ನನ್ನ ಪತಿಯು ನನ್ನನ್ನು ಪೋಷಿಸಲಾರದೆ ಇದ್ದಾನೆ. ಈ ರಾಜಕುಟುಂಬದವರು ಆತನ ಬಂಧುಗಳು. ಆದುದರಿಂದ ಆತನು ಇಲ್ಲಿಯೇ ಬದುಕಿಕೊಂಡಿರೆಂದು ನನ್ನನ್ನು ಇಲ್ಲಿ ಬಿಟ್ಟುಹೋದನು." ವಿದ್ಯಾಸಾಗರನು ಅದನ್ನು ಕೇಳಿ, ಆಕೆಯ ತಂದೆಯಾದ ಜಗದ್ದುರ್ಲಭಸಿಂಹನು ಆಕೆಯನ್ನು ಎಷ್ಟು ಪ್ರೀತಿಯಿಂದ ಬೆಳಸುತ್ತಿದ್ದನೋ ಆ ಸಂಗತಿ ಚೆನ್ನಾಗಿ ತಿಳಿದವನಾದುದರಿಂದ, ಆಕೆಯ ಅವಸ್ಥೆಗಾಗಿ ಕಣ್ಣೀರು ಸುರಿಸುತ್ತಾ, ಇಂತೆಂದನು. "ಅಮ್ಮಾ! ನಿನ್ನ ಈ ಅವಸ್ಥೆಯನ್ನು ಕಣ್ಣಿನಿಂದ ನೋಡಲಾರೆನು. ಯಾವನ ಗೃಹಾಂತರದಲ್ಲಿ ನಾನು ಬಾಲ್ಯದಲ್ಲಿ ಪೋಷಿಸಲ್ಪಟ್ಟೆನೋ, ಯಾವನ ಸಹಾಯಸಂಪತ್ತಿನಿಂದ ನಾನು ಪ್ರಕೃತಸ್ಥಿತಿಗೆ ತರಲ್ಪಟ್ಟೆನೋ, ಅಂತಹ ಮಹನೀಯನ ಪ್ರಿಯಪುತ್ರಿಯು ನೀನು. ಇಂದು ಮೊದಲ್ಗೊಂಡು

ನೀನು ಜೀವಿಸುವತನಕ ಕ್ರಮವಾಗಿ ತಿಂಗಳೊಂದಕ್ಕೆ ೧೦ ರೂಪಾಯಿಗ ಳಂತೆ ನನ್ನಿಂದ ಪಡೆಯಬಲ್ಲೆ." ಈ ಪ್ರಕಾರವಾಗಿ ಹೇಳಿ, ಹೊರಕ್ಕೆ ಬಂದು ತನ್ನ ಕಣ್ಣೀರನ್ನೊರಸಿಕೊಳ್ಳುತ್ತಾ ಆತನು ಹೊರಟುಹೋದನು.

ಜಗದ್ದುರ್ಲಭನ ಮರಣಾನಂತರ ಆತನ ಕುಟುಂಬವು ಅಧಿಕ ದಾರಿದ್ರ್ಯದ ಪಾಲಾದಾಗ ಆತನ ಕುಮಾರನಾದ ಭಾವನಮೋಹನಸಿಂಹನಿಗೆ ತಿಂಗಳೊಂದಕ್ಕೆ ೩೦ ರೂಪಾಯಿಗಳಂತೆ ವಿದ್ಯಾಸಾಗರನು ಕೊಡುತ್ತಾ ಬಂದನು.

ಕಲಕತ್ತೆಯಲ್ಲಿನ ಸರ್ವೆಯರ್ ಜನರಲ್‌ರವರ ಕಚೇರಿಯಲ್ಲಿ ತಿಂಗಳೊಂದಕ್ಕೆ ೪೦ ರೂಪಾಯಿಗಳ ವೇತನವನ್ನುಳ್ಳ ಗುಮಾಸ್ತೆಯಾಗಿ "ಸದ್ಯಾ" ವಾಸಸ್ಥನಾದ ಲಕ್ಷ್ಮೀನಾರಾಯಣ ಲಾಹರಿ ಎಂಬಾತನಿದ್ದನು. ಹಲವು ಮಕ್ಕಳನ್ನುಳ್ಳ ಆತನು ತನ್ನ ದೊಡ್ಡ ಕುಟುಂಬವನ್ನು ಪೋಷಿಸುವುದಕ್ಕೆ ಆತನ ಸಂಪಾದನೆಯೂ ಸ್ವಲ್ಪವೂ ಸಾಲದು. ಅದರಿಂದ ಆತನು ಆ ಉದ್ಯೋಗವನ್ನು ಬಿಟ್ಟುಬಿಟ್ಟು, ಅದಕ್ಕಿಂತ ಒಳ್ಳೆಯಸ್ಥಿತಿಗೆ ಬರಬೇಕೆಂದು ಯೋಚಿಸಿ, ಕಲಕತ್ತೆಯ ವೈದ್ಯಕಳಾಶಾಲೆಯಲ್ಲಿ ಓದಲಾರಂಭಿಸಿದನು. ಆತನು ಹೇಗೋ ಕಷ್ಟಪಟ್ಟುಕೊಂಡು ಒಂದು ವರುಷದ ಕಾಲವನ್ನು ಕಳೆದನು. ಆಮೇಲೆ ತಾನು ಜೀವಿಸುವುದಕ್ಕೂ, ತನ್ನ ಕುಟುಂಬವನ್ನು ಪೋಷಿಸುವುದಕ್ಕೂ, ದಾರಿಯು ತೋರದೆ ಹೋಯಿತು. ತನ್ನ ಹೆಂಡತಿ, ಮಕ್ಕಳು ತನ್ನ ಕಣ್ಣುಮುಂದೆಯೇ ಹಸಿವಿನಿಂದ ಒದೆದಾಡಿ ಸಾಯುತ್ತಿರುವುದನ್ನು ನೋಡಿ ಸೈರಿಸಲಾರದೆ, ಆಗ ತಾನು ಕಲಿಯುತ್ತಿರುವ ವಿದ್ಯಾಭ್ಯಾಸವನ್ನು ನಿಲ್ಲಿಸಿ, ಮತ್ತೆ ಯಾವುದಾದರೂ ಒಂದು ಉದ್ಯೋಗವನ್ನು ಸಂಪಾದಿಸಿಕೊಳ್ಳಬೇಕೆಂದು ನಿಶ್ಚಯಿಸಿದನು. ಆ ಕಾಲದಲ್ಲಿ ಆತನಿಗೆ ಆಕಸ್ಮಿಕವಾಗಿ ಒಂದು ಆಲೋಚನೆ ತೋರಿತು. ಒಡನೆಯೇ ಅವನು ವಿದ್ಯಾಸಾಗರನ ಬಳಿಗೆ ಹೋಗಿ, ಕಡೆಯ ಪ್ರಯತ್ನವೆಂದು ತನ್ನ ಸ್ಥಿತಿಗಳನ್ನು ಆತನ ಸಂಗಡ ಹೇಳಿಕೊಂಡನು. ದಯಾಸಾಗರನಾದ ಆ ಲೋಕೋಪಕಾರಿಯು ಆತನು ವೈದ್ಯಕಳಾಶಾಲೆಯಲ್ಲಿ ಓದುತ್ತಿರುವ ಪರೀಕ್ಷೆಯಲ್ಲಿ ಕೃತಾರ್ಥನಾಗುವ ತನಕ ಆತನಿಗೆ ತಿಂಗಳೊಂದಕ್ಕೆ ೫೦ ರೂಪಾಯಿಗಳಂತೆ ಕೊಡುವೆನೆಂದು ವಾಗ್ದಾನ ಮಾಡಿದನು. ವಿದ್ಯಾಸಾಗರನು ಆ ವಾಗ್ದಾನದಂತೆ ಎರಡು ವರ್ಷಗಳತನಕ ಆ ದೊಡ್ಡ ಮನುಷ್ಯನನ್ನೂ ಆತನ ಸಂಸಾರವನ್ನೂ ಪೋಷಿಸಿದನು.

ಭಾತಿಪುರ ನಿವಾಸಿಯಾದ ಪಂಡಿತ ರಾಹುಲದಾಸ ನ್ಯಾಯರತ್ನನೆಂಬುವನು ತರ್ಕಶಾಸ್ತ್ರದಲ್ಲಿ ಅಸಮಾನ ಪ್ರವೀಣನು. ಆತನು ತನ್ನ ಕುಟುಂಬವನ್ನೂ, ತಾನು ವಿದ್ಯಾಭ್ಯಾಸ ಮಾಡಿಸುತ್ತಿದ್ದ ತನ್ನ ಶಿಷ್ಯರುಗಳನ್ನೂ ಪೋಷಿಸಲಾರದೆ, ವಿದ್ಯಾಸಾಗರನ ಬಳಿಗೆ ಬಂದು, ಆರ್ಥಿಕ ಸಹಾಯವನ್ನು ಬೇಡಿದನು. ಅಂದಿನಿಂದ ಎಂಟು ವರುಷಗಳ ತನಕ ವಿದ್ಯಾಸಾಗರನು ಆತನಿಗೆ ತಿಂಗಳೊಂದಕ್ಕೆ ಹತ್ತು ರೂಪಾಯಿಗಳಂತೆ ಕೊಟ್ಟು ಸಹಾಯ ಮಾಡುತ್ತಿದ್ದನು.

ಕ್ಷೀಣಿಸುತ್ತಿರುವ ಸಂಸಾರಗಳನ್ನುದ್ಧರಿಸಿ, ವಿದ್ಯಾಸಾಗರನು ಕಾಪಾಡಿದನು. ಅಂತಹ ಕುಟುಂಬಗಳ ಸಂಖ್ಯೆಯೂ ಅವುಗಳಿಂದ ಸಾಲ್ಮೆಪಡೆದ ಜನಗಳ ಸಂಖ್ಯೆಯೂ ಮಿತಿಯಿಲ್ಲದೆ ಇದ್ದುವು. ಬಂಧುಗಳು, ಸ್ನೇಹಿತರು, ನೆರೆಹೊರೆಯವರು, ಪರಿಚಯವುಳ್ಳವರು, ಅನಾಥರು, ತಾಯಿತಂದೆಗಳಿಲ್ಲದವರು ಇಂತಹ ಬಹು ಮಂದಿಗೆ ವಿದ್ಯಾಸಾಗರನು ತನ್ನ ಜೀವಿತಕಾಲದಲ್ಲಿ ಅಶನವಸನಗಳನ್ನು ಕೊಟ್ಟು ಪೋಷಿಸಿದನು. ಅಂತವರಲ್ಲಿ ಬಹುಮಂದಿಗೆ ತಾನು ಮೃತನಾದ ತರುವಾಯ ಸಹಿತವೂ ಸಹಾಯಮಾಡುವ ಹಾಗೆ ೧೮೭೫ನೇ ವರುಷದ ಮೇ ೩೧ರಲ್ಲಿ ಬರೆದ ಆತನ ಮರಣಶಾಸನದಲ್ಲಿ ತಿಳಿಸಿದನು. ಅದರಲ್ಲಿನ ವಿಷಯಗಳಲ್ಲಿ ಕೆಲವನ್ನು ಇದರಡಿ ಬರೆದಿರುವೆವು.

ನನ್ನ ಬಳಿಯಲ್ಲಿ ಈಗ ಮಾಸಸಹಾಯವನ್ನು ಹೊಂದತಕ್ಕವರು ನನ್ನ ಮರಣಾನಂತರ ಸುದಾ ಪಡೆಯುತ್ತಿರುವರೆಂದು ಯೋಚಿಸುವುದಕ್ಕೆ ಅವಕಾಶವಿಲ್ಲ. ಹಾಗೆ ತಪ್ಪದೆ ಸಹಾಯಹೊಂದತಕ್ಕವರ ಹೆಸರನ್ನು ಈ ಕೆಳಗೆ ನಮೂದಿಸುವೆನು—

| | |
|---|---|
| ನನ್ನ ಭಕ್ತಿಭಾಜನನಾಗಿ ತೀರ್ಥರೂಪರೆನಿಸಿದ ಠಾಕೂರದಾಸ ವಂದ್ಯೋಪಾಧ್ಯಾಯರು ತಿಂಗಳಿಗೆ ರು. | ೫೦ |
| ನನ್ನ ಪ್ರೀತಿಯ ದ್ವಿತೀಯ ಸಹೋದರನಾದ ದೀನಬಂಧು ನ್ಯಾಯರತ್ನನು | ೪೦ |
| ತೃತೀಯ ಸೋದರನಾದ ಶಂಭುಚಂದ್ರವಿದ್ಯಾರತ್ನನು .... | ೪೦ |
| ಕನಿಷ್ಠ ಸೋದರನಾದ ಈಶ್ವರಚಂದ್ರ ಬೆನರ್ಜಿ .... .... | ೩೦ |
| ನನ್ನ ಜ್ಯೇಷ್ಠ ಸಹೋದರಿ ಶ್ರೀಮತೀ ಮನೋಮೋಹಿನೀದೇವಿ ... | ೧೦ |
| ನನ್ನ ದ್ವಿತೀಯ ಸೋದರಿ ಶ್ರೀಮತೀ ದಿಗಂಬರೀದೇವಿ .... | ೧೦ |

| | |
|---|---|
| ನನ್ನ ಕನಿಷ್ಠ ಸೋದರಿ ಶ್ರೀಮತೀ ಮಂದಾಕಿನಿದೇವಿ .... | ೧೦ |
| ನನ್ನ ಭಾರ್ಯೆ ಶ್ರೀಮತೀ ದಿನಮಾಯಾದೇವಿ ... .... | ೩೦ |
| ನನ್ನ ಜ್ಯೇಷ್ಠ ಕುಮಾರಿ ಶ್ರೀಮತೀ ಹೇಮಲತಾದೇವಿ.... .... | ೧೫ |
| ನನ್ನ ದ್ವಿತೀಯಕುಮಾರಿ ಶ್ರೀಮತೀ ಕುಮುದಿನೀದೇವಿ .... | ೧೫ |
| ತೃತೀಯಕುಮಾರಿ ಶ್ರೀಮತೀ ವಿನೋದಿನೀದೇವಿ .... .... | ೧೫ |
| ಕನಿಷ್ಠ ಕುಮಾರಿ ಶ್ರೀಮತೀ ಶರತ್ಕುಮಾರಿದೇವಿ .... .... | ೧೫ |
| ನನ್ನ ಸೊಸೆ ಶ್ರೀಮತೀ ಭುವನಸುಂದರೀದೇವಿ .... .... | ೧೫ |
| ನನ್ನ ಮೊಮ್ಮಗಳು ಶ್ರೀಮತೀ ಮೃಣಾಳಿನೀದೇವಿ .... .... | ೧೫ |
| ನನ್ನ ಮೊಮ್ಮಗ (ಹಿರಿಯ ಮಗಳಮಗ) ಸುರೇಶಚಂದ್ರ ಸಮಾಜಪತಿ | ೧೫ |
| ನನ್ನ ಕಿರಿಯ ಮೊಮ್ಮಗ ಯರೇಶಚಂದ್ರ ಸಮಾಜಪತಿ .... | ೧೫ |
| ನನ್ನ ಮೊಮ್ಮಗಳು ಶ್ರೀಮತೀ ರಾಜರಾಣೀದೇವಿ .... .... | ೧೫ |
| ನನ್ನ ಕನಿಷ್ಠ ಸಹೋದರನ ಹೆಂಡತಿ ಶ್ರೀಮತೀ ವಿಲೋಕೇರದೇವಿ | ೧೦ |
| ನನ್ನ ಹಿರಿಯಮಗಳ ಅತ್ತೆ ಶ್ರೀಮತೀ ಸ್ವರ್ಣಮಾಯಾದೇವಿ .... | ೧೦ |
| ನನ್ನ ಹಿರಿಯಮಗಳ ಮಗಳು ಶ್ರೀಮತೀ ಕ್ಷೇತ್ರಮಣೀದೇವಿ .... | ೧೦ |
| ನನ್ನ ತಾಯಿಯ ಸೋದರಮಾವನ ಮೊಮ್ಮಗನ ಹೆಂಡತಿ .... | ೩ |
| ನನ್ನ ಸೋದರತ್ತೆಯ ಮಗ ತ್ರಿಲೋಚನಮುಖರ್ಜಿ .... | ೩ |
| ನನ್ನ ತಂದೆಯ ಸೋದರತ್ತೆಯ ಮಗಳು ಶ್ರೀಮತೀ ವಿಸ್ತಾರಿಣೀದೇವಿ | ೩ |
| ನನ್ನ ಅತ್ತೆಗೆಯವರಾದ ಶ್ರೀಮತೀ ಶಾರದಾದೇವಿ .... ... | ೫ |
| ಪಂಡಿತ ಮದನಮೋಹನ ತರ್ಕಾಲಂಕಾರನ ತಾಯಿ .... | ೮ |
| ಬಾಬೂ ಮದನಮೋಹನಮಾಸನ ತಾಯಿ ಶ್ರೀಮತೀ ನಿತ್ಯಕಾಳೀದಾಸಿ | ೧೦ |
| ಬಾಬೂ ಮಧುಸೂದನಘೋಷನ ಭಾರ್ಯೆ .... .... | ೧೦ |
| ಬಾರಸೇತುವಿನಲ್ಲಿ ವಾಸವಾಗಿರುವ ಬಾಬೂ ಕಲಿಕಿಸೇನಮಿತ್ರ | ೩೦ |
| ಆತನ ಮರಣಾನಂತರ ಆತನ ಭಾರ್ಯೆ .... .. .... | ೧೦ |
| ಬಾಬೂ ಶ್ರೀರಾಮ ಪ್ರಾಮಾಣಿಕನ ಭಾರ್ಯೆ .... .... | ೩ |
| ನನ್ನ ಚಿಕ್ಕಮ್ಮನ ಮಗ ಸರ್ವೇಶ್ವರ ಬೆನರ್ಜಿ .... .... | ೧೦ |
| ನನ್ನ ಸೋದರಸೊಸೆ ಶ್ರೀಮತಿ ಮೋಕ್ಷದಾದೇವಿ .... .... | ೫ |
| ನನ್ನ ಜ್ಯೇಷ್ಠ ಸೋದರಿಯ ಮಗಳು ಶ್ರೀಮತೀ ತಾರಾಮಣೀದೇವಿ | ೫ |
| ನನ್ನ ಸೋದರತ್ತೆಯ ಮಗಳು ಮೋಕ್ಷದಾದೇವಿ .... .... | ೩ |

ನನ್ನ ಚಿಕ್ಕಮ್ಮನ ಮಗ ಶ್ಯಾಮಚರಣಘೋಷಲಾ .... .... ೫
ನಮ್ಮಮ್ಮನ ಸೋದರಮಾವನಮಗ ತಾರಚರಣಮುಖರ್ಜಿಯ ಕುಟುಂಬ ೮
ನಮ್ಮಮ್ಮನ ಚಿಕ್ಕಮ್ಮನ ಮಗ ಕಾರಿದಾಸಮುಖರ್ಜಿ .... ೫
ನಮ್ಮಮ್ಮನ ಸೋದರತ್ತೆಯ ಮಗ ರಾಮೇಶ್ವರಮುಖರ್ಜಿಯ ಕುಟುಂಬ ೫
ನಮ್ಮಮ್ಮನ ಸೋದರಮಾವನ ಮಗಳು ವರದಾದೇವಿ .... ೨
ನಲೀನಕಿ ಸೇನಮಿತ್ರನ ವಿತಂತು ಭಾರ್ಯೆ ಶ್ರೀಮತೀ ಶ್ಯಾಮಸುಂದರೀದಾಸಿ ೧೦
ಪಂಡಿತ ಮದನಮೋಹನತರ್ಕಾಲಂಕಾರನ ಮಗಳು ಶ್ರೀಮತೀ
ಕುಂದಮಾಲಾದೇವಿ ೧೦
ಆತನ ತಂಗಿ ಶ್ರೀಮತೀ ಉಮಾಸುಂದರೀದೇವಿ .... .... ೩
ಬರದ್ವಾನ್ ನಿವಾಸಿಯಾದ ಪ್ಯಾರಿಚಂದ್ರಮಿತ್ರನ ವಿತಂತು ಭಾರ್ಯೆ
ಶ್ರೀಮತೀ ಕಾಮಿನೀದಾಸೀ ೧೦

ಇಂತವರ ಹೆಸರುಗಳು ಅನೇಕವಾಗಿದ್ದರೂ ವಾಚಕರು ಈ ಪಟ್ಟಿಯನ್ನೆಲ್ಲ ಓದಲು ಬೇಸರಗೊಂಡಿರುವರೆಂಬ ಭೀತಿಯಿಂದ ಇಲ್ಲಿಗೆ ಸಂಕ್ಷೇಪಿಸಲಾಯಿತು. ವಿದ್ಯಾಸಾಗರನ ಸೈರಣೆಯಾಗಲಿ, ಆತನ ಲೋಕೋಪಕಾರ ವಾಂಛೆಯಾಗಲಿ ಎಂದಿಗೂ ತಗ್ಗಲಿಲ್ಲ. ಆತನ ಸಂಕಲ್ಪವು ಯಾವಾಗಲೂ ನೆರವೇರದೆ ಹೋಗಲಿಲ್ಲ. ಆತನು ಜಾತಿಮತಾದಿ ಭೇದಗಳನ್ನೆಣಿಸದೆಯೇ ಸರ್ವ ಜನರಿಗೂ ಸಾಮಾನ್ಯವಾಗಿ ಸಹಾಯಗಳನ್ನು ಮಾಡಿದನು. ಒಂದಾನೊಂದು ವೇಳೆ ಆತನಿಗೆ ದೇಹಾರೋಗ್ಯ ಕೆಟ್ಟಿದ್ದರಿಂದ ಹವಾ ಬದಲಾಯಿಸಲಿಕ್ಕಾಗಿ ಬರದ್ವಾನ್ ಪಟ್ಟಣಕ್ಕೆ ಬಂದನು. ಆತನು ಅಲ್ಲಿದ್ದ ಒಂದು ತಿಂಗಳ ತನಕ ನಿತ್ಯವೂ ಬೆಳಿಗ್ಗೆ ಆ ಪಟ್ಟಣದಲ್ಲಿದ್ದ ಬಡ ಮಹಮ್ಮದೀಯ ಬಾಲರಿಗೆ ಹಣ ಹಂಚುತ್ತಾ ಬಂದನು. ಅಸಹಾಯರಾದ ಮಹಮ್ಮದೀಯರಿಗೆ ಆತನು ಮಾಡಿದ ಉಪಕಾರವು ಬರೆಯತೀರದು.

ಆತನು ೧೮೫೦ರಲ್ಲಿ ತನಗೆ ಆರೋಗ್ಯ ತಪ್ಪಿದ್ದರಿಂದ ಚಂದ್ರನಗರಕ್ಕೆ ಹೋದನು. ಆತನು ಅಲ್ಲಿದ್ದಾಗ ಒಂದು ದಿನ ಒಬ್ಬ ಕುರುಡನು ತನ್ನ ಹಂಡತಿಯನ್ನು ಕರೆದುಕೊಂಡು ವಿದ್ಯಾಸಾಗರನ ಬಳಿಗೆ ಬಂದನು. ಆ ಅಂಧನು ಮಹಮ್ಮದೀಯನು. ಆಗ ವಿದ್ಯಾಸಾಗರನು ನಿಮಗೇನು ಬೇಕೆಂದು ಅವರನ್ನು ಕೇಳಲು, ಅವರು ತಮಗೆ ಮೊಸರೂ, ತುಪ್ಪದಲ್ಲಿ ಕರೆದ ಗೋಧುವೆಯ ರೊಟ್ಟಿಯೂ ಬೇಕೆಂದು ಹೇಳಿದರು. ಅದಕ್ಕಾತನು ಸಂತೋಷಿಸಿ, ಆ ದೀನರ

ಕೋರಿಕೆಯನ್ನು ನೆರವೇರಿಸಿ ಅವರ ಮನಸ್ಸಿಗೆ ಬಂದ ಭೋಜನಪದಾರ್ಥ ಗಳು ಆರೋಗಿಸುವುದಕ್ಕೆ ಪ್ರತಿ ಶನಿವಾರವೂ ತನ್ನ ಬಳಿಗೆ ಬನ್ನಿರೆಂದು ಹೇಳಿದನು. ಆ ಬಡವನು ತನ್ನ ಮನೆಯ ಬಾಡಿಗೆಗಾಗಿ ಎಂಟು ಆಣೆಗಳು ಬೇಕೆಂದು ಬೇಡಲು, ವಿದ್ಯಾಸಾಗರನು ಅವನಿಗೆ ಎರಡು ರೂಪಾಯಿಗಳನ್ನು ಕೊಟ್ಟು ಪ್ರತಿತಿಂಗಳ ಕೊನೆಯಲ್ಲಿಯೂ ಅದೇಮೇರೆಗೆ ಕೊಡುವೆನೆಂದು ವಾಗ್ದಾನ ಮಾಡಿದನು. ಆತನ ಔದಾರ್ಯಕ್ಕೆ ಆ ವೃದ್ಧದಂಪತಿಗಳಿಬ್ಬರೂ ಬಹು ಸಂತೋಷಗೊಂಡು ತಮ್ಮ ಮನಸ್ಸಿಗೆ ಬಂದಹಾಗೆ ಆ ಮಹನೀಯ ನನ್ನು ಹೊಗಳುತ್ತಾ, ತಮ್ಮ ಹಾದಿಯಲ್ಲಿ ಹೋದರು.

ಒಂದುದಿನ ಪಂಡಿತ ಶಿವನಾಥ ಶಾಸ್ತ್ರಿಯೆಂಬಾತನು ಮದ್ರಾಸಿನಿಂದ ಉತ್ತಮ ಬ್ರಾಹ್ಮಣಕುಟುಂಬದ ಬಾಲಕರಿಬ್ಬರು ಅಸಹಾಯರಾಗಿ ಕಲ್ಕತ್ತೆಗೆ ಬಂದಿರುವರೆಂದು ವಿದ್ಯಾಸಾಗರನೊಂದಿಗೆ ಹೇಳಿದನು. ಆ ಬಾಲರು ಕ್ರಿಸ್ತಿಯ ಮತದಲ್ಲಿ ಸೇರಿದರು. ಅವರನ್ನು ಮತದಲ್ಲಿ ಸೇರಿಸಕೊಂಡ ಕ್ರಿಸ್ತಿಯ ಮತಬೋಧಕರು ಮೊದಲು ಮೊದಲು ಒಳ್ಳೆಯ ಮಾತುಗಳನ್ನು ಹೇಳಿ ಆಸೆ ಹುಟ್ಟಿಸಿ, ಸೇರಿಸಿದರು. ಅವರು ಆ ಮತವನ್ನವಲಂಬಿಸಿದ ಮೇಲೆ ನಿಮ್ಮ ಗತಿ ನೀವೇ ನೋಡಿಕೊಳ್ಳಿರೆಂದು ಹೇಳಿ ಅವರನ್ನು ಬಿಟ್ಟೇ ಬಿಟ್ಟರು. ಆಗ ಅವರು ಮನೆಮನೆಗೂ ಹೋಗಿ ತಿರುಕೆಯೆತ್ತತೊಡಗಿದರು. ಕೆಲವು ದಿನಗಳ ತರುವಾಯ ಕಲ್ಕತ್ತೆಯಲ್ಲಿನ ಒಂದು ಸಂಘದವರು ಅವರಿಗೆ ತಮಗೆ ತೋಚಿದ ಚಂದಾಹಣವನ್ನು ಕೊಡುವೆವೆಂದು ವಾಗ್ದಾನಮಾಡಿದರು. ಆದರೆ ಆ ಮೊತ್ತವೆಲ್ಲವೂ ೭-೮ ರೂಪಾಯಿಗಳಿಗಿಂತ ಹೆಚ್ಚಲಿಲ್ಲ. ಅದೂ ಕೂಡ ತುಂಬ ತೊಂದರೆ ತೆಗೆದುಕೊಂಡ ಹೊರತು ವಸೂಲಾಗುವ ಹಾಗೆ ಇರಲಿಲ್ಲ. ಕೊನೆಗೆ ಒಬ್ಬ ದಯಾಳುವು ಆ ಹುಡುಗನನ್ನು ವಿದ್ಯಾಸಾಗರನ ಬಳಿಗೆ ಕರೆದುಕೊಂಡು ಹೋದನು. ಆಗಲವರು ತಮ್ಮ ಕೈಯಲ್ಲಿದ್ದ ವಿಜ್ಞಾಪನಪತ್ರವನ್ನೂ ಅದರಲ್ಲಿ ಉದಹರಿಸಿರುವ ಚಂದಾಪಟ್ಟಿಯನ್ನೂ ತೋರಿಸಲು, ಆತನು ಅದನ್ನೆಲ್ಲ ಓದಿ ನೋಡಿ, ಅದನ್ನು ಪರಪರನೆ ಹರಿದುಹಾಕಿ, ಆ ಬಾಲಕರಿಬ್ಬರಿಗೂ ತಿಂಗಳೊಂದಕ್ಕೆ ೧೪ ರೂಪಾಯಿಗಳಂತೆ ತಾನು ಕೊಡುತ್ತಾ ಬರುವೆನೆಂದು ಅನುಜ್ಞೆಕೊಟ್ಟನು. ಆ ಆಜ್ಞೆಯಂತೆ ಸಂಸ್ಕೃತ ಮುದ್ರಾಕ್ಷರ ಶಾಲಾಧಿಪತಿಯು ಆ ಬಾಲಕರಿಬ್ಬರಿಗೂ ಒಂದು ಜತೆ ದೋತ್ರವನ್ನು ಕೊಟ್ಟನು. ಮತ್ತು ಅವರಿಗೆ ಮೂವತ್ತು ರೂಪಾಯಿಗಳಿಗೆ ಮೀರದ ಯಾವ ಸಹಾ

ಯುವನ್ನಾಗಲಿ ತನ್ನ ಅನುಮತಿಯಿಲ್ಲದೆಯೇ ಕೊಡಬಹುದೆಂದು ವಿದ್ಯಾಸಾಗರನು ಆ ಮುದ್ರಾಕ್ಷರ ಶಾಲಾಧಿಪತಿಗೆ ಅಪ್ಪಣೆಕೊಟ್ಟನು.

ಒಂದಾನೊಂದುವೇಳೆ ಒಬ್ಬ ಯುರೋಪಿಯನ್ ಹೆಂಗಸು ಭಿಕ್ಷವೆತ್ತುತ್ತಿದ್ದು ವಿದ್ಯಾಸಾಗರನ ಬಳಿ ಮನೆಯ್ಬಾಗಿಲಿಗೆ ಬಂದಳು. ಆಗ ಅತೆಯು ನೋಡಲ ಶಕ್ಯವಾದ ತನ್ನ ಹೀನದಶೆಯನ್ನೆಲ್ಲಾ ಆ ಉದಾರಗುಣನ ಸಂಗಡ ಹೇಳಿ ಮೊರೆಯಿಡಲು, ಆತನು ಆಗಾಗ್ಗೆ ಅವಳು ಕೋರಿದ ಸಹಾಯಗಳನ್ನೆಲ್ಲ ಮಾಡುತ್ತಾ ಬಂದನು.

ವೃದ್ಧಾಪ್ಯದಲ್ಲಿ ಆತನ ದೇಹಸ್ಥಿತಿಯು ಕೆಟ್ಟು, ಆದಾಯವು ತಗ್ಗಿ, ಸಹನೆ ಮುಂತಾದ ಇಂದ್ರಿಯ ಬಲಗಳು ಕಡಮೆಯಾಗತೊಡಗಲು, ಆತನು ಸಾಂತಹಾಲಪರಗಣೆಗಳಲ್ಲಿನ ಕರ್ಮತಾರ ಎಂಬ ಗ್ರಾಮದಲ್ಲಿ ಏಕಾಂತವಾಗಿ ಕಾಲವನ್ನು ಕಳೆಯುತ್ತಿದ್ದನು. ಮನಶ್ಶಾಂತಿಯೂ, ದೇಹವಿಶ್ರಾಂತಿಯೂ ಉಂಟಾಗಲಿಕ್ಕೋಸ್ಕರವೇ ಆತನು ಅಲ್ಲಿಗೆ ಹೋದುದು. ಆತನು ಅಲ್ಲಿರುವ ಕಾಲದಲ್ಲಿ ತನ್ನ ನೆರೆಹೊರೆಯಲ್ಲಿ ಬಡವರಾದ ಸಂಥಾಲಜಾತಿಯವರಿಗೆ ಚಳಿಗಾಲಕ್ಕೆ ಅಗತ್ಯವಾದ ಉಡುಪುಗಳನ್ನೆಲ್ಲ ಧರ್ಮಾರ್ಥವಾಗಿ ಹಂಚುತ್ತಾ ಬಂದನು. ಆತನು ಅಲ್ಲಿಗೆ ಹೋದಾಗಲೆಲ್ಲ ಅವರೆಲ್ಲರಿಗೂ ಷಡ್ರಸೋಪೇತವಾದ ಔತನಗಳನ್ನು ಮಾಡಿಸಿ, ಭಕ್ಷ್ಯಫಲಾದಿಗಳಿಂದ ತೃಪ್ತಿಪಡಿಸುತ್ತಿದ್ದನು. ಅವಿವೇಕಿಗಳಾಗಿಯೂ, ವಿದ್ಯಾವಿಹೀನರಾಗಿಯೂ ಇರುವ ಈ ಅಜ್ಞಾನಿಗಳನ್ನು ಆತನು ತುಂಬ ಪ್ರೀತಿಸಿ, ಅವರ ನಿಷ್ಕಾಪಟ್ಯಕ್ಕೂ, ಮರ್ಯಾದೆಗೂ ಪ್ರಾಮಾಣಿಕತೆಗೂ, ಪ್ರೇಮಾನುರಾಗಕ್ಕೂ, ಕೃತಜ್ಞತೆಗೂ ತುಂಬ ಆಶ್ಚರ್ಯಪಡುತ್ತಿದ್ದನು. ಈ ಅನಾಗರೀಕರು ಕೂಡ ಆತನನ್ನು ಪ್ರೀತಿಸಿ, ದೃಢವಾಗಿ ನಂಬಿದ್ದರು. ಆಗ ಅವರು ತಮ್ಮ ಸಂತೋಷವಿದ್ದಷ್ಟುಮಟ್ಟಿಗೆ ಕೃತಜ್ಞತಾನುರಾಗ ಸೂಚಕವಾಗಿ ತಮ್ಮ ಹೊಲಗಳಲ್ಲಿ ಬೆಳೆಯುವ ಕುಂಬಳಕಾಯಿ, ಸೌತೇಕಾಯಿ ಮೊದಲಾದುವನ್ನು ಆತನಿಗೆ ಬಹುಮಾನವಾಗಿ ತಂದುಕೊಡುತ್ತಿದ್ದರು. ಒಂದಾನೊಂದು ಕಾಲದಲ್ಲಿ ಒಬ್ಬ ಬಡವನು ಆತನಿಗೆ ಬಹುಮಾನವಾಗಿ ಒಂದು ಕೋಳಿಹುಂಜವನ್ನು, ಕೆಲವು ಮೊಟ್ಟೆಗಳನ್ನು ತೆಗೆದುಕೊಂಡು ಬರಲು, ಆತನು ತನಗೆ ಬೇಡವೆಂದು ಹೇಳಿದನು. ಅದಕ್ಕೆ ಆ ದೀನನು ಎಳೆಯ ಮಕ್ಕಳಂತೆ ಅಳತೊಡಗಲು, ವಿದ್ಯಾಸಾಗರನು ಆ ಬಹುಮಾನವನ್ನು ಸ್ವೀಕರಿಸಿ, ಮತ್ತೊಬ್ಬನಿಗೆ ಕೊಟ್ಟು ಅವನಿಗೆ ಮನಶ್ಶಾಂತಿಯನ್ನುಂಟುಮಾಡಿದನು.

" ಕರ್ಮಾತಾರ " ಎಂಬ ಗ್ರಾಮದಲ್ಲಿ ಅಲ್ಲಿಯ ಸಂಥಾಲ ಜಾತಿಯವರ ಮಕ್ಕಳ ವಿದ್ಯಾಭಿವೃದ್ಧಿಗಾಗಿ ಒಂದು ವಿದ್ಯಾನಿಲಯವನ್ನು ಏರ್ಪಾಡುಮಾಡಿ ಆ ಪ್ರತಿಷ್ಠಾಪನೆಯ ಪೋಷಣೆಗೋಸ್ಕರ ತಿಂಗಳೊಂದಕ್ಕೆ ೨೦ ರೂಪಾಯಿಗಳಂತೆ ವೆಚ್ಚ ಮಾಡುತ್ತಾ ಬಂದನು.

**ವಿದ್ಯಾಲಯ ಮೊದಲಾದ ಧರ್ಮಪ್ರತಿಷ್ಠಾಪನೆಗಳು:**—ತರುವಾಯ ವಿದ್ಯಾಸಾಗರನು ತನ್ನ ಲೋಕೋಪಕಾರ ಬುದ್ಧಿಯನ್ನು ಬಂಗಾಳದಲ್ಲಿಯ ವಿದ್ಯಾವ್ಯಾಪಕತ್ವಕ್ಕೂ, ತನ್ಮೂಲಕ ಉಂಟಾಗಿರುವ ಮಾತೃದೇಶಾಭಿಮಾನಕ್ಕೂ ಪ್ರಸರಿಸುವ ಹಾಗೆ ಮಾಡಿದನು. ಅಂತಹ ಪ್ರತಿಷ್ಠಾಪನೆಗಳು ಜನರ ಕಷ್ಟಸುಖಗಳನ್ನು ಪರಿಹರಿಸುವುದಕ್ಕೆ ನಿಜವಾದ ಮಾರ್ಗಗಳೆಂದು ಆತನು ದೃಢವಾಗಿ ನಂಬಿದ್ದನು.

ಇದುವರೆಗೆ ನಾವು ನೋಡುತ್ತಿರುವ ಮೆಟ್ರೊಪಾಲಿಟನ್ ಪ್ರತಿಷ್ಠಾಪನೆಯನ್ನು ಈತನೇ ೧೮೬೪ನೇ ವರುಷದಲ್ಲಿ ಸ್ಥಾಪಿಸಿದನು. ಅದು ಕ್ರಮ ಕ್ರಮವಾಗಿ ತುಂಬ ಅಭಿವೃದ್ಧಿಹೊಂದಿ ಸಾವಿರ ಗಟ್ಟಲೆ ಬಂಗಾಳದೇಶದ ಬಾಲಕರಿಗೆ ವಿದ್ಯಾದಾನವಂ ಮಾಡಿ, ಮಹೋಪಕಾರವಂ ಗೈಯುತ್ತಲಿಗೆ. ಅದಕ್ಕೆ ದೊಡ್ಡ ದೊಡ್ಡ ಶಾಖಾ ಸಂಸ್ಥಾಪನೆಗಳು ಕೂಡ ಏರ್ಪಟ್ಟಿವೆ. ಆರಂಭದಲ್ಲಿ ವಿದ್ಯಾಸಾಗರನು ಅದಕ್ಕೆ ಬಹು ದ್ರವ್ಯವನ್ನು ವೆಚ್ಚ ಮಾಡಿದನು.

ಆತನು ವೀರಸಿಂಹಗ್ರಾಮದಲ್ಲಿನ ಬಾಲಬಾಲೆಯರಿಗೆ ಉಚಿತವಾಗಿ ವಿದ್ಯೆಯನ್ನು ಕಲಿಸುವ ಪಾಠಶಾಲೆಗಳ ಪೋಷಣಾರ್ಥವಾಗಿ ತಿಂಗಳೊಂದಕ್ಕೆ ೬-೭ ನೂರು ರೂಪಾಯಿಗಳ ತನಕ ವೆಚ್ಚ ಮಾಡಬೇಕಾಗಿ ಬಂದಿತು. ದೇಶದ ಜನರ ವಿದ್ಯಾಭಿವೃದ್ಧಿಗಾಗಿ ಆತನು ಇಷ್ಟರಿಂದಲೇ ತೃಪ್ತನಾಗಲಿಲ್ಲ. ಸುಮಾರು ೧೮೫೩ ನೆಯ ಇಸವಿಯಲ್ಲಿ ತನ್ನ ಸ್ವಂತಗ್ರಾಮದಲ್ಲಿ ಹಗಲೆಲ್ಲ ಕಷ್ಟಪಡುವ ಕೂಲಿ ಕೆಲಸದವರ ವಿದ್ಯಾಭಿವೃದ್ಧಿಗೋಸ್ಕರ ರಾತ್ರಿಯ ಪಾಠಶಾಲೆಯೊಂದನ್ನು ಏರ್ಪಾಡುಮಾಡಿಸಿದನು. ಇದರಲ್ಲಿನ ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಅಗತ್ಯವಾದ ಪುಸ್ತಕಗಳು, ಸ್ಲೇಟುಗಳು ಮುಂತಾದ ಉಪಕರಣಗಳಲ್ಲದೆ ಹೊಗೇ ಬತ್ತಿ ಸೇದುವರಿಗೆ ಹೊಗೇ ಸೊಪ್ಪು ಮುಂತಾದುವುಗಳನ್ನು ಕೊಡುತ್ತಲಿದ್ದನು. ಅದರಲ್ಲಿ ಕೃತಾರ್ಥರಾದವರಲ್ಲಿ ಕೆಲವರು ಕಲ್ಕತ್ತೆಯ ವೈದ್ಯಕಳಾಶಾಲೆಯಲ್ಲಿ ಕೂಡ ವಿದ್ಯಾಸಾಗರನ ಸಹಾಯದಿಂದಲೇ ಓದಲಿಕ್ಕೆ ಅರ್ಹರಾದರು. ಆತನು ತನ್ನ ಗ್ರಾಮದ ಜನರ

ಉಪಯೋಗಕ್ಕೋಸ್ಕರ ಒಂದು ಧರ್ಮವೈದ್ಯಶಾಲೆಯನ್ನೂ ಸ್ಥಾಪಿಸಿದನೆಂದು ತಿಳಿದೇ ಇರುವದಲ್ಲವೇ?

ಕಲ್ಕತ್ತೆಯಲ್ಲಿ ಮಹೇಂದ್ರಲಾಲ ಸರ್ಕಾರನಿಂದ ಕಂಡುಹಿಡಿಯಲ್ಪಟ್ಟ ಶಾಸ್ತ್ರವನ್ನಭಿವೃದ್ಧಿಮಾಡುವ ಹಿಂದೂದೇಶದ ಸಂಘಮಂದಿರವನ್ನು ಕಟ್ಟುವದಕ್ಕಾಗಿ ಸಾವಿರ ರೂಪಾಯಿಗಳನ್ನೂ, "ಘಾಟಲ" ಸಬ್ ಡಿವಿಜನ್‌ನಲ್ಲಿ ಪಾಠಶಾಲೆಯ ಮಂದಿರಕ್ಕಾಗಿ ಐನೂರು ರೂಪಾಯಿಗಳನ್ನು ವಿದ್ಯಾಸಾಗರನು ಉಚಿತವಾಗಿ ಕೊಟ್ಟನು.

ಹಿಂದೂಕುಟುಂಬ ಭರಣನಿಧಿ (Hindu Family Annuity Fund) ಎಂಬ ಹೆಸರಿನಿಂದ ಕಡಮೆ ಉತ್ಪತ್ತಿಯುಳ್ಳ ಜನರ ಲಾಭಕ್ಕೋಸ್ಕರ ಒಂದು ಸಂಘವು ಈತನ ಸಹಾಯಪ್ರೋತ್ಸಾಹಗಳಿಂದಲೇ ಸ್ಥಾಪಿತವಾಯಿತು. ಅದು ಬಂಗಾಳ ರಾಷ್ಟ್ರದಲ್ಲಿನ ಸಂಘಗಳೆಲ್ಲಕ್ಕಿಂತಲೂ ಉತ್ತಮವಾದುದೆಂದು ಹೇಳಬಹುದು. ವಿದ್ಯಾಸಾಗರನೂ ಆತನ ಸ್ನೇಹಿತನಾದ ನ್ಯಾಯಾಧಿಪತಿ ದ್ವಾರಕಾನಾಥಮಿತ್ರನೆಂಬಾತನೂ ಆ ಸಂಘಕ್ಕೆ ಮುಖ್ಯಾಧ್ಯಕ್ಷರಾಗಿದ್ದರು. ಅದು ೧೮೭೨ನೆಯ ವರುಷದ ಜೂನ್ ೧೫ರಲ್ಲಿ ಸ್ಥಾಪಿಸಲ್ಪಟ್ಟಿತು. ಅದರ ಉದ್ದೇಶ್ಯಗಳು ತುಂಬ ಘನವಾದುವು. ಯಾವನಾದರೂ ತನ್ನ ಮರಣಾನಂತರ ತನ್ನ ಹೆಂಡತಿಗಾಗಲಿ, ಅಥವಾ ಮತ್ತಾವ ಇತರ ಬಂಧುಗಳಿಗಾಗಲಿ ತಿಂಗಳೊಂದಕ್ಕೆ ೫ ರೂಪಾಯಿಗಳ ವೇತನವು ಕೊಡಲ್ಪಡಬೇಕೆಂದು ಅಪೇಕ್ಷಿಸಿದರೆ ಆತನು ತನ್ನ ಮರಣದಿನಪರ್ಯಂತವೂ ತಿಂಗಳೊಂದಕ್ಕೆ ೭ ರೂ, ೪ ಆಣೆಯಂತೆ ಈ ಸಂಘದವರಿಗೆ ಸಲ್ಲಿಸತಕ್ಕುದು. ತಿಂಗಳೊಂದಕ್ಕೆ ೧೦ ರೂಪಾಯಿಗಳನ್ನು ಕೊಡಬೇಕೆಂದು ತೋರಿದರೆ, ಅದರ ಪ್ರಮಾಣದ ಲೆಕ್ಕದಿಂದ ಸಲ್ಲಿಸಬೇಕು. ಈ ಪ್ರಕಾರವಾಗಿ ತಿಂಗಳೊಂದಕ್ಕೆ ೭೦ ರೂಪಾಯಿಗಳಿಗೆ ಮೀರದ ಆದಾಯವು ತಕ್ಕ ಏರ್ಪಾಡು ಮಾಡಬಹುದು. ಈ ಸಂಘದ ಫಲಿತಾಂಶಗಳು ಅನೇಕವಾಗಿವೆ.

"ಕಾಂಡೀ" ಪಟ್ಟಣದಲ್ಲಿ ರಾಜಾಪ್ರತಾಪಸಿಂಹ ಬಹದ್ದೂರರವರೂ, ಈಶ್ವರಚಂದ್ರಸಿಂಹ ಬಹದ್ದೂರರವರೂ ಸೇರಿ ಒಂದು ದೊಡ್ಡ ಪುಸ್ತಕ ಭಂಡಾರದೊಂದಿಗೆ ಒಂದು ಆಂಗ್ಲೋಸಂಸ್ಕೃತಾಲಯವನ್ನೇ ಪ್ರತಿಷ್ಠಿಸಿದರು. ಇದರ ಸ್ಥಾಪನೆಗೆ ಮುಖ್ಯ ಕಾರಣನು ವಿದ್ಯಾಸಾಗರನೇ! ಇದರ ಅಧಿಕಾರವನ್ನೂ ಕಾರ್ಯನಿರ್ವಾಹಕಾದಿ ಸಮಸ್ತ ಭಾರಗಳನ್ನೂ ಆತನಿಗೇ ಒಪ್ಪಿಸಿದರು. ಆತನು ಆ ಪ್ರತಿಷ್ಠಾಪನೆಯನ್ನು ಏಳು ವರುಷಗಳಲ್ಲಿ

ತನ್ನ ಆಧಿಪತ್ಯದ ಕೆಳಗೆ ತುಂಬ ಅಭಿವೃದ್ಧಿಗೆ ತಂದನು. ಆತನ ಮಿತ್ರರಾದ ಆ ಜಮೀನ್‌ದಾರರು ತೀರಿಹೋದ ತರುವಾಯ ಆ ಆಲಯದಲ್ಲಿ ತನಗಿದ್ದ ಸಂಬಂಧವನ್ನು ಬಿಟ್ಟುಕೊಟ್ಟನು.

ಬರದ್ವಾನಿನಲ್ಲಿ ಶಕ್ತಿಷೇಪುರ ನಿವಾಸಿಯಾಗಿ ಕೀರ್ತಿಶೇಷನಾದ ಶಾರದಾ ಪ್ರಸಾದರಾಯಸಿಂಹನೆಂಬಾತನು ತುಂಬ ಹೆಸರುವಾಸಿಯಾದ ಜಮೀನ್‌ದಾರನು. ಆತನು ತುಂಬ ಧನಿಕನು. ಆತನಿಗೆ ಬೇಕಾದಷ್ಟು ಆಸ್ತಿಯಿದ್ದಿತು. ಆದರೆ ಪುತ್ರಸಂತಾನವಿಲ್ಲದ್ದರಿಂದ ಸರಿಯಾದ ವಾರಸುದಾರರಿರಲಿಲ್ಲ. ಆದುದರಿಂದ ಅವನು ವಿದ್ಯಾಸಾಗರನೊಂದಿಗೆ ಆಲೋಚಿಸಿ, ಯಾರನ್ನಾದರೂ ದತ್ತು ತೆಗೆದುಕೊಳ್ಳಬೇಕೆಂದು ಎಣಿಸಿ, ಈತನೊಂದಿಗೆ ಪ್ರಸ್ತಾಪಿಸಲು ಈತನು ಸ್ವಾಭಾವಿಕವಾಗಿ ಇಂತಹ ದತ್ತು ಸ್ವೀಕಾರವನ್ನು ಒಪ್ಪತಕ್ಕವನಲ್ಲವಾದುದರಿಂದ ಆ ಸ್ನೇಹಿತನೊಂದಿಗೆ ಆತನ ಧನವನ್ನೆಲ್ಲ ಅದಕ್ಕಿಂತಲೂ ಸದ್ವಿನಿಯೋಗ ಮಾಡುವ ಹಾಗೆ ದಾನಧರ್ಮಾದಿ ಸತ್ಕಾರ್ಯಗಳನ್ನಾಚರಿಸಿದರೆ, ದೇಶಾಭಿವೃದ್ಧಿಗೆ ಸಹಾಯಮಾಡಿದ ಹಾಗಾಗುವುದೆಂದು ಸೂಚನೆ ಕೊಟ್ಟನು. ಶಾರದಾಪ್ರಸಾದನು ವಿದ್ಯಾಸಾಗರನ ಸಲಹೆಯಂತೆ 'ಶಕ್ತಿಷೇ' ಪಟ್ಟಣದಲ್ಲಿ ಅಲ್ಲಿನ ಬಾಲಕರಿಗೆ ಉಚಿತವಾಗಿ ವಿದ್ಯಾಭ್ಯಾಸ ಕಲಿಸುವುದಕ್ಕಾಗಿ ಒಂದು ಪಾಠಶಾಲೆಯನ್ನು ಸ್ಥಾಪಿಸಿದನು. ಅಲ್ಲಿಯೇ ಒಂದು ಧರ್ಮ ವೈದ್ಯಶಾಲೆಯನ್ನು ಕೂಡ ಏರ್ಪಡಿಸಿ, ಅಲ್ಲಿ ಒಬ್ಬ ಸಮರ್ಥನಾದ ವೈದ್ಯಶಾಸ್ತ್ರಜ್ಞನನ್ನು ಉಪಾಧ್ಯಾಯನನ್ನಾಗಿ ನಿಯಮಿಸಿದನು.

ಹುಗ್ಲಿ ಜಿಲ್ಲೆಯೊಳಗಿನ 'ಬೋಯನ್‌ಚೀ' ನಿವಾಸಿಯಾದ ಬಾಬೂ ವಿಹಾರಿಲಾಲ್ ಮುಖರ್ಜಿ ಎಂಬಾತನು ಒಂದು ದೊಡ್ಡ ರಾಜಕುಟುಂಬಕ್ಕೆ ಸೇರಿದವನು. ಆತನಿಗೆ ತುಂಬ ಆಸ್ತಿಯಿದ್ದಿತು ಆದರೆ ಅಪುತ್ರವಂತನಾಗಿದ್ದುದರಿಂದ ಆತನ ಬಂಧುಗಳೂ, ಸ್ನೇಹಿತರೂ ಸೇರಿ, ಆತನಿಗೆ ದತ್ತುಮಗನನ್ನಾಗಲಿ, ಮತ್ತೊಂದು ಮದುವೆಯನ್ನಾಗಲಿ ಮಾಡಿಕೊಳ್ಳಬೇಕೆಂದು ಬಲಾತ್ಕಾರಮಾಡಿದರು. ಆತನು ತನ್ನ ಪ್ರಥಮಭಾರ್ಯೆಯ ಮೇಲಣ ಪ್ರೇಮಾಧಿಕ್ಯದಿಂದ ಇನ್ನೊಬ್ಬಳನ್ನು ಮದುವೆಯಾಗಲು ಒಡಂಬಡದೆ, ತನ್ನ ವಂಶವನ್ನುಳಿಸುವುದಕ್ಕಾಗಿ ಯಾರನ್ನಾದರೂ ದತ್ತು ತೆಗೆದುಕೊಳ್ಳಬೇಕೆಂದು ಯೋಚಿಸಿದನು. ಆದರೆ ಆತನಿಗೆ ಪರಮಮಿತ್ರನಾದ ವಿದ್ಯಾಸಾಗರನೊಂದಿಗೆ ಆಲೋಚಿಸದೆ ತನ್ನ ಜಮೀನ್ ವ್ಯವಹಾರವನ್ನಾಗಲಿ, ಗೃಹಕೃತ್ಯವಿಷಯವನ್ನಾಗಲಿ, ಆತ್ಮವಿಷಯವನ್ನಾಗಲಿ ಮಾಡುವ ಅಭ್ಯಾಸವಿಟ್ಟುಕೊಂಡಿರಲಿಲ್ಲ.

ಆದುದರಿಂದ ದತ್ತು ವಿಚಾರವಾಗಿ ಕಲ್ಕತ್ತೆಗೆ ಬಂದು ವಿದ್ಯಾಸಾಗರನನ್ನು ಕೇಳಲು, ಆತನು ಅವನ ಆಸ್ತಿಯನ್ನೆಲ್ಲ ಲೋಕೋಪಕಾರಕಾರ್ಯಕ್ಕಾಗಿ ವಿನಿಯೋಗಿಸುವುದೆಂದು ಸಲಹೆ ಕೊಟ್ಟನು. ವಿಹಾರಿಲಾಲರು ಮೃತಪಡುವಾಗ ವಿದ್ಯಾಸಾಗರನ ಸೂಚನೆಯಂತೆ ತನ್ನ ಮರಣಶಾಸನದಲ್ಲಿ ಒಂದು ಲಕ್ಷವೂ ಅರವತ್ತು ಸಾವಿರ ರೂಪಾಯಿಗಳನ್ನು ಆ ಗ್ರಾಮದಲ್ಲಿ ಒಂದು ಧರ್ಮವೈದ್ಯಶಾಲೆಯನ್ನು ಸ್ಥಾಪಿಸುವುದಕ್ಕಾಗಿ ಕೊಡಬೇಕೆಂದು ಬರೆದು ಸ್ವರ್ಗಸ್ಥನಾದನು. ಆತನ ಕೋರಿಕೆಯಂತೆ ಸರಕಾರದವರು ಆ ಹಣವನ್ನು ತೆಗೆದುಕೊಂಡು ಆ ಪ್ರತಿಷ್ಠಾಪನೆಗಳನ್ನೇರ್ಪಡಿಸಿದರು.

ಘನವಾದ ಉದ್ದೇಶ್ಯಗಳನ್ನು ದೊಡ್ಡ ಮನುಷ್ಯರೇ ಗ್ರಹಿಸಬೇಕೇ ಹೊರತು ಹೀನಜನರು ಗ್ರಹಿಸಲಾರರು. ಖಾಸಿಂಬಜಾರ್ ಮಹಾರಾಜರಾದ ರಾಜಾ ಕೃಷ್ಣನಾಥರು ವಿದ್ಯಾಸಾಗರನೊಂದಿಗೆ ಬಹುಕಾಲದಿಂದ ಸ್ನೇಹವಾಗಿದ್ದರು. ಆತನು ತುಂಬ ಔದಾರ್ಯಸಾಹಸಗುಣಗಳನ್ನುಳ್ಳವನು. ಆತನು ಈಶ್ವರಚಂದ್ರನಿಂದ ಪ್ರೇರಿತನಾಗಿಯೋ, ನಿಜೋದ್ದೇಶ್ಯಪೂರ್ವಕವಾಗಿಯೋ, ಶಾಸ್ತ್ರ, ವೇದಾಂತ, ಸಾಹಿತ್ಯ, ದೇಶಚರಿತ್ರೆ ಮುಂತಾದುವುಗಳನ್ನು ಚನ್ನಾಗಿ ಬೋಧಿಸಬಲ್ಲ ಪಾಶ್ಚಾತ್ಯಪಂಡಿತನನ್ನು ನಿಯಮಿಸಿ, ಒಂದು ಸಕಲ ಕಲಾಶಾಲೆಯನ್ನು ಸ್ಥಾಪಿಸಬೇಕೆಂದು ಆಲೋಚಿಸಿದನು. ಆ ಅಭಿಪ್ರಾಯದಿಂದಲೇ ಆತನು ಬರೆದ ಮರಣಶಾಸನದಲ್ಲಿ ತನ್ನ ಆಸ್ತಿಯನ್ನೆಲ್ಲ ಈ ಕಾರ್ಯಕ್ಕೇನೇ ವಿನಿಯೋಗಿಸಬೇಕೆಂದು ಆಜ್ಞಾಪಿಸಿದನು. ಆದರೆ ಆತನು ಸ್ವಭಾವಸಿದ್ಧವಲ್ಲದ ರೀತಿಯಲ್ಲಿ ಮೃತಹೊಂದಿದ್ದರಿಂದ ಆ ಮರಣಶಾಸನವು ಕಲ್ಕತ್ತಾ ಹೈಕೋರ್ಟಿನವರಿಂದ ರದ್ದು ಮಾಡಲ್ಪಟ್ಟಿತು. ಈ ವಿಷಯದಲ್ಲಿ ವಿದ್ಯಾಸಾಗರನು ತುಂಬ ಪ್ರಯಾಸತೆಗೆದುಕೊಂಡನು.

## ವಿಮೋಚನೆ:—

೧೮೬೫ನೆಯ ವರುಷದಲ್ಲಿ ಘೋರಾಕಾರದಿಂದ ಬಂಗಾಳದೇಶಕ್ಕೆ ಕ್ಷಾಮದೇವತೆ ತಲೆಹಾಕಿತು. ದೇಶದಲ್ಲಿನ ವಿವಿಧ ಪ್ರದೇಶಗಳಲ್ಲಿ ಅನೇಕ ಸಾವಿರ ಜನರು ತಿಂಡಿಯಿಲ್ಲದೆ ಪಡಬಾರದ ಕಷ್ಟಗಳಿಗೆ ಸಿಕ್ಕಿ ಮರಣಕ್ಕೆ ಗುರಿಯಾದರು. ತಾಯಿತಂದೆಗಳು ತಮ್ಮ ಮಕ್ಕಳನ್ನು ಪೋಷಿಸಲಾರದೆ, ಸೃಷ್ಟಿಕರ್ತನಾದ ದೇವರನ್ನು ಬೈಯುತ್ತಿದ್ದರು. ಗ್ರಾಮಾಂತರಗಳಿಗೆ ಹೋದ ಬಂಧುಮಿತ್ರಾದಿಗಳು ಪ್ರಾಣ ಸಹಿತವಾಗಿ ಮರಳಿ ಬರುವತನಕ ನಂಬಿಕೆ

ಯಿಲ್ಲದೆ ಇದ್ದಿತು. ಹೊಲಗಳಲ್ಲಿಯೂ, ಮರಗಳಕೆಳಗೂ, ನೀರಿನ ಭಾವಿಗಳ ಹತ್ತಿರವೂ, ಮಾರ್ಗಮಧ್ಯದಲ್ಲಿಯೂ, ಎಲ್ಲಿ ನೋಡಿದರೂ ಹೆಣಗಳು ಕಾಣಿಸುತ್ತಲಿದ್ದವು. ಜನರು ಹಸಿವಿನ ಬಾಧೆಯನ್ನು ತಡೆಯಲಾರದೆ ನದಿಗಳಲ್ಲಿಯೂ ಭಾವಿಗಳಲ್ಲಿಯೂ ಬಿದ್ದು ಬಲಾತ್ಕಾರದಿಂದ ಪ್ರಾಣವನ್ನು ತೊರೆದುಕೊಳ್ಳುತ್ತಿದ್ದರು. ಕಸುಗಾಯಿಗಳನ್ನೂ ಸೊಪ್ಪುಸೆದೆಗಳನ್ನೂ ತಿಂದು ನೀರು ಕುಡಿದು, ಇಲ್ಲದ ರೋಗಗಳನ್ನು ತಂದುಕೊಳ್ಳುತ್ತಿದ್ದರು. ಜಠರಾಗ್ನಿಯಿಂದ ನೊಂದು, ತಾಯಿಯರು ತಮ್ಮ ಮಕ್ಕಳ ಕೈಯಲ್ಲಿರುವ ಆಹಾರವನ್ನು ಕೂಡ ಕಿತ್ತುಕೊಂಡು ತಿನ್ನಲಿಕ್ಕೆ ಹೋಗುತ್ತಿದ್ದರು. ಬಲಾಢ್ಯರಾದವರು ರಕ್ತಮಾಂಸಾದಿಗಳೆಲ್ಲ ಕ್ಷಯಿಸಿ, ಶಲ್ಯಮಾತ್ರಾವಶಿಷ್ಟರಾದರು. ಜನರು ತಮ್ಮ ಮನೇ ಬಾಗಿಲುಗಳನ್ನು ತೊರೆದು, ಹೆಂಡತಿಮಕ್ಕಳನ್ನು ಹಿಂದೆ ಕರೆದುಕೊಂಡುಹೋಗಿ, ಯಾತ್ರಾರ್ಥಿಗಳಂತೆ ಊರಿಂದೂರಿಗೆ ಅಲೆಯುತ್ತಿದ್ದರು! ಕೆಲವರು ತಾಯಿತಂದೆಗಳು ಹಸಿವಿನಿಂದ ದುಃಖಿಸುತ್ತಿರಲು ಸಂತಾನದ ಮರಣದುಃಖವು ಕೂಡ ಅವರ ಮೇಲೆ ಬೀಳುತ್ತಿದ್ದಿತು. ಬಲವುಳ್ಳವರು ಬಲಹೀನರ ಮೇಲೆ ದೌರ್ಜನ್ಯವನ್ನು ತೋರಿಸುತ್ತಿದ್ದರು. ಹೀಗೆ ಬಾಧೆಪಡುತ್ತಿರುವವರಲ್ಲಿ ಎಂಟು ಸಾವಿರ ಮಂದಿ ಜಿಹಾನಾಬಾದೆ ಸಬ್‌ಡಿವಿಜನನಿಂದ ವಿಮೋಚನಾರ್ಥವಾಗಿ ಕಲ್ಕತ್ತೆಗೆ ಬಂದರು. ವಿದ್ಯಾಸಾಗರನು ಜೆಹಾನಾಬಾದಿಗೆ ಹೋಗಿ, ಅಲ್ಲಿ ತನ್ನ ಮಿತ್ರನಾದ ಈಶ್ವರಚಂದ್ರರಾಯ ಮಿತ್ರ ಬಹದ್ದೂರವರನ್ನು ಅಲ್ಲಿಯ ಪ್ರಜೆಗಳ ನಿಜ ಸ್ಥಿತಿಯನ್ನು ತಿಳಿಯಲಿಕ್ಕಾಗಿ ನಿಯಮಿಸಿ ಬಂದನು. ತರುವಾಯ ಆತನು ಸರಕಾರದವರನ್ನು ಪ್ರೋತ್ಸಾಹಗೊಳಿಸಿ, ಕ್ಷಾಮ-ಪೀಡಿತರಾದವರಿಗೆ ಕೆಲಸಗಳನ್ನು ಕಲ್ಪಿಸಿಕೊಟ್ಟುದಲ್ಲದೆ ತಾನು ಸ್ವಂತವಾಗಿ ವೀರಸಿಂಹ ಗ್ರಾಮವೇ ಮೊದಲಾದ ಅನೇಕ ಕಡೆಗಳಲ್ಲಿ ಅನ್ನಸತ್ರಗಳನ್ನಿಡಿಸಿ, ಸಾವಿರಗಟ್ಟಲೆ ಬಡ ಜನರನ್ನು ಸಂರಕ್ಷಿಸಿದನು. ಆತನು ಬಂಗಾಳದ ಗವರ್ನರಾದ ಸರ್‌ಸೆವಿಲ್ ಬೀಡ್ರ್ ದೊರೆಯವರೊಂದಿಗೆ ಸ್ವಂತವಾಗಿ ಹೋಗಿ ಮಾತನಾಡಿ ಇಂತಹ ಸ್ಥಿತಿಯಲ್ಲಿ ಪ್ರಜೆಗಳನ್ನು ಬದುಕಿಸುವ ಸಾಧ್ಯವು ಸರಕಾರದವರದೇ ಎಂದು ಒತ್ತಿ ಹೇಳಿದನು. ವೀರಸಿಂಹಗ್ರಾಮದಲ್ಲಿ ವಿದ್ಯಾಸಾಗರನ ಮನೆಯಲ್ಲಿ ಅನೇಕ ಸಹಸ್ರ ಜನರು ಸುತ್ತಿಕೊಂಡಿದ್ದರು. ಸ್ತ್ರೀಯರಿಗೂ, ಪುರುಷರಿಗೂ, ಹುಡುಗರಿಗೂ ವಿದ್ಯಾಸಾಗರನು ಅನೇಕ ವಿಧಗಳಲ್ಲಿ ಸಹಾಯಮಾಡುತ್ತಿದ್ದನು. ಆಗಾಗ್ಗೆ ಅವರಿಗಿಷ್ಟವಾದ ಫಲಭಕ್ಷ್ಯಾದಿಗಳನ್ನು ಕೂಡ ಕೊಟ್ಟು, ಅವರನ್ನು ಸಂತೋಷ

ಗೊಳಿಸುತ್ತಿದ್ದನು. ಸುಕುಮಾರರಾದವರನ್ನು ತಕ್ಕಮಟ್ಟಿಗೆ ಎಚ್ಚರಿಕೆಯಿಂದ ನೋಡುತ್ತಿದ್ದನು. ವ್ಯಾಧಿಪೀಡಿತರಾದವರಿಗೆ ಔಷಧಗಳನ್ನು ಕೊಡಿಸಿ, ಪಥ್ಯ ಪಾನೀಯಾದಿಗಳನ್ನು ಕ್ರಮವಾಗಿ ಕೊಡಿಸುತ್ತಿದ್ದನು. ಬಾಣಂತಿಗಳಾದವರ ಹಸುಗೂಸುಗಳಿಗೆ ಹಾಲು ಮುಂತಾದುವನ್ನು ಕೊಡಿಸುತ್ತಿದ್ದನು. ಹೆತ್ತವರಿಗೆ ತಕ್ಕ ಉಪಚಾರವನ್ನು ಮಾಡಿಸುತ್ತಿದ್ದನು. ಮತ್ತು ಆತನು ತನ್ನಿಂದ ಕ್ಷಾಮವಿಮೋಚನೆ ಹೊಂದುತ್ತಿರುವ ಜನರೆಲ್ಲರಿಗೂ ತಲೆಬಾಚಿಕೊಳ್ಳುವದಕ್ಕೆ ಬೇಕಾದ ಎಣ್ಣೆಯನ್ನು ಕೊಡುವುದೆಂದು ತನ್ನ ಸೇವಕರಲ್ಲಿ ಒಬ್ಬನನ್ನು ನಿಯಮಿಸಿದನು. ಆ ಸೇವಕನು ಎಲ್ಲರನ್ನೂ ಒಂದುಕಡೆಗೆ ಸೇರಿಸಿ, ಅವರ ಕೈಗಳಲ್ಲಿ ಸ್ವಲ್ಪ ಸ್ವಲ್ಪವಾಗಿ ಎಣ್ಣೆಹಾಕಿ, ಲೋಭದಿಂದ ವರ್ತಿಸುತ್ತಿದ್ದುದನ್ನು ವಿದ್ಯಾಸಾಗರನು ಒಂದು ಸಲ ನೋಡಿ, ಅಂತಹ ನೀಚಕೃತ್ಯಕ್ಕಾಗಿ ಅವನಮೇಲೆ ಕೋಪಿಸಿಕೊಂಡು, ತಾನೇ ಅವರ ಕೈಗಳಿಗೆ ಬೇಕಾದಷ್ಟು ಎಣ್ಣೆಯನ್ನು ಸುರಿದನು! ಹೀಗೆ ಆತನು ಹಲವು ತಿಂಗಳತನಕ ವಿಶೇಷ ಧನ ವ್ಯಯಮಾಡಿ, ಅವರೆಲ್ಲರನ್ನೂ ಅಕಾಲಮೃತ್ಯುವಿನ ಬಾಯಿಂದ ತಪ್ಪಿಸಿದನು. ಗೌರವವಾಗಿ ಜೀವಿಸತಕ್ಕವರಲ್ಲಿ ಕೆಲವರು ಈ ಪ್ರದೇಶಕ್ಕೆ ಬಂದು ಈ ವಿಧವಾದ ಸಹಾಯ ಪಡೆಯುವುದಕ್ಕೆ ನಾಚಿಕೊಂಡಿರುವುದನ್ನು ಈತನು ಕಂಡುಹಿಡಿದು, ಅವರಿಗೆ ಬೇಕಾದ ಪದಾರ್ಥಗಳನ್ನೆಲ್ಲ ಅವರ ಮನೆಗಳಿಗೇನೇ ಕಳುಹುತ್ತಬಂದನು. ಕಲ್ಕತ್ತಾ ಕಲಾಶಾಲೆಯೊಳಕ್ಕೆ ಗುಂಪುಗುಂಪಾಗಿ ಬರುವ ಕ್ಷುಧಾಧಿಕರೆಲ್ಲರಿಗೂ ವಿದ್ಯಾಸಾಗರನು ವಿಶೇಷವಾಗಿ ಅನ್ನವನ್ನೂ ತೊವ್ವೆಯನ್ನೂ ತನ್ನ ಕೈಯಿಂದಲೇ ಬಡಿಸುತ್ತಿದ್ದನು. ದೊಡ್ಡ ಮನೆತನದವರಿಗೆ ರಹಸ್ಯವಾಗಿ ಧನಸಹಾಯಮಾಡುತ್ತಿದ್ದನು. ಈ ದಯಾಸಾಗರನು ದಾರುಣವಾದ ಆ ಕಷ್ಟಕಾಲದಲ್ಲಿ ಈ ವಿಧದಿಂದ ದೇಶೋಪಕಾರ ಮಾಡಿದನು.

## ಮಲೇರಿಯಾ (ಕಾಡುಜ್ವರ).

೧೮೬೯ ನೆಯ ವರುಷದಲ್ಲಿ ಬರದ್ವಾನ್ ಜಿಲ್ಲೆಯಲ್ಲಿ ಮಲೇರಿಯಾ ಜ್ವರಗಳು ಪ್ರಬಲವಾದುವು. ಸಾವಿರಾರು ಮಂದಿ, ವೈದ್ಯರ ಸಹಾಯವಿಲ್ಲದೆಯೂ, ತಕ್ಕ ಆದರಣೆಗಳಿಲ್ಲದೆಯೂ ಪ್ರಾಣಗಳನ್ನು ಕಳೆದುಕೊಂಡರು. ಆ ಸಂಗತಿಯನ್ನು ವಿದ್ಯಾಸಾಗರನು ಕೇಳಿದ ಕೂಡಲೇ ಬರದ್ವಾನ್ ಪಟ್ಟಣಕ್ಕೆ ಹೊರಟು ಅಲ್ಲಿ ತನ್ನ ಸ್ವಂತ ವೆಚ್ಚದಿಂದ ಒಂದು ಧರ್ಮವೈದ್ಯಶಾಲೆ

ಯನ್ನೇರ್ಪಡಿಸಿದನು. ಬೇಕಾದವರೆಲ್ಲರೂ ಅಲ್ಲಿ ಉಚಿತವಾಗಿ ಔಷಧಗಳನ್ನು ಕೊಡುವಂತೆ ಒಬ್ಬ ವೈದ್ಯನಿಗೆ ಸಂಬಳಕೊಟ್ಟು ಇರಿಸಿದನು. ವಿದ್ಯಾಸಾಗರನು ಆ ವೈದ್ಯನನ್ನು ಸಂಗಡ ಕರೆದುಕೊಂಡು ಮನೆಮನೆಗೂ, ಬೀದಿಬೀದಿಗೂ, ಹಳ್ಳಿಹಳ್ಳಿಗೂ ತಿರುಗಿ ಬೇಕಾದವರಿಗೆಲ್ಲ ವೈದ್ಯಸಹಾಯವನ್ನು ಮಾಡಿಸುತ್ತಿದ್ದನು. ಆಗ ಆತನು ಹಲವು ಕುಟುಂಬಗಳಲ್ಲಿ ಸ್ವಲ್ಪ ಹೆಚ್ಚುಕಡಿಮೆ ಅರೆವಾಸಿ ಜನರು ಈ ಮಲೇರಿಯಾ ಜ್ವರಗಳಿಂದ ಮೃತರಾದುದನ್ನೂ, ಉಳಿದವರು ಕೂಡ ಅದಕ್ಕೆ ಸಿದ್ಧರಾಗಿರುವುದನ್ನೂ ನೋಡಿದನು ಪ್ರತಿ ದಿನದಲ್ಲಿಯೂ ಈ ಜ್ವರದಿಂದ ಬಾಧೆಪಡದೆ ಇರುವವರು ಒಬ್ಬರಾದರೂ ಆತನ ಕಣ್ಣಿಗೆ ಕಾಣಿಸಲಿಲ್ಲ. ಅವರಿಗೆ ಔಷಧಗಳೂ, ಆದರಣೆಗಳೂ ಅಲ್ಲದೆ ಅನ್ನವಸ್ತ್ರಗಳನ್ನು ಸುದಾ ಕೊಡಬೇಕಾಗಿ ಬಂದಿತು. ಆ ಜಿಲ್ಲೆಯಲ್ಲಿನ ಜನಗಳಿಗೆಲ್ಲ ಎಲ್ಲಾ ಸಹಾಯಗಳನ್ನೂ ತಾನೇ ಮಾಡತಕ್ಕಷ್ಟು ಹಣವು ಆತನಲ್ಲಿಲ್ಲದೆ ಹೋಯಿತು. ಉದಾರಿಯಾದುದರಿಂದ ಹಾಗೆ ಮಾಡಲು ಶ್ರಮಪಟ್ಟನು. ಆ ಪ್ರಜೆಗಳಿಗೆ ತಾನು ಮಾಡುವುದಕ್ಕೆ ಅನುಕೂಲವಿರುವುದಕ್ಕಿಂತಲೂ ಹೆಚ್ಚಾದ ಸಹಾಯವು ಅಗತ್ಯವಾಗಿದೆ ಎಂದು ವಿದ್ಯಾಸಾಗರನು ತಿಳಿದುಕೊಂಡು, ಬಂಗಾಳದ ಆಗಿನ ಲೆಫ್ಟನೆಂಟ್ ಗವರ್ನರಾಗಿದ್ದ ಸರ್ ನಿಲಿಯಂಗ್ರೇ ಪ್ರಭುಗಳೊಂದಿಗೆ ಬರದ್ವಾರ್ ನಿವಾಸಿಗಳ ದುರವಸ್ಥೆಯನ್ನು ಕುರಿತು ಮಾತನಾಡಲಿಕ್ಕೋಸ್ಕರ ಕಲ್ಕತ್ತೆಗೆ ಬಂದನು. ಆಗಲಾ ಗವರ್ನರವರು ವಿದ್ಯಾಸಾಗರನ ಪ್ರಾರ್ಥನೆಯಂತೆ ಅನುಭವಸ್ಥರಾದ ಸರ್ಕಾರದ ಸಹಾಯ ವೈದ್ಯಶಾಸ್ತ್ರಜ್ಞ ( Assistant Iurgeand ) ರಲ್ಲಿ ಅನೇಕ ಮಂದಿಯನ್ನು ಬರದ್ವಾರ್‌ನಲ್ಲಿನ ಆ ಜ್ವರವು ನಿರ್ಮೂಲವಾಗುವತನಕ ಅಲ್ಲಿಯೇ ಇದ್ದು ಸಹಾಯ ಮಾಡಬೇಕೆಂದು ಅಪ್ಪಣೆಕೊಟ್ಟು ಕಳುಹಿದನು. ಮತ್ತು ಆ ಗವರ್ನರವರು ಜಿಲ್ಲಾ ಮಾಜಿಸ್ಟ್ರೇಟರಿಗೂ ಸಿವಿಲ್ ಸರ್ಜನ್‌ಗಳಿಗೂ ಆ ಜಿಲ್ಲೆಯೊಳಗಿನ ಹಳ್ಳಿಗಳಿಗೆಲ್ಲ ಹೋಗಿ, ಬಾಧೆಪಡುತ್ತಿರುವ ಜನರ ನಿಜಸ್ಥಿತಿಗಳನ್ನು ಸಾಧ್ಯವಾದಷ್ಟು ತ್ವರೆಯಲ್ಲಿ ತಿಳಿಸಬೇಕೆಂದು ಆಜ್ಞಾಪಿಸಿದರು. ಸಿವಿಲ್‌ಸರ್ಜನ್‌ರವರು ಆ ಸಂಗತಿಯನ್ನು ಸರಕಾರದವರಿಗೆ ಸಕಾಲದಲ್ಲಿ ತಿಳಿಸದೆ ಹೋದುದಕ್ಕೆ ಅವರನ್ನು ನಿಂದಾರ್ಹರೆಂದು ಗವರ್ನರವರು ಭಾವಿಸಿದರು. ಜಿಲ್ಲಾ ಮ್ಯಾಜಿಸ್ಟ್ರೇಟರವರ ರಿಪೋರ್ಟು ಮುಟ್ಟಿದ ಕೂಡಲೇ ಸಿವಿಲ್ ಸರ್ಜನ್‌ರವರು ಅಲ್ಲಿಗೆ ಹೋಗಿ, ಆ ಧರ್ಮವೈದ್ಯಶಾಲೆಗಳನ್ನು ನಾಲ್ಕೈದು ಮೈಲು

ಗಳ ದೂರದಲ್ಲಿ ಒಂದೊಂದು ಇರುವ ಹಾಗೆ ಏರ್ಪಡಿಸಿದರು. ಪ್ರಜೆಗಳ ಕಷ್ಟವನ್ನು ವಿಚಾರಿಸಲು ಸರಕಾರದವರಿಂದ ಮಾಡಿಸಿದ ಉಪಕಾರದೊಂದಿಗೆ ವಿದ್ಯಾಸಾಗರನು ತೃಪ್ತನಾಗಲಿಲ್ಲ. ಮೊದಲಿಗಿಂತ ಅನೇಕ ಪಾಲು ಹೆಚ್ಚಾಗಿ ತಾನೂ ಪ್ರಯತ್ನಪಡತೊಡಗಿದನು. ವ್ಯಾಧಿಗ್ರಸ್ತರಾದವರಿಗೆ ಉಚಿತವಾಗಿ ಔಷಧಗಳನ್ನು ಕೊಡುವುದೇ ಅಲ್ಲದೆ ಕ್ರಮವಾದ ಪಥ್ಯಪಾನಾದಿಗಳನ್ನು ಕೊಡಿಸಿ, ಅಗತ್ಯವಿದ್ದವರಿಗೆ ಹಣವನ್ನೂ ಬಟ್ಟೆಬರೆಗಳನ್ನೂ ಕೊಡಿಸುತ್ತಿದ್ದನು. ಚಳಿಗಾಲವು ಸಮೀಪಿಸಿದ್ದಾಗ ಆತನು ಸುಮಾರು ಎರಡು ಸಾವಿರ ರೂಪಾಯಿ ಬೆಲೆಯುಳ್ಳ ದಪ್ಪ ದೋತ್ರಗಳನ್ನು ಕೊಂಡು ಆ ರೋಗಿಗಳಿಗೆ ಹಂಚಿದನು. ಹೀಗೆ ವಿದ್ಯಾಸಾಗರನು ತನ್ನ ಶರೀರಸೌಖ್ಯವನ್ನೂ, ಧನವ್ಯಯವನ್ನೂ ಲಕ್ಷಿಸದೆ ಬರದ್ವಾನ್ ಜಿಲ್ಲೆಯಲ್ಲಿ ಮಲೇರಿಯಾ ಜ್ವರದಿಂದ ಬಾಧೆಪಡುವರನ್ನು ರಕ್ಷಿಸುವುದಕ್ಕಾಗಿ ಬೇಸರವಿಲ್ಲದೆ ಎರಡು ವರ್ಷಗಳು ಪೂರ್ತಿಯಾಗಿ ಕಷ್ಟಪಟ್ಟನು. ಯಾವಾಗಲೂ ಆತನು ನಿಜವಾದ ಕಷ್ಟದಲ್ಲಿ ಸಿಕ್ಕಿದವರಿಗೆ ಕೈಯಾಸರೆಯಾಗಿದ್ದನು.

ಮಿಥುನಾಪುರ ಜಿಲ್ಲೆಯೊಳಗಿನ ಖತಾಲದ ಸಬ್‌ಡಿವಿಜನ್‌ದಲ್ಲಿ ಅನೇಕ ಪ್ರದೇಶಗಳು ಅತಿ ಪ್ರವಾಹದಿಂದ ವಿಶೇಷ ನಷ್ಟಹೊಂದಿದಾಗ ಅಲ್ಲಿಯ ಜನರ ಸಹಾಯಕ್ಕೋಸ್ಕರ ಆ ಜಿಲ್ಹಾ ಮ್ಯಾಜಿಸ್ಟ್ರೇಟರವರಿಗೆ ಐನೂರು ರೂಪಾಯಿಗಳನ್ನು ಕಳುಹಿದನು.

## ಸಂರಕ್ಷಣೆ:—

ಸಾಧಾರಣವಾಗಿ ಲೋಕದಲ್ಲಿ ಭಾಗ್ಯವಂತರಾದವರು ಬಡವರ ಮೇಲೆ ದೌರ್ಜನ್ಯವನ್ನು ತೋರುವುದು ಸಹಜವಾಗಿರುವುದು. ದೊಡ್ಡ ವಂಶದಲ್ಲಿ ಹುಟ್ಟಿ ಉನ್ನತಪದವಿಯಲ್ಲಿರುವವರು ರೋಗಪೀಡಿತರಾದ ಹೀನ ಕುಲದವರ ಹಾಸಿಗೆಯ ಹತ್ತಿರ ಕುಳಿತುಕೊಂಡು "ಪರೋಪಕಾರಾರ್ಥಮಿದಂ ಶರೀರಂ" ಎಂಬ ಧರ್ಮವನ್ನವಲಂಬಿಸಿ, ಅವರಿಗೆ ಉಪಚಾರಮಾಡುವುದು ಸಾಮಾನ್ಯ ಮನುಷ್ಯರ ಧರ್ಮವಾಗಿಲ್ಲವಷ್ಟೆ! ವಿದ್ಯಾಸಾಗರನಲ್ಲಿ ಮಾತ್ರ ಈ ಅಪೂರ್ವಗುಣವು ಮೂರ್ತೀಭವಿಸಿದ್ದಿತು. ೧೮೪೩ನೆಯ ವರುಷದ ಮೇ ತಿಂಗಳಲ್ಲಿ ಸಂಸ್ಕೃತ ಕಳಾಶಾಲೆಯಲ್ಲಿ ಉಪಾಧ್ಯಾಯನಾಗಿದ್ದ ಪಂಡಿತ ಗಂಗಾಧರ ತರ್ಕವಾಗೀಶನೆಂಬಾತನಿಗೆ ಕಾಲರಾ ಉಪದ್ರವು ತಗಲಿತು. ಆತನು ತನ್ನ ಶಿಷ್ಯನಾದ ವಿದ್ಯಾಸಾಗರನಿಗೆ ವರ್ತಮಾನ ಕಳುಹಿದನು. ಆಗ

ಸಂಘದಲ್ಲಿ ಉತ್ತಮಸ್ಥಾನವನ್ನಾಕ್ರಮಿಸಿಕೊಂಡು, ತುಂಬ ಗೌರವ್ಯನಾಗಿದ್ದ ಪಂಡಿತ ಈಶ್ವರಚಂದ್ರನಿಗೆ ಈ ಸುದ್ದಿ ತಿಳಿದ ಕೂಡಲೆ ಆತನು ತನ್ನ ಸ್ನೇಹಿತನಾದ ದುರ್ಗಾಚರಣ ಬೆನರ್ಜೀ ಎಂಬ ವೈದ್ಯನನ್ನು ಕರೆದು ಕೊಂಡು ಹೋಗಿ, ತನ್ನ ಗುರುವಿಗೆ ಸರ್ವೋಪಚಾರಗಳನ್ನು ತಾನೇ ಮಾಡಿ, ಮಲಮೂತ್ರಾದಿಗಳನ್ನು ಕೂಡ, ತನ್ನ ಕೈಗಳಿಂದಲೇ ಎತ್ತಿ ಸುರಿದು, ಆತ ನಿಗೆ ಸಂಪೂರ್ಣ ಸ್ವಸ್ಥತೆಯನ್ನುಂಟು ಮಾಡಿದ ವಿಷಯವು ವಾಚಕರ ನೆನ ಪಿನಲ್ಲಿಯೇ ಇರಬಹುದು.

ಒಂದಾನೊಂದು ದಿನ ವಿದ್ಯಾಸಾಗರನು ಬೀದಿಯಲ್ಲಿ ಹೋಗುತ್ತಿದ್ದಾಗ "ಅಗೋ! ಆತನೇ ವಿದ್ಯಾಸಾಗರನು." ಎಂದು ಕೆಲವರು ಬೆರಳು ತೋರಿಸಿ, ರಹಸ್ಯವಾಗಿ ಮಾತಾಡಿಕೊಳ್ಳುತ್ತಿದ್ದುದನ್ನು ಕಂಡು ಹಿಡಿದನು. ಆಗ ಒಬ್ಬ ಬಡವನು ಮರಣವೇದನೆ ಹೊಂದುತ್ತಾ ದಾರಿಯ ಪಕ್ಕದಲ್ಲಿ ಬಿದ್ದಿದ್ದನು. ಆತನು ತುಂಬ ಅಸಹಾಯನಾಗಿ ಕಾಲರಾವ್ಯಾಧಿಯಿಂದ ಬಾಧೆಪಡುತ್ತಿದ್ದನು. ಅವನ ಯಜಮಾನನಾದ ವೈದ್ಯನಾಥ ಮುಖರ್ಜೀ ಎಂಬಾತನು ನಿರ್ದಯೆ ಯಿಂದ ಅವನನ್ನು ನಿರಾಧಾರಿಯಾಗಿ ಬಿಟ್ಟು ಬಿಟ್ಟನು. ವಿದ್ಯಾಸಾಗರನು ಅವನನ್ನು ನೋಡಿದ ಕೂಡಲೇ ತನ್ನ ಮನೆಗೆ ಕರೆದೊಯ್ದು, ಔಷಧೋಪ ಚಾರಗಳನ್ನು ಕೊಡಿಸಿ ಅವನನ್ನು ಬದುಕಿಸಿದನು ಆತನು ಹೀಗೆ ದಾರಿಯ ಮಗ್ಗುಲಲ್ಲಿ ಬಿದ್ದಿದ್ದ ಕಾಲರಾ ಮೊದಲಾದ ಘೋರವ್ಯಾಧಿಯಿಂದ ಬಾಧೆಪಡ ತಕ್ಕ ಅನೇಕ ಮಂದಿಯನ್ನು ಕರೆದುಕೊಂಡು ಬಂದು ಅವರಿಗೆ ಸಹಾಯ ಮಾಡಿದನು. ತಾನೇ ಸ್ವಂತವಾಗಿ ಅವರ ಮೈತೊಳೆದು, ದುರ್ಬಲರಾದವರಿಗೆ ಬಟ್ಟೆಗಳನ್ನು ಸಹ ಅನೇಕ ವೇಳೆ ತಾನೇ ಉಡಿಸಿದನು.

"ಬಾರಾಷಟ್" ನಿವಾಸಿಯಾದ ಕಾಳೀ ಕೃಷ್ಣಮಿತ್ರನೆಂಬ ಬಂಗಾ ಳೀ ಪಂಡಿತನೊಬ್ಬನು ವಿದ್ಯಾಸಾಗರನ ಮಿತ್ರನಾಗಿದ್ದನು. ಆತನಿಗೆ ಆರೋಗ್ಯ ತಪ್ಪಿದಾಗ ಅನುಭವಸ್ಥರಾದ ವೈದ್ಯರಲ್ಲಿ ಕೆಲವರು ಆತನು ದಿನವೆಲ್ಲ ಸಂತೋ ಷಗೊಳ್ಳುತ್ತಾ ಕೆಲವು ಕಾಲಕಳೆದರೆ ಆತನ ಶರೀರಕ್ಕೆ ಸೌಖ್ಯವಾಗುವುದೆಂದು ಹೇಳಿದರು.

ವಿದ್ಯಾಸಾಗರನಿಗೆ ಆ ಸಂಗತಿ ತಿಳಿದ ಕೂಡಲೇ ತಾನು ಆತನೊಂದಿಗೆ ಕೂಡಿ ಉಲ್ಲಾಸಗೊಳಿಸುತ್ತಾ ಒಂದು ವರುಷ ಕಾಲ ಕಳೆದನು, ಆ ದಿನಗ ಳಲ್ಲಿ ಸಹಜವಾದ ತನ್ನ ಚಮತ್ಕಾರದಿಂದಲೂ, ಚಿತ್ರವಿಚಿತ್ರವಾದ ಕಥೆಗ

ಳಿಂದಲೂ, ಆತನು ಯಾವಾಗಲೂ ಹೊಟ್ಟೆಯುಬ್ಬರಿಸುವಂತೆ ನಗಿಸುತ್ತಿದ್ದನು. ಮತ್ತು ತನಗೆ ಆಗ ಇದ್ದ ಇತರ ಕೆಲಸಗಳನ್ನೇ ಬಿಟ್ಟು ಬಿಟ್ಟು, ಇದೇ ಅಗತ್ಯವಾದ ಕೆಲಸವೆಂದು ತಿಳಿದು ಹೀಗೆ ಕಾಲವನ್ನು ಕಳೆದನು.

ದೊಡ್ಡವಂಶದಲ್ಲಿನ ಒಬ್ಬ ಸ್ತ್ರೀಗೆ ಹುಚ್ಚು ಹಿಡಿದು, ಕ್ರಮವಾಗಿ ಊಟ ಮಾಡದೆ ಸ್ವಾಧೀನ ತಪ್ಪಿಹೋದಳು. ಅದುವರೆಗೂ ದೊಡ್ಡ ಉದ್ಯೋಗದಲ್ಲಿದ್ದು ಮೃತಪಟ್ಟ ಆಕೆಯ ಪತಿಯು ನಮ್ಮ ವಿದ್ಯಾಸಾಗರನ ಮಿತ್ರರಲ್ಲಿ ಒಬ್ಬನಾಗಿದ್ದನು. ಆಕೆಗೆ ಈತನಲ್ಲಿ ತುಂಬ ಗೌರವವೂ, ಭಕ್ತಿಯೂ ಇದ್ದವು. ಆದುದರಿಂದ ಆಕೆಯೂ ಎರಡು ವೇಳೆಗಳಲ್ಲಿಯೂ ವಿದ್ಯಾಸಾಗರನು ಸ್ವಂತವಾಗಿ ಉಣಬಡಿಸಿದರೆ, ಆ ಹುಚ್ಚಿನಲ್ಲಿಯೂ ಚನ್ನಾಗಿ ಊಟ ಮಾಡುತ್ತಿದ್ದಳು. ಆತನು ಹೀಗೆ ಆರು ತಿಂಗಳ ತನಕ ಆಕೆಗೆ ಅನ್ನವನ್ನು ಬಡಿಸಿ ಪೋಷಣೆ ಮಾಡಿದನು.

೧೮೭೬ ನೆಯ ಸಂವತ್ಸರದಲ್ಲಿ "ಕಾಂಡೀ" ಜಮೀನ್‌ದಾರರಾದ ರಾಜ ಪ್ರತಾಪಸಿಂಹ ಬಹದ್ದರರವರು ಅನೇಕ ವ್ಯಾಧಿಗಳಿಂದ ಹಾಸಿಗೇ ಹಿಡಿದರು. ವಿದ್ಯಾಸಾಗರನು ಅವರು ಮಲಗಿದ ಸುದ್ದಿಯನ್ನು ಕೇಳಿದ ಒಡನೆಯೇ ಮಹೇಂದ್ರಸರ್ಕಾರನೆಂಬ ಘನವೈದ್ಯ ಶಾಸ್ತ್ರಪಂಡಿತನಿಗೆ ತಿಂಗಳೊಂದಕ್ಕೆ ಸಾವಿರ ರೂಪಾಯಿಗಳ ವೇತನವನ್ನು ಕೊಡುವಂತೆ ಏರ್ಪಡಿಸಿ, ಆತನನ್ನು ಸಂಗಡ ಕರೆದುಕೊಂಡು ತನ್ನ ಸ್ನೇಹಿತನ ಬಳಿಗೆ ಹೊದನು. ಆತನು ಅಲ್ಲಿ ಆ ರೋಗಿಗೆ ನಾಲ್ಕು ತಿಂಗಳ ತನಕ ಔಷಧವನ್ನು ಕೊಟ್ಟರೂ ಗುಣವಾಗದೆ ಕ್ರಮೇಣ ರೋಗವು ವೃದ್ಧಿಯಾಗುತ್ತಾ ಬಂದಿತು. ಆದರೂ ವಿದ್ಯಾಸಾಗರನು ಅವಸರವನ್ನಾಗಲಿ, ನಿರಾಶೆಯನ್ನಾಗಲಿ ಹೊಂದಲಿಲ್ಲ. ರೋಗವು ವಾಸಿಯಾಗುವುದೆಂಬ ಸೂಚನೆಯೊಂದೂ ಕಾಣಿಸಲಿಲ್ಲ. ವಿದ್ಯಾಸಾಗರನು ತನ್ನ ಮಿತ್ರನ ಪ್ರಾಣಸಂರಕ್ಷಣೆಗಾಗಿ ರಾತ್ರಿಯೂ ಹಗಲೂ ಕಾದಿದ್ದು ಮನುಷ್ಯ ಪ್ರಯತ್ನಕ್ಕೆ ಲೋಪವಿಲ್ಲದಂತೆ ಮಾಡಿದನು. ಇಂತಹ ಉದಾಹರಣೆಗಳು ಈ ಮಹನೀಯನ ಜೀವಿತದಲ್ಲಿ ಲೆಕ್ಕವಿಲ್ಲದಷ್ಟು ಸಿಕ್ಕುವುವು.

ಹಿಂದೂ ದೇಶದಲ್ಲಿ ಬಹು ಪೂರ್ವಕಾಲದಿಂದಲೂ ಪ್ರಬಲವಾಗಿರುವ ವೈದ್ಯಶಾಸ್ತ್ರಗಳಲ್ಲಿ "ಹೋಮೋಪಾತಿ" ಎಂಬುದೂ ಒಂದು. ಈ ವೈದ್ಯರು ಯಾವ ಕಾರಣಗಳಿಂದ ಒಂದು ರೋಗವು ಹುಟ್ಟುವುದೋ ಅವುಗಳ ಸಹಾಯದಿಂದಲೇ ಆ ವ್ಯಾಧಿಯನ್ನು ನಿವಾರಣೆ ಮಾಡುವರು. ಅಂದರೆ ಒಂದು

ವಸ್ತುವನ್ನುಪಯೋಗಿಸುವುದರಿಂದ ಒಂದುರೋಗ ಉಂಟಾದಾಗ ಅದೇ ವಸ್ತುವನ್ನೇ ಮತ್ತೊಂದು ವಿಧವಾಗಿ ಸೇವಿಸಿದರೆ, ಅದೇ ಆ ವ್ಯಾಧಿಗೆ ಔಷಧವಾಗಿ ಉಪಕರಿಸುವುದು, ಈ ಶಾಸ್ತ್ರವನ್ನು ಚನ್ನಾಗಿ ತಿಳಿದ ಪಾಶ್ಚಾತ್ಯಪಂಡಿತರಲ್ಲಿ ನಮ್ಮ ವಿದ್ಯಾಸಾಗರನು ಅಭ್ಯಾಸಮಾಡಿ ಅವರಲ್ಲಿ ತುಂಬ ಸಮರ್ಥನೆಂದು ಹೆಸರುಗೊಂಡನು. ಆತನು ಈ ಶಾಸ್ತ್ರಜ್ಞಾನದಿಂದ ಬಹುಮಂದಿಗೆ ಬಹಳ ಉಪಕಾರವನ್ನು ಮಾಡಬಲ್ಲವನಾದನು.

## ಬಂಗಾಳೀ ವಿದ್ಯಾವಂತರನ್ನು ಉದ್ಯೋಗಗಳಲ್ಲಿ ಪ್ರವೇಶಗೊಳಿಸಿದ್ದು.

ಪಂಡಿತ ರಾಮಕಮಲಭಟರ್ಜಿ ಎಂಬಾತನನ್ನು 'ರಿಪನ್' ಕಳಾಶಾಲೆಗೆ ಅಧ್ಯಕ್ಷನನ್ನಾಗಿ ನಿಯಮಿಸಲಿಕ್ಕೆ ವಿದ್ಯಾಸಾಗರನು ಮೇಲಿನ ಅಧಿಕಾರಿಗಳಿಗೆ ಶಿಫಾರಸುಮಾಡಿದನು. ಆ ಪಂಡಿತನು ತುಂಬ ವಿದ್ಯಾವಂತನಾಗಿಯೂ ವಿಶೇಷ ಸಾಮರ್ಥ್ಯವುಳ್ಳವನಾಗಿಯೂ ಇದ್ದನು. ಸಂಸ್ಕೃತಾಂಗ್ಲೇಯ ಭಾಷೆಗಳಲ್ಲಿ ಆತನಿಗೆ ಅಪಾರವಾದ ಪರಿಜ್ಞಾನವಿದ್ದಿತು. ಗಣಿತಶಾಸ್ತ್ರಕ್ಕೆ ಆತನು ನಿಧಿ. ಅದಕ್ಕೆ ಮುಂಚೆಯೇ ಆತನು ಕಲ್ಕತ್ತಾ ನಾರ್ಮಲ್‌ಸ್ಕೂಲುಗಳಲ್ಲಿ ಪ್ರಧಾನೋಪಾಧ್ಯಾಯನಾಗಿ ಕೆಲಸಮಾಡುತ್ತಿದ್ದನು. ಬಾಬೂರಾಮಕ್ಷಯಚಾಟರ್ಜೀಯವರನ್ನು ಲೆಫ್ಟನೆಂಟ ಗವರ್ನರವರು ವಿದ್ಯಾಸಾಗರನ ಶಿಫಾರಸು ಮೇಲೆ ಡೆಪುಟಿಮಾಜಿಸ್ಟ್ರೇಟರನ್ನಾಗಿ ನಿಯಮಿಸಿದರು. ಅದೇ ಮೇರೆಗೆ ಬಾಬೂಚಂದ್ರಸೇನನೂ ವಿದ್ಯಾಸಾಗರನ ಸಹೋದರನಾದ ದೀನಬಂಧು ನ್ಯಾಯರತ್ನನೆಂಬುವನೂ ದೊಡ್ಡ ಪದವಿಗೆ ಬಂದರು. ಕೀರ್ತಿಶೇಷನಾದ ಪ್ರಸನ್ನಕುಮಾರ ಸರ್ವಾಧಿಕಾರಿಯೆಂಬಾತನು ಹಿಂದೂ ಕಳಾಶಾಲೆಯಲ್ಲಿನ ಪಟ್ಟಪರೀಕ್ಷೆಗಳಲ್ಲೆಲ್ಲ ಬಹು ಶ್ಲಾಘ್ಯವಾಗಿ ಜಯಹೊಂದಿ, ಢಾಕಾದಲ್ಲಿ ವಿದ್ಯಾಶಾಖೆಯ ಒಂದು ಉದ್ಯೋಗದಲ್ಲಿದ್ದನು. ಕಾರಣಾಂತರಗಳಿಂದ ಆತನು ಆ ಉದ್ಯೋಗದಲ್ಲಿರಲು ಅವಕಾಶವಿಲ್ಲದೆ, ತನ್ನ ಉದ್ಯೋಗವನ್ನು ಬಿಟ್ಟು ಬಿಟ್ಟು ಸರ್ಕಾರದವರ ಅಪ್ಪಣೆ ಪಡೆಯದೆಯೇ ಕಲ್ಕತ್ತೆಗೆ ಮರಳಿ ಬಂದನು. ಢಾಕಾದಲ್ಲಿದ್ದಾಗ ಆತನ ಸಂಬಳವು ಸ್ವಲ್ಪವಾಗಿದ್ದಿತು. ಕಲ್ಕತ್ತೆಗೆ ಬಂದ ತರುವಾಯ ಉದ್ಯೋಗಕ್ಕಾಗಿ ಎರಡು ವರುಷಗಳ ತನಕ ಎಷ್ಟು ಕಷ್ಟಪಟ್ಟರೂ ಲಭಿಸಲಿಲ್ಲ. ಕೊಟ್ಟಕೊನೆಗೆ ವಿದ್ಯಾಸಾಗರನ ಪ್ರಯತ್ನದಿಂದಲೇ ಕ್ರಮಕ್ರಮವಾಗಿ ಅಭಿವೃದ್ಧಿಗೆ ಬಂದನು. ಆತನು ಮೊಟ್ಟ

ಮೊದಲು ಕಲ್ಕತ್ತೆಯ ರಾಜಧಾನಿಯ ಕಳಾಶಾಲೆಯಲ್ಲಿ ಒಬ್ಬ ಮುಖ್ಯೋಪಾಧ್ಯಾಯನಾಗಿದ್ದನು. ಬರುತ್ತಾ ಬರುತ್ತಾ ಅವನು ಉದ್ಯೋಗವನ್ನು ಬಿಟ್ಟು ಬರುವ ವೇಳೆಗೆ ತಿಂಗಳೊಂದಕ್ಕೆ ಸಾವಿರ ರೂಪಾಯಿಗಳ ವೇತನವನ್ನುಳ್ಳ ಉದ್ಯೋಗದಲ್ಲಿದ್ದನು.

ಗತಿಸಿದ ಮದನಮೋಹನ ತರ್ಕಾಲಂಕಾರನೆಂಬಾತನು ವಿಶೇಷ ವಿದ್ಯಾಪ್ರಭಾವವುಳ್ಳವನಾಗಿದರೂ ತಿಂಗಳೊಂದಕ್ಕೆ ೩೦ ರೂಪಾಯಿಗಳ ವೇತನವನ್ನುಳ್ಳ ಸಾಮಾನ್ಯ ಪಂಡಿತನಾಗಿ ಒಂದು ಸಣ್ಣ ಪಾಠಶಾಲೆಯಲ್ಲಿದ್ದನು. ಆತನಿಗೆ ವಿದ್ಯಾಸಾಗರನು ವಿಲ್ಲಿಯಂದುರ್ಗ ಕಳಾಶಾಲೆಯಲ್ಲಿ ಅವಕಾಶವುಂಟಾದಾಗ ತಿಂಗಳಿಗೆ ನಾಲ್ವತ್ತು ರೂಪಾಯಿಗಳ ಪಗಾರವುಳ್ಳ ಒಂದು ದೊಡ್ಡ ಉದ್ಯೋಗದಲ್ಲಿ ಸೇರಿಸಿದನು. ಪಂಡಿತ ಮುಕ್ತಾರಾಮ ವಿದ್ಯಾವಾಗೀಶನೆಂಬಾತನು ಕೂಡ ವಿದ್ಯಾಸಾಗರನ ಸಹಾಯದಿಂದಲೇ "ಕಲ್ಕತ್ತಾ ಮದರಸಾ" ಎಂಬ ಪ್ರತಿಷ್ಠಾಪನೆಯಲ್ಲಿ ತಿಂಗಳಿಗೆ ನಾಲ್ವತ್ತು ರೂಪಾಯಿಗಳ ವೇತನವುಳ್ಳ ಒಂದು ಉದ್ಯೋಗವನ್ನು ಸಂಪಾದಿಸಿಕೊಂಡನು. ಪಂಡಿತ ತಾರಾನಾಥ ತರ್ಕವಾಚಸ್ಪತಿ ಎಂಬಾತನು ಯಾವ ರೀತಿಯಲ್ಲಿ ಸಂಸ್ಕೃತ ಕಳಾಶಾಲೆಯಲ್ಲಿ ತೊಂಭತ್ತು ರೂಪಾಯಿ ವೇತನ ಪದವಿಯನ್ನು ಹೊಂದುವನೋ ಆ ಸಂಗತಿ ಹಿಂದಿನ ಅಧ್ಯಾಯದಲ್ಲಿ ತಿಳಿಸಲ್ಪಟ್ಟಿದೆ. ಸೋಮಪ್ರಕಾಶ ಪತ್ರಿಕೆಯ ಸಂಪಾದಕನಾದ ಪಂಡಿತ ದ್ವಾರಕಾನಾಥ ವಿದ್ಯಾಭೂಷಣನು ೫೦ ರೂಪಾಯಿಗಳ ವೇತನವನ್ನೂ ಪಂಡಿತ ಗಿರೀಶಚಂದ್ರ ವಿದ್ಯಾರತ್ನನು ತಿಂಗಳಿಗೆ ೩೦ ರೂಪಾಯಿಗಳ ಸಂಬಳವನ್ನೂ ಉಳ್ಳ ಉದ್ಯೋಗವನ್ನು ಸಂಸ್ಕೃತ ಕಳಾಶಾಲೆಯಲ್ಲಿ ಪಡೆದುದು ವಿದ್ಯಾಸಾಗರನ ಶಿಫಾರಸಿನಿಂದಲೇ? ಮುಕ್ತವಯಸ್ಸಿನಲ್ಲಿಯೇ ಮೃತಹೊಂದಿದ "ಪಂಡಿತ ನಂದಕುಮಾರ ನ್ಯಾಯಚಂಚಣ" ಎಂಬಾತನಿಗೆ ೩೦ ರೂಪಾಯಿಗಳ ಸಂಬಳವನ್ನುಳ್ಳ ಉಪಾಧ್ಯಾಯ ಪದವಿಯನ್ನು ಸಂಸ್ಕೃತ ಕಳಾಶಾಲೆಯಲ್ಲಿ ವಿದ್ಯಾಸಾಗರನು ಪ್ರತ್ಯೇಕವಾಗಿ ಕೊಡಿಸಿದನು. ನಂದಕುಮಾರನು ನ್ಯಾಯವೇದಾಂತ ಪರೀಜ್ಞಾನದಲ್ಲಿ ಅಸಮಾನಪ್ರಜ್ಞಾವಂತನಾಗಿ ಪ್ರಸಿದ್ಧಿಹೊಂದಿದ್ದನು. ರಾಜಧಾನಿಯ ಕಳಾಶಾಲೆಯಲ್ಲಿ ಪ್ರಧಾನಸಂಸ್ಕೃತೋಪಾಧ್ಯಾಯನಾದ ಪಂಡಿತ ಹರಪ್ರಸಾದಶಾಸ್ತ್ರಿ, ಎಂ. ಏ., ಯವರಿಗೆ ಈತನು ಸಹೋದರನು.

ವಿಲ್ಲಿಯಂದುರ್ಗ ಕಳಾಶಾಲೆಯಲ್ಲಿ ದೊಡ್ಡ ಗುಮಾಸ್ತೆಯಾಗಿದ್ದ ಬಾಬೂರಾಜ ಕೃಷ್ಣ ಮುಖರ್ಜಿಯವರು ರಾಜಧಾನಿಯ ಕಳಾಶಾಲೆಯಲ್ಲಿ ಸಹಾಯಕಳಾವೇತ್ತ್ರರಾಗಿ ( Assiotant Professor ) ನಿಯಮಿಸಲ್ಪಡುವುದಕ್ಕೆ ವಿದ್ಯಾಸಾಗರನೇ ಕಾರಣಭೂತನು. ಸಂಸ್ಕೃತದ ಕಳಾಶಾಲೆಯಲ್ಲಿ ಗಣಿತದ ಪ್ರೊಫೆಸರಾಗಿ ೯೦ ರೂಪಾಯಿಗಳ ಉದ್ಯೋಗದಲ್ಲಿದ್ದ ಪ್ರಿಯನಾಥ ಭಟ್ಟಾಚಾರ್ಯನೆಂಬಾತನು ವಿದ್ಯಾಸಾಗರನ ಪ್ರಾಪಕದಿಂದಲೇ ನಾಮಕಾರಾರ್ಥವಾಗಿ ಧರ್ಮಶಾಸ್ತ್ರದಲ್ಲಿ ಪರೀಕ್ಷೆಯಲ್ಲಿ 'ಮುನಸಬ್' ಪದವಿಗೆ ಬಂದನು.

ವಿದ್ಯಾಸಾಗರನ ಪ್ರಾಪಕಪ್ರಯತ್ನಗಳಿಂದ ಅನೇಕ ಮಂದಿ ಅನಾಮಧೇಯರಾಗಿರಬೇಕಾದವರು ಕೂಡ ಉನ್ನತಸಿತಿಗೆ ಬಂದರು. ಇವರಲ್ಲಿ ಬಹುಮಂದಿ ಮಹಾರಾಜರ ಬಳಿಯಲ್ಲಿಯೂ, ಜಮೀನ್ದಾರರ ಬಳಿಯಲ್ಲಿಯೂ, ವರ್ತಕರ ಬಳಿಯಲ್ಲಿಯೂ, ಈತನಿಂದ ಉದ್ಯೋಗಗಳನ್ನು ಪಡೆದರು. ಆತನಿಂದ ಉಪಕಾರ ಹೊಂದಿದವರಲ್ಲಿ ಕೆಲವರು ಆತನಲ್ಲಿ ಕೃತಘ್ನರಾಗಿದ್ದರು. ಆದರೂ ಅವನು ಅಂತವರಲ್ಲಿ ಸ್ವಲ್ಪವೂ ಕೋಪಿಸಿಕೊಳ್ಳದೆ ಸ್ಥೈರಣೆಯಿಂದಲೇ ಇದ್ದನು.

ವಿದ್ಯಾಸಾಗರನು ಯಾವಾಗಲೂ ಗುಣಗಳನ್ನೇ ಗ್ರಹಿಸಿ ಯೋಗ್ಯರಾದವರೆಲ್ಲರನ್ನೂ ಜಾತಿಮತಾದಿ ಭೇದಗಳನ್ನಿಡದೆ ಸಮುಚಿತ ಗೌರವಗಳಿಂದ ನೋಡುತಲಿದ್ದನು. ಆತನಿಗೆ ವ್ಯತಿರಿಕ್ತವಾದ ಗುಣಗಳುಳ್ಳ ಲೋಭಗಳನ್ನು ಮಾತ್ರ ಆತನು ಅಲಕ್ಷ್ಯದಿಂದ ಕಾಣುತಲಿದ್ದನು. ಅಂತವರು ಇತರರು ಶ್ಲಾಘಿಸಲ್ಪಡುವುದನ್ನು ನೋಡಿ ಸಹಿಸರು. ಜತೆಯ ಮನುಷ್ಯರಲ್ಲಿ ಅಸೂಯತೆಯನ್ನು ಪಡೆದಿರುವರು. ಸತ್ಪುರುಷರು ಮಹನೀಯರಾದವರನ್ನು ತಕ್ಕ ವಿಧದಲ್ಲಿ ಶ್ಲಾಘಿಸಿದರೆ ನೋಡಿ ಸಂತೋಷಪಡುವರು. ನಿಜವಾಗಿ ಯೋಗ್ಯನಾದವನು ಇತರರನ್ನು ನೋಡಿ ಯಾವಾಗಲೂ ಅಸೂಯೆಪಡಲಾರನು.

೧೮೬೦ ನೆಯ ವರುಷದಲ್ಲಿ ಹರಿಶ್ಚಂದ್ರಮುಖರ್ಜೀ ಎಂಬ ಆಂಗ್ಲೇಯ ಭಾಷಾವಿಶಾರದನು ಕಾಲವಶದಿಂದ ಲೋಕಾಂತರವನೆಯ್ದಿದನು. ಆತನ ಅಸಾಧಾರಣವಾದ ರಾಜಕೀಯ ದೂರದೃಷ್ಟಿಯೂ, ವರ್ಣಿಸಲಳವಲ್ಲದ ಆತನ ಅದ್ಭುತ ದೇಶಾಭಿಮಾನೋದ್ರೇಕವೂ ಸುಪ್ರಸಿದ್ಧಗಳಾಗಿಯೇ ಇವೆ. ಈ ಮಹನೀಯನೇ "ಹಿಂದೂ ಪೆಟ್ರಿಯೇಟ್" ಎಂಬ ಪತ್ರಿಕೆಯನ್ನು

ಪ್ರಾರಂಭಿಸಿ ತನ್ನ ಜೀವವಿರುವತನಕ ಅದಕ್ಕೆ ಸಂಪಾದಕನಾಗಿದ್ದು ಅತಿ ಮನೋಹರವಾಗಿ ನಿರ್ವರ್ತಿಸಿದನು. ಆದರೆ ಆತನ ತರುವಾಯ ಅವನ ಹೆಂಡತಿಯು ಆ ಪತ್ರಿಕೆಯ ಹಕ್ಕನ್ನು ಕಾಳೀಪ್ರಸನ್ನಸಿಂಹನಿಗೆ ಐದುಸಾವಿರ ರೂಪಾಯಿಗಳಿಗೆ ಮಾರಿಬಿಟ್ಟಳು. ಮಹಾಭಾರತವನ್ನು ಬಂಗಾಳೀಭಾಷೆಗೆ ಭಾಷಾಂತರೀಕರಿಸಿದ ಸುಪ್ರಸಿದ್ಧ ಪುರುಷನು ಈ ಕಾಳೀಪ್ರಸನ್ನನೇ. ಆತನು ಆ ಪತ್ರಿಕೆಯನ್ನೊಬ್ಬ ಯೂರೋಪ್ಯನನಿಗೆ ಕೊಟ್ಟು ಕೆಲವುಕಾಲದ ತನಕ ಆತನು ಚೆನ್ನಾಗಿಯೇ ನಡೆಯಿಸಿದನು. ಆದರೆ ಕೊನೆಗೆ ಆತನು ಅದನ್ನು ಭರಿಯಿಸಲಾರದೆ ಅದರ ಹಕ್ಕನ್ನು ವಿದ್ಯಾಸಾಗರನಿಗೆ ಮಾರಿದನು. ಆತನು ಕೊಂಚಕಾಲ ನಡಿಸಿ, ಕಾರಣಾಂತರಗಳಿಂದ ತಾನು ಅದಕ್ಕೆ ಅನರ್ಹನೆಂತಲೂ, ಆಭಾರನಿರ್ವಹಣಾಸಮರ್ಥನೆಂತಲೂ, ತನ್ನ ಮನಸ್ಸು ಬಂದವನಿಗೆ ಯಾವನಿಗಾದರೂ ಅದರ ಹಕ್ಕನ್ನು ಕೊಟ್ಟು ಬಿಡಲೆಳಸಿ, ಪ್ರಕಟಿಸಲು ದೊಡ್ಡ ದೊಡ್ಡ ಶಿಫಾರಸುಗಳೊಡನೆ ಅನೇಕಮಂದಿ ದರಖಾಸ್ತುಗಳನ್ನು ಕಳುಹಿದರು. ಈತನು ಅವರಲ್ಲಿ ಗತಿಸಿದ ಶಂಭುಚಂದ್ರ ಮುಖರ್ಜಿಯುವರನ್ನು ಮೊಟ್ಟಮೊದಲು ಪತ್ರಿಕಾಸಂಪಾದಕರನ್ನಾಗಿ ಮಾಡಿದನು. ತರುವಾಯ ಕೃಷ್ಣದಾಸಪಾಲನಿಗೆ ಆ ಉದ್ಯೋಗವನ್ನು ಕೊಟ್ಟು, ಆ ಪತ್ರಿಕೆಯ ಭಾರವನ್ನೆಲ್ಲ ಆತನಿಗೆ ಬಿಟ್ಟುಕೊಟ್ಟನು. ಭಾರತದೇಶೋದ್ಧಾರಕಾಗ್ರಗಣ್ಯನೂ, ಸಕಲ ರಾಜಕೀಯ ಕಳಾವಿಶಾರದನೂ, ಆದ ನಮ್ಮ ಸುರೇಂದ್ರನಾಥ ಬೆನರ್ಜಿಯು ಇಂಗ್ಲೆಂಡಿಗೆ ಹೋಗಿ 'ಇಂಡಿಯನ್ ಸಿವಿಲ್ ಸರ್ವಿಸ್' ಪರೀಕ್ಷೆಯಲ್ಲಿ ಕೃತಕೃತ್ಯನಾದಾಗ ಆತನು ಆ ಉದ್ಯೋಗಕ್ಕೆ ನೇಮಿಸಲ್ಪಟ್ಟ ವಯೋಪರಿಮಿತಿಯನ್ನು ಮೀರಿದನೆಂಬ ನೆವದಿಂದ ಅರ್ಹನಲ್ಲವೆಂದು ಹೇಳಿಬಿಟ್ಟರು. ಆಗ ಆ ಸಂಗತಿಯನ್ನು ಕುರಿತು ಆತನ ತಂದೆಯಾದ ದುರ್ಗಾಚರಣ ಬೆನರ್ಜಿಯುವರು ವಿದ್ಯಾಸಾಗರನೊಂದಿಗೆ ಆಲೋಚಿಸಿ, ಆ ವಿಷಯದಲ್ಲಿ ಆತನ ಸಹಾಯವನ್ನು ಬಯಸಿದರು. ಆಗ ವಿದ್ಯಾಸಾಗರನು ಆ ಆತಂಕಪಡಿಸಿದವರನ್ನು ತೃಪ್ತಿಪಡಿಸಲಿಕ್ಕಾಗಿ ಸುರೇಂದ್ರನಾಥನ ಜಾತಕವನ್ನು ಇಂಗ್ಲೆಂಡಿಗೆ ಕಳುಹಿದನು. ಸುರೇಂದ್ರನಾಥನು ಸರ್ಕಾರದವರ ಉದ್ಯೋಗದಿಂದ ನಿವೃತ್ತನಾದ ತರುವಾಯ ಕೂಡ ವಿದ್ಯಾಸಾಗರನ ಸಹಾಯದಿಂದ ಮೆಟ್ರೊಪಾಲಿಟನ್ ಪ್ರತಿಷ್ಠಾಪನೆಯಲ್ಲಿ ಆಂಗ್ಲೇಯ ಕಳಾವಿದನಾಗಿ ನಿಯಮಿಸಲ್ಪಟ್ಟನು.

ಮೊಷಿಲ್ ಮಧುಸೂದನದತ್ತರವರಿಗೆ ಈತನು ಮಾಡಿದ ಅಮಿತೋಪಕಾರವನ್ನು ವಾಚಕರು ಇದುವರೆಗೇನೇ ತಿಳಿದಿರುವರಲ್ಲವೇ?

## ಶಿಥಿಲವಾಗುತ್ತಿರುವ ರಾಜಕುಟುಂಬಗಳನ್ನುದ್ಧರಿಸುವಿಕೆ.

ಈ ವಿಷಯದಲ್ಲಿ ವಿದ್ಯಾಸಾಗರನು ಮಾಡಿದ ಮಹೋಪಕಾರಗಳು ಅಗಣಿತಗಳಾಗಿದ್ದರೂ ಅವುಗಳಲ್ಲಿ ಕೆಲವನ್ನು ಮಾತ್ರವೇ ಇದರ ಕೆಳಗೆ ಉದಾಹರಿಸಲೆಳಸಿದೆವು. ೧೮೬೭ನೇ ವರುಷದಲ್ಲಿ 'ನದ್ಯಾ' ಮಹಾರಾಜಸತೀಶಚಂದ್ರಬಹದ್ದುರವರು ಸ್ವರ್ಗಸ್ಥರಾದರು. ಆತನ ಪತ್ನಿಯಾದ "ಮಹಾರಾಣೀ ಭುವನೇಶ್ವರೀ" ಎಂಬಾಕೆಯೇ ಸಂಸ್ಥಾನದ ಕಾರ್ಯನಿರ್ವಾಹಕಭಾರವನ್ನು ವಹಿಸಿಕೊಂಡಿದ್ದಳು. ಹೀಗಿರುವಲ್ಲಿ ಕೆಲವು ಕಾಲದ ತರುವಾಯ ಆ ಸಂಸ್ಥಾನವು ತುಂಬ ಸಾಲಕ್ಕೆ ಸಿಕ್ಕಿ ಶಿಥಿಲವಾಗುವುದಕ್ಕೆ ಸಿದ್ಧವಾಗಿದ್ದಿತು. ಆಗ ಅದಕ್ಕೆ ದಿವಾನರಾಗಿದ್ದ ಕಾರ್ತೀಕಚಂದ್ರರಾಯರವರು, ಆ ಸಂಸ್ಥಾನದ ಅಭಿವೃದ್ಧಿಯನ್ನಪೇಕ್ಷಿಸುವ ಕೆಲವು ದೊಡ್ಡ ಮನುಷ್ಯರು, ಸಹ ವಿದ್ಯಾಸಾಗರನ ಬಳಿಗೆ ಬಂದು ತಮ್ಮ ವಿಪತ್ತನ್ನು ತಪ್ಪಿಸಬೇಕೆಂದು ಪ್ರಾರ್ಥಿಸಲು, ಆತನು ಕೃಷ್ಣನಗರಕ್ಕೆ ಹೋಗಿ, ಆ ಸಂಸ್ಥಾನದ ಕಾರ್ಯನಿರ್ವಾಹಕತ್ವವನ್ನು ರಾಜಕುಮಾರ ಪೋಷಣಸಭೆ (ಕೋರ್ಟ್ಆಫ್‌ವಾರ್ಡ್ಸ್)ಗೆ ಕೊಡಬೇಕೆಂದು ಮಹಾರಾಣಿಯವರಿಗೆ ಸಲಹೆಕೊಟ್ಟನು. ಮಹಾರಾಣಿಯವರು ಅದೇ ಪ್ರಕಾರ ಮಾಡಲು ಮಹಾರಾಜ ಕ್ಷೀರೇಶಚಂದ್ರನು ಯುಕ್ತವಯಸ್ಕನಾಗುವ ತನಕ ಆ ಸಭೆಯವರೇ ಎಚ್ಚರದಿಂದ ಪರಿಪಾಲಿಸಿ ಆ ಸಂಸ್ಥಾನವನ್ನು ಕಾಪಾಡಿದರು.

'ಪೈಕ್‌ಪಾರಾ' ಸಂಸ್ಥಾನಾಧಿಪತಿಯಾದ "ರಾಜಪ್ರತಾಪಚಂದ್ರಸಿಂಹನು" ಮೃತನಾದ ತರುವಾಯ ಆ ಸಂಸ್ಥಾನವು ಅರಾಜಿಕವಾಗಿ ಕ್ರಮತಪ್ಪಿಹೋಗಿತ್ತು. ಮತ್ತು ತುಂಬ ಋಣಗ್ರಸ್ತವಾಗಿದ್ದಿತು. ಆಗ ಮೃತಪಟ್ಟ ರಾಜರಿಗೆ ತಾಯಿಯಾಗಿದ್ದ "ಕಾತ್ಯಾಯನೀರಾಣಿ"ಯವರು ಆ ವಿಷಯವಾಗಿ ವಿದ್ಯಾಸಾಗರನೊಂದಿಗೆ ಯೋಚಿಸಲು, ಆತನು ಇದರ ಕಾರ್ಯನಿರ್ವಾಹಕತ್ವವನ್ನು ಕೂಡ ಮೇಲೆ ಹೇಳಿದ ಸಂಘದವರಿಗೇ ಕೊಡತಕ್ಕದೆಂದು ಹೇಳಿದನು. ಮತ್ತು ಅದೇ ಸಂಗತಿಯನ್ನು ತನ್ನ ಸ್ನೇಹಿತರಾದ ದ್ವಾರಕಾನಾಥಮಿತ್ರರೊಂದಿಗೂ 'ಸರ್‌ಸಿಸಿರ್‌ಬೀಡನ್' ದೊರೆಯವರೊಂದಿಗೂ ಮಾತನಾಡಲಾಗಿ ಅವರೂ ಈತನ ಸೂಚನೆಯನ್ನೇ ಅನುಮೋದಿಸಿದರು. ವಿದ್ಯಾಸಾಗ

ರನು ಆ ಲೆಫ್ಟಿನೆಂಟ ಗವರ್ನರವರ ಅಭಿಪ್ರಾಯವನ್ನು ಆ ವೃದ್ಧಿರಾಜ್ಞಿಗೆ ತಿಳುಹಲು, ಆಕೆಯು ತನ್ನ ಮುಮ್ಮಗನಾದ ಕುಮಾರಗಿರೀಶಚಂದ್ರಸಿಂಹ ನನ್ನು ವಿದ್ಯಾಸಾಗರನ ಜತೆಯಲ್ಲಿ ಗವರ್ನರವರ ಸಂದರ್ಶನಾರ್ಥವಾಗಿ ಕಳು ಹಿದಳು. ಆಗ ಆತನು ಅವರಿಬ್ಬರನ್ನೂ ಇದಿರ್ಗೊಂಡು ಕರೆತಂದು ತುಂಬ ಗೌರವದಿಂದ ಸಮುಚಿತಾಸನಗಳಲ್ಲಿ ಕುಳ್ಳಿರಿಸಿ, ಗಿರೀಶಚಂದ್ರನನ್ನು ನೋಡಿ ಇಂತೆಂದನು. "ಕೀರ್ತಿಶೇಷರಾದ ರಾಜರಿಗೆ ಪಂಡಿತ ವಿದ್ಯಾಸಾಗರನು ನಿಜವಾದ ಪ್ರಾಣಮಿತ್ರನು. ನಿಮ್ಮ ಕುಟುಂಬದ ವಿಷಯದಲ್ಲಿ ಈತನಿಗೆ ತುಂಬ ವಿಶ್ವಾಸವಿರುವುದು. ನೀವು ಆತನನ್ನು ದೃಢವಾಗಿ ನಂಬಿದ ಪಕ್ಷದಲ್ಲಿ ನಿಮ್ಮ ಸಂಸ್ಥಾನವು ಅಭಿವೃದ್ಧಿಗೆ ಬರುವುದು." ತರುವಾಯ ಆತನು ವಿದ್ಯಾ ಸಾಗರನನ್ನು ನೋಡಿ "ಪ್ರಿಯನೇ! ಪಂಡಿತವರ್ಯನೇ ಕೀರ್ತಿಶೇಷನಾದ ನಿನ್ನ ಸ್ನೇಹಿತನಲ್ಲಿರುವ ನಿನ್ನ ಅನುರಾಗವನ್ನೆಲ್ಲ ಆತನ ಮಕ್ಕಳ ಮೇಲೆ ಪ್ರಸಾರಗೊಳಿಸತಕ್ಕದ್ದು. ನಿಮ್ಮ ಕಣ್ಣೆದುರಿಗೆ ಅವರು ದುರ್ದಶೆಗೆ ಬಂದರೆ ಆ ನಿಂದೆಗೆ ಗುರಿಯಾರೆಂಬುದನ್ನು ನಾನು ಊಹಿಸಲಾರೆನು." ತರುವಾಯ ರೆವಿನ್ಯುಬೋರ್ಡಿನವರಿಗೆ ಆ ಸಂಸ್ಥಾನದ ನಿರ್ವಹಣಭಾರವನ್ನು ತೆಗೆದು ಕೊಳ್ಳುವುದೆಂದು ಅರ್ಜಿ ಕಳುಹಿದರು. ಆದರೆ ಅವರು ಅದನ್ನು ತಿರಸ್ಕರಿಸಿ ಬಿಟ್ಟರು. ವಿದ್ಯಾಸಾಗರನು ತನ್ನ ಇಬ್ಬರು ಸ್ನೇಹಿತರೊಂದಿಗೆ ಆಲೋಚಿಸಿ ಮತ್ತೊಂದು ಮನವೆಯನ್ನು ಕೊಡಿಸಿದನು. ಅದೂ ತಳ್ಳಿ ಹಾಕಲ್ಪಟ್ಟಿತು. ಮರಳಿ ವಿದ್ಯಾಸಾಗರನು ದ್ವಾರಕಾನಾಥಮಿತ್ರರೊಡನೆ ಆಲೋಚಿಸಿ, ೨೪ ಪರೆಗಣೆಗಳ ಜಿಲ್ಲಾ ನ್ಯಾಯಾಧಿಪತಿಯವರಿಗೆ ಕುಮಾರಗಿರೀಶಚಂದ್ರಸಿಂಹ ನಿಂದ ಮತ್ತೊಂದು ಅರ್ಜಿಯನ್ನು ಕೊಡಿಸಿದನು. ಆ ನ್ಯಾಯಾಧಿಪತಿಯು ಅದನ್ನು ಅಂಗೀಕರಿಸಿ, ಅನುಕೂಲವಾಗಿ ತೀರ್ಮಾನಕೊಟ್ಟನು. ಆದರೆ ಕಲೆ ಕ್ಟರವರು ಅದನ್ನು ಲಕ್ಷ್ಯಮಾಡಲಿಲ್ಲ. ವಿದ್ಯಾಸಾಗರನು ಅಷ್ಟರಿಂದಲೇ ನಿರಾಶೆ ಹೊಂದದೆ, ಜಿಲ್ಲಾನ್ಯಾಯಾಧಿಪತಿಯವರಿಗೆ ಮತ್ತೊಂದು ದರಖಾಸ್ತು ಕೊಡಿ ಸಲು, ಆತನು ತನ್ನ ಆಜ್ಞೆಯನ್ನು ನಿರಾಕರಿಸುವುದಕ್ಕೆ ಕಾರಣವನ್ನು ತಿಳಿಸ ಬೇಕೆಂದು ಕಲೆಕ್ಟರನ್ನು ಕೇಳಿದನು. ಅಷ್ಟರಲ್ಲಿ ಆತನು ಹೆದರಿಕೊಂಡು, ಕಮಿಷನರವರಿಗೆ ತಿಳಿಸಲು ಆತನು ಅನುಕೂಲವಾಗಿಯೇ ಅಪ್ಪಣೆಕೊ ಟ್ಟನು. ಹೀಗೆ ವಿದ್ಯಾಸಾಗರನು ಕಲೆಕ್ಟರವರೊಂದಿಗೆ ಹೋರಾಡುತ್ತಿರುವಾಗ 'ನೈಕಷ್ಪಿರಾ' ಸಂಸ್ಥಾನದ ಕಂದಾಯವೆಲ್ಲವೂ ಬಾಕಿಬಿದ್ದು ಹೋಯಿತು,

ಆಗಲಾ ಕಲೆಕ್ಟರವರು ಕಂದಾಯವನ್ನು ವಸೂಲ್ಮಾಡಲಿಕ್ಕಾಗದೆ ಹೋಗಲು ವಿದ್ಯಾಸಾಗರನು ಆ ಸಂಸ್ಥಾನವನ್ನು ರಕ್ಷಿಸಬೇಕೆಂದು ದಾರ್ಜಿಲಿಂಗ್‌ಪಟ್ಟಣದಲ್ಲಿ ಇದ್ದ ಬೀರ್ಡ ದೊರೆಯವರಿಗೆ ಬರೆದನು. ಆಗಲಾತನು ಈ ವ್ಯವಹಾರವನ್ನು ಕ್ರಮಕ್ಕೆ ತರಲಿಕ್ಕೆ ವಿದ್ಯಾಸಾಗರನನ್ನೇ ಪ್ರಾರ್ಥಿಸಿದನು. ಈ ಪ್ರಯತ್ನದಲ್ಲಿ ವಿದ್ಯಾಸಾಗರನು ಎರಡು ಸಾವಿರ ರೂಪಾಯಿಗಳ ಸ್ವಂತ ದ್ರವ್ಯವನ್ನು ವೆಚ್ಚಮಾಡಿ ಹಲವು ಕಷ್ಟಗಳನ್ನು ಪಟ್ಟು ಕೊಟ್ಟಕೊನೆಗೆ ಕೃತಕೃತ್ಯನಾದನು.

ವಿದ್ಯಾಸಾಗರನ ಜೀವಿತದಲ್ಲೆಲ್ಲ ಈ ಅಧ್ಯಾಯವೇ ಬಹು ಮುಖ್ಯವಾದುದು. ಈ ಕಲಿಯುಗ ದಾನಕರ್ಣನ ಧರ್ಮಕಾರ್ಯಗಳನ್ನು ಲೆಕ್ಕಮಾಡಲು ಸಾಧ್ಯವಲ್ಲ. ಆತನಿಗೆ ಈ ಔದಾರ್ಯವು ಸಹಜವಾದುದೇ ಹೊರತು ಪರರನ್ನು ನೋಡಿ ಕಲ್ತುಕೊಂಡುದಲ್ಲ. ಆದುದರಿಂದಲೇ ಅನೇಕ ಮಂದಿ ಕುರುಡರಿಗೂ ಕುಂಟರಿಗೂ ಆತನು ಅನೇಕ ವೇಳೆ ಸಂತರ್ಪಣೆಗಳನ್ನು ಮಾಡಿಸುತ್ತಿದ್ದುದರಿಂದ ಅವರು ವಿಶೇಷವಾಗಿ ಆತನನ್ನು ದಯಾಸಾಗರನೆಂತಲೇ ಕರೆಯುತ್ತಿದ್ದರು. ಆತನ ದಾನಶೀಲತ್ವಾದಿ ಸದ್ಗುಣಗಳೆಲ್ಲವೂ ಆ ಮಹನೀಯನ ಪವಿತ್ರ ಚರಿತ್ರವನ್ನೋದಿದವರಿಗೇ ಗೋಚರವಾಗಬಲ್ಲವು. ಇಲ್ಲಿ ಉದಾಹರಿಸಲ್ಪಟ್ಟವುಗಳು ಆತನು ಮಾಡಿದ ಮಹೋಪಕಾರಗಳಲ್ಲಿ ಬಹು ಸ್ವಲ್ಪವಾದುವುಗಳಾಗಿವೆ ಇವಕ್ಕಿಂತ ಅನೇಕ ಪಾಲು ಹೆಚ್ಚಾಗಿಯೇ ಆತನು ಸತ್ಕಾರ್ಯಗಳನ್ನು ಮಾಡಿರುವನು. ಆತನ ಜೀವಿತವೆಲ್ಲವೂ ಲೋಕೋಪಕಾರದಿಂದಲೇ ತುಂಬಿದೆ.

# ಆರನೆಯ ಅಧ್ಯಾಯ.

## ಜೀವಿತಾಂತವೂ, ಸುಗುಣಶೀಲಗಳೂ.

ಈ ಅಧ್ಯಾಯದಲ್ಲಿ ನಮ್ಮ ಕಥಾನಾಯಕನಿಗೆ ಸಂಭವಿಸಿದ ವಿವಿಧ ದುಃಖಗಳನ್ನು ಗಮನಿಸಿ, ತುದಿಗೆ ಆ ಮಹನೀಯನನ್ನು ಕಳೆದುಕೊಂಡ ವಿಷಯವು ತಟಸ್ಥವಾದಾಗ ನಮ್ಮ ಭಾರತಮಾತೆಯ ಮಕ್ಕಳೆಲ್ಲರೂ ದುಃಖಸಮುದ್ರದಲ್ಲಿ ಮುಳುಗಬೇಕಾಗಿದೆ. ಆದರೆ ನಮ್ಮ ಕಥಾನಾಯಕನು ಮೃತಜೀವಿಗಳಲ್ಲಿ ಪರಿಗಣಿಸಲ್ಪಡಲು ಅರ್ಹನಲ್ಲವಾದುದರಿಂದ ನಾವು ಚಿಂತೆ

ಯನ್ನು ತಗ್ಗಿಸಿಕೊಂಡು, ಈ ಮಹಸೀಯನನ್ನೇ ನಮ್ಮೆಲ್ಲರಿಗೂ ಉದಾಹರಣೆಯಾಗಿಯೂ, ಆತನ ಉತ್ಕೃಷ್ಟ ಗುಣಗಳನ್ನೇ ಗುಣಪಾಠಗಳನ್ನಾಗಿಯೂ ನಂಬಿ ಭಾರತಮಾತೆಯ ಮುಂದಿನ ಅಭಿವೃದ್ಧಿಗಾಗಿ ನಾವು ಶ್ರಮಪಡತಕ್ಕದ್ದು.

೧೮೬೫ನೆಯ ಸಂವತ್ಸರದ ಕೊನೆಯಲ್ಲಿ ವಿದ್ಯಾಸಾಗರನ ತಂದೆ ಠಾಕೂರ್ದಾಸವಂದ್ಯೋಪಾಧ್ಯಾಯನು ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ಕಾಶೀ ಪಟ್ಟಣಕ್ಕೆ ಹೋಗಿ ಅಲ್ಲಿ ದೇವರ ಧ್ಯಾನದಲ್ಲಿ ಕಾಲವನ್ನು ಕಳೆಯುತ್ತಿದ್ದನು. ಇತ್ತ ವೀರಸಿಂಹಗ್ರಾಮದಲ್ಲಿ ೧೮೬೯ ನೆಯ ವರುಷದ ಮಾರ್ಚಿ ತಿಂಗಳಲ್ಲಿ ವಿದ್ಯಾಸಾಗರನ ಮನೆಯು ಸುಟ್ಟುಹೋಯಿತು, ಆ ವೇಳೆಯಲ್ಲಿ ವಿದ್ಯಾಸಾಗರನ ತಾಯಿಯೂ, ಆತನ ಎರಡನೆಯ ತಮ್ಮನೂ ಗಾಢನಿದ್ರೆಯಲ್ಲಿದ್ದರು. ಆದರೂ ಅದೃಷ್ಟವಶದಿಂದ ಅವರಲ್ಲಿ ಯಾರಿಗೂ ಅಪಾಯವಾಗಲಿಲ್ಲ. ಈ ಸಂಗತಿಯು ಕಲ್ಕತ್ತೆಯಲ್ಲಿದ್ದ ವಿದ್ಯಾಸಾಗರನಿಗೆ ತಿಳಿದಕೂಡಲೆ ಅಲ್ಲಿಗೆ ಹೋಗಿ, ಹೊಸದಾಗಿ ಮನೆ ಕಟ್ಟಿಸಲಿಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿಸಿದನು. ತರುವಾಯ ತನ್ನ ತಾಯಿಯನ್ನು ಕಲ್ಕತ್ತೆಗೆ ಕರೆದುಕೊಂಡು ಹೋಗಬೇಕೆಂದು ಪ್ರಯತ್ನಿಸಲು, ಆಕೆಯು ತಾನು ಅದುವರೆಗೂ ಪೋಷಿಸುತ್ತಲಿರುವ ಬಡ ವಿದ್ಯಾರ್ಥಿಗಳನ್ನೂ, ಕ್ಷಾಮಪೀಡಿತರನ್ನೂ ಕಾಪಾಡುವವರು ಇಲ್ಲದ್ದರಿಂದ ಅಲ್ಲಿಗೆ ಹೋಗಲು ಒಡಂಬಡದೆ ಇದ್ದಳು. ಆಗ ವಿದ್ಯಾಸಾಗರನು ಆಕೆಯ ಮಗನೇ ಆದುದರಿಂದ ಅವರೆಲ್ಲರಿಗೂ ತಕ್ಕ ವಸತಿಗಳನ್ನೇರ್ಪಡಿಸಿಕೊಟ್ಟನು. ಈ ಸಮಯದಲ್ಲಿ ವಾಚಕರಿಗೆ “ಹಸುವು ಹೊಲದಲ್ಲಿ ಮೇದರೆ ಕರುವು ಬದುವಿನಲ್ಲಿ ಮೇಯುವುದೇ?” ಎಂಬ ಗಾದೆಯು ನೆನಪಿಗೆ ಬಾರದೇ ಇರದು. ಆತನು ಹೀಗೆ ಅಲ್ಲಿ ಮರಳಿ ಮನೆಕಟ್ಟಿಕೊಂಡರೂ ಇನ್ನು ಇತರ ಕಾರಣಗಳಿಂದ ಆ ಸ್ವಗ್ರಾಮವನ್ನು ಬಿಟ್ಟು ಬೇರೊಂದು ಕಡೆ ವಾಸಮಾಡಬೇಕಾಗಿ ಬಂದರು. ಅನೇಕ ಜನ ಬಂಧುಮಿತ್ರರು ಮೃತಪಟ್ಟುದರಿಂದುಂಟಾದ ದುಃಖದಿಂದಲೂ, ಲೋಕೋಪಕಾರಕ್ಕಾಗಿ ಪಟ್ಟ ಆ ಮೃತವಾದ ದೇಹಪ್ರಯಾಸದಿಂದಲೂ, ಸಹಜವಾದ ವಾರ್ಧಕ್ಯದಿಂದಲೂ, ವಿದ್ಯಾಸಾಗರನ ಆರೋಗ್ಯವು ತಗ್ಗಿತು. ಕೆಲವು ಕಾಲ ಕಳೆದಮೇಲೆ ಆತನು ಸಂಥಾಲ ಪರಗಣೆಗಳಲ್ಲಿನ ಮಧುಪುರಕ್ಕೆ ಹತ್ತಿರವಿರುವ “ಕರ್ಮತಾರೆ” ಎಂಬ ಗ್ರಾಮದಲ್ಲಿ ವಾಸಮಾಡುತ್ತಿದ್ದನು. ಈ ಪ್ರದೇಶವು ಆರೋಗ್ಯಕ್ಕೆ ಅನುಕೂಲವಾದ ಶೀತೋಷ್ಣಸ್ಥಿತಿಗೂ, ಯೋಗ್ಯವಾದ ಉದಕವಾತಾವರಣ

ಗಳಿಗೂ ಹೆಸರುಗೊಂಡಿದೆ. ಇಲ್ಲಿಯೇ ವಿದ್ಯಾಸಾಗರನು ಆಗಾಗ್ಗೆ ಏಕಾಂತ ದಲ್ಲಿ ವಾಸಮಾಡಿಕೊಂಡಿದ್ದಾಗ ಆತನು ಅಲ್ಲಿರುವ ಸಂಥಾಲಜಾತಿಯ ದರಿದ್ರರಿಗೂ, ಬಡವರಾದ ಮಹಮ್ಮದೀಯರಿಗೂ ತುಂಬಾ ಉಪಕಾರ ಮಾಡುತ್ತಿದ್ದನೆಂದು ಮೊದಲೇ ತಿಳಿಸಿರುವೆವು.

೧೮೭೦ ನೆಯ ಇಸವಿ ಅಗಸ್ಟು ತಿಂಗಳಲ್ಲಿ ವಿದ್ಯಾಸಾಗರನ ತಾಯಿ ಭಗವತೀದೇವಿಯು ತೀರ್ಥಯಾತ್ರೆ ಮಾಡಬೇಕೆಂದು ಹೊರಟಳು. ಆ ಸಾಧ್ವಿಯು ಮೊಟ್ಟಮೊದಲು ಕಾಶೀಪಟ್ಟಣದಲ್ಲಿ ವಿಶ್ವೇಶ್ವರನನ್ನು ಸೇವಿಸುತ್ತಲಿರುವ ತನ್ನ ಪತಿಯ ಪಾದಕಮಲಗಳನ್ನು ಸಂದರ್ಶಿಸಲಿಕ್ಕೆ ಹೋದಳು. ತರುವಾಯ ಅಲ್ಲಿಂದ ದೇಶದಲ್ಲಿಯ ವಿವಿಧ ಪ್ರದೇಶಗಳಲ್ಲಿರುವ ಪುಣ್ಯತೀರ್ಥಗಳನ್ನೆಲ್ಲ ಸೇವಿಸಿಕೊಂಡು ಮರಳಿ ಕಾಶೀ ಪಟ್ಟಣಕ್ಕೆ ಬಂದಳು. ಆಗ ಆಕೆಯು ತನ್ನ ಪತಿಯನ್ನು ವೀರಸಿಂಹಗ್ರಾಮಕ್ಕೆ ಬನ್ನಿರೆಂದು ಪ್ರಾರ್ಥಿಸಲು ಆತನು ಆಕೆಯನ್ನು ತನ್ನ ಹತ್ತಿರದಲ್ಲಿಯೇ ಇರಬೇಕೆಂದು ಹೇಳಿದನು. ಅದಕ್ಕೆ ಆ ದಯಾಸ್ವರೂಪಿಣಿಯು ಇಂತೆಂದಳು. “ ನಾವು ಈಗ ಮನೆಗೆ ಹೋಗೋಣ. ನೀವು ಇನ್ನು ಕೆಲವು ಕಾಲ ಜೀವಿಸುವಿರಿ. ನಾನು ಹೋಗದೆ ಇದ್ದರೆ ಬಡವರಾದ ನೆರೆಹೊರೆಯವರು ತುಂಬ ಚಿಂತಿಸುವರು. ವಿಪನ್ನರಿಗೆ ಅನ್ನವಸ್ತ್ರಗಳನ್ನಿತ್ತು ಆದರಿಸಿ ಸೌಖ್ಯಗೊಳಿಸುವದೇ ನನ್ನ ಪ್ರಥಮ ಕರ್ತವ್ಯವು. ಹಾಗೆ ಮಾಡಲಿಕ್ಕೆ ನಾನು ಈಗಲೇ ಹೋಗಬೇಕಾಗಿದೆ. ಆದರೆ ನಾನು ಎಲ್ಲಿದ್ದರೂ ಸಕಾಲದಲ್ಲಿ ಇಲ್ಲಿಗೆ ಬಂದು ನಿಮ್ಮ ಕಣ್ಣಿನ ಮುಂದೆಯೇ ಇಹಲೋಕವನ್ನು ಳಿಯುವೆನು. ಇದು ನಿಶ್ಚಯವೆಂದು ನಂಬಿರಿ. ” ಎಂದು ಹೇಳಿ ಆಕೆಯು ವೀರಸಿಂಹಗ್ರಾಮಕ್ಕೆ ಹೋದಳು. ೧೮೭೧ ನೆಯ ಸಂವತ್ಸರದ ಫೆಬ್ರುವರಿ ತಿಂಗಳಲ್ಲಿ ವಿದ್ಯಾಸಾಗರನ ತಂದೆಗೆ ತುಂಬಾ ಆಲಸ್ಯವಾಗಿದೆಯೆಂದು ತಿಳಿದು ಅವರೆಲ್ಲರೂ ಕಾಶಿಗೆ ಹೋದರು ಕೆಲವು ದಿನಗಳಲ್ಲಿಯೇ ಆ ವ್ಯಾಧಿಯು ಸುದ.ರಿ ಆರೋಗ್ಯವಾಯಿತು. ಭಗವತೀದೇವಿಯೂ ಆಮೇಲೆ ಎರಡು ತಿಂಗಳತನಕ ತನ್ನ ಪತಿಗೆ ಉಪಚಾರ ಮಾಡುತ್ತಾ ಇದ್ದಳು. ಹೀಗಿರುವಲ್ಲಿ ಒಂದುದಿನ ಹಠಾತ್ತಾಗಿ ಆಕೆಯು ಕಾಲರಾ ಉಪದ್ರವದಿಂದ ಅನಾಯಾಸ ಮರಣವನ್ನು ಹೊಂದಿದಳು. ಆಹಾ! ಆ ಮಹಾಮಹಿಮಳು ಊಹಿಸಿದಂತೆಯೇ ನೆರವೇರಿತಲ್ಲವೆ? ಮಹನೀಯರಾದವರಿಗೆ ಭವಿಷದ್ವಿಷಯಗಳು ಹೀಗೆಯೇ ತಿಳಿಯಬಹುದೆಂದು ಕಾಣುತ್ತದೆ. ಅಪಾರವಾದ ಮಾತೃಭಕ್ತಿಯನ್ನುಳ್ಳ ವಿದ್ಯಾಸಾಗ

ರನು ಈ ದುಃಖವಾರ್ತೆಯನ್ನು ಕೇಳಿದಾಗ ಆತನ ಹೃದಯವು ಎಷ್ಟು ತಲ್ಲಣ ಹೊಂದಿರಬಹುದು? ಆತನ ಮಾತೃಭಕ್ತಿಯನ್ನು ತಿಳಿಸುವ ನಿದರ್ಶನಗಳು ಮೊದಲೇ ಹೇಳಲ್ಪಟ್ಟಿವೆ. ಅಯ್ಯೋ! ಮಾತೃದೇವತೆಯನ್ನು ಕಳೆದುಕೊಂಡಾಗ ಆತನು ಹೊಂದಿದ ದುಃಖವನ್ನು ಇಷ್ಟಿಷ್ಟೆಂದು ಹೇಳತೀರದು.

ಸುಮಾರು ೧೮೬೨ ನೆಯ ವರ್ಷದಲ್ಲಿ ವಿದ್ಯಾಸಾಗರನಿಗೂ, ಆತನ ಏಕಪುತ್ರನಾದ ನಾರಾಯಣಚಂದ್ರನಿಗೂ, ಮನಃಕಷಾಯ ಉಂಟಾಯಿತು. ಮಗನು ತನ್ನ ಕರ್ತವ್ಯಕರ್ಮವನ್ನು ಕ್ರಮವಾಗಿ ನೆರವೇರಿಸದೆ, ಇತರರ ಯೋಚನೆಯನ್ನನುಸರಿಸಿ ನಡೆಯುತ್ತಿದ್ದುದೇ ಇವರ ಕಲಹಕ್ಕೆ ಮುಖ್ಯ ಕಾರಣವಾಗಿ ತೋರುವುದು. ಇದಕ್ಕಿಂತಲೂ ದೊಡ್ಡ ಹೇತುಗಳು ಯಾವುವಿದ್ದವೋ ಅವು ದೇವರಿಗೆ ಹೊರತು ಮತ್ತೆ ಯಾರಿಗೂ ಗೊತ್ತಿಲ್ಲ. ಅವರವರ ಪರಸ್ಪರ ದ್ವೇಷವು ಕ್ರಮಕ್ರಮವಾಗಿ ಅಭಿವೃದ್ಧಿಹೊಂದಿ ಸ್ವಭಾವಕ್ಕೆ ಭಿನ್ನವಾಗಿರುವಲ್ಲಿ ದಯಾಮಯನಾದ ವಿದ್ಯಾಸಾಗರನು ತನ್ನ ಮಗನನ್ನು ವಿಸರ್ಜಿಸುವ ಸಂಭವವುಂಟಾಯಿತು. ಆ ವೇಳೆಯಲ್ಲಿ ನಾರಾಯಣಚಂದ್ರನ ವಿರೋಧಿಗಳು ಆತನ ಮೇಲೆ ಚಾಡಿಗಳನ್ನು ಹೇಳಿ, ಅವನ ತಂದೆಯ ಕೋಪಾಗ್ನಿಗೆ ತುಪ್ಪವನ್ನೆರೆದರು. ನಾರಾಯಣಚಂದ್ರನು ಸ್ವಯಂ ಕೃಷಿಯಿಂದಲೇ ಭೀಮಾ ಕಂಪನಿಗಳ ಸಬ್‌ರಜಿಸ್ಟ್ರಾರ ಆದನು. ಆಗ ಆತನು ತನ್ನ ತಂದೆಯಂತೆಯೇ ಪೌರುಷವಂತನಾಗಿಯೂ, ಆತ್ಮವಿಶ್ವಾಸವುಳ್ಳವನಾಗಿಯೂ ಇದ್ದನು. ತಂದೆ ಮಕ್ಕಳಿಬ್ಬರೂ ಒಂದುಕಡೆ ಸೇರಿದಾಗಲೂ ಅವರು ಒಬ್ಬರೊಂದಿಗೆ ಒಬ್ಬರು ಮಾತನಾಡದೆ ಇದ್ದರು. ನಾರಾಯಣಚಂದ್ರನ ತಾಯಿ ಇದನ್ನು ಕಂಡು ತನ್ನ ಮಗನಮೇಲಿನ ಕೋಪವನ್ನು ಬಿಡಬೇಕೆಂದು ವಿದ್ಯಾಸಾಗರನನ್ನು ಎಷ್ಟು ಬಗೆಗಳಿಂದ ಪ್ರಾರ್ಥಿಸಿದರೂ ಆತನು ಕೇಳದೆ ಹೋದನು. ಕೆಲವು ಕಾಲಿನಮೇಲೆ ಈ ದ್ವೇಷವು ಹೆಸರಿಲ್ಲದೆ ಹೋಯಿತು.

೧೮೬೬ ನೆಯ ಸಂವತ್ಸರದಲ್ಲಿ ವಿದ್ಯಾಸಾಗರನ ತಂದೆಯು ಆತನಿಗೆ ಒಂದು ಪತ್ರವನ್ನು ಬರೆದರು, ಅದರ ಪ್ರತಿಯನ್ನು ಇಲ್ಲಿ ಕೊಟ್ಟಿರುವೆವು.

"ಚಿರಂಜೀವಿಕುಮಾರನಿಗೆ, ಅನೇಕ ಆಶೀರ್ವಾದಗಳು:—

ನನಗೆ ಈಗ ಎಂಭತ್ತುಮೂರು ವರುಷಗಳ ವಯಸ್ಸಾಗಿದೆ, ಈ ಮುಪ್ಪಿನಲ್ಲಿ ನನಗೆ ಸಾಮಾನ್ಯವಾಗಿ ಬುದ್ಧಿಸ್ಥೈರ್ಯವು ತಪ್ಪಿ ಹೋಗುತ್ತದೆ. ನನ್ನ ಮಕ್ಕಳಲ್ಲಿ ನೀನೇ ಹಿರಿಯನು. ಇಲ್ಲಿ ನನ್ನ ಸಂರಕ್ಷಣಾದಿಗಳಿಗೆ

ಹಿಡಿಯುವ ವೆಚ್ಚವನ್ನೆಲ್ಲ ನೀನೇ ಭರಿಸುತ್ತಲಿದ್ದೀಯೆ. ಈಗ ನಿನ್ನನ್ನು ನೋಡಬೇಕೆಂಬ ಅಪೇಕ್ಷೆ ನನಗೆ ತುಂಬಾ ಉಂಟಾಗಿದೆ. ಆದುದರಿಂದ ನಿನ್ನ ಆರೋಗ್ಯವು ಚೆನ್ನಾಗಿದ್ದಲ್ಲಿ ಒಡನೆಯೇ ಹೊರಟು ಬರಬೇಕೆಂದು ಕೋರುತ್ತೇನೆ. ಹೀಗೆ ನಿನ್ನ ಶ್ರೇಯೋಭಿಲಾಷಿ. "

ಠಾಕೂರ್ದಾಸ ದೇವಶರ್ಮ "

ಈ ಲೇಖನವನ್ನು ನೋಡಿದ ಕೂಡಲೇ ವಿದ್ಯಾಸಾಗರನು ಕಾಶಿಗೆ ಹೋಗಿ, ತನ್ನ ತಂದೆಯನ್ನು ನೋಡಿ, ಅಲ್ಲಿ ಕೆಲವು ದಿನಗಳಿದ್ದು ಕಲ್ಕತ್ತೆಗೆ ಮರಳಿ ಬಂದನು. ಆದರೆ ಆತನು ಪುನಃ ಅಪಾಯಸ್ಥಿತಿಯಲ್ಲಿರುವನೆಂದು ವರ್ತಮಾನ ಬಂದುದರಿಂದ ಮಾರ್ಚಿ ತಿಂಗಳಲ್ಲಿ ಕುಟುಂಬಸಮೇತವಾಗಿ ಆತನು ಕಾಶೀಪಟ್ಟಣಕ್ಕೆ ಹೋದನು. ಆ ವೃದ್ಧನು ಎಪ್ರೇಲ್ ೧೧ನೇ ತಾರೀಖಿನಲ್ಲಿ ಇಹಲೋಕವನ್ನು ಬಿಟ್ಟನು. ಆತನ ಬಂಧುಗಳೆಲ್ಲರೂ ಮರಣಶೋಕಾನಲದಗ್ಧರಾಗಿದ್ದರು. ಆಗ ವಿದ್ಯಾಸಾಗರನು ವಿಚಾರಸಾಗರದಲ್ಲಿ ಈಜಾಡುತ್ತಿದ್ದನು. ಆತನು ತನ್ನ ತಂದೆಯ ಮೃತಕಳೇಬರವನ್ನು ಆತನ ಕೋರಿಕೆಯಂತೆ ಗಂಗಾತೀರದಲ್ಲಿರುವ ಮಣಿಕರ್ಣಿಕಾ ಘಟ್ಟಕ್ಕೆ ತೆಗೆದುಕೊಂಡು ಹೋಗಿ, ಯಥಾವಿಧಿಯಾಗಿ ದಹನತರ್ಪಣಾದಿ ಅಪರಕ್ರಿಯೆಗಳನ್ನು ಮಾಡಿಸಿದನು. ಠಾಕೂರದಾಸನು ತುಂಬ ಭಯಭಕ್ತಿಗಳನ್ನುಳ್ಳವನು. ಆತನ ಮರ್ಯಾದೆ, ಸತ್ಯಸಂಧತೆ, ಕಾರ್ಯನಿಶ್ಚಲತೆ, ನಿಗರ್ವಿತೆ, ಮುಂತಾದವುಗಳೆಲ್ಲವೂ ಆತನ ಮಗನಿಗೂ ಅನುಸರಿಸಿ ಬಂದುವು. ಆತನು ಎಷ್ಟು ಬಡತನವನ್ನನುಭವಿಸುತ್ತಿದ್ದರೂ ತನ್ನ ಮಗನಿಗೆ ವಿದ್ಯಾಬುದ್ಧಿಗಳನ್ನು ಕಲಿಸುವುದೇ ತನ್ನ ಕರ್ತವ್ಯವಾಗಿ ತಿಳಿದಿದ್ದನು. ಈತನೇ ಅಲ್ಲವೇ ನಿಜವಾದ ತಂದೆ! ಪ್ರತಿಯೊಬ್ಬ ತಂದೆಯೂ ತನ್ನ ಮಕ್ಕಳಲ್ಲಿ ಈ ವಿಧವಾಗಿಯೇ ವರ್ತಿಸತಕ್ಕದ್ದು. ಈ ಸಂದರ್ಭದಲ್ಲಿ ವಿದ್ಯಾಸಾಗರನಿಗೆ ತಾಯಿತಂದೆಗಳಲ್ಲಿ ಇದ್ದ ಭಕ್ತಿಯನ್ನು ತಿಳಿಸುವ ಕಥೆಯೊಂದುಂಟು. ಆತನ ತಾಯಿ ಬದುಕಿರುವಾಗ ಒಂದುವೇಳೆ ಕಾಶಿಯಲ್ಲಿರುವ ಬ್ರಾಹ್ಮಣೋತ್ತಮರಲ್ಲಿ ಕೆಲವರು ಆತನನ್ನು ಕುರಿತು "ನೀನು ವಿಶ್ವೇಶ್ವರನನ್ನು ದೈವವಾಗಿ ನಂಬುವೆಯಾ?" ಎಂದು ಪ್ರಶ್ನೆಮಾಡಿದರು. ಅದಕ್ಕಾತನು ನಿಮ್ಮ ವಿಶ್ವೇಶ್ವರನಲ್ಲಿ ನನಗೆ ನಂಬುಗೆ ಇಲ್ಲವೆಂದನು. ಆಗಲಾಬ್ರಾಹ್ಮಣಬ್ರುವರು ಕೋಪೋದ್ದೀಪಿತರಾಗಿ "ಹಾಗಾದರೆ ನೀನು ಯಾರನ್ನು ನಂಬಿರುವೆ?" ಎಂದು ಮರಳಿ ಕೇಳಿದರು. ಅದಕ್ಕಾ

ತನು "ನನ್ನ ತಂದೆಯೇ ನನಗೆ ವಿಶ್ವೇಶ್ವರನು; ತನ್ನ ತಾಯಿಯೇ ನನಗೆ ಅನ್ನಪೂರ್ಣೆ, ಅವರಿಬ್ಬರೂ ಇಲ್ಲಿನ ಶರೀರರಾಗಿ ಇರುವಲ್ಲಿ ನಾನು ಇತರರನ್ನೇಕೆ ನಂಬಬೇಕು?" ಎಂದು ಪ್ರತ್ಯುತ್ತರಕೊಡಲು ಅವರೆಲ್ಲರೂ ಆಶ್ಚರ್ಯಪಟ್ಟರು. ನಮ್ಮ ವಿದ್ಯಾಸಾಗರನಿಗೆ ತಾಯಿತಂದೆಗಳಲ್ಲಿ ಎಷ್ಟುಮಟ್ಟಿಗೆ ಭಕ್ತಿ ಇದ್ದಿತೋ ಇದನ್ನು ನೋಡಿದಿರಾ?

ವಿದ್ಯಾಸಾಗರನು ಸ್ಥಾಪಿಸಿದ ಮೆಟ್ರೊಪಾಲಿಟನ್ ಪ್ರತಿಷ್ಠಾಪನೆಯು ತುಂಬ ಔನ್ನತ್ಯದಶೆಗೆ ಬಂದುದರಿಂದ ಸರಕಾರದವರು ಆತನನ್ನು ಬಹಳವಾಗಿ ಹೊಗಳಿದರು. ೧೮೮೦ ನೆಯ ವರುಷದಲ್ಲಿ ಸರಕಾರದವರು ಆತನಿಗೆ ಸಿ, ಐ, ಇ (C, I, E) ಎಂಬ ಬಿರುದನ್ನು ಕೊಟ್ಟರು. ಆತನು ಯಾವಾಗಲೂ ಸರಕಾರದವರಿಗಾಗಲಿ, ಮತ್ತುಳಿದವರಿಗಾಗಲಿ ಮುಖಪ್ರೀತಿಯಾಗಿ ಪ್ರವರ್ತಿಸತಕ್ಕವನಲ್ಲವಾದುದರಿಂದ ಬಿರುದುಗಳನ್ನು ಆಶ್ರಯಿಸಲಿಕ್ಕೆ ಅಪೇಕ್ಷಿಸನು. ಆತನು ತುಂಬ ಬಲವಂತ ಮಾಡಿದ್ದರಿಂದ ಈ ಬಿರುದನ್ನು ಅಂಗೀಕರಿಸಿದನು.

೧೮೮೮ ನೆಯ ಸಂವತ್ಸರದ ಅಗಸ್ಟು ೧೩ ರಲ್ಲಿ ವಿದ್ಯಾಸಾಗರನ ಪ್ರಿಯಭಾರ್ಯೆಯಾದ ದೀನಮಾಯಾದೇವಿಯು ಸ್ವರ್ಗಸ್ಥಳಾದಳು. ಈ ದುಃಖವಾರ್ತೆಯನ್ನು ಕೇಳಿದ್ದರಿಂದ ವಿದ್ಯಾಸಾಗರನ ಹೃದಯವು ಒಡೆದು ಹೋಯಿತು. ಆ ಸಾಧ್ವೀಮಣಿಯು ಕೆಲವು ಕಾಲದಿಂದ ತುಂಬ ಉಪದ್ರವಕರವಾದ ಅತಿಸಾರ ರೋಗದಿಂದ ಬಾಧೆಪಡುತ್ತಿದ್ದಳು. ಆಕೆಯ ಹಿರಿಯಮಗಳಾದ ಹೇಮಲತಾದೇವಿಯು ಆಕೆಯ ಅವಸಾನಕಾಲಿನ ತನಕ ಹತ್ತಿರವೇ ಇದ್ದು, ಅಗತ್ಯವಾದ ಉಪಚಾರಗಳನ್ನು ಮಾಡುತ್ತಿದ್ದಳು. ದೀನಮಾಯಾದೇವಿಗೆ ಮರಣಕಾಲವು ಸನ್ನಿಹಿತವಾದಾಗ ತನ್ನ ಪತಿಯನ್ನು ಹತ್ತಿರ ಕರೆದು ತನ್ನ ಮಗನ ತಪ್ಪಿತಗಳನ್ನು ಕ್ಷಮಿಸಬೇಕೆಂಬುದೇ ತನ್ನ ಕೊನೆಯ ಪ್ರಾರ್ಥನೆಯೆಂದು ಹೇಳಲು ಅದಕ್ಕಾತನು ಸಮ್ಮತಿಸಿದನು. ಆ ಮಾತು ಕಿವಿಯಲ್ಲಿ ಬಿದ್ದ ಒಡನೆಯೇ ಆಕೆಯು ಪ್ರಾಣಬಿಟ್ಟಳು. ಒಂದರ ಹಿಂದೆ ಒಂದಾಗಿ ಸಂಭವಿಸಿದ ಇಂತಹ ಬಂಧುಮಿತ್ರರ ಮರಣದಿಂದ ಉಂಟಾದ ಶೋಕಾಗ್ನಿಯಿಂದ ಬೆಂದ ಆತನ ಮನಸ್ಸು ತುಂಬ ವ್ಯಥೆಯಪಾಲಾಯಿತು.

ಈ ಪ್ರಕಾರ ದೀನಮಾಯಾದೇವಿಯು ತೀರಿ ಹೋಗುವುದಕ್ಕೆ ಎರಡು ತಿಂಗಳು ಮುಂಚೆ ನಾರಾಯಣಚಂದ್ರನು ತನ್ನ ಅಕೃತ್ಯಗಳಿಗೂ, ಅಪರಾಧಗಳಿಗೂ ಮನಃಪೂರ್ವಕವಾಗಿ ಪಶ್ಚಾತ್ತಾಪ ಹೊಂದಿ, ಬಹು ದೈನ್ಯದಿಂದ

ಕ್ಷಮಾಪಣೆಬೇಡುತ್ತಾ, ತನ್ನ ತಂದೆಯ ಹೆಸರಿಗೆ ಒಂದು ಪತ್ರವನ್ನು ಬರೆದನು. ಅದರಲ್ಲಿನ ಭಾಷೆಯು ತುಂಬಾ ದೈನ್ಯದಿಂದ ಕೂಡಿತ್ತು. ತನ್ನ ತಾಯಿಯ ಮರಣಾನಂತರವೂ ಇಂತಹ ಮತ್ತೊಂದು ಪತ್ರವನ್ನು ಬರೆದನು. ವಾಚಕರ ತಿಳುವಳಿಕೆಗೋಸ್ಕರ ಅದರಲ್ಲಿನ ಕೆಲವು ಭಾಗಗಳನ್ನು ಇದರ ಕೆಳಗೆ ಕನ್ನಡಿಸಿರುವೆವು.

## ಮೊದಲನೆಯ ಪತ್ರ.

“ ನಿಮ್ಮ ಕೃಪಾಕಟಾಕ್ಷದಿಂದ ನನಗೆ ಇಲ್ಲಿ ಯಾವ ಕೊರತೆಯೂ ಇಲ್ಲ. ನಾನು ಸ್ವಲ್ಪಮಟ್ಟಿಗೆ ಹಣ ಸಂಪಾದಿಸಿಕೊಳ್ಳುತ್ತಿದ್ದೇನೆ ಅನ್ನವಸ್ತ್ರಾದಿಗಳಿಗೆ ಲೋಪವಿಲ್ಲದೆ ಗೌರವವಾಗಿಯೂ, ಸೌಖ್ಯವಾಗಿಯೂ, ಜೀವನ ಮಾಡಿಕೊಂಡಿದ್ದೇನೆ. ಆದರೆ ರಾತ್ರೀ ಹಗಲೂ ನನ್ನ ಮನಸ್ಸಾಕ್ಷಿಯು ನನ್ನನ್ನು ಬಾಧಿಸುತ್ತಲಿದೆ ಅಲಂಕಾರಗಳನ್ನೆಲ್ಲಾ ಬಿಟ್ಟುಬಿಟ್ಟೆನು. ನನಗೆ ಇತರ ಅಪೇಕ್ಷೆಗಳು ಯಾವುವೂ ಇಲ್ಲ. ನಿಮ್ಮ ಪಾದಸೇವೆಯನ್ನು ಮಾಡಬೇಕೆಂಬುದೇ ಮುಖ್ಯವಾದ ಕೋರಿಕೆಯಾಗಿದೆ. ನನ್ನ ಪೂರ್ವದ ಅಪರಾಧಗಳೆಲ್ಲವೂ ನನ್ನ ಜ್ಞಾಪಕಕ್ಕೆ ಬಂದು, ನನ್ನನ್ನು ದುಃಖಸಮುದ್ರದಲ್ಲಿ ಮುಳುಗಿಸುತ್ತಲಿವೆ. ನಾನು ಮಾಡಿದ ಪಾಪದ ಫಲವನ್ನು ಈಗ ಅನುಭವಿಸುತ್ತಲಿದ್ದೇನೆ. ನಾನು ನಿಮ್ಮ ಸನ್ನಿಧಾನದಲ್ಲಿದ್ದರೆ ಪರಮಾನಂದದಲ್ಲಿ ಇರುತ್ತಿದ್ದೆನು. ನಾನು ಈಗ ಸಂಘದವರಿಂದ ತುಂಬಾ ಹೀನವಾಗಿ ನೋಡಲ್ಪಡುತ್ತಿದ್ದೇನೆ. ಇವುಗಳೆಲ್ಲವನ್ನೂ ಸಹಿಸಬಲ್ಲೆನು. ಆದರೂ ವೃದ್ಧಾಪ್ಯದಲ್ಲಿ ತಮಗೆ ಉಪಚಾರಮಾಡುವ ಪುಣ್ಯವು ನನಗೆ ಲಭಿಸದೆ ಇರುವುದಕ್ಕಾಗಿ ಬಹಳ ನೊಂದುಕೊಳ್ಳುತ್ತಿದ್ದೇನೆ. ಕಾಶೀಪಟ್ಟಣದಲ್ಲಿ ನಿಮ್ಮ ತಂದೆಯವರು ರೋಗದಲ್ಲಿ ಬಿದ್ದಿದ್ದಾಗ ನೀವು ಅಲ್ಲಿಗೆ ಹೋಗುತ್ತಿರುವಲ್ಲಿ ನಿಮ್ಮ ಮಿತ್ರರಲ್ಲೊಬ್ಬರು ನಿಮ್ಮನ್ನು ಆತಂಕಪಡಿಸಿದ್ದರಮೇಲೆ ನೀವು ಹೀಗೆ ಅಂದಿರಿ. ನಾನು ಈಗ ನನ್ನ ವಿಧಿಯನ್ನು ನೆರವೇರಿಸಲಿಕ್ಕೆ ಹೋಗುತ್ತಿದ್ದೇನೆ ಆದುದರಿಂದ ಇಂತಹ ವೇಳೆಯಲ್ಲಿ ಪ್ರಾಣಭಯ ಉಂಟಾದರೂ ಅದಕ್ಕೆ ಹಿಂದೆಗೆಯಬಾರದು. ” ಈ ಮಾತುಗಳು ನನ್ನ ಕಿವಿಯಲ್ಲಿ ಬಿದ್ದು, ನನಗೆ ಈಗ ಜ್ಞಾಪಕಕ್ಕೆ ಬರುತ್ತಿವೆ. ಮತ್ತು ನನ್ನ ಹೃದಯವನ್ನು ತುಂಬ ಪರಿತಾಪಗೊಳಿಸುತ್ತಲಿವೆ. ನಾನು ಈಗ ನಿಮ್ಮ ಕಣ್ಣಿಗೆ ಕಾಣಿಸೆನು. ಅಪ್ಪಣೆ ಕೊಟ್ಟಲ್ಲಿ ನಿಮ್ಮ ಮಂಚದ ಹಿಂದುಗಡೆ ಕುಳಿತಿದ್ದು ನನ್ನ ಕೈಲಾದಮಟ್ಟಿಗೆ ನಿಮ್ಮ ಸೇವೆ

ಮಾಡುವೆನು. ನಾಯಿಯ ಹಾಗೆ ಒಂದು ಮೂಲೆಯಲ್ಲಿ ಅಡಗಿಕೊಂಡಿರುವೆನು. ನೀವು ಅನುಗ್ರಹಿಸಿದರೆ ಎದುರಿಗೆ ಬರುವೆನು. ನನ್ನ ಕುಮಾರನಾದ ಪ್ಯಾರೀಚಂದ್ರನು ನನ್ನನ್ನು ಅಪ್ಪಾ ಎಂದು ಕರೆಯುವ ಪುಣ್ಯವು ನನಗೆ ಇಲ್ಲವಲ್ಲ. ಎಂದು ಒಡನೆಯೇ ವಿಚಾರಗೊಳ್ಳುವದು ನಿಮಗೆ ನನ್ನಂತಹ ನಿರ್ಭಾಗ್ಯನು ಹುಟ್ಟದೆ ಪ್ಯಾರೀಚಂದ್ರನಂತಹ ಪುತ್ರನು ಜನಿಸಿದ್ದರೆ ನನ್ನ ಸೌಖ್ಯವು ನಿಮಗೆ ತಿಳಿಯುತ್ತಲಿದ್ದಿತು. ನನ್ನಲ್ಲಿಯ ಲೋಪಗಳು ಎಷ್ಟು ದಾರುಣಗಳಾದರೂ ದಯಾಸಾಗರರಾದ ತಮಗೆ ಅವು ಅಣುಪ್ರಾಯವಾಗಿರುವುವು. ಮುಖ್ಯವಾಗಿ ಕುಮಾರರ ವಿಷಯದಲ್ಲಿ ಜನಕರಿಗೆ ಹೀಗೆ ಇರುವುದು. ''

ಆತನ ತಾಯಿ ಮೃತಳಾದ ಕೂಡಲೇ ಬರೆದ ಎರಡನೆಯ ಪತ್ರವು ಮತ್ತಷ್ಟು ಕರುಣಾಪೂರಿತವಾಗಿರುವುದು:—ಎಲೈ ಭಗವತ್ಸ್ವರೂಪಿಯಾದ ತಂದೆಯೇ! ನನ್ನ ದುಃಖಗಳನ್ನು ಇದುವರೆಗೇ ತಮಗೆ ತಿಳಿಸಿದ್ದೇನೆ. ನಾನು ಈಗ ನಿಮ್ಮ ಪಾದಸನ್ನಿಧಿಯನ್ನು ಸೇರುವುದಕ್ಕೆ ತುಂಬ ಆತುರಗೊಂಡಿದ್ದೇನೆ ಏನಾದರೂ ನಿಮ್ಮ ಕಾಲಿನಮೇಲೆ ಬೀಳಬೇಕೆಂದು ನಿಶ್ಚಯಿಸಿದ್ದೇನೆ. ನೀವು ಕರುಣಿಸದೆ ಹೋದರೆ ನಮ್ಮ ತಾಯಿಯು ನಮಗೆ ಉಂಟುಮಾಡಿದ ದುಃಖವನ್ನು ಹೇಗೆ ಧರಿಸಲಾಪೆವು? ಇದುವರೆಗೂ ನಿಮಗೆ ನನ್ನಲ್ಲಿ ಅನುಗ್ರಹವಿಲ್ಲದೆ ಇದ್ದರೂ ನಮ್ಮ ತಾಯಿಯವರ ಆದರಣೆಯಿಂದ ನನಗೆ ಆ ಕೊರತೆಯು ಕಾಣಬಾರದೆ ಇದ್ದಿತು. ಈಗ ಆಕೆಯು ನನ್ನನ್ನು ತಾಯಿಯಿಲ್ಲದ ಮಗನಾಗಿ ಬಿಟ್ಟುಹೋದಳು. ನನಗೆ ಭೋಗಭಾಗ್ಯಗಳು ಯಾವುವೂ ಬೇಕಾಗಿಲ್ಲ. ನಾನು ಮಾಡಿದ ದೋಷಗಳ ಪರಿಹಾರಕ್ಕೋಸ್ಕರ ತಮ್ಮ ಪಾದಗಳ ಮೇಲೆ ಅಡ್ಡಬೀಳುವೆನು. ನೀವು ನನ್ನನ್ನು ಕ್ಷಮಿಸದೆ ಹೋದರೆ ನಾನು ಈ ಲೋಕವನ್ನೇ ಬಿಡಬೇಕಾಗಿದೆ. ನೀವಿನ್ನದಕ್ಕೆ ಸಮ್ಮತಿಸಿದರೆ ಉತ್ತಮ. ಇಲ್ಲದೆ ಹೋದರೆ ನಾನು ಹಾಗೆ ಮಾಡದೆ ಇರೆನು. "

ಈ ಮೇರೆಗೆ ನಾರಾಯಣಚಂದ್ರನು ಬರೆದ ಪತ್ರವನ್ನೋದಿದ ಕೂಡಲೇ ಎಂತಹ ಕಠಿಣವಾದ ಮನಸ್ಸಾದರೂ ಕರಗದೆ ಇರದು. ಅಂತದರಲ್ಲಿ ನವನೀತಸಮಾನಹೃದಯನಾದ ವಿದ್ಯಾಸಾಗರನ ವಿಷಯವಾಗಿ ಹೇಳಬೇಕಾದ ಅಗತ್ಯವೇ ಇಲ್ಲ. ಕೊನೆಗೆ ವಿದ್ಯಾಸಾಗರನು ವ್ಯಾಧಿಗ್ರಸ್ತನಾಗಿ ಹಾಸಿಗೆಯಲ್ಲಿ ಮಲಗಿದ್ದನು. ಆಗಲಾತನು ಕ್ಷಮಿಸಿ ತನಗೆ ಉಪಚಾರ ಮಾಡಲು ಅನುಜ್ಞೆಯನ್ನಿತ್ತನು.

ವಿದ್ಯಾಸಾಗರನ ನ್ಯಾಯಶೀಲತ್ವವನ್ನು ತಿಳಿಸುವ ವಿಷಯದಲ್ಲಿ ಇನ್ನೊಂದು ದೃಷ್ಟಾಂತವನ್ನು ಕೊಡಬಹುದು. ಆತನು ತನ್ನ ಜೀವಿತಕಾಲದಲ್ಲಿ ಅನೇಕ ಲಕ್ಷ ರೂಪಾಯಿಗಳನ್ನು ಸಾಲಮಾಡಿ ತೀರಿಸಿದನು. ಆತನ ಕುಟುಂಬದ ಪೂರ್ವದ ಸ್ಥಿತಿಯು ಚರಿತ್ರಾರಂಭದಲ್ಲಿಯೇ ತಿಳಿಸಲ್ಪಟ್ಟಿದೆ. ಆತನು ಒಂದು ಸಾರೆ ಸರ್ಕಾರದವರಿಗೆ ಸ್ವಲ್ಪ ಬಾಕಿ ಕೊಡಬೇಕಾಗಿದ್ದಿತು. ಈ ವಿಷಯ ಅವರಿಗೆ ತಿಳಿಯಲೇ ತಿಳಿಯದು. ಆತನಕಡೆ ಬಾಕಿ ಇರುವಂತೆ ಅವರ ಯಾವ ಲೆಕ್ಕದಲ್ಲಿಯೂ ದಾಖಲೆ ಇರಲಿಲ್ಲ. ವಿದ್ಯಾಸಾಗರನು ಸಂಸ್ಕೃತ ಕಲಾಶಾಲಾಧ್ಯಕ್ಷನಾಗಿದ್ದಾಗ, ಅಂಕಗಣಿತ, ದೇಶಚರಿತ್ರೆ ಮೊದಲಾದ ಕೆಲವು ಪುಸ್ತಕಗಳನ್ನು ಪಾಠಶಾಲೆಗಳ ವಿನಿಯೋಗಾರ್ಥವಾಗಿ ಪ್ರಚುರಿಸಲಿಕ್ಕಾಗಿ ಆ ಹಣವನ್ನು ಅವನಿಗೆ ಕೊಟ್ಟಿದ್ದರು. ಕಾರಣಾಂತರಗಳಿಂದ ಆ ಪ್ರಯತ್ನವು ನೆರವೇರಲಿಲ್ಲ. ಆದುದರಿಂದ ಆ ಹಣವು ರೂ. ೪೫೧೧-೧೧-೩ ವಿದ್ಯಾಸಾಗರನ ಬಳಿಯಲ್ಲಿಯೇ ನಿಂತಿತ್ತು. ಆ ಸಂಗತಿ ಸರ್ಕಾರದವರಿಗೆ ತಿಳಿಯದು. ಕೊನೆಗೆ ವಿದ್ಯಾಸಾಗರನು ತನ್ನ ಲೆಕ್ಕವನ್ನು ನೋಡಿಕೊಂಡಾಗ ಆ ಹಣವು ಹೆಚ್ಚಾಗಿದ್ದಂತೆ ಕಾಣಬಂದುದರಿಂದ ತನ್ನಷ್ಟಕ್ಕೆ ತಾನೇ ಹೋಗಿ, ಸರ್ಕಾರದವರಿಗೆ ಜ್ಞಾಪಕಕೊಟ್ಟು, ಆ ಹಣವನ್ನು ಅವರಿಗೆ ಸಲ್ಲಿಸಿ ಬಂದನು. ಆತನು ಹೇಗೆ ತನ್ನ ಜೀವಿತಕಾಲದಲ್ಲೆಲ್ಲ ಪರದ್ರವ್ಯವನ್ನು ತೃಣಪ್ರಾಯವಾಗಿ ಭಾವಿಸುತ್ತಿದ್ದನು. ಈ ಸಧರ್ಮನ ನ್ಯಾಯಶೀಲತ್ವವನ್ನು ತಿಳಿಸುವುದಕ್ಕೆ ಇದೊಂದೇ ನಿದರ್ಶನ ಸಾಲದೇ ?

೧೮೬೯ನೆಯ ವರುಷದ ಅಗಸ್ಟು ತಿಂಗಳಲ್ಲಿ ಆತನು ತನ್ನ ಸಾಂಸ್ಕೃತಿಕ ಮುದ್ರಣ ಪುಸ್ತಕಾಲಯವನ್ನು ಕೃಷ್ಣನಗರ ನಿವಾಸಿಯಾದ ವ್ರಜನಾಥ ಮುಗ್ಧೋಪಾಧ್ಯಾಯನಿಗೆ ದಾನವಾಗಿ ಕೊಟ್ಟನು. ಆ ವ್ರಜನಾಥನು ತುಂಬ ಕಾರ್ಯಕೌಶಲ್ಯವುಳ್ಳವನೆಂದು ತಿಳಿದು, ಮೆಚ್ಚಿಕೊಂಡು, ಆತನಿಗೆ ಕೊಟ್ಟುಬಿಟ್ಟನು. ಮರುದಿನವೇ ಕೆಲವರು ಧನಿಕರು ಬಂದು ತಾವು ಹತ್ತು ಸಾವಿರ ರೂಪಾಯಿಗಳನ್ನು ಕೊಡುವೆವು; ತಮಗೆ ಆ ಪುಸ್ತಕಶಾಲೆಯನ್ನು ಕೊಡಬೇಕೆಂದು ಬೇಡಿಕೊಂಡರು. ಆಗ ವಿದ್ಯಾಸಾಗರನು ಐಹಿಕತುಚ್ಛಸುಖದಾಯಕಗಳಾದ ಧನಧಾನ್ಯಾದಿ ಭಾಗ್ಯಗಳು ನಶ್ವರಗಳೆಂತಲೂ, ಆಡಿ ತಪ್ಪುವುದಕ್ಕಿಂತ ನೀಚಕೃತ್ಯವು ಮತ್ತಾವುದೂ ಇಲ್ಲವೆಂತಲೂ, ಕೋಟಿ ರೂಪಾಯಿಗಳನ್ನು ಕೊಟ್ಟರೂ ತಾನು ಅಂತಹ ಹೀನಕೃತ್ಯಕ್ಕೆ ಒಳಪಡಲಾರೆನೆಂತಲೂ,

ಅವರಿಗೆ ಪ್ರತ್ಯುತ್ತರ ಹೇಳಿಕಳುಹಿಸಿದನು. ಇದೇ ಆ ಧೀರನ ಸತ್ಯಸಂಧತೆಗೆ ಉದಾಹರಣೆ.

ಈ ಪ್ರಕಾರವಾಗಿ ೧೮೮೦ನೆಯ ವರ್ಷವು ಸಮೀಪಿಸುವ ವೇಳೆಗೆ ನಮ್ಮ ವಿದ್ಯಾಸಾಗರನು ಅನೇಕ ದುಃಖಗಳಿಗೆ ಒಳಗಾದನು. ಆತನ ಪ್ರಿಯ ಮಿತ್ರರಾದ ಪ್ಯಾರೀಚರಣ ಸರ್ಕಾರ್, ಶ್ಯಾಮಾಚರಣ ವಿಶ್ವಾಸ, ಧೀನಬಂಧು ಮಿತ್ರ, ಮೊದಲಾದವರೂ, ಆತನ ದ್ವಿತೀಯ ಸಹೋದರನಾದ ದೀನಬಂಧು ನ್ಯಾಯರತ್ನನೂ ಕಾಲಕ್ರಮದಿಂದ ಮೃತಹೊಂದಿದರು. ಇವುಗಳಿಂದ ವಿಚಾರಗ್ರಸ್ತನಾದ ನಮ್ಮ ವಿದ್ಯಾಸಾಗರನಿಗೆ ೧೮೮೦ನೆಯ ವರುಷದ ಏಪ್ರೇಲ್ ತಿಂಗಳಲ್ಲಿ ಹೊಟ್ಟೆಯಲ್ಲಿ ಕರುಳುಗಳು ಸಡಿಲವಾಗಿ ಎಲ್ಲರಿಗೂ ಭಯವನ್ನು ಹುಟ್ಟಿಸಿತು. ಆತನು ಈ ವ್ಯಾಧಿಯಿಂದ ಅದುವರೆಗೆ ಆರು ವರುಷಗಳಿಂದಲೂ ಬಾಧೆಪಡುತ್ತಿದ್ದನು. ಅಂದಿನಿಂದಲೂ ಆತನಿಗೆ ಜೀರ್ಣಶಕ್ತಿ ತಗ್ಗಿದ್ದರಿಂದ ಒಂದು ಹೊತ್ತು ಮಾತ್ರವೇ ಊಟಮಾಡುತ್ತಿದ್ದನು. ಆತನು ಹಸುವಿನ ಹಾಲನ್ನು ಕುಡಿಯದೆ ಬಿಟ್ಟದ್ದಕ್ಕೆ ಕಾರಣವನ್ನು ಮೊದಲೇ ತಿಳಿಸಿರುವೆವು. ೧೮೮೦ನೆಯ ವರುಷದ ಆರಂಭದಿಂದಲೂ ಆ ಏಕಭುಕ್ತವು ಸಹ ಜೀರ್ಣವಾಗುವುದು ಕಷ್ಟವಾಗಿದ್ದಿತು. ಆಗ ಕೆಲವು ವೈದ್ಯರ ಸೂಚನೆಯಂತೆ ಸೈಗೋ ಅಕ್ಕಿಯ ಗಂಜಿ ಕಾಯಿಸಿ ಕುಡಿಯತೊಡಗಿದನು. ಆ ಸಂವತ್ಸರದಲ್ಲಿ ತನ್ನ ಹಿರಿಯಮಗಳನ್ನು ಸಂಗಡ ಕರೆದುಕೊಂಡು ಫ್ರೆಂಚರ ಚಂದ್ರನಾಗೂರಿಗೆ ಹೋಗಿ, ಅಲ್ಲಿ ಆರೋಗ್ಯಕರವಾದ ಭಾಗೀರಥೀ ತೀರದಲ್ಲಿ ಅಂದವಾದ ಒಂದು ಮಂದಿರದಲ್ಲಿ ವಾಸಮಾಡಿಕೊಂಡಿದ್ದನು. ಹೀಗೆ ಕೆಲವುಕಾಲ ಕಳೆದ ತರುವಾಯ ಆತನ ದೇಹಸ್ಥಿತಿಯು ಸ್ವಲ್ಪ ಗುಣಮುಖವಾಗಿ ತೋರಿತು.

ಈ ಸಮಯದಲ್ಲಿಯೇ ಹಿಂದೂ ದೇಶದ ಶಿಕ್ಷಣಪದ್ಧತಿ ( I. P. C. ) ಯಲ್ಲಿ ಕೆಲವು ಸಂಸ್ಕರಣಗಳಾಗಬೇಕೆಂಬ ವಿಷಯವು ನ್ಯಾಯವಿಧಾಯಕ ಸಭೆಗೆ ತರಲ್ಪಟ್ಟಿತು. ಅದರಲ್ಲಿ ಮುಖ್ಯವಾದುದು ಬಾಲಿಕಾಗರ್ಭಾಧಾನ ವಯಃಪರಿಮಾಣನಿರ್ಣಯ( Age of Concent Bill )ವು. ಸರಕಾರದವರು ಮಾಮೂಲಿನಂತೆ ಈ ವಿಷಯವಾಗಿ ವಿದ್ಯಾಸಾಗರನೊಂದಿಗೆ ಯೋಚಿಸಿದರು. ಆಗ ಆತನು ಚಂದ್ರನಾಗೂರನ್ನು ಬಿಟ್ಟು ಕಲ್ಕತ್ತೆಗೆ ಬರಬೇಕಾಯಿತು. ಈ ವಿಷಯದಲ್ಲಿ ಆತನು ಹಿಂದೂ ಶಾಸ್ತ್ರಗಳನ್ನೆಲ್ಲ ಚನ್ನಾಗಿ ವಿಚಾರಮಾಡಿ ೧೮೯೧ ನೆಯ ವರುಷದ ಫೆಬ್ರುವರಿ ತಿಂಗಳಲ್ಲಿ ಸಭೆಯವರ ಉದ್ದೇ

ಶಗಳಿಗೆ ಭಿನ್ನವಾದ ತನ್ನ ಅಭಿಪ್ರಾಯವನ್ನು ತಿಳಿಯಪಡಿಸಿದನು. ಆತನ ಅಭಿಪ್ರಾಯವೇನೆಂದರೆ " ಹಿಂದೂ ಜನರು ಯಾವಾಗಲೂ ಧರ್ಮಶಾಸ್ತ್ರಕ್ಕೆ ಬದ್ಧರಾಗಿರುವವರು. ಗರ್ಭಾಧಾನ ಸಂಸ್ಕಾರವೆಂಬುದು ಅವರಿಗೆ ಶಾಸ್ತ್ರೋಕ್ತವಾದ ಕರ್ಮಗಳಲ್ಲಿ ಒಂದು ಮುಖ್ಯಕರ್ಮವು. ಬಾಲೆಯರ ಪ್ರಥಮರಜಸ್ವಲಾಕಾಲವು ಅವರ ದೇಹತತ್ತ್ವವನ್ನನುಸರಿಸಿ, ಶುದ್ಧಾಂಗವಾಗಿ ಬದಲಾವಣೆ ಹೊಂದಿಸುವುದು. ಆದುದರಿಂದ ಅವರಿಗೆ ಪ್ರಥಮರಜಸ್ವಲಾನಂತರವೇ (ಅಂದರೆ ಸಾಧಾರಣವಾಗಿ ಹದಿನಾಲ್ಕು ವರುಷಗಳ ವಯಸ್ಸಿನ ಸುಮಾರಿನಲ್ಲಿ) ಗರ್ಭಾಧಾನವನ್ನು ಮಾಡತಕ್ಕದ್ದು. ಈ ಒಳಗಾಗಿ ಮಾಡಕೂಡದು. ಒಂದುವೇಳೆ ಮಾಡಿದರೆ ಅದು ಶಾಸ್ತ್ರೀಯವಾಗಿಯೂ, ಕ್ಷೇಮಕರವಾದುದಾಗಿಯೂ, ಆಗಲಾರದು, " ಎಂದು ಹೇಳಿದನು. ಈ ವಿಷಯದಲ್ಲಿ ಸರಕಾರದವರು ಆತನು ಹೇಳಿದ್ದು ಶಾಸ್ತ್ರಸಮ್ಮತವೆಂತಲೂ ಪ್ರಜಾನುಕೂಲವಾದುದೆಂತಲೂ, ಸಹೇತುಕವಾದುದೆಂತಲೂ, ಒಪ್ಪಿಕೊಂಡರೂ ಅದನ್ನು ನಿರಾಕರಿಸಬೇಕಾಗಿ ಬಂದಿತು. ಏತಕ್ಕೆಂದರೆ ಅವರ ಅಭಿಪ್ರಾಯವನ್ನನುಸರಿಸದೆ ಇದ್ದುದರಿಂದಲೇ....... .. ........................................................ ........

( ಇಲ್ಲಿ ಮೂಲದಲ್ಲಿ ಬರೆದಿರುವ ಕೆಲವು ವಾಕ್ಯಗಳು ಪ್ರಕೃತಸ್ಥಿತಿಗೆ ನಿಂದ್ಯಗಳಾಗಿ ತೋರಿದ್ದರಿಂದ ಭಾಷಾಂತರಿಸಲಿಲ್ಲ. )

ಈ ವಿಧವಾಗಿ ವಿದ್ಯಾಸಾಗರನು ತನ್ನ ಅಭಿಪ್ರಾಯವನ್ನು ಕೊಟ್ಟು ಚಂದ್ರನಾಗೂರಿಗೆ ಮರಳಿ ಹೋದನು. ಎಪ್ರಿಲ್ ೧೫ನೇ ತಾರೀಖಿನವರೆಗೆ ಆತನ ದೇಹವು ಆರೋಗ್ಯ ಸ್ಥಿತಿಯಲ್ಲಿಯೇ ಇದ್ದಿತು. ಆದರೆ ದುರ್ದೈವವಶದಿಂದ ಆ ತಿಂಗಳ ಕೊನೆಯಲ್ಲಿ ಆತನ ರೋಗವು ಮತ್ತಷ್ಟು ಹೆಚ್ಚಿತು. ಆಗ ಹತ್ತಿರವಿದ್ದ ಆತನ ಹಿರಿಯಮಗಳು ಭಯಪಟ್ಟು ಕಲ್ಕತ್ತೆಗೆ ಹೋಗಿ, ಸುಮಾರು ೮೦೦ ರೂಪಾಯಿಗಳನ್ನು ವೆಚ್ಚಮಾಡಿ, ತನ್ನ ತಂದೆಯ ಪೀಡಾಪರಿಹಾರಕ್ಕಾಗಿ ನವಗ್ರಹಜಪಾದಿಗಳನ್ನು ಮಾಡಿಸಿದಳಂತೆ! ಆದರೆ ಅದೂ ನಿಷ್ಫಲವಾಯಿತು. ಜೂನ್ ತಿಂಗಳ ೩ ನೆಯ ವಾರದಲ್ಲಿ ಆತನಿಗೆ ಹಠಾತ್ತಾಗಿ ಪಕ್ಕೆಯಲ್ಲಿ ಒಂದು ಬಾಧೆಯುಂಟಾಯಿತು. ಅದನ್ನು ಹೋಗಲಾಡಿಸುವುದಕ್ಕೆ ಔಷಧವೇ ಇರಲಿಲ್ಲ. ತರುವಾಯ ಆತನ ಮಮ್ಮಗನಾದ ಯತೀಶಚಂದ್ರನನ್ನು ಸಂಗಡ ಕರೆದುಕೊಂಡು ಕಲ್ಕತ್ತೆಗೆ ಬಂದನು. ಆಗ ಆತನು ಅದುವರೆಗೆ ಅತಿಸಾರ ವ್ಯಾಧಿಯುಂಟಾದಾಗ ಅಭ್ಯಾಸ ಮಾಡಿದ್ದ ಅಫೀಮಿನ

ಸೇವನೆಯನ್ನು ಬಿಟ್ಟು ಬಿಟ್ಟನು, ಅವನಿಗೆ ಆ ಸಮಯದಲ್ಲಿ ಹರಿಲಾಲ್ ಘೋಷ್' ಅಮೂಲ್ಯಚರಣವಸು, ಎಂಬಿವರು ವೈದ್ಯರಾಗಿದ್ದರು. ಕೆಲವು ದಿನಗಳಾದ ತರುವಾಯ ದಾರುಣವಾದ ಕಫವ್ಯಾಧಿಯು ಕಾಣಿಸಿಕೊಂಡು, ಎಲ್ಲರಿಗೂ ಭಯತೋರಿತು. ಹೀಗೆ ಒಂದು ತಿಂಗಳು ಕಳೆಯಿತು. ಜುಲೈ ತಿಂಗಳ ಎರಡನೆಯ ವಾರದಲ್ಲಿ ಪಾಶ್ಚಾತ್ಯ ವೈದ್ಯ ಶ್ರೇಷ್ಠರಿಬ್ಬರು ಬಂದು ನೋಡಿ, ನಿರಾಶೆಯಿಂದ ಮರಳಿಹೋದರು. ತರುವಾಯ ಸ್ಲೇಜರ್ ಎಂಬ ವೈದ್ಯನೊಬ್ಬನು ಬಂದು, ಅಪಾಯಕರವಾದ ದೊಡ್ಡ ವ್ರಣವೊಂದಿರುವುದೆಂತಲೂ, ಆಗಲೇ ಆರಂಭವಾಗಿದ್ದರೂ ಅದು ಅಪಾಯಕರವಾದುದೆಂತಲೂ ಹೇಳಿದನು. ಅಷ್ಟಕ್ಕಷ್ಟಕ್ಕೆ ಅಪಾಯ ಸ್ಥಿತಿಯು ಹೆಚ್ಚುತ್ತಲಿದ್ದಿತು. ಕಲ್ಕತ್ತೆಯ ಮ್ಯುನಿಸಿಪಾಲಿಟಿಯವರು ಆತನ ಮೇಲಣ ಗೌರವದಿಂದ ಆ ದಾರಿಯಲ್ಲಿ ಪಾಕೀ ಭಂಡಿಗಳು ಹೋಗಕೂಡದೆಂತಲೂ, ಇತರ ಭಂಡಿಗಳ ಸದ್ದು ರೋಗಿಯ ಕಿವಿಗಳಿಗೆ ತೊಂದರೆಯುಂಟುಮಾಡುವುದರಿಂದ ಆ ಹಾದಿಯಲ್ಲಿ ಬತ್ತದ ಹುಲ್ಲನ್ನು ಹಾಸಬೇಕೆಂತಲೂ, ಆಜ್ಞಾಪಿಸಿದರು.

ಜುಲೈ ೧೯ನೇ ತಾರೀಖಿನಲ್ಲಿ ಮಹೇಂದ್ರಲಾಲ್ ಸರ್ಕಾರ್ ಎಂಬ ಘನ ವೈದ್ಯನು ಬಂದನು. ಹೀಗೆ ಅನೇಕರು ಬಂದು ತಮತಮಗೆ ತೋರಿದ ಸಲಹೆಗಳನ್ನು ಕೊಡುತ್ತಿದ್ದರು. ಆದರೆ ಅಮೂಲ್ಯಚರಣನು ಮಾತ್ರ ರಾತ್ರಿಯೂ ಹಗಲೂ ಆತನ ಮಂಚದ ಹತ್ತಿರವೇ ಅಧಿಕಭಕ್ತಿಯಿಂದ ಕಾದಿದ್ದನು. ವಿದ್ಯಾಸಾಗರನಿಗೂ ಆತನಲ್ಲಿ ತುಂಬ ವಾತ್ಸಲ್ಯವಿದ್ದಿತು. ನಾರಾಯಣಚಂದ್ರನು ತನ್ನ ತಂದೆಯ ಅನುಮತಿ ಪಡೆದು ಬಂದು, ಉಪಚಾರ ಮಾಡುತ್ತಿದ್ದನು. ಜುಲೈ ೨೬ ನೇ ತಾರೀಖಿನವರೆಗೆ ಬಲಾದಿ ಗುಣಗಳು ಅಧಿಕವಾದವು. ಅದಕ್ಕೆ ಎರಡು ದಿನಗಳ ಮುಂಚೆಯೇ ನೂತನ ಮರಣಶಾಸನವನ್ನು ಕುರಿತು ಜ್ಞಾಪಕಕೊಟ್ಟರು. ಆದರೆ ವಿದ್ಯಾಸಾಗರನು ತನ್ನ ವಿದ್ಯಾವಿಷಯವೇ ಮೊದಲಾದ ಧರ್ಮಪ್ರತಿಷ್ಠಾಪನೆಗಳ ವಿಷಯವಾಗಿ ಚೆನ್ನಾಗಿ ಆಲೋಚಿಸಿಕೊಳ್ಳುತ್ತಿರಲು, ವ್ಯಾಧಿ ಹೆಚ್ಚಾಗಿ ಮತಿಸ್ಥಿರತೆ ತಪ್ಪಿಹೋಯಿತು. ಜುಲೈ ೨೮ ನೇ ತಾರೀಖು ಆದಿತ್ಯವಾರದ ದಿನ ರೋಗಿಯ ಸ್ಥಿತಿಯನ್ನು ನೋಡಿದವರಿಗೆಲ್ಲ ಎದೆಗುಂದುತ್ತಿದ್ದಿತು, ಉಷ್ಣವು ಹೆಚ್ಚಾಯಿತು. ಸ್ಮೃತಿತಪ್ಪಿತು, ಉಚ್ಛ್ವಾಸನಿಶ್ವಾಸಗಳು ಕಷ್ಟತರಗಳಾದವು. ಹೀಗೆ ಆ ದಿನವನ್ನು ಕಳೆದು, ಮರುದಿನ ಸೋಮವಾರ ರೋಗಿಗೆ ಸ್ಮೃತಿ

ತಪ್ಪಿಯೇ ಇದ್ದಿತು. ಆದರೆ ಆತನು ಯಾವ ಬಾಧೆಯನ್ನೂ ಪಡುತ್ತಿದ್ದಂತೆ ಕಾಣಿಸಲಿಲ್ಲ. ಅವನ ಮುಖವು ಚೆನ್ನಾಗಿಯೇ ಇದ್ದಿತು. ಭರತಖಂಡದ ದುರ್ದಿನಗಳಲ್ಲಿ ಒಂದಾದ ಜುಲೈ ೨೯ನೇ ತಾರೀಖು ಮಂಗಳವಾರವೆಲ್ಲವೂ ಅಮಂಗಳಕರವಾಗಿದ್ದಿತು. ದಿನಕರನು ಅಂತಹ ಅಸಾರ್ಥಕ ದಿನವನ್ನುಂಟುಮಾಡಿದ್ದಕ್ಕೆ ಪ್ರಜೆಗಳು ತನ್ನನ್ನು ದೂಷಿಸುವರೆಂಬ ಲಜ್ಜೆಯಿಂದ ಮುಖತೋರಿಸದೆ ಆ ದಿನವೆಲ್ಲಾ ಮೇಘಪಙ್ಕ್ತಿಗಳ ಮರೆಯಲ್ಲಿ ಅಡಗಿದ್ದನು. ಸೂರ್ಯದರ್ಶನವ್ರತನಿಷ್ಠಾಗರಿಷ್ಠರಾದ ಪುಣ್ಯಾತ್ಮರೆಲ್ಲರೂ ಆತನ ಪ್ರಾಣಗಳಿಗೆ ಉಸ್ಸುರೆಂದು ಆದಿನ ಉಪವಾಸಮಾಡಿದರು. ಜಲಜಾತಕಗಳೆಲ್ಲವೂ ದುಃಖಜಲಜಾತಕಗಳಾಗಿ, ಮುಕುಳಿತ ವದನಗಳಿಂದ ಇದ್ದುವು. ಪುಷ್ಪಫಲಸಂಪನ್ನಗಳಾದ ವೃಕ್ಷಗಳೆಲ್ಲವೂ ಕಣ್ಣೀರು ಕರೆಯುತ್ತವೆಯೋ ಎಂಬಂತೆ ನಿಶೀಪತಿತ ಹಿಮಬಿಂದುಸಂದೋಹಗಳನ್ನು ಪಲ್ಲವಾಗ್ರಗಳಿಂದ ಜಾರಿಸುತ್ತಲಿದ್ದುವು. ಉದಯಾಸ್ತಾಚಲಸೇತುಶೀತಾಚಲಮಧ್ಯಸ್ಥಿತವಾದ ಈ ಭರತವರ್ಷವೆಲ್ಲವೂ ದುಃಖಸಾಗರದಲ್ಲಿ ಮುಳುಗುತ್ತದೆಯೋ ಎಂಬಂತೆ ಹಿಂದೂ ಸಂತತಿಗಳಿಗೆಲ್ಲ ಅಶುಭ ಸೂಚನೆಗಳು ತಲೆದೋರುತ್ತಿದ್ದುವು. ಪುರುಷರಲ್ಲಿ ಕೆಲವರಿಗೆ ಎಡಗಡೆಯಲ್ಲಿಯೂ, ಸ್ತ್ರೀಯರಿಗೆ ಬಲಗಡೆಯೂ ನೇತ್ರಭುಜಾದಿಗಳು ಅದುರ ಸಾಗಿದುವು. ಆ ದುರ್ನಿಮಿತ್ತಗಳಿಂದ ಯಾವ ಕೇಡು ಮಾಡುವುದೋ ಎಂದು ಅವರ ಹೃದಯಗಳು ವ್ಯಾಕುಲಗೊಳ್ಳುತ್ತಿದ್ದುವು. ಆದರೆ ಅವರು ಅದರ ಫಲವನ್ನು ಬಹು ಸ್ವಲ್ಪ ಹೊತ್ತಿನಲ್ಲಿಯೇ ತಿಳಿದುಕೊಂಡರು. ಅಲ್ಲಿ ನಮ್ಮ ಕಥಾನಾಯಕನ ಹತ್ತಿರ ನಯವಿನಯವಿವೇಕ ವಿದ್ಯಾಲಂಕಾರನಾದ ಕುಮಾರನೂ, ಕಾಮಿತ ಫಲದಾಯಕರಾದ ಭ್ರಾತೃಜನರೂ ಸಕಲ ಸೌಜನ್ಯಸಿಂಧುಗಳಾದ ಬಂಧು ಜನರೂ, ಕಷ್ಟಸುಖಗಳೆಲ್ಲೆಲ್ಲ ತಮ್ಮ ನೆಳಲಿನಂತೆ ಎಡೆಬಿಡದೆ ಇದ್ದ ಪ್ರಾಣಸ್ನೇಹಿತರೂ, ಮಂಚದ ಸುತ್ತಲೂ ಚಿಂತಾಕಲಿತ ದುರ್ಭ್ರಮೆಯಂತೆ ಚೇತಸ್ಕರಾಗಿ, ದೈನ್ಯಮುಖಗಳಿಂದ ನಿಶ್ಶಬ್ದರಾಗಿ ಕುಳಿತುಕೊಂಡರು. ವೈದ್ಯರೆಲ್ಲರೂ ಕಪಟಮನಸ್ಕರಾಗಿ ತಮ್ಮ ನಿಜೋದ್ದೇಶಗಳನ್ನು ತಿಳಿಸದೆ, ಒಬ್ಬರ ಕಿವಿಯಲ್ಲೊಬ್ಬರು ಪಿಸಪಿಸನೆ ಮಾತನಾಡಿಕೊಳ್ಳುತ್ತಾ ಇದ್ದರು. ರೋಗಿಯು ಮಾತ್ರ ಅಕ್ಷೀಣಮುಖವಿಕಾಸವುಳ್ಳವನಾಗಿ, ತನ್ನ ಅಂತರ್ಬಾಧೆಯನ್ನು ಸ್ವಲ್ಪವಾದರೂ ಹೊರಪಡಿಸದೆ ಇದ್ದನು. ಈ ವೇಳೆಗೆ ಮಧ್ಯಾಹ್ನವೂ ಕಳೆ

ಯಿತು. ಸಾಯಂಕಾಲದಲ್ಲಿ ಕ್ರಮಕ್ರಮವಾಗಿ ಉಚ್ಛ್ವಾಸನಿಶ್ವಾಸಗಳು ತಗ್ಗಲಾರಂಭಿಸಿದುವು. ಕೈಗಳಲ್ಲಿ ನಾಡಿಯು ಅಷ್ಟಷ್ಟಕ್ಕೆ ಹಿಂದೆಗೆಯುತ್ತಿದ್ದಿತು. ಬಂಧುಮಿತ್ರಾದಿಪರಿವಾರವೆಲ್ಲವೂ ಗುಂಪುಗೂಡಿ ಕಣ್ಣೀರು ಸುರಿಸುತ್ತಿದ್ದವು. ಈ ಪ್ರಕಾರವಾಗಿ ರಾತ್ರಿ ೧೧ ಗಂಟೆಗಳು ಹೊಡೆದ ತರುವಾಯ ನಾಡಿಯು ಶುದ್ಧಾಂಗವಾಗಿ ಕಾಣದೆ ಹೋಯಿತು. ಅವತಾರಮೂರ್ತಿಗೆ ಅಂತ್ಯದಶೆಯು ಪ್ರಾಪ್ತವಾಯಿತೆಂದು ಎಲ್ಲರೂ ತಮ್ಮ ಮನಸ್ಸುಗಳಲ್ಲಿ ನಿಶ್ಚಯಿಸಿಕೊಂಡರು. ಆಗ ರಾತ್ರೆ ೩ ಗಂಟೆ ೧೮ ನಿಮಿಷಗಳಿಗೆ ಸ್ವರಾಜ್ಯಮಾರ್ಗವನ್ನು ತಿಳಿಸುವುದಕ್ಕೋಸ್ಕರ ಸ್ವರ್ಗದಿಂದ ಉದುರುತ್ತಿರುವ ಕಲ್ಪವೃಕ್ಷದ ಪುಷ್ಪಗಳೋ ಎಂಬಂತೆ ಆಕಾಶದಿಂದಲೂ, ನಾಲ್ಕು ದಿಕ್ಕುಗಳಲ್ಲಿಯೂ ಉಲ್ಕಾಪಾತವಾಗುತ್ತಲಿದ್ದಿತು. ಅದೇ ಆ ಪುಣ್ಯಪುರುಷನ ಕಟ್ಟಕಡೆಯ ನಿಟ್ಟುಸುರಿನ ನಿಮಿಷವು. ಆಗ ಎಲ್ಲರೂ ಗೊಳೋ ಎಂದು ಅತ್ತರು. ಅವರ ದುಃಖರವವು ಪ್ರತಿಧ್ವನಿಕೊಟ್ಟುದರಿಂದ ಕಲಕಲವು ಇಮ್ಮಡಿಯಾಯಿತು. ಆ ಮಾತನ್ನು ಕೇಳಿದ ಸಕಲಜನಗಳಲ್ಲಿಯೂ ಕಣ್ಣಿನಲ್ಲಿ ನೀರು ಹಾಕದೆ ಇದ್ದವರು ಒಬ್ಬರೂ ಇರಲಿಲ್ಲ. ಆತನ ಸುಗುಣಗಳನ್ನೂ ಮಹೋಪಕಾರಗಳನ್ನೂ ನೆನೆನೆನೆದು ಹಲವರು ಹಲವು ವಿಧಗಳಲ್ಲಿ ವಿಲಾಪಮಾಡತೊಡಗಿದರು. ಬೆಳಗಾಗುವುದರ ಮುಂಚೆಯೇ ಈ ಸುದ್ಧಿಯು ಪಟ್ಟಣವೆಲ್ಲಾ ವ್ಯಾಪಿಸಿತು. ಬೆಳಗಿನ ಝಾಮ ೪ ಗಂಟೆಯ ಹೊತ್ತಿನಲ್ಲಿ ಹೊರಟು ಆ ಮೃತಕಳೇಬರವನ್ನು ಶೋಕಾರವಸಂಕುಲವಾದ ದೊಡ್ಡ ಮೆರವಣಿಗೆಯೊಂದಿಗೆ ಭಾಗೀರಥೀ ತೀರದಲ್ಲಿರುವ ಸ್ಮಶಾನಭೂಮಿಗೆ ಬಂಧುಮಿತ್ರರೇ ಹೊತ್ತುಕೊಂಡು ಹೋದರು. ಬೆಳಿಗ್ಗೆ ಸುಮಾರು ೭ ಗಂಟೆಯ ಹೊತ್ತಿನಲ್ಲಿ ಪ್ರತ್ಯೇಕವಾಗಿ ಸಂಪಾದಿಸಿದ ಸ್ವಚ್ಛಂದವಾದ ಉತ್ತಮ ಶ್ರೀಗಂಧದ ಸೌದೆಯಿಂದ ಚಿತಿಯನೊಡ್ಡಿ ಅದರ ಮೇಲೆ ಶವವನ್ನಿಟ್ಟರು. ವಿಧ್ಯುಕ್ತವಿಧಾನದಿಂದ ನಾರಾಯಣಚಂದ್ರನು ಸಂಸ್ಕಾರಾದಿ ಅಪರಕರ್ಮಗಳನ್ನು ನೆರವೇರಿಸಿದನು. ಈ ಮಹಾ ಶೋಕವಾರ್ತೆಯು ದೇಶದಲ್ಲಿ ಎಲ್ಲೆಲ್ಲಿಯೂ ಹರಡಿದ ಒಡನೆಯೇ ದೇಶದಲ್ಲಿ ವೃತ್ತಾಂತಪತ್ರಿಕೆಗಳಲ್ಲೆಲ್ಲ ಈ ಸಮಾಚಾರವನ್ನೆ ವಿವಿಧ ರೀತಿಗಳಲ್ಲಿ ಬಣ್ಣಿಸತೊಡಗಿದರು. ಅನೇಕರು ದುಃಖಪಡುತ್ತಲಿದ್ದ ಆ ಕುಟುಂಬದವರನ್ನು ನೋಡಿ, ಸಮಾಧಾನೋಕ್ತಿಗಳನ್ನು ಹೇಳುತ್ತಿದ್ದರು. ಪ್ರತಿದಿನವೂ ಅನುತಾಪಪಾರ್ತೆಗಳು ಅನೇಕವಾಗಿ ಬರುತ್ತಲಿದ್ದುವು. ಈ ಮರಣದಿಂದ ಆ ಕುಟುಂಬ

ದವರು ಒಬ್ಬ ಯಜಮಾನನನ್ನೂ, ಬಂಗಾಳೀ ಭಾಷಾಮಾತಲ್ಲಿಯು ಒಬ್ಬ ಪೋಷಕನನ್ನೂ, ದೊರೆತನದವರು ವಿಶ್ವಸನೀಯನಾದ ಒಬ್ಬ ದೇಶೀಯ ನನ್ನೂ, ಹಿಂದೂ ನಾರೀಜನರು ಒಬ್ಬ ಮಹೋಪಕಾರಿಯನ್ನೂ, ಆರ್ತಜನ ಸಂತಾನವು ಒಬ್ಬ ಆಪದ್ಬಾಂಧವನನ್ನೂ, ಯಾಚಕಬೃಂದವು ಒಬ್ಬ ಮಹಾ ದಾತೃವನ್ನೂ, ಭಾರತಮಾತೆಯು ಒಬ್ಬ ಸತ್ಪುತ್ರ ರತ್ನವನ್ನೂ, ದೇಶ ಜನರು ಒಬ್ಬ ದೇಶಭಕ್ತನನ್ನೂ; ಮಾನವಜಾತಿಯು ಒಂದು ಸದುದಾಹರಣೆಯನ್ನೂ ಕಳೆದುಕೊಂಡವು. ಈ ಮಹನೀಯನ ಜ್ಞಾಪಕಾರ್ಥವಾಗಿ ದೇಶದಲ್ಲೆಲ್ಲ ಅನೇಕ ಕಾರ್ಯಗಳು ನಡಿಸಲ್ಪಟ್ಟವು. ಧಾಕಾಪಟ್ಟಣದಲ್ಲಿ ಜರುಗಿದ ಒಂದು ಸಭೆಯಲ್ಲಿ ಭಾವಲರಾಷ್ಟ್ರಾಧಿಪತಿಯಾದ ರಾಜರಾಜೇಂದ್ರ ನಾರಾಯಣರಾಯ ಬಹದ್ದರವರು ವಿದ್ಯಾಸಾಗರನ ಹೆಸರಿನಲ್ಲಿ ಧಾಕಾಕಲಾಶಾಲೆಯಲ್ಲಿ ಏರ್ಪಾ ಡುಮಾಡಿದ ವಿದ್ಯಾರ್ಥಿವೇತನಕ್ಕೋಸ್ಕರ ೩೦೦೦ ರೂಪಾಯಿಗಳನ್ನು ಕೊಟ್ಟ ರು. ಮತ್ತು ಅನೇಕ ಕಡೆಗಳಲ್ಲಿ ವಿದ್ಯಾಸಾಗರನನ್ನು ಕುರಿತು ನಿಬಂಧಗಳ ನ್ನು ಬರೆದವರಿಗೆ ಪದಕ ಮೊದಲಾದ ಅನೇಕ ವಸ್ತುಗಳು ಬಹುಮಾನವಾಗಿ ಕೊಡಲ್ಪಟ್ಟವು. ಆತನ ಹೆಸರಿನಲ್ಲಿ ವಾಚನಮಂದಿರಗಳು, ಪುಸ್ತಕಭಂಡಾ ರಗಳು, ಧರ್ಮವೈದ್ಯಾಲಯಗಳು, ಹಲವು ಕಡೆಗಳಲ್ಲಿ ಸ್ಥಾಪಿಸಲ್ಪಟ್ಟವು. ಹಿಂದು ಸ್ತ್ರೀಯರ ವಿದ್ಯಾವೃದ್ಧಿಗಾಗಿ ವಿದ್ಯಾಸಾಗರನು ಕಷ್ಟಪಟ್ಟು ಸ್ಥಾಪಿ ಸಿದ ಪ್ರತಿಷ್ಠಾಪನೆಗಳಲ್ಲೆಲ್ಲ "ಬೆತ್ಯೂನ್ ಬಾಲಿಕಾಪಾಠಶಾಲೆ"ಯೇ ಉತ್ತಮ ವಾದುದು. ಆ ಮಹನೀಯನಿಂದ ಮೇಲ್ಪಡೆದ ಕಲ್ಕತ್ತೆಯಲ್ಲಿಯ ಯುವತೀ ಮಣಿಯರೆಲ್ಲರೂ ಆತನ ಮರಣಾನಂತರ ಒಂದು ಸಭೆ ಸೇರಿ ಅಲ್ಲಿ ತಮ್ಮ ಮಹೋಪಕಾರಿಯ ಹೆಸರನ್ನು ಶಾಶ್ವತಗೊಳಿಸಲಿಕ್ಕೆ ೧೯೩೦ ರೂಪಾ ಯಿಗಳನ್ನು ಚಂದಾಮೂಲಕ ವಸೂಲಮಾಡಿ ಆ ಪ್ರತಿಷ್ಠಾಪನೆಯ ಕಾರ್ಯನಿರ್ವಾಹಕ ಸಂಘದವರಿಗೆ ಕೊಟ್ಟು ತಮ್ಮ ಕೃತಜ್ಞತೆಯನ್ನು ಮೆರೆಯಿಸಿದರು. ಅವರು ಆ ಹಣದಿಂದ ಆ ಮಹನೀಯನ ಹೆಸರಿನಲ್ಲಿ ಒಂದು ವಿದ್ಯಾರ್ಥಿನೀವೇತನವನ್ನೇರ್ಪಡಿಸಿದರು. ಹೀಗೆ ಅನೇಕ ವಿಧಗ ಳಲ್ಲಿ ಆ ದೇಶೋದ್ಧಾರಕನು ಸ್ಥಿರಕೀರ್ತಿಯುಳ್ಳವನಾದನು. ಆತನು ಮಾಡಿದ ಮಹತ್ಕಾರ್ಯಗಳೇ ಆತನ ಯಶಸ್ಸನ್ನು ಶಾಶ್ವತಗೊಳಿಸುತ್ತಿರುವಾಗ ಪರರು ಮಾಡುವ ಸ್ವಲ್ಪ ಪ್ರಯತ್ನಗಳ ಲೆಕ್ಕವೇನು ಈ ಮಹನೀಯನು ಅಧಿಕ ವಿದ್ಯಾವಂತನೂ, ಧನವಂತನೂ, ಕೀರ್ತಿವಂತನೂ, ಆಗಿದ್ದರೂ ದೇಶ

ಭಾಷೆಗಳಲ್ಲಿ ದಂಭವಿಲ್ಲದೆ ಸಾಮಾನ್ಯನ ಹಾಗಿದ್ದು ನಿಗರ್ವಶಿರೋಮಣಿಯೆಂದು ಪ್ರಸಿದ್ಧಪಡೆದನು. ಧರ್ಮಕಾರ್ಯಸಕ್ತಿ, ಮಾತೃದೇಶಾಭಿಮಾನ, ಲೋಕೋಪಕಾರಧುರೀಣತೆ, ಮೊದಲಾದುವುಗಳಿಗೆ ಆತನು ಇಟ್ಟದ್ದೇ ಹೆಸರು. ಈ ಲೋಕೋತ್ತರ ಚರಿತ್ರನೂ, ಕರುಣಾಂತರಂಗನೂ, ಸತ್ವಗುಣಸಂಪನ್ನನೂ ಸ್ವಗೌರವದನಿಧಿಯೂ ಆಗಿದ್ದ ವಿದ್ಯಾಸಾಗರನನ್ನು ಹೋಲುವವರು ಬಹು ವಿರಳರು. ಈ ಕಾಲದಲ್ಲಿ ಕೆಲವು ಉದ್ಯೋಗಸ್ಥರು ತಮ್ಮ ಮೇಲಿನ ಅಧಿಕಾರಿಗಳ ಕೈಗಳಲ್ಲಿನ ಕೀಲುಬೊಂಬೆಗಳ ಹಾಗೆ ಅವರ ಇಷ್ಟ ಪ್ರಕಾರ ಎಂತಹ ದ್ರೋಹಕೃತ್ಯಕ್ಕಾದರೂ ಹಿಂದೆಗೆಯದೆ ಆತ್ಮಬುದ್ಧಿ ಪರಿಜ್ಞಾನಶೂನ್ಯರಾಗಿದ್ದಾರೆ. ಮೇಲಿನ ಅಧಿಕಾರಿಗಳ ಇಷ್ಟ ಪ್ರಕಾರ ತಪ್ಪು ಬರಹಗಳನ್ನು ಬರೆಯಲಾರದೆ ತಿಂಗಳಿಗೆ ೫೦೦ ರೂಪಾಯಿಗಳ ಸಂಬಳವೂ, ತುಂಬ ಗೌರವಾಧಿಕಾರವೂ ಉಳ್ಳ ಉದ್ಯೋಗವನ್ನು ಹುಲ್ಲು ಕಡ್ಡಿಗಿಂತ ಕಡೆಯಾಗಿ ಎಣಿಸಿ, ಸ್ವಗೌರವವನ್ನು ನಿಲ್ಲಿಸಿಕೊಂಡ ಮಾನಧನನು ಈ ವಿದ್ಯಾಸಾಗರನೇ ಅಲ್ಲವೇ! ಪ್ರಜೆಗಳು ಮಾಡುವ ಭೂಷಣೆ ದೂಷಣೆಗಳಿಗೆ ಸಂತೋಷ ದುಃಖಗಳನ್ನು ಹೊಂದದೆ ಸ್ವಬುದ್ಧಿಯಿಂದಲೇ ಎಷ್ಟುಕಷ್ಟಗಳನ್ನಾದರೂ ಸೈರಿಸಿಕೊಂಡು ಲೋಕೋಪಕಾರವನ್ನೊಡರ್ಚಿದ ಮಹನೀಯನು ಈತನೇ! ಮನಸ್ಸಿನಲ್ಲಿರುವ ಮಾತನ್ನು ನಿರ್ಭಯವಾಗಿ ಆಡುವುದರಲ್ಲಿಯೂ, ಪರೋಪಕಾರಾರ್ಥವಾಗಿ ಸ್ವಂತ ಸೌಖ್ಯಗಳನ್ನು ಪರಿತ್ಯಜಿಸುವುದರಲ್ಲಿಯೂ ಆತನ ಸರಿ ಹೋಲಿಸಲ್ಪಡತಕ್ಕವರು ಎಲ್ಲಿಯೂ ಕಾಣಿಸರು. ಈ ಸೌಜನ್ಯನಿಧಿಯು ಮಹೋಪಕಾರಕ್ಕೆ ಕೃತಜ್ಞರಾದ ದೇಶೀಯರೆಲ್ಲರೂ ಆತನ ಗುಣಗಳನ್ನು ಹೊಗಳುತ್ತಾ, ಯಾವಾಗಲೂ ಜ್ಞಾಪಕದಲ್ಲಿಟ್ಟುಕೊಂಡಿದ್ದಾರೆ. ಸನ್ಮಾರ್ಗಪ್ರವರ್ತಕರಾದವರಿಗೆಲ್ಲ ಆತನ ಪವಿತ್ರ ಚರಿತ್ರವು ಸರ್ವದಾ ಸ್ಮರಣೀಯವಾಗಿದೆ.

ಓಂ ಶಾಂತಿಶ್ಶಾಂತಿಶ್ಶಾಂತಿಃ

# ಶೌಶೀಲ್ಯವು.

ಈ ಲೋಕದಲ್ಲಿ ಮಹಾ ಪುರುಷರು ಸಾಮಾನ್ಯವಾಗಿ ಯಾವಾಗಲೂ ಲಭಿಸುವದು ತುಂಬಾ ದುಸ್ತರ. ಯಾವ ದೇಶದಲ್ಲಿಯಾಗಲಿ ಯಾವ ಜಾತಿಯಲ್ಲಿಯಾಗಲಿ ಯಾವ ಸಂಘದಲ್ಲಿಯಾಗಲಿ ದೇಶಕಾಲಪಾತ್ರಾದಿಗಳನ್ನರಿತು ಆಗಬೇಕಾಗಿರುವ ಮಹತ್ಕಾರ್ಯಗಳಿಗೆ ಅಂತಹ ಮಹನೀಯರ ಜೀವಿತಗಳು ಅತ್ಯಾವಶ್ಯಕವಾದವು. ಅಂತಹಕರುಣದಲ್ಲಿ ಆ ಕಾರ್ಯನಿರ್ವಾಹಕಕ್ಕೋಸ್ಕರ ಸರ್ವೇಶ್ವರನಾದ ಭಗವಂತನೇ ಆ ಪ್ರಕಾರ ಅವತರಿಸಿ, ಅಧರ್ಮ ನಿರ್ಮೂಲನವನ್ನೂ ಧರ್ಮೋದ್ಧಾರಣವನ್ನೂ ಮಾಡುವನೆಂಬುದು ಬಹುಮತಸಾಮಾನ್ಯಾಭಿಪ್ರಾಯವೇ. ಇದೇ ವಿಷಯವನ್ನು ಕುರಿತು ಪರಮ ವೇದಾಂತರಹಸ್ಯವೆಂದು ಎಣಿಸಲ್ಪಟ್ಟ ಕೃಷ್ಣಾರ್ಜುನಸಂವಾದವೆಂಬ ಭಗವದ್ಗೀತೆಯಲ್ಲಿ ಶ್ರೀಕೃಷ್ಣಮೂರ್ತಿಯವರು ಈ ವಿಧದಲ್ಲಿ ಸ್ಪಷ್ಟೀಕರಿಸಿರುವರು. ಶ್ಲೋ || **ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ| ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ||** ಅಂದರೆ ಶಿಷ್ಟರನ್ನು ರಕ್ಷಿಸುವುದಕ್ಕೂ ದುಷ್ಟರನ್ನು ಶಿಕ್ಷಿಸುವುದಕ್ಕೂ ಧರ್ಮವನ್ನು ಸ್ಥಾಪಿಸುವುದಕ್ಕೂ ಪ್ರತಿ ಯುಗದಲ್ಲಿಯೂ ನಾನು ( ಭಗವದ್ವಾಕ್ಯ ) ಹುಟ್ಟುತ್ತಿರುವೆನು. ಮತ್ತು ಶ್ಲೋ || **ಯದ್ಯದ್ವಿಭೂತಿ ಮತ್ಸರ್ವಂ ಶ್ರೀಮದೂರ್ಜಿತಮೇವ ವಾ | ತತ್ತದೇವಾವಗಚ್ಛತ್ವಂ ಮಮ ಭೂತೋಂಶ ಸಂಭವಃ ||** ಅಂದರೆ ಎಲ್ಲಿ ಅಸಾಧಾರಣವಾದ ಮಹಿಮೆಯೂ ಅನನ್ಯವಾದ ಪ್ರತಿಭೆಯೂ, ಕಾಣ್ಮಬರುತ್ತಿರುವವೋ ಅವು ನನ್ನ ಅಂಶಗಳಿಂದಲೇ ( ಭಗವದಂಶಗಳು ) ಆಯಾ ವಿಧವಾಗಿ ನಿರೂಪಿಸಲ್ಪಡುವುವೆಂದು ತಾತ್ಪರ್ಯವು. ಆದುದರಿಂದ ಅಸಾಧಾರಣಗುಣಗರಿಷ್ಠರಾದ ಮಹನೀಯರೆಲ್ಲರು ವಿಶೇಷ ಭಗವದಂಶಸಂಭೂತರೆಂತಲೇ ಒಪ್ಪಿಕೊಳ್ಳಲಾಗುವುದು.

ನಮ್ಮ ದೇಶದಲ್ಲಿಯ ಮಹನೀಯರೆಲ್ಲರೂ ಒಬ್ಬರ ತರುವಾಯ ಮತ್ತೊಬ್ಬರಾಗಿ ಈ ದೇಶವನ್ನಗಲುತ್ತಿದ್ದರು. ಅಭಿವೃದ್ಧಿ ಕರಣಗಳಾದ ನಾನಾ ವಿಧ ಸಂಸ್ಕರಣಗಳನ್ನು ಮಾಡಿದ್ದರಿಂದಲೇ ಬಂಗಾಳಾದಿ ಪ್ರದೇಶಗಳಲ್ಲಿ ಜಾತೀಯ ಜೀವಿತಕ್ಕೆ ನೂತನೋದ್ರೇಕವನ್ನು ಪ್ರೇರೇಪಿಸಿದ ಮಹಾ

ಪುರುಷರ ಸ್ಥಾನಗಳನ್ನು ಆಕ್ರಮಿಸಿಕೊಳ್ಳತಕ್ಕವರು ಇಲ್ಲದೆ ಹೋಗು ವುದೂ, ಅವರು ಕಾಲಕ್ರಮದಿಂದ ಕಾಲಗ್ರಸ್ತರಾಗುತ್ತಿರುವುದೂ ತಟಸ್ಥಿಸು ತ್ತಲಿವೆ. ಅವರ ಮರಣದಿಂದ ದೇಶಕ್ಕೆ ಆಗಾಗ್ಗೆ ಮಹಾ ಲೋಪವುಂಟಾಗುತ್ತಿ ರುವುದು. ಶ್ರೀರಾಜಾರಾಮ ಮೋಹನರಾಯ ಮೊದಲಾದವರೆಲ್ಲರೂ ಸಂಪೂ ರ್ಣ ಸಫಲೀಕೃತ ಪ್ರಯತ್ನರಾಗಲಿಕ್ಕೆ ಮುಂಚೆಯೇ ಈ ಲೋಕವನ್ನಗಲಿ ದರು. ಅನಂತರ ದೇಶೀಯ ಭಾಷೆಯಾಗಲುಳ್ಳ ಹಿಂದೀ ಸಾಹಿತ್ಯಾಭಿವೃದ್ಧಿ ಗಾಗಿ ಅಷ್ಟಾಗಿ ಕಷ್ಟಪಡತಕ್ಕವರು ಯಾರೂ ಕಾಣಿಸಲಿಲ್ಲ. ಪ್ರಕೃತದ ರಾಜ ಕೀಯಾಭಿವೃದ್ಧಿಯಲ್ಲಿ ದೇಶೀಯ ಮಹಾಜನ ಸಭೆಯ ಅಭಿಪ್ರಾಯಗಳು ಪ್ರಜೆಗಳ ಹೃದಯಸೀಮೆಯಲ್ಲೆಲ್ಲ ಬಲವಾಗಿ ನೆಡಸಲ್ಪಡುತ್ತಿವೆ. ಆದರೂ ದೇಶ ದಲ್ಲಿ ಸರ್ವ ಜನಾನುರಂಜತನಾದ ರಾಜಕೀಯಮಾರ್ಗದರ್ಶಿಯೊಬ್ಬನು ಮಾತ್ರ ಕಡಿಮೆಯಾಗಿರುವಂತೆ ತೋರುತ್ತಲಿದೆ. ಆದರೂ ಸಾರ್ಥಕ ಜನ್ಮನೊಬ್ಬನು ಇದುವರೆಗೆ ಹುಟ್ಟಿದವರಲ್ಲಿಯಾಗಲಿ, ಇನ್ನು ಮುಂದೆ ಹುಟ್ಟತಕ್ಕವರಲ್ಲಿ ಯಾಗಲಿ, ಸ್ವಲ್ಪಕಾಲದಲ್ಲಿಯೇ ತಲೆಯೆತ್ತಿ, ದೇಶಮುಕ್ತಿಯನ್ನು ಸಂಪಾದಿಸಿ, ದೇಶಭಕ್ತರಿಗೆ ಮನಶ್ಯಾಂತಿಯನ್ನುಂಟುಮಾಡಬಲ್ಲನೆಂಬುದಕ್ಕೆ ಕೆಲವು ಸೂ ಚನೆಗಳು ಮಾತ್ರ ಕಾಣಬರುತ್ತಿವೆ.

ಇಂತಹ ಮಹಾಪುರುಷರಲ್ಲಿ ಎರಡು ಬಗೆಗಳುಂಟು. ಅವುಗಳಲ್ಲಿ ಕರ್ತವ್ಯನಿಷ್ಠರು ಒಂದು ಬಗೆಯವರು; ಮತ್ತೊಂದು ತೆರದವರು ಪರಮ ಭಕ್ತಾಗ್ರಣಿಗಳು. ಇವೆರಡು ತರಗಳವರೂ ಸಮಾನರಾದ ವಿಶಾಲಹೃದ ಯರು; ಸ್ವಾರ್ಥಪರಿತ್ಯಾಗಿಗಳು; ಇಹಲೋಕದ ಸುಖಾದಿಗಳಿಗೆ ಆಶಿಸದೆ, ಕರ್ತವ್ಯನಿರ್ವಾಹವೇ ಸರ್ವೋತ್ಕೃಷ್ಟವೆಂದು ಭಾವಿಸತಕ್ಕವರು. ಮಹತ್ತರ ವಾದ ಆದರ್ಶವುಳ್ಳವರು. ಲೋಕಸ್ತುತಿ ಮೊದಲಾದುವನ್ನು ಲೆಕ್ಕಿಸದೆ ಮನ ಸ್ಸಾಕ್ಷಿಗೆ ಮಾತ್ರವೇ ಬದ್ಧರಾಗತಕ್ಕವರು. ಅಂತವರು ಸ್ವೇಚ್ಛಾಧೈರ್ಯ ಗಳಿಗೆ ತೌರುಮನೆ. ಯಾವಾಗಲೂ ನಿಷ್ಕಾಮುಕರ್ಮರು. ಆದರೂ ಇವರು ವಿವಿಧಮಾರ್ಗಗಳನ್ನವಲಂಬಿಸಿ, ಸಮಾನವಾದ ಸತ್ಪದೇಶಗಳನ್ನು ಸೇರಿ ಉತ್ತಮರೆನಿಸಿಕೊಳ್ಳುತ್ತಲಿದ್ದಾರೆ.

ವಿದ್ಯಾಸಾಗರನು ಜನ್ಮಶಿಕ್ಷಾಯೋಗ್ಯತೆಗಳಿಂದ ಮೊದಲನೆಯ ತರಗ ತಿಗೆ ಸೇರಿದವನು. ವಾಸ್ತವವಾಗಿಯೂ ಆತನಿಗೆ ಬುದ್ಧಿಬಲಸಂಪತ್ತಿಯಿ ದ್ದಿತು. ಮುಖ್ಯವಾಗಿ ಆತನು ತನ್ನ ಸೌಶೀಲ್ಯದಿಂದಲೇ ಭೂತಭವಿಷ್ಯದ್ವರ್ತ

ಮಾನಕಾಲಗಳಲ್ಲಿ ಸರ್ವಜನಾನುರಾಗಕ್ಕೂ ಪಾತ್ರನಾದನು. ಆತನ ಮನೋನಿಶ್ಚಲತೆಯೂ ನ್ಯಾಯಕರ್ತವ್ಯಾದಿಗಳನ್ನು ಗುರುತಿಸುವ ಚಾತುರ್ಯವೂ, ಕಾರ್ಯನಿರ್ವಾಹಕಶಕ್ತಿಯೂ, ಅನಾಥರಲ್ಲಿ ಆತನಿಗಿದ್ದ ಔದಾರ್ಯಾನುರಾಗಗಳೂ, ಮನುಷ್ಯರೆಂದೆನಿಸಿಕೊಳ್ಳುವವರೆಲ್ಲರಿಂದಲೂ, ಶ್ಲಾಘಿಸಲ್ಪಡುತ್ತಲಿರುವುವು. ಆ ಮಹನೀಯನ ಜೀವಿತಕಾಲವು ಮುಖ್ಯವಾಗಿ ಹಿಂದೂಚರಿತ್ರೆಯಲ್ಲಿ ಪ್ರಸಿದ್ಧಿಹೊಂದಿದವನೊಬ್ಬನ ನವೀನ ಶಕೆಯನ್ನಾರಂಭಿಸುವುದು. ಮನುಷ್ಯರ ಜೀವಮಾನದಲ್ಲೆಲ್ಲ ಪ್ರಜ್ಞೆ, ಸೌಶೀಲ್ಯ ಎಂಬಿವೆರಡೂ ಪ್ರಾಮುಖ್ಯವಾದ ಅಂಶಗಳು. ಅವುಗಳಲ್ಲಿ ಸೌಶೀಲ್ಯವೇ ಮಾನವಜೀವಿತಕ್ಕೆ ತೇಜೋವಂತವಾದ ಮುಖ್ಯ ಭೂಷಣವು. ಯಾವನೇ ಆಗಲಿ, ವಿಶೇಷ ಪ್ರಜ್ಞಾವಂತನಾದರೆ ಅವನನ್ನು ಎಲ್ಲರೂ ಶ್ಲಾಘಿಸುವರು. ಸೌಶೀಲ್ಯವುಳ್ಳವನಾದರೆ ಪರರ ಪ್ರೇಮವನ್ನೂ ನಂಬುಗೆಯನ್ನೂ ಸಂಪಾದಿಸುವನು. ಪ್ರಜ್ಞಾವಂತನಿಗೆ ಜನರು ಭಯಪಡುವರು; ಸುಶೀಲನನ್ನು ಆರಾಧಿಸುವರು. ವಿದ್ಯಾಸಾಗರನು ಒಬ್ಬ ಬಡ ಬ್ರಾಹ್ಮಣನ ಮಗನು. ಜನ್ಮದಿಂದ ಆತನು ಅಷ್ಟರ ಪ್ರಸಿದ್ಧಿಯಿಲ್ಲದವನಾಗಿದ್ದರೂ ತನ್ನ ಸೌಶೀಲ್ಯದಿಂದಲೇ ಜಗದ್ವಿದಿತ ಯಶೋನಾಥನಾದನು. ಆತನು ಮನುಷ್ಯರೂಪದಿಂದ ಜನ್ಮಿಸಿ, ತಾನು ನಿಜವಾದ ಮನುಷ್ಯನೆಂದು ಲೋಕಕ್ಕೆಲ್ಲ ಸ್ಪಷ್ಟಪಡಿಸಿದನು. ಆದುದರಿಂದ ನಿಜವಾದ ಮನುಷ್ಯನಾಗಿರಬೇಕೆಂದು ಅಪೇಕ್ಷಿಸುವವರು ಭಗವಂತನಿಂದ ಅನುಗ್ರಹಿಸಲ್ಪಟ್ಟ ಮಾನವ ಸ್ವತ್ವಗಳಾದ ಆತ್ಮಗೌರವ ಸ್ವೇಚ್ಛಾಸ್ವಾತಂತ್ರ್ಯಗಳನ್ನು ಕಳೆದುಕೊಳ್ಳದೆ ಇರುವುದೂ, ತಮ್ಮ ಜೀವಿತಾದರ್ಶವನ್ನು ಗುರುತು ಹಿಡಿದು ವರ್ತಿಸುವುದೂ, ಮೊದಲಾದುವುಗಳನ್ನು ಆ ಮಹಾತ್ಮನ ಬಳಿಯಲ್ಲಿಯೇ ಕಲ್ತುಕೊಳ್ಳಬೇಕಾಗಿರುವುದು.

## ನಮ್ಮ ಜೀವಿತಾದರ್ಶ ಯಾವುದು?

"ಧನಮೂಲಮಿದಂ ಜಗತ್" ಎಂಬಂತೆ ಈ ಪ್ರಪಂಚದಲ್ಲಿ ಸರ್ವ ದುಷ್ಕರ ಕಾರ್ಯಸಾಧನವಾಗತಕ್ಕುದು ದ್ರವ್ಯವೇ ಅಲ್ಲವೇ! ಸಕಲ ನೀತಿ ಪಾರಂಗತನೂ, ನರಲೋಕಬೃಹಸ್ಪತಿಯೂ ಎನಿಸಿಕೊಂಡ ಭರ್ತೃಹರಿಯು ಹೇಳಿರುವಂತೆ—

ಕಂ॥ ಪಣಮುಳ್ಳವನೆ ಕುಲೀನಂ।
ಗುಣಿರೂಪಾಢ್ಯಂ ಸಮಸ್ತ ವಿದ್ಯಾನಿಪುಣಂ॥

ಎಣಿಸಲ್ವಾಗ್ಮಿಯುಮಾತನೆ, ।
ಗುಣಮೆಲ್ಲಂ ಜಗದಿ ಪಣವನಾಶ್ರಯಿಸಿರ್ಕುಂ ॥

ಎಂದು ಧನವನ್ನಾರ್ಜಿಸುವುದೇ ಸರ್ವ ಸಂಪತ್ಸೌಖ್ಯಗಳಿಗೆ ಕಾರಣವಾಗಿರುವುದು. ಆದುದರಿಂದ ಇಂತಹ ಉತ್ಕೃಷ್ಟವಾದ ಧನಾರ್ಜನೆಯೇ ನಮ್ಮ ಜೀವಿತಾದರ್ಶವೆನ್ನೋಣವೇ? ಅದು ಆಗಲಾರದು. ಏತಕ್ಕೆಂದರೆ, ಸಾಮಾನ್ಯವಾಗಿ ಧನಿಕರಲ್ಲಿ ಹಲವರು ತಮ್ಮ ದ್ರವ್ಯವನ್ನು ತಕ್ಕ ಮಾರ್ಗಗಳಲ್ಲಿ ಸದ್ವಿನಿಯೋಗಮಾಡದೆ, ಹೋಗುತ್ತಿರುವುದು ಅನುಭವಸಿದ್ಧವಾಗಿದೆ. ಅಚಿರಸೌಖ್ಯಪ್ರದವಾದ ಈ ದ್ರವ್ಯವೇ ಚೋರಗ್ರಹಣಾದಿ ನಿಪಾತಗಳಿಗೆ ವಶವಾದಾಗ ಮಿತಿಮೀರಿದ ದುಃಖಕ್ಕೆ ಕಾರಣವಾಗುವುದು. ಮತ್ತು ಮನುಷ್ಯನು ಧನಮದದಿಂದ ತುಚ್ಛವಾದ ಇಂದ್ರಿಯಭೋಗಗಳಿಗೆ ಆಶೆಪಟ್ಟು, ಎಂತಹ ದುಷ್ಕೃತ್ಯಗಳನ್ನಾದರೂ ಮಾಡಲಿಕ್ಕೆ ಸಿದ್ಧನಾಗುವನು. ಆದುದರಿಂದ ಧನವನ್ನು ಸಂಪಾದಿಸುವುದು ನಿಷ್ಕಳಂಕವಾದ ಜೀವಿತಾದರ್ಶವಾಗಲಾರದು.

ಇನ್ನು "ವಿದ್ಯಾವಿಹೀನಃ ಪಶುಃ" ಎಂಬಂತೆ ಲೋಕದಲ್ಲಿ ವಿದ್ಯೆಯೇ ವಿವೇಕಕ್ಕೆ ಕಾರಣವು. ವಿವೇಕವೇ ಎಲ್ಲಾ ಸತ್ಕಾರ್ಯಾಚರಣೆಗಳಿಗೂ ಮಾರ್ಗದರ್ಶಕವಾದುದು. ಇದನ್ನು ಕುರಿತು ಮೇಲೆ ಹೇಳಿದ ಭರ್ತೃಹರಿಯೇ ನಿಜ ಧನಕ್ಕಿಂತ ವಿದ್ಯಾಧನವೇ ಶ್ರೇಷ್ಠವೆಂದು ಹೇಳಿರುವನು.

ಶ್ಲೋ॥ ಹರ್ತುರ್ಯಾತಿ ನ ಗೋಚರಂ ಕಿಮಪಿಸಂಪುಷ್ಣಾತಿಯತ್ಸರ್ವದಾ ।
ಅರ್ಥಿಭ್ಯಃ ಪ್ರತಿಪಾದ್ಯಮಾನಮನಿಶಂ ಪ್ರಾಪ್ನೋತಿ ವೃದ್ಧಿಂ ಪರಾಂ ।
ಕಲ್ಪಾಂತೇಷ್ವಪಿ ನ ಪ್ರಯಾತಿನಿಧನಂ ವಿದ್ಯಾಖ್ಯಮಂತರ್ಧನಂ ।
ಯೇಷಾಂ ತಾಂ ಪ್ರತಿಮಾನಮುಜ್ಝತನೃಪಾಃ ಕಸ್ತೈಸ್ಸಹಸ್ಪರ್ಧತೇ ॥

ಎಂದರೆ ಸಾಮಾನ್ಯಧನದಂತೆ ವಿದ್ಯಾಧನವು ಕಳ್ಳರಿಂದ ಕದಿಯಲ್ಪಡದು. ಯಾವಾಗಲೂ ಸೌಖ್ಯವನ್ನು ಕೊಡುತ್ತಿರುವುದು. ಒಳ್ಳೇ ಕೀರ್ತಿಯನ್ನುಂಟುಮಾಡುವುದು. ಕೋರಿದವರಿಗೆ ಎಷ್ಟೆಷ್ಟು ಕೊಟ್ಟರೂ ಅಷ್ಟಷ್ಟು ಬೆಳೆಯುವುದೇ ಹೊರತು ಕಡಮೆಯಾಗಲಾರದು. ಪ್ರಳಯಕಾಲದಲ್ಲಿಯಾದರೂ ನಶಿಸದು. ಆದುದರಿಂದ ದೊರೆಗಳು ವಿದ್ಯಾಧನದಲ್ಲಿ ಎಚ್ಚರದಿಂದ ನಡೆದುಕೊಳ್ಳತಕ್ಕುದು.

ಈ ವಿಷಯವನ್ನು ಕುರಿತು ಇನ್ನೂ ಚರ್ಚಿಸಬೇಕೆಂದೆಣಿಸಿದರೆ ಇಂತಹ ಪ್ರಮಾಣಗಳೂ, ನಿದರ್ಶನಗಳೂ ಬಹಳವಾಗಿ ಸಿಕ್ಕುವುವು. ಆದರೆ ಸ್ಥಳ ಸಂಕೋಚದಿಂದ ಅಂತವುಗಳನ್ನು ಇಲ್ಲಿ ವಿವರಿಸಲಾರೆವು. ಇಂತಹ ಉತ್ತಮ ಕಾರ್ಯಸಾಧನವಾದ ವಿದ್ಯೆಯಾದರೂ ನಮ್ಮ ಜೀವಿತದ ಗಮ್ಯಸ್ಥಾನವಾಗಬಲ್ಲುದೆ? ಆಗಲಾರದು. ಏತಕ್ಕೆಂದರೆ, ಸಾಧಾರಣವಾಗಿ ಅಧಿಕಾರಗಳು ವಿದ್ಯಾಹೀನರ ಕೈಗೆ ಮಾತ್ರವೇ ಬರುವವು. ಪಾಪಕೃತ್ಯಗಳಿಗೆ ಸಾಧಕಗಳೆನಿಸಿದ ಧನ, ಯೌವನ, ಅಧಿಕಾರಗಳೆಂಬಿವುಗಳಲ್ಲೊಂದರಿಂದ ಹಿಡಿಯಲ್ಪಡುವನು. ಹಾಗಲ್ಲದಿದ್ದರೆ ವಿದ್ಯೆಯಿಂದ ವಿಶೇಷ ಧನವನ್ನು ಸಂಪಾದಿಸಿ, ಮೇಲೆ ಹೇಳಿದ ಧನಾಢ್ಯನ ಸ್ಥಿತಿಗೇನೇ ಬರಬಹುದು.

ಇವುಗಳು ಯಾವುವೂ ಇಲ್ಲದಿದ್ದರೂ ಕೊನೆಯ ಲೋಪವೇನಂದರೆ, ಕ್ಷಣಭಂಗುರವಾದ ಈ ಶರೀರವನ್ನು ಬಿಟ್ಟಕೂಡಲೇ ಆ ವಿದ್ಯೆಯ ಪ್ರಭಾವವು ಕೂಡ ಅದರೊಂದಿಗೇನೇ ಅಳಿದುಹೋಗಬಹುದು. ಆದುದರಿಂದ ವಿದ್ಯಾವಂತನಾಗುವಿಕೆಯೂ ಜೀವಿತಾದರ್ಶವಾಗಲಾರದು.

ಹಾಗಾದರೆ ಶಾಶ್ವತಯಶಃಕಾಮನಾಗುವಿಕೆಯೇ ಜೀವಿತಾದರ್ಶವೆನಿಸುವುದೇನೋ ಎಂಬುದನ್ನು ವಿಚಾರಮಾಡೋಣ. ಈ ಶಾಶ್ವತ ಯಶಸ್ಸನ್ನು ಎರಡು ವಿಧಗಳಿಂದ ಪಡೆಯಬಹುದು. ಮೊದಲನೆಯದು—ಲೋಕೋಪಕಾರಕಗಳಾದ ಸತ್ಕೃತ್ಯಗಳನ್ನು ಮಾಡುವುದರಿಂದ—ಎರಡನೆಯದು,—ಲೋಕಪ್ರಸಿದ್ಧಗಳಾದ ದುಷ್ಕೃತ್ಯಗಳನ್ನು ಮಾಡುವುದರಿಂದ ಸತ್ಕೀರ್ತಿವಂತರು ತಾವು ಬದುಕಿದ್ದಷ್ಟು ದಿನವೂ ಎಲ್ಲರಿಂದಲೂ ಗೌರವಿಸಲ್ಪಡುವುದೂ, ಮೃತರಾದ ತರುವಾಯ ಕೂಡ ಕೀರ್ತಿಶೇಷರಾಗುವುದೂ ಸತ್ಯವೇ. ಆದರೆ ತುಪ್ಪಹೀರೆ (ಘೃತಕೋಶ) ಕಾಯಿಗಳಂತೆ ಅಸಾರ್ಥಕಗಳಾದ ಬಿರುದುಗಳನ್ನು ಹೇಗೆಯೋ ಸಂಪಾದಿಸಿಕೊಂಡು, ಪ್ರಜಾಭಿಮತವನ್ನುಳ್ಳ ಪ್ರಭುಗಳೆಂದು ಹೇಳಿಕೊಳ್ಳುವ ಈ ಕಾಲದ ಮಹನೀಯರು ಕೆಲವರಿರುವರು. ಹೇಗಾದರೂ ಇವರು ಕೂಡ ಕೆಲವುಮಟ್ಟಿಗೆ ಸ್ಥಿರಶ್ಲೋಕರಾಗುವರೆಂಬುದು ನಿಜವೇ. ಆದರೂ ಇವರಲ್ಲಿ ಬಹು ಮಂದಿ ಮೇಲೆ ಹೇಳಿದ ಧನಾಶಾಪೀಡಿತರಾಗಿ, ಆತ್ಮಗೌರವಾದಿಗಳನ್ನು ಬಿಟ್ಟುಕೊಟ್ಟು, ಸ್ವಾಭಿವೃದ್ಧಿಯನ್ನೇ ಬಯಸುತ್ತಾ, ದೇಶಮಾತೆಗೆ ಮಹದುಪಕಾರ ಮಾಡುತ್ತಿರುವುದನ್ನು ನಾವು ನೋಡುತ್ತಲೂ, ಕೇಳುತ್ತಲೂ, ಇರುವೆವು. ಆದುದರಿಂದ ಕೀರ್ತಿಕಾಂಕ್ಷೆಯೂ, ಜೀವಿತಧ

ಗನ್ಯಸ್ಥಾನವಲ್ಲವು.

ಇವು ಯಾವುವೂ ಜೀವಿತಾದರ್ಶವೆನಿಸದಿದ್ದರೆ ಮತ್ತಾವುದು ಆಗುವುದೆಂಬ ಸಂಶಯ ಹುಟ್ಟದೆ ಇರದು. ಅವುದು ಅದೆಂಬುದನ್ನು ಯೋಚಿಸೋಣ.—

ಮನುಷ್ಯನು ವಿಧ್ಯುಕ್ತವಿಧಾನದಿಂದ ತನ್ನ ಕರ್ತವ್ಯವನ್ನು ನಿರ್ವಹಿಸುವಿಕೆಯೇ ಅವನ ಜೀವಿತಾದರ್ಶವು; ಅದೇ ನಿಷ್ಕಳಂಕವಾದುದು; ಅದೇ ನಿರ್ಮಲವಾದುದು; ನಿರುಪಮವಾದುದು; ಅದುವೇ ಜನ್ಮಸಾಫಲ್ಯದ ಮಾರ್ಗವು.

ಈ ಕರ್ತವ್ಯನಿರ್ವಾಹಜ್ಞಾನವು ಮೇಲೆ ಪೂರ್ವಪಕ್ಷ ಮಾಡಲ್ಪಟ್ಟ ವಿದ್ಯಾಧನಾದಿಗಳಿಂದ ಉಂಟಾಗಬಾರದೆ? ಎಂದು ವಾಚಕರು ಪ್ರಶ್ನೆ ಮಾಡಬಹುದು ನಿಜವೇ. ಅವುಗಳೆಲ್ಲವೂ ಜೀವಿತದ ಗಮ್ಯಸ್ಥಾನ ಸಾಧನಗಳಾಗಿರಬಹುದೇ ಹೊರತು ಗಮ್ಯಸ್ಥಾನಗಳು ಮಾತ್ರ ಆಗಲಾರವು.

ಕರ್ತವ್ಯನಿರ್ವಾಹವೆಂದರೆ, ತನ್ನ ವಿಧಿಯನ್ನು ನೆರವೇರಿಸುವಿಕೆ. ಅದು ಮೂರು ವಿಧವಾಗಿರುವದು. ಅದರಲ್ಲಿ ಮೊದಲನೆಯದು–ಮುಖ್ಯವಾಗಿ ಸೃಷ್ಟಿಸ್ಥಿತಿಲಯಕಾರಣಭೂತನಾದ ಪರಮೇಶ್ವರನಲ್ಲಿ ನಮಗೆ ಇರಬೇಕಾದ ವಿಧಿ. ಎರಡನೆಯದು–ತಾಯಿ, ತಂದೆ, ಬಂಧು, ಮಿತ್ರ, ಪರಿವಾರಾದಿಗಳಲ್ಲಿ ತೋರಿಸಬೇಕಾದ ಕಾರ್ಯಗಳು. ಮೂರನೆಯದು–ತನ್ನ ಜತೆಯವರಾದ ದೇಶದ ಜನರಲ್ಲಿಯೂ ಭಗವತ್ಸೃಷ್ಟಿಯಲ್ಲಿನ ಉಳಿದ ನಿಖಿಲ ಭೂತಗಳಲ್ಲಿಯೂ ನೆರವೇರಿಸಬೇಕಾದ ಕರ್ತವ್ಯವು. ಈ ಕಾರ್ಯಕ್ಕೆ ದಯಾವಿವೇಕಗಳೆಂಬಿವು ಮುಖ್ಯಸಾಧನಗಳು. ಇವೆರಡಕ್ಕೂ ನಮ್ಮ ವಿದ್ಯಾಸಾಗರನು ಇಟ್ಟದ್ದೇ ಹೆಸರಾಗಿದ್ದಿತು. ಆದುದರಿಂದ ಇವನು ನಿರ್ದೋಷಿಯೆನಿಸಿದನು. ಆತನು ದೇವರೇ ಇಲ್ಲವೆಂದು ವಾದಿಸುವ ನಾಸ್ತಿಕ ಜನರಲ್ಲಿ ಸೇರಿದವನೆಂದು ಕೆಲವರು ಭ್ರಮಿಸುವರು. ಅದು ತಪ್ಪು ತಿಳುವಳಿಕೆ. ಏಕಂದರೆ ಆತನು ಸ್ವಾಭಾವಿಕವಾಗಿ ದರ್ಪವಿಲ್ಲದವನು. ಆದುದರಿಂದ ಮತಸಂಬಂಧವಾದ ಕ್ರಿಯಾ ತಂತ್ರಾದಿಗಳೂ ಬಾಹ್ಯಾಡಂಬರಾಟೋಪಾದಿಗಳೂ, ಆತನಿಗೆ ಸ್ವಲ್ಪವೂ ಸರಿಬೀಳುತ್ತಿರಲಿಲ್ಲ. ಆದರೂ ಆತನು ಶುದ್ಧಾಸ್ತಿಕ ಮತಾಗ್ರೇಸರನೆಂದು ಹೇಳುವುದಕ್ಕೆ ಅನೇಕ ನಿದರ್ಶನಗಳಿರುವುವು. ಪರಿಪೂರ್ಣವಿಜ್ಞಾನಸಂಪನ್ನನಾದ ಆತನು ಯಾವಾಗಲೂ ವಿಗ್ರಹಾರಾಧನೆಯನ್ನು ಮಾಡದೆ ಇದ್ದರೂ ಇತರರನ್ನು ಆತುರಪಡಿಸಿದವನಲ್ಲವು. ಆತನು ಅನೇಕಸಾರಿ ದೇವತಾರ್ಚನೆ ಮಾಡಿಕೊಳ್ಳುವ ತನ್ನ ತಂದೆ ಮೊದಲಾದ ಪೂರ್ವಾಚಾರಪರಾಯಣರಾದವರಿಗೆ ಪುಷ್ಪ

ದಳಫಲಾದಿ ಪೂಜಾದ್ರವ್ಯಗಳನ್ನು ತಂದುಕೊಡುತ್ತಾ ಇದ್ದಂತೆ ತಿಳಿಯಬಂದಿದೆ. ಆತನು ತನ್ನ ತಾಯಿ ಮಾಡುತ್ತಿದ್ದ ಕಾಳೀಪೂಜೆಯೇ ಮೊದಲಾದ ದೇವತೋತ್ಸವಗಳಿಗೆ ಮರುಮಾತನಾಡದೆ ಬೇಕಾದಷ್ಟು ಧನಸಹಾಯಮಾಡುತ್ತಿದ್ದನು. ಆತ್ಮಜ್ಞಾನಪ್ರೇಕ್ಷ್ಯವಾದುದೇ ಮತವೆಂಬದು ಆತನ ನಂಬಿಕೆ. ಆದರಿಂದಲೇ ಆತನು ಹಿಂದೂ, ಕ್ರೈಸ್ತವ, ಮಹಮ್ಮದೀಯ ಮತಾದಿಗಳಲ್ಲಿ ಭೇದಬುದ್ಧಿಯಿಡದೆ, ಸರ್ವ ಮತಸಹನನಾಗಿದ್ದಂತೆ ತನ್ನ ಜೀವಿತಕಾಲದಲ್ಲಿ ಹಲವುಸಾರಿ ತೋರಪಡಿಸಿದನು. ಭಿಕ್ಷುಕರು ಯಾರಾದರೂ ಭಕ್ತಿರಸಗುಂಫಿತಗಳಾದ ಅಧ್ಯಾತ್ಮಕೀರ್ತನೆಗಳನ್ನು ಹಾಡಿದಾಗ ಆತನು ಅವುಗಳನ್ನು ಕೇಳಿ, ಆಪಾದಮಸ್ತಕಪುಲಕಿತಗಾತ್ರನಾಗಿ, ಎರಡು ಕಣ್ಣುಗಳಿಂದಲೂ, ಆನಂದಬಾಷ್ಪಗಳನ್ನು ಸುರಿಸುತ್ತಲಿದ್ದನು. ಆತನು ದೃಶ್ಯಪ್ರಪಂಚದಲ್ಲಿರುವ ತನ್ನ ವಿಧಾಯಕವನ್ನು ತೃಪ್ತಿಕರವಾಗಿ ನೆರವೇರಿಸಿದುದರಿಂದಲೇ ಭಗವಂತನನ್ನು ಸಂತೋಷಪಡಿಸಿ, ಆತನಲ್ಲಿರಬೇಕಾದ ಕರ್ತವ್ಯವನ್ನು ಕೂಡ ನೆರವೇರಿಸಬಲ್ಲವನಾದನು. ಶ್ರೀರಾಮಕೃಷ್ಣಪರಮಹಂಸಾದಿ ಮಹನೀಯರಲ್ಲಿ ಆತನಿಗೆ ತುಂಬ ಭಕ್ತಿಯಿದ್ದಿತು. ಪೂಜನೀಯರಾದ ಹಿರಿಯರ ಬಳಿಯಲ್ಲಿ ಭೃತ್ಯನ ಹಾಗೆ ವಿನಯವಿಧೇಯತೆಗಳನ್ನು ತೋರಿಸುತ್ತಲಿದ್ದನು. ಕ್ರಿಸ್ತಿಯ ಮತಬೋಧಕರಿಂದ ಬಂಗಾಳ ರಾಜ್ಯದ ಬಾಲಕರ ಬುದ್ಧಿಗಳು ಬದಲಾಯಿಸಲಾರಂಭಿಸಿದಾಗ ಪ್ರಥಮದಲ್ಲಿ ರಾಜಾರಾಮಮೋಹನರಾಯರೂ, ತರುವಾಯ ಈತನೂ ಆ ಬಾಲಕರಿಗೆ ಮಹೋಪಕಾರವನ್ನು ಮಾಡಿದರು. ರಾಮಮೋಹನನಿಂದ ಸ್ಥಾಪಿಸಲ್ಪಟ್ಟ ಬ್ರಹ್ಮಸಮಾಜದ ಅಭಿವೃದ್ಧಿಗಾಗಿ ಆತನು ಕೆಲವು ಕಾಲದತನಕ ತುಂಬ ಕಷ್ಟಪಟ್ಟು, ಆ ಸಮಾಜದ ಉದ್ದೇಶ್ಯಗಳನ್ನು ತಾನು ಸಂಪೂರ್ಣವಾಗಿ ನೀತಿಸಾಂಘಿಕ ಲೋಕೋಪಕಾರ ವಿಷಯಗಳಲ್ಲಿ ಅನುಭವಕ್ಕೆ ತಂದನು. ಪ್ರತಿದಿನವೂ ನಿದ್ದೆಯಿಂದ ಎದ್ದಕೂಡಲೇ ನಾಯಿಬೆಕ್ಕು ಮೊದಲಾದ ತಿರ್ಯಗ್ಜಂತುಗಳ ಸಂತಾನಕ್ಕೆ ಆಹಾರಪಾನೀಯಾದಿಗಳನ್ನು ಕೊಡುತ್ತಲಿದ್ದುದೇ ಆತನ ಮೊದಲನೆಯ ಕೆಲಸ. ಆತನು ತಾಯಿತಂದೆಗಳನ್ನು ದೇವರ ಸಮಾನವೆಂದು ಭಾವಿಸಿದ್ದನು. ಮತ್ತು ಬಂಧುಮಿತ್ರಾದಿಗಳಲ್ಲಿಯೂ, ದೇಶಜನರಲ್ಲಿಯೂ ಆತನು ಹೀಗೆ ವರ್ತಿಸುತ್ತಿದ್ದನೆಂಬುದನ್ನು ಆತನ ಚರಿತ್ರೆಯನ್ನೋದಿದವರಿಗೆ ಮತ್ತೆ ಹೇಳಬೇಕಾದ ಅಗತ್ಯವಿಲ್ಲ. ಧರ್ಮವತ್ಸಲನಾಗಿ ದೀನರ ಸಂಕಟಗಳನ್ನು ಪರಿಹರಿಸುವುದರಲ್ಲಿಯೂ,

ಅಪಾರವಾಗಿದ್ದ ಆತನ ದಯಾನುರಾಗಗಳನ್ನು ಮರಳಿ ಪ್ರಶಂಸಿಸುವುದು ಚರ್ವಿತಚರ್ವಣವಾಗಿ ತೋರದೆ ಇರದು. ದೇಶದ ಜನರಿಗೆ ಯಾವ ವಿಧದಿಂದ ಉಪಕಾರಮಾಡಿದರೆ ದೇಶಮಾತೆಯನ್ನುದ್ಧರಿಸಿದವನಾಗುವೆನೆಂದು ಆತನು ಯಾವಾಗಲೂ ತನ್ನ ಮನಸ್ಸಿನಲ್ಲಿ ಚಿಂತಿಸುತ್ತಲಿದ್ದನು. ಅನುಭವನೀಯ ವಾದ ಕಾರುಣ್ಯವೇ ಆತನ ಮತವು.

ಸತ್ಯಶೀಲತೆಯೂ, ಅಮಿತವಾದ ದಯೆಯೂ, ಶೌಚವೂ, ಸ್ಮೈರಣೆಯೂ ಸದಸದ್ವಿವೇಕವೂ, ಮನೋನಿಯಮವೂ, ಬಹಿರಿಂದ್ರಿಯಜಯವೂ, ಸರ್ವ ದಾ ನಿರ್ಭೀತಿಯೂ, ಅಹಿಂಸೆಯೂ, ಸ್ವೇಚ್ಛಾಸ್ವಾತಂತ್ರ್ಯಸಕ್ತಿಯೂ, ಸಮಾ ನವಿಲ್ಲದ ದಾನಪರತೆಯೂ, ಯಥೋಚಿತವಾದ ಜಪವೂ, ಅದ್ಭುತವಾದ ಆತ್ಮ ವಿಶ್ವಾಸವೂ, ನಿತ್ಯಸಂತೋಷವೂ ಲೋಕವಿದಿತಗಳಾದ ಔದಾರ್ಯ ಸಾಹಸ ಗಳೂ, ಸಮದೃಷ್ಟಿಯೂ, ಮಹಾಜನಸೇವೆಯೂ, ಗ್ರಾಮ್ಯಗಳಾದ ಬಯಕೆ ಗಳಲ್ಲಿ ನಿರೀಕ್ಷೆಯೂ, ಮಿತಿಯಿಲ್ಲದ ಶಾಸ್ತ್ರಜ್ಞಾನಪಾಂಡಿತ್ಯವೂ, ನಿಷ್ಫಲ ಕ್ರಿಯೆಗಳ ಪರಿತ್ಯಾಗವೂ, ಮಿತಭಾಷಣವೂ, ಪ್ರಾಣಿಗಳಲ್ಲಿ ದೇವತಾಬುದ್ಧಿ ಯೂ, ಬಾಹ್ಯೇಂದ್ರಿಯಗಳಿಗೆ ದುರ್ಗ್ರಾಹ್ಯವಾದ ತನ್ನನ್ನು ತಿಳಿದುಕೊಳ್ಳುವಿ ಕೆಯೂ, ಆತ್ಮಬುದ್ಧಿಯಂತೆ ಮಾಡುವಿಕೆಯೂ, ಶೀಘ್ರಪ್ರಸನ್ನತೆಯೂ ಇವೇ ನಮ್ಮ ಕಥಾನಾಯಕನ ಜೀವಿತದಲ್ಲಿ ಗಮನಿಸಬೇಕಾದ ಮುಖ್ಯ ವಿಷಯ ಗಳು. ಆತನು ನ್ಯಾಯಸ್ಥಾಪನೆಯಲ್ಲಿ ಕಾಠಿನ್ಯವನ್ನು ವಹಿಸಿದರೂ ಕೋಮ ಲಾಂತರಂಗನು. ಒಳ್ಳೆ ಮೇಧಾವಿಯಾದರೂ ಅವಸರಪಡದ ಆಲೋಚನಾಪ ರನು. ಈ ಮೇರೆಗೆ ತನ್ನ ಕರ್ತವ್ಯವನ್ನು ಯಥಾವಿಧಿಯಾಗಿ ನೆರವೇರಿಸುವಿ ಕೆಯೇ ಪ್ರತಿ ಒಬ್ಬ ಮನುಷ್ಯನಿಗೂ ನಿತ್ಯಾಹ್ಲಾದಕರವೆಂತಲೂ, ಪರಮ ಸೌಖ್ಯಪ್ರದಾಯಕವೆಂತಲೂ, ಶಾಶ್ವತವಾದ ಐಹಿಕಾಮುಷ್ಮಿಕ ಕೀರ್ತಿ ಮಾರ್ಗವೆಂತಲೂ, ಭವಬಂಧವಿಮೋಚನ ಸಾಧನವೆಂತಲೂ, ಆ ಪುಣ್ಯ ರಾಶಿಯು ಲೋಕಕ್ಕೆ ಉದಾಹರಣೆಯಾಗಿ ಸಾವಿರ ಬಾಯಿಗಳಿಂದ ಪ್ರಕ ಟಿಸಿ, ತಾನೂ ಕೈವಲ್ಯವನ್ನು ಹೊಂದಿ, ಸಂತತಾನಂದವಾರಿಧಿಯಲ್ಲಿ ತೇಲಾ ಡುತ್ತಲಿರುವನು.

ಓಂ ತತ್ಸತ್.

---

ಸಂಪೂರ್ಣಂ